REGD. No. B. G. 176
LICENCE No. 31
Licensed to Post without Prepayment

ಸುದ್ಧಿಯ ಹಿನ್ನೆಲೆ.

ಸೌಜನ್ಯಶೀಲ ಗುಣಗಳೇ ಇಲ್ಲದ

ಪೆಕಿಂಗ್ ಸರಕಾರ

ನಮ್ಮ ದೇಶದಲ್ಲಿರುವ ರಾಯಭಾರಿ ಕಚೇರಿ ಸಿಬ್ಬಂದಿಯ ಮೇಲೆ ನಾನಾ ರೀತಿಯ ನಿರ್ಬಂಧಗಳನ್ನು ಸರ್ಕಾರ ಹಾಕಿದೆಯೆಂದೂ ಇದರಿಂದ ಚೀಣಿ ಸರ್ಕಾರದ ಪ್ರತಿನಿಧಿಗಳು ಕೆಲಸ ನಡೆಸುವುದೇ ಕಷ್ಟವಾಗಿದೆಯೆಂದೂ ಪೆಕಿಂಗ್ ಸರ್ಕಾರ ಬೊಬ್ಬೆ ಇಡುತ್ತಿದೆ.

ಆದರೆ ಈ ಬೊಬ್ಬೆ ಅರ್ಥವಿಲ್ಲದ್ದು ಎಂದು ಎಲ್ಲರಿಗೂ ತಿಳಿದಿದೆ ಚೀನಾದ ರಾಯಭಾರಿ ಕಚೇರಿ ಸಿಬ್ಬಂದಿಯ ಮೇಲೆ ಯಾವುದೇ ರೀತಿಯ ನಿರ್ಬಂಧಗಳನ್ನು ನಾವು ಹಾಕಿಲ್ಲವೆಂದೇ ಹೇಳಬಹುದು. ಚೀನಾದಲ್ಲಿ ನಮ್ಮ ರಾಯಭಾರಿ ಪ್ರತಿನಿಧಿಗಳು ಅನುಭವಿಸುತ್ತಿರುವ ನಿರ್ಬಂಧಗಳಿಗೆ ಇಲ್ಲಿಯ ನಿರ್ಬಂಧಗಳನ್ನು ಹೋಲಿಸಿದರೆ ಸತ್ಯ ಸಂಗತಿ ತಾನೇ ತಾನಾಗಿ ತಿಳಿಯುತ್ತದೆ.

ಚೀನೀ ಅಡಳಿತಗಾರರ ವಿಚಾರ ದೃಷ್ಟಿಯೇ ಹೀಗೆ. ಚೀನಾದಲ್ಲಿ ನಮ್ಮ ರಾಯಭಾರ ಕಚೇರಿ ಸಿಬ್ಬಂದಿಯವರು ಅನುಭವಿಸುತ್ತಿರುವ ನಾನಾ ನಿರ್ಬಂಧಗಳ ಬಗ್ಗೆ ನಾವು ಪ್ರತಿಭಟನೆ ಸಲ್ಲಿಸಿದರೆ ಅದಕ್ಕೆ ಸಮಾಧಾನ ನೀಡುವ ಆಸಕ್ತಿ ಅವರಿಗಿಲ್ಲ. ಅದರೆ ಅಲ್ಲಿ ನಮ್ಮ ಪ್ರತಿನಿಧಿಗಳ ಮೇಲೆ ಹಾಕಿರುವ ನಿರ್ಬಂಧಗಳ ರೀತಿಯಲ್ಲಿ ನಾವೂ ಅಲ್ಪ ಸ್ವಲ್ಪ ನಿರ್ಬಂಧಗಳನ್ನು ಹಾಕಲು ಉದ್ಯೋಗಿಸಿದರೂ ಸರಿಯೇ ಆದನ್ನೇ ದೊಡ್ಡದು ಮಾಡಿ ಬೊಬ್ಬೆ ಹಾಕುತ್ತಾರೆ. ತಮ್ಮ ಮೇಲೆ ಗದಾ ಪ್ರಹಾರವೇ ನಡೆಯುತ್ತಿದೆ ಎನ್ನುವ ಹಾಗೆ ಕೂಗು ಹಾಕುತ್ತಾರೆ.

ಪ್ರಜಾಪ್ರಭುತ್ವವಿರುವ ಭಾರತದಲ್ಲಿ ವಿದೇಶಿ ರಾಯಭಾರಿ ಕಚೇರಿಗಳಿಗೆ ಸೇರಿದವರ ಮೇಲೆ ಯಾವುದೇ ರೀತಿಯ ನಿರ್ಬಂಧಗಳಿರುವುದಿಲ್ಲ. ಅವರು ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶವಿರುತ್ತದೆ. ರಾಯಭಾರಿ ಕಚೇರಿಗಳ ಸಿಬ್ಬಂದಿ ವರ್ಗದವರನ್ನು ಗೌರವದಿಂದ ಕಾಣುವುದು ನಮ್ಮ ಕರ್ತವ್ಯವೆಂದೇ ನಾವು ಭಾವಿಸುತ್ತೇವೆ.

ಆದರೆ ಚೀನಾದಲ್ಲಿ ಇದು ಸಾಧ್ಯವಾಗಿದೆಯೇ? ಕಳೆದ 12 ವರ್ಷಗಳಲ್ಲಿ ಅಲ್ಲಿ ಯಾವ ರಾಯಭಾರಿ ಕಚೇರಿ ವರ್ಗ ತಾನೇ ನಿರಾತಂಕವಾಗಿ ಕೆಲಸ ಮಾಡಿದೆ? ಇತರರ ಮಾತು ಹಾಗಿರಲಿ, ಸೋವಿಯತ್ ರಷ್ಯಾ ಮತ್ತು ಪೂರ್ವ ಯುರೋಪ್ ರಾಷ್ಟ್ರಗಳ ರಾಯಭಾರಿ ಕಚೇರಿಗಳ ಬಗ್ಗೆಯೂ ಸಂಶಯದ ದೃಷ್ಟಿಯಿಂದಲೇ ಚೀನೀಯರು ನೋಡುತ್ತಾ ಬಂದಿದ್ದಾರೆ; ಒಬ್ಬರ ಬಗ್ಗೆ ಹೆಚ್ಚಿನ ಸಂಶಯವಿರಬಹುದು, ಇನ್ನೊಬ್ಬರ ಬಗ್ಗೆ ಕಡಿಮೆ ಇರಬಹುದು ಅಷ್ಟೆ.

ಮಂಚೂರಿಯಾದಿಂದ ಪ್ರಕಟವಾಗುತ್ತಿದ್ದ ರಷ್ಯನ್ ಭಾಷೆಯ ಪತ್ರಿಕೆಯೊಂದನ್ನು ನಿಲ್ಲಿಸಬೇಕೆಂದು ಮೊನ್ನೆ ಮೊನ್ನೆ ಚೀನಿ ಸರ್ಕಾರ ಆಜ್ಞೆ ಮಾಡಿತು. ಅದು ವಿದೇಶಿ ಪ್ರಕಟಣೆಯೊಂದು ಈ ಕ್ರಮಕ್ಕೆ ಕಾರಣ ಕೊಡಲಾಯಿತು.

ಟಿಬೆಟ್ಟಿನಲ್ಲಿ ದಂಗೆ ನಡೆದ ಸಮಯದಿಂದಲೂ ಟಿಬೆಟ್ಟಿನಲ್ಲಿರುವ ಭಾರತೀಯ ಪ್ರತಿನಿಧಿ-ಕಚೇರಿಗಳ ಮೇಲೆ ನಾನಾ ರೀತಿಯ ನಿರ್ಬಂಧಗಳನ್ನು ಚೀನೀಯರು ಹೇರುತ್ತಲೇ ಇದ್ದಾರೆ ಮತ್ತು ಎಷ್ಟೋ ಸಂದರ್ಭಗಳಲ್ಲಿ ಅವರು ಸಾಮಾನ್ಯ ಸೌಜನ್ಯವನ್ನೂ ತೋರಿಸಿಲ್ಲ. ಪೆಕಿಂಗ್ ಮತ್ತು ಚೀನಾದ ಇತರ ನಗರಗಳಲ್ಲಿರುವ ನಮ್ಮ ಪ್ರತಿನಿಧಿ ಕಚೇರಿಗಳ ಕಥೆಯೂ ಇಷ್ಟೆ. ಈ ಕಚೇರಿಗಳ ಸಿಬ್ಬಂದಿ ವರ್ಗದ ಚಲನವಲನಗಳು ಸಹ ಕಷ್ಟವಾಗಿವೆ.

ಕಳೆದ ತಿಂಗಳ ಒಂಭತ್ತನೆಯ ತಾರೀಕಿನಿಂದ ಲಾಸಾದಲ್ಲಿರುವ ನಮ್ಮ ಕಾನ್ಸುಲೇಟ್ ಜನರಲ್ ಕಚೇರಿಗೂ ದೆಹಲಿಗೂ ವಯರ್‌ಲೆಸ್ ಟೆಲಿಗ್ರಾಫ್ ಸಂಪರ್ಕವನ್ನೇ ಕಡಿದು ಹೋಗಿದೆ. ಅಷ್ಟೇ ಅಲ್ಲ ನಮ್ಮ ಈ ಪ್ರತಿನಿಧಿ ಕಚೇರಿಗೆ ಬೇಕಾಗುವ ಮೂಲ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವುದು ಸಹ ಕಷ್ಟವಾಗಿದೆ ಹೊರಗಿನವರಾರೂ ಈ ನಮ್ಮ ಕಚೇರಿಯ ಆವರಣವನ್ನು ಪ್ರವೇಶಿಸುವುದಕ್ಕೆ ಅವಕಾಶವಿಲ್ಲ. ಇಷ್ಟೇ ಅಲ್ಲ ನಮ್ಮ ಕಾನ್ಸುಲೇಟ್-ಜನರಲ್‌ರವರಿಗೆ ಇದ್ದ ಟೆಲಿಫೋನ್ ಸಂಪರ್ಕವನ್ನು ಕಡಿದು ಹಾಕಲಾಗಿದೆ ಮತ್ತು, ಈ ಕಚೇರಿಯ ಸಿಬ್ಬಂದಿ ವರ್ಗದ ಮೇಲೆ ಇನ್ನೂ ಹೆಚ್ಚಿನ ನಿರ್ಬಂಧಗಳನ್ನು ಹಾಕಲಾಗಿದೆ.

ಪೆಕಿಂಗ್‌ನಲ್ಲಿ ನಮ್ಮ ರಾಯಭಾರಿ ಕಚೇರಿಯ ಮುಂದೆ ಪೊಲೀಸ್ ಪಹರೆ ಹಾಕಲಾಗಿದೆ. ಕಚೇರಿಯ ಸಿಬ್ಬಂದಿ ವರ್ಗದ ಚಲನವಲನಗಳ ಮೇಲೆ ತುಂಬಾ ಕಟ್ಟುನಿಟ್ಟಾದ ನಿರ್ಬಂಧಗಳಿವೆ. ಎಷ್ಟೋ ಸಂದರ್ಭಗಳಲ್ಲಿ ಭಾರತೀಯ, ರಾಯಭಾರ ವರ್ಗದವರನ್ನು ತುಂಬಾ ಅವಮಾನಕರ ರೀತಿಯಲ್ಲಿ ಕಾಣಲಾಗಿದೆ. ಒಬ್ಬರನ್ನೊಬ್ಬ ರೈಲು ಡಬ್ಬಿಯಿಂದ ಹೊರಗೆಳೆದು ಹೊಡೆಯಲಾಯಿತು. ಸರ್ಕಾರ ಈ ಪ್ರಸಂಗದ ಬಗ್ಗೆ ಪ್ರತಿಭಟನೆ ಸಲ್ಲಿಸಿದಾಗ ಈ ಪ್ರಸಂಗದಲ್ಲಿ ತನ್ನ ಹೊಣೆ ಏನೇನೂ ಇಲ್ಲವೆಂದೂ ಚೀನಿ ಸರ್ಕಾರ ತಿಳಿಸಿತು. ಕ್ಷಮಾಪಣೆ ಕೇಳುವ ಒಂದು ಸೌಜನ್ಯ ಕೂಡ ಅವರ ಪಾಲಿಗೆ ಇರಲಿಲ್ಲ.

ಪೆಕಿಂಗ್‌ನಲ್ಲಿರುವ ನಮ್ಮ ರಾಯಭಾರಿ ಕಚೇರಿಯ ಜನ ನಗರದ ಹೊರಗೆ ಕಾಲಿಡಬೇಕಾದರೂ ಅನುಮತಿ ಕೇಳಿ ಬೇಕು. ಪಾಸ್ ಪಡೆಯಬೇಕು. ವಿದೇಶಿ ರಾಯಭಾರಿ ಕಚೇರಿಯ ಜನರನ್ನು ಚೀನಿ ಸರ್ಕಾರ ಕಾಣುತ್ತಿರುವ ರೀತಿ ಹೀಗಿದೆ ಹೆಜ್ಜೆ ಹೆಜ್ಜೆಗೂ ಸಂಶಯದೃಷ್ಟಿ. ಜೊತೆಗೆ ದುರಭಿಮಾನ, ದುರಹಂಕಾರ. ವಿದೇಶೀಯರನ್ನು ತಿರಸ್ಕಾರದಿಂದ ನೋಡುವುದೇ ಅವರ ಸ್ವಭಾವ. ಅವರ ದೃಷ್ಟಿಯಲ್ಲಿ ವಿದೇಶೀಯರು ಅನಾಗರಿಕರು, ಯಾವುದೇ ಕೆಳವರ್ಗಕ್ಕೆ ಸೇರಿದ ಮಾನವ ಪ್ರಾಣಿಗಳು.

ಭಾರತದಲ್ಲಿ ವಿದೇಶೀ ರಾಯಭಾರ ವರ್ಗಗಳನ್ನು ಯಾವ ರೀತಿಯಲ್ಲಾದರೆಯಿಂದ ನೋಡಿಕೊಳ್ಳಲಾಗುತ್ತಿದೆಯೆಂಬುದು ಜಗತ್ತಿಗೇ ಗೊತ್ತಿದೆ ಭಾರತದಲ್ಲಿ 70ಕ್ಕೂ ಹೆಚ್ಚು ವಿದೇಶಿ ರಾಯಭಾರಿ ಕಚೇರಿಗಳಿವೆ, ಈ ಕಚೇರಿಗಳಿಗೆ ಸೇರಿದ ಜನರ ಸಂಖ್ಯೆಯೇ ಸಾಕಷ್ಟು ದೊಡ್ಡದಿದೆ. ನಮ್ಮ ಮೇಲೆ ನಿರ್ಬಂಧಗಳಿವೆ ಎಂದು ಇವರು ಯಾರೂ ದೂರುತ್ತಿಲ್ಲ. ತಾಂತ್ರಿಕ ಸೌಲಭ್ಯಗಳನ್ನು ಒದಗಿಸುವಾಗ ಅವರ ಬೇಡಿಕೆಗಳಿಗೇ ಮೊದಲ ಗಮನ ಕೊಡಲಾಗುತ್ತದೆ. ಇವರ ವಿಚಾರದಲ್ಲಿ ನಾವು ಅಷ್ಟು ಸೌಜನ್ಯದಿಂದ ವರ್ತಿಸಿಕೊಳ್ಳುತ್ತಿದ್ದೇವೆ. ಇದು ನಾಗರಿಕ ಜನ ವರ್ತಿಸಿಕೊಳ್ಳುವ ರೀತಿಯಾಗಿದೆ. ನಾವು ಈ ವರ್ಗಕ್ಕೆ ಸೇರಿದವರು. ನಾವು ಬೇರೆಯವರ ಮೇಲೆ ಆಕ್ರಮಣ ನಡೆಸುವುದಿಲ್ಲ. ಯುದ್ಧಗಳನ್ನು ಆರಂಭಿಸುವುದಿಲ್ಲ.

ಚೀನಾದಲ್ಲಿ ನಮ್ಮ ರಾಯಭಾರಿ ಕಚೇರಿಗಳಿಗೆ ಇರುವ ಸ್ವಾತಂತ್ರ್ಯ ಹಾಗೂ ಸೌಲಭ್ಯಗಳಿಗಿಂತ ಹೆಚ್ಚಿನ ಸ್ವಾತಂತ್ರ್ಯ ಹಾಗೂ ಸೌಲಭ್ಯಗಳು ಭಾರತದಲ್ಲಿ ಚೀನೀ ರಾಯಭಾರಿ ಕಚೇರಿ ವರ್ಗದವರಿಗೆ ಈಗಲೂ ಸಹ ಇರುವುದಾಗಿ ಹೇಳಬಹುದು.

ಆದರೆ ಚೀನೀಯರು ಮಾತ್ರ ತಮ್ಮ ವರ್ತನೆಯನ್ನು ತಿದ್ದಿಕೊಳ್ಳಬೇಕೆಂದು ಅಗತ್ಯವಿದೆ; ಅದನ್ನು ತಿದ್ದಿಕೊಳ್ಳದೆ ಹೆಚ್ಚು ನಿರೀಕ್ಷಿಸುವುದು ಇನ್ನು ಮುಂದೆಯೂ ಸಾಧ್ಯವೆಂದರೆ ಮಾತ್ರ ಕಷ್ಟ. ಅದು ಸಾಧ್ಯವಾಗದು.

(ಆಕಾಶವಾಣಿಯ ವಾರ್ತಾವಿಭಾಗದ ಕೃಪೆ)

ಪ್ರಸಿದ್ಧ ಪುನರ್ಜನ್ಮ ವೃತ್ತಾಂತದಲ್ಲಿರುವಂತೆ
ಮಾನವನ ಸಮಜಗುಣಗಳಲ್ಲಿ ಸಂಗ್ರಹ ಪ್ರವೃತ್ತಿ ಉಳಿತಾಯ ಧಾನವೆಯೂ ಒಂದು. ಮಾನವನ ಜೀವನದ ಹೋರಾಟಕ್ಕೆ, ವಿಜಯಕ್ಕೆ ಬೇಕಾದ ಎಲ್ಲಾ ಶಕ್ತಿ ಆವಶ್ಯಕತೆಗಳನ್ನು ಪರಮಾತ್ಮನು ಬಾಲ್ಯದಲ್ಲಿಯೇ ಬೀಜರೂಪದಲ್ಲಿ ಒದಗಿಸುವನು. ಅಂತೆಯೇ ಸಂಗ್ರಹ ಪ್ರವೃತ್ತಿಯು ಕೂಡಾ. ಇದನ್ನು ಚಿಕ್ಕ ಮಕ್ಕಳಲ್ಲಿ ನಾವು ಧಾರಾಳವಾಗಿ ಕಾಣಬಹುದು. ಪುಟ್ಟ ಬಾಲಕರು ತಮ್ಮ ಕುತೂಹಲ ಎನ್ನಿಸಿಕೊಳ್ಳುವ ವಸ್ತುಗಳನ್ನು ಅಪಾರ ಪ್ರಯತ್ನದಿಂದ ಸಂಗ್ರಹಿಸುತ್ತಿರುವುದನ್ನು ನೋಡಿದವರಾರು?

ಈ ಸಂಗ್ರಹಬುದ್ಧಿಯು ಅಭಿವೃದ್ಧಿಯೂ ಆಗಬಹುದು; ಕೆಂಂಠಿತಗೊಳ್ಳಲೂ ಬಹುದು ಅದು ಸಂದರ್ಭ ಮತ್ತು ಅವಕಾಶಗಳನ್ನಾಧರಿಸಿದೆ.
ಯಾವುದೇ ಒಂದು ಕ್ರಿಯೆ ಮತ್ತೆ ಮತ್ತೆ ಅವರ್ತನಗೊಂಡಲ್ಲಿ ಅದು ಬಲಿತು ಅಭ್ಯಾಸವಾಗಿ ಪರಿಣಮಿಸುವುದು — ಕುಶಲ ಕಲಾವಿದನ ಕೈಬೆರಳುಗಳು ಅವನಿಗೆ ತಿಳಿಯದೆಯೇ ಮುಂದು ಮುಂದಕ್ಕೆ ಚಲಿಸುವಂತೆ
ಕೂಡಿಡುವ ಗುಣವೂ ಹಾಗೆಯೇ —

ಉಳಿತಾಯದ ಪ್ರವೃತ್ತಿ ಬಲಿತು
ಸ್ಥಿರ ಅಭ್ಯಾಸವಾಗಲು; ಸುಲಭ ಸಾಧ್ಯವಾಗಲು:

-ಪಿಗ್ಮಿ

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಳುಂದ ನಿವಾಸ, ಉಡುಪಿ.
ಸ್ಥಾಪನೆ: ೧೯೨೩.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

Edited Printed & Published by K. H. Shetty, at the Navayuga Press, Udipi, S. India.

CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1921 ಸ್ಥಾಪನೆ
Regd. No. B.G 176
Vol. 42 No. 13

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 6—12—1962 ಗುರುವಾರ

20ನ ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೨ ಸಂಚಿಕೆ ೧೩

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಕಳಿಸಿರಿ

ಭಾರತೀಯರ ಸಹಾಯಕ್ಕೆ

ಅಮೆರಿಕ ಮತ್ತು ಬ್ರಿಟನ್ ದೇಶಗಳು

ಬ್ರಿಟಿಷ್ ಕಾಮನ್‌ವೆಲ್ತ್ ಕಾರ್ಯದರ್ಶಿ ಡಂಕನ್ ಸ್ಯಾಂಡಿಸ್ ಮತ್ತು ಅಮೇರಿಕದ ವಿದೇಶಾಂಗ ಖಾತೆಯ ಉಪಮಂತ್ರಿ ಶ್ರೀ ರೋಬರ್ಟ್ ಹೆರ್ಮಿನ್ನರ ಭಾರತ ಸಂದರ್ಶನಗಳು ಜಗತ್ತಿನ ಗಮನವನ್ನು ಸೆಳೆದಿರುವುದು ಸಹಜವೇ. ಚೀನೀ ಅಪರೂಪ ಆಕ್ರಮಣದ ಈ ಸಂಧಿಕಾಲದಲ್ಲಿ ವಿದೇಶೀ ನೆರವು ಭಾರತಕ್ಕೆ ಅಗತ್ಯವಾಗಿರುವಾಗ ಇವರ ಸಂದರ್ಶನವು ಬಹು ಪ್ರಭಾವಕಾರಿಯಾಗುವುದೆಂದು ಎಲ್ಲರೂ ಊಹಿಸಿದ್ದರು. ಇದು ಭಾರತ-ಚೀನ-ಪಾಕಿಸ್ತಾನಗಳ ಮೇಲೆ ಬಹು ಪ್ರಭಾವ ಬೀರಬಹುದೆಂಬುದನ್ನು ಮೊದಲೇ ನಿರ್ಧರಿಸಿದ್ದರು.

ಬ್ರಿಟನ್— ಅಮೇರಿಕಗಳು ಆಪತ್ಕಾಲದಲ್ಲಿ ಭಾರತಕ್ಕೆ, ನೆರವು ನೀಡಿದ ಎಂಡು ಪ್ರಮುಖ ರಾಷ್ಟ್ರಗಳು ಈ ಉಪಕಾರವನ್ನು ಭಾರತವೆಂದಿಗೂ ಮರೆಯದು. ಈ ಎರಡು ನಿಯೋಗಗಳು ಏನು ಸಾಧಿಸಿದುವು? ಎಂಬುದನ್ನು ಸ್ಥೂಲವಾಗಿ ವಿವೇಚಿಸುವ.

ರಾಜಕೀಯ ಮಹತ್ವ

ನಾಯಕದ್ವಯರ ಸಂದರ್ಶನಕ್ಕೆ ಮುಖ್ಯತಃ ರಾಜಕೀಯ ಮಹತ್ವವಿತ್ತು. ಅಮೇರಿಕಾಧ್ಯಕ್ಷ ಕೆನಡಿಯವರೇ ಹ್ಯಾರಿಮನ್ನರ ನಾಯಕತ್ವದಲ್ಲಿ ಐದು ಮಂದಿಯ ಒಂದು ನಿಯೋಗ ಕಳಿಸಿ ಭಾರತವ ಸಧ್ಯದ ಭಿಕರ ಪರಿಸ್ಥಿತಿಯ ಪೂರ್ಣವೃತ್ತಾಂತ—ನಿವರಗಳನ್ನು ತಿಳಿದುಕೊಳ್ಳಲು ಬಯಸಿದ್ದಾರೆ.

ಇದೇ ಸಂದರ್ಭದಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನ ಕಾರ್ಯದರ್ಶಿ ಡಂಕನ್ ಸ್ಯಾಂಡಿಸ್‌ರೂ ಭಾರತಕ್ಕೆ ಬಂದರು. ಇದು ಜಗತ್ತಿನ ಜನರ ಕುತೂಹಲವನ್ನು ಕೆರಳಿಸಿತು. ಚೀನದ ಕಣ್ಣನ್ನು ಕುಕ್ಕಿತು ರಕ್ಷಿದ ಮಾನವನ್ನು ಮುರಿಯಿತು. ಭಾರತದ ಜೈತ್ಯನ್ಯ—ಶಕ್ತಿ-ಸಾಮರ್ಥ್ಯಗಳನ್ನು ವೃದ್ಧಿಸಿತು. ಭಾರತದ ಬಗ್ಗೆ ಅನುಕಂಪ ಸಹಾನುಭೂತಿ ಇದ್ದ ರಾಷ್ಟ್ರಗಳಿಗೆ ಇದರಿಂದ ಸಮೂಹಾನವಾದರೂ ಪಾಕಿಸ್ತಾನ-ಚೀನಾ-ರಶ್ಯಾ ಮೊದಲಾದ ಬೆರಳೆಣಿಕೆಯ ರಾಷ್ಟ್ರಗಳಿಗೆ ಕೆನ್ನೆಗೆ ಹೊಡೆದಂತಾಯಿತು. ಭಾರತವು ಅಮೇರಿಕ ಬ್ರಿಟನ್‌ಗಳ ಕೈಗೊಂಬೆಯಾಗಿ ಬಿಟ್ಟಿವೆಯೆಂಬ ತಪ್ಪುಅಭಿಪ್ರಾಯ ಇವುಗಳಲ್ಲಿವೆ. ನಮ್ಮ ಅಭಿಪ್ರಾಯ ಕಾರ್ಯಗಳ ಬಗ್ಗೆ ಹೊರವರ ಪ್ರತಿಕ್ರಿಯೆ-ಅಭಿಪ್ರಾಯಗಳನ್ನು ಸದಾ ಸ್ವೀಕರಿಸುತ್ತಿರಬೇಕು ಯುದ್ಧದಾತಹ ಭೀಕರ ಸಂದರ್ಭದಲ್ಲಿ ನಮ್ಮ ಅನುಭವ-ಕಾರ್ಯಕುಶಲತೆಗಳಲ್ಲಿ ಕುಂದಿರುವುದು ಸ್ವಾಭಾವಿಕ. ಇದನ್ನು ಸರಿಪಡಿಸಿ ತನ್ಮೂಲಕ ನಮ್ಮ ಸಮರ ಸನ್ನಾಹವನ್ನು ಭದ್ರಪಡಿಸುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಈ ರಾಷ್ಟ್ರಗಳ ಕೊಡುಗೆಗೆ ಈ ಸಂದರ್ಶನ ಅತ್ಯಂತ ಉಪಕಾರಿಯಾಗಿದೆ.

ಸಂಚಾರದ ಉದ್ದೇಶ

ಕಳೆದ ತಿಂಗಳ ತಾರೀಕು ೩೦ರಂದು ನಿಯೋಗದೊಂದಿಗೆ ರೊಬರ್ಟ್ ಹ್ಯಾರಿಮನ್ನರು ಮಹಾ ಪ್ರೇರವನ್ನಿಟ್ಟು ಅಮೇರಿಕಯು ಭಾರತಕ್ಕೆ ನೀಡಬಹುದಾದ ಯುದ್ಧೋಪಕರಣಾದಿಗಳ ವಿವರವನ್ನು ತಿಳಿಯಲು ಬಂದರು.

ಭಾರತದ ಯುದ್ಧದ ಸಂದರ್ಭದ ಸ್ಪಷ್ಟ ಚಿತ್ರಣವನ್ನು ಪ್ರತ್ಯಕ್ಷವಾಗಿ ಅಭ್ಯಸಿಸಿದರು. ಭಾರತದ ವಿದೇಶ ಧೋರಣೆಯ ಸ್ಪಷ್ಟತೆಯನ್ನು ತಿಳಿದುಕೊಂಡರು. ಭಾರತಕ್ಕೆ ತಾವು ಕೊಡುವ ಸಹಾಯ ಏಷ್ಟು? ಶರತ್ತುಗಳೇನು? ಭಾರತದ ಆವಶ್ಯಕತೆಗಳೇನು? ಎಂಬುದನ್ನು ಈ ನಿಯೋಗವು ನಮ್ಮ ದೇಶದ ಧೋರಣೆರೊಂದಿಗೆ ಚರ್ಚಿಸಿ ನಿರ್ದಿಷ್ಟ ಅಭಿಪ್ರಾಯಕ್ಕೆ ಬಂತು ಭಾರತದ ರಕ್ಷಣಾ ವ್ಯವಸ್ಥೆ ಹೇಗೆ ನಡೆದಿದೆ ಎಂಬುದನ್ನು ಪರೀಕ್ಷಿಸಿತು. ಹ್ಯಾರಿಮನ್ನರು ನಮ್ಮ ಸೇನಾ ವ್ಯವಸ್ಥೆಯನ್ನು ಕೂಲಂಕಷವಾಗಿ ಅಭ್ಯಸಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ, ಎರಡು ದಿನಗಳ ನಂತರ ಸ್ಯಾಂಡಿಸ್‌ರು ತಮ್ಮ ಬಂಧುರಾಷ್ಟ್ರ ಭಾರತದ ಮೇಲೆ ಆದ ಮಿಂಚಿ ಆಕ್ರಮಣವನ್ನು ಎದುರಿಸಲು, ಭಾರತಕ್ಕೆ ಬೇಕಾದ ಸಹಾಯ ನೀಡಲು ಬಂದರು. ಬ್ರಿಟನ್ನಿನ ಮುಖ್ಯ ಮಂತ್ರಿ ಮತ್ತು ರಾಣಿಯವರ ಸಲಹೆಯಂತೆ ಬಂದ ಇವರು ಕಮ್ಯುನಿಸ್ಟ್ ಆಕ್ರಮಣವನ್ನು ಎದುರಿಸಲು ಭಾರತ ಏನು ಮಾಡಬೇಕು? ಮತ್ತು ಅದರ ಆವಶ್ಯಕತೆಗಳೇನು? ಎಂಬುದನ್ನು ಚರ್ಚಿಸಿ—ವಿಮರ್ಶಿಸಿದರು ಭಾರತದ ಸೇನಾ ವ್ಯವಸ್ಥೆಯನ್ನು ಕಂಡು ಸಲಹೆ—ಸೂಚನೆ ಮಾಡಿದರೂ ಅವರ ಉದ್ದೇಶಗಳೆಲ್ಲಾ ಂದು. ನೆಹರೂರವರೇ ಮೊದಲಾದ ಧೀರೀಣರುಗಳನ್ನು ಕಂಡು ಭಾರತದ ಧೋರಣೆ ಮತ್ತು ವ್ಯವಸ್ಥೆಗಳ ಯಥಾರ್ಥ ಸಾಗೂ ಸ್ಪಷ್ಟ ಚಿತ್ರಣವನ್ನು ಕಂಡರು.

ರಣರಂಗದ ಪ್ರತ್ಯಕ್ಷ ದರ್ಶನ

ಈ ಎರಡೂ ನಿಯೋಗಗಳು ನಮ್ಮ ಗಡಿಯ ವಿವಾದಕೇಂದ್ರಗಳಾದ ಪ್ರದೇಶಗಳನ್ನು ಸಂದರ್ಶಿಸಿದುವು ನೇಫಾ ದ-ಲಡಖಿನ ಮತ್ತು ಆಕ್ಸಾಯಿನ ಗಡಿ ಪ್ರದೇಶಕ್ಕೆ ಹೋಗಿ ಚೀನೀಯರ ಆಕ್ರಮಣದ ಸಂಯನ್ನು ವೀಕ್ಷಿಸಿದುವು ಗುಡ್ಡಗಾಡು ಪ್ರಾಗೂ ಳೆ ಪ್ರದೇಶವನ್ನು ಕಬಳಿಸಬೇಕೆಂಬ ಚೀನಿಯರ ಕಪ್ಪಿತ ಮನೋವೃತ್ತಿಯನ್ನು ಖಂಡತಃಂಡವಾಗಿ ಟೀಕಿಸಿ ಈ ಆಕ್ರಮಣಕಾರಿಗಳನ್ನು ಹಿಂದಟ್ಟಲು ಭಾರತಕ್ಕೆ ಸಹಾಯನೀಡುವುದಾಗಿ ಪಣತೊಟ್ಟರು. ರಣರಂಗವನ್ನು ಭಾರತೀಯ ಸೇನೆಯ ವ್ಯವಸ್ಥೆಯ ಬಗ್ಗೆ ಸಾತಪ್ಪು ಮೆಚ್ಚುಗೆ ವ್ಯಕ್ತಪಡಿಸಿದ್ದರೂ ಭಾರತವು ಈ ತನಕ ತಯಾರಿಮಾಡದಿರುವುದರಿಂದ ಈ ಬೃಹತ್ತರವಾದ ಈ ಚೀನೀ ಆಕ್ರಮಣವನ್ನು ಒಮ್ಮೆಲೆ ಹಿಮ್ಮೆಟ್ಟಿಸುವುದು ಅಸಾಧ್ಯವಾಮಿತು. ಆದ ಂದರಿಂದ ಭಾರತವು ನವೀನ ಶಸ್ತ್ರಾಗಳಿಂದ ಸುಸಜ್ಜಿತವಾದ ಸೇನೆಯನ್ನು ಪಯೋಗಿಸಬೇಕೆಂದು ಸ್ಪಷ್ಟವಾಗಿ ಇವರು ಹೇಳಿದರು. ಇಂಥ ಬಿರ್ಘೆಯುದ್ಧದಿಂದ ಭಾರತದ ಜನಜೀವನದಲ್ಲಿ ಮಹತ್ತರ ಪರಿಣಾಮವಾಗದಿರಲಾರದೆಂದು ಅಂದರು. ಅಸ್ಸಾಮಿನ ಹಿಳಿಯಲ್ಲಿನ ಎಣ್ಣೆ ಗನಿಗಳು ಎಷ್ಟು ಮೂಕ್ಕಾಲ್ಲಾ ಶತ್ರು ವಶವಾಗದಂತೆ ಎಚ್ಚರಿಕೆಯಿಂದಿರಬೇಕೆಂಬುದನ್ನು ಒತ್ತಿ ಹೇಳಿದರು.

ಶಸ್ತ್ರಾಸ್ತ್ರ ಪೂರೈಕೆ

ಈ ನಿಯೋಗಗಳ ಭೇಟಿಯಿಂದಾಗಿ ಭಾರತಕ್ಕೆ ಕಳೆದು ಹೋದ ಜೀವ ಬಂದಂತಾಗಿದೆ. ಬಿಟನ್, ಅಮೇರಿಕಗಳು ಭಾರತಕ್ಕೆ ಶಸ್ತ್ರಾಸ್ತ್ರ ಪೂರೈಕೆ ಮಾಡದಿರುತ್ತಿದ್ದರೆ ನಮ್ಮ ಪರಿಸ್ಥಿತಿ ಇನ್ನು ಚಿಂತಾಜನಕವಾಗುತ್ತಿತ್ತು. ತತ್ಪರ ಂ.ಸ್ಪರ್ಧಾಗಳು ಭಾರತಕ್ಕೆ ಎಷ್ಟು ರ ಹಾಯಮಾಡಬಲ್ಲವು? ಏನು ಮಾಡಬಲ್ಲವು? ಎಂಬುದು ಅವುಗಳ ಈಚಿಗಿನ ಅರೆ ಮನಸ್ಸಿನ ವರ್ತನೆಯಿಂದ ಸ್ಪಷ್ಟವಾಗಿ ತಿಳಿಯಬಹುದು. ಅವೆಲ್ಲ ಗಾಳಿ ಬಂದ ಕಡೆ ಕೊಡೆ ಹಿಡಿಯುವ ನಾಲಿಗೆ ಸೇವಾದಂತಿವೆ. ಆಪತ್ಕಾಲದಲ್ಲಿ ಸಹಾಯಕ್ಕೆ ಬರುವವನೇ ನಿಜವಾದ ಮಿತ್ರ. ಈಗ ಭಾರತಕ್ಕೆ ತನ್ನ ಮಿತ್ರರಾರು— ಶತ್ರುಗಳಾರು ಎಂದು ನಿರ್ಧರಿಸಲು ಸುಸಮಯ. ಈ ತನಕವೇ ರಾಷ್ಟ್ರಗಳಿಂದ ಸಾಕಷ್ಟು ಸ್ವಯಂ ಚಾಲಿತ ಅಸ್ತ್ರಗಳು, ಯುದ್ಧ ವಿಮಾನಗಳು, ಮಿಸ್ಸೈಲ್‌ಗಳೇ ಮೊದಲಾದವುಗಳು ಭಾರತದ ಕೇಳಿಕೆಯಂತೆ ಬಂದಿವೆ. ಮಹತ್ವದ ಸಂಗತಿಯಿಂದರೆ ಈ ಎರಡು ದೇಶಗಳು ಯಾವೊಂದು ರಾಜಕೀಯ ಶರ್ತಗಳಿಲ್ಲದೆ ಶಸ್ತ್ರಾಸ್ತ್ರ ಪೂರೈಕೆ ಮಾಡಿದುದು ರಶ್ಯಾಂತಹ ದೊಡ್ಡ ರಾಷ್ಟ್ರ ಮಿಗ್ ವಿಮಾನಗಳನ್ನು ಕೊಡುವುದಾಗಿ ಮೂತ್ರಕೊಟ್ಟು ಸಮಯಕ್ಕಾಗುವಾಗ ಕೊಡುವುದಿಲ್ಲವೆನ್ನುವುದು ಅದರ ಹಿರಿಮೆಗೆ ಘಾತಕೆಗೆ ಭೂಷಣವಲ್ಲ ಭಾರತೀಯರು ಶತ್ರುವಿಗೆ ವಣಿಯರು, ಸ್ವಾತಂತ್ರ್ಯಕ್ಕೆ ಧಕ್ಕೆ ತಂದವರನ್ನು ಹೊಡೆದೋಡಿಸಬೆ ಉಳಿಯರು ಎಂದು ಅವರು ತಿಳಿದಿರಬೇಕು.

ಪಾಕಿಸ್ತಾನದ ಮನಃಪರಿವರ್ತನೆ

ಈ ಎರಡು ನಿಯೋಗಗಳ ಮಹತ್ವ ಪೂರ್ಣ ಸಾಧನೆಯೆಂದರೆ ಭಾರತ—ಪಾಕಿಸ್ತಾನಗಳೊಳಗಿನ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ಪ್ರಯತ್ನಿಸಿದುದು. ಪಾಕಿಸ್ತಾನಕ್ಕೆ ಹೋಗಿ ಅಲ್ಲಿ ಅಯೂಬರೊಡನೆ ಮಾತಾಡಿ ಅವರಿಗೆ ಚೀಡೊದನೆ ಆನಾಕ್ರಮಣಒಪ್ಪದಂತಹ ತಲೆಬುಡವಿಲ್ಲದ ಒಪ್ಪಂದಗಳಿಗೆ ಪಾರುಹೋಗದೆ ಕಮ್ಯುನಿಜಂಮ್ಮಿನ ವಿರುದ್ಧದ ಭಾರತದ ಹೋರಾಟದಲ್ಲಿ ಸಹಕಾರಿ ಬೇಕೆಂಬುದಕ್ಕೆ ಅವರ 'ಹೂಂಕಾರ' ದೊರಕಿಸಿ ಕೊಂಡುದು ಭಾರತವನ್ನು ಪಾಕಿಸ್ತಾನದವಿಸ್ಮರೊಳಗೆ ಸದ್ಯದಲ್ಲೇ ಉಚ್ಚ ಮಟ್ಟದ ಮಾತುಕತೆಗಳಾಗುವುದು ಇದರಿಂದ ಸಮಸ್ಯೆಗಳು ಪರಿವಾರವಾಗಲು ಉತ್ತಮ ವಿರ್ಮಾಡಾದಂತಾಯಿತು.

ಕಮ್ಯೂನಿಸ್ಟರನ್ನು ಸದೆ ಬಡಿಯಬೇಕು

"ಎಷ್ಟೇ ಕಷ್ಟ ನಷ್ಟಗಳುಂಟಾದರೂ ಕಮ್ಯುನಿಸ್ಟರ ಆ ಕೆಂಪು ಚೀನೀಯರ ಈ ದಿಟ್ಟತನದ ದುರಾಕ್ರಮಣವನ್ನು ನ್ನೆ ನದೆಬಡಿಯುದೆ ಭಾರತವು ಸುಮ್ಮನಿರ

(೨ನೇ ಪುಟ ನೋಡಿರಿ)

ಭದ್ರತೆ
ಬಾಳಿಕೆಗಾಗಿ
ಖೀರಾ

ಇದೀಗ ರಾಷ್ಟ್ರ ರಕ್ಷಣೆ, ಭದ್ರತೆಗಾಗಿ ಹೋರಾಡುವ ಕಾಲವಲ್ಲವೆ?
ನಿಮ್ಮ ಮನೆಯ ಸುರಕ್ಷಿತತೆ, ಭದ್ರತೆಗಳಿಗಾಗಿ ಖೀರಾ—
ಫರ್ನಿಚರುಗಳನ್ನು ಆರಿಸುವುದು ಉಚಿತವಲ್ಲವೆ?
ಮನೆ, ಮಠ, ಆಫೀಸು, ಆಸ್ಪತ್ರೆ, ಶಾಲೆ ಕಾಲೇಜುಗಳಿಗೆ ಆತ್ಯಾವಶ್ಯಕವಾದ
ಯಾವತ್ತೂ ಉಕ್ಕಿನ ಫರ್ನಿಚರುಗಳಿಗೆ ವಿಚಾರಿಸಿರಿ ಯಾ ಸಂದರ್ಶಿಸಿರಿ!

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು— 1.

ಲೇಖಾಂಕ ೧೨

ರಾಜಾಜಿಯವರ ಕಲಾಸಿದ್ಧಿ

ದೇವದರ್ಶನ

ಶ್ರೀ ಕೆ. ಎನ್. ಭಟ್, ಶಿರಾಡಿಸಾಲ್.

ಶ್ರೀ ರಾಜಾಜಿಯವರ ಈ ಕಥೆಯು ಭಾವಪ್ರಧಾನವಾದ ಒಂದು ಹೊಸ ರೀತಿಯ ಕಥೆಯೂಗಿದೆ. ಈ ಕಥೆಯಲ್ಲಿ ಚಿಟ್ಟಿಯೂರರ ಪತ್ನಿ ಮೀನಾಕ್ಷಿಗೆ ದೇವರ ಕೋಣೆಯಲ್ಲಿಯೇ ತನ್ನ ಮತ್ತು ತನ್ನ ವರ ಪಿತೃಗಳ ಹಾಗೂ, ಬಲರಾಮ ಕೃಷ್ಣ, ಪಂಚಪಾಂಡವರೇ ಮೊದಲಾದ ವರ ದರ್ಶನ ಲಭಿಸುವುದಿದ್ದು,ಅತ್ಯಂತ ವಿಸ್ಮಯಕರವಾದ ಘಟನೆಯೂಗಿನೆ! ಇಷ್ಟು ಮಾತ್ರವಲ್ಲ; ಅಲ್ಲಿ ಬಂದು ಸೇರಿದ್ದ ಆ ಪಿತೃಗಳು, ಹಾಗೂ ಪಂಚಪಾಂಡವರು ಕೂಡ ಎಲ್ಲರೂ ಖಾದೀ ಬಟ್ಟೆಗಳನ್ನೇ ಧರಿಸಿಕೊಂಡಿದ್ದರೆಂಬುದಿದು— ಮತ್ತೊಂದು ಮಹತ್ವದ ವಿಚಾರವಾಗಿದೆ. ಹೀಗೆ ಈ ಕಥೆಯ ಮೂಲಕ ಖಾದಿಯ ಉಪಯೋಗ ಹಾಗೂ ಮಹತ್ವವನ್ನು ಚಿಟ್ಟಿಯೂರರ ಪತ್ನಿಯ ಮುಖಾಂತರ ಜನತೆಗೆ ಬೋಧಿಸುವುದಕ್ಕಾಗಿ, ಬಲರಾಮ ಕೃಷ್ಣರೂ ಪಂಚಪಾಂಡವರೂ, ಪ್ರಚಾರಾರ್ಥವಾಗಿ ಈ ಭೂಮಿಗೆ ಇಳಿದು ಬಂದಿದ್ದಾರೆ! ಎಂದರೆ ಯಾರಿಗೂ ಆಶ್ಚರ್ಯವಾದೀತು! ಆದರೆ, ಇಲ್ಲಿ ರಾಜಾಜಿಯವರ ಉದ್ದೇಶವಾದರೂ ಮಹತ್ವಪೂರ್ಣವಾಗಿದೆ.

ಚಿಟ್ಟಿಯೂರರು ಬಹು ಕಷ್ಟದಿಂದಲೇ ತನ್ನ ವ್ಯಾಪಾರವನ್ನು ಅಭಿವೃದ್ಧಿಪಡಿಸಿ ಶ್ರೀಮಂತರಾಗಿದ್ದರು. ಅವರ ಪತ್ನಿ ಪತಿ ಪರಾಯಣೆ, ಹಾಗೂ ದೈವ ಭಕ್ತೆ. ಆಕೆಯ ಕಾರಣದಿಂದಲೇ 'ತನ್ನ ಸಂಪತ್ತು ಹೆಚ್ಚಿದೆ' ಎಂದು ತಿಳಿದಿದ್ದ ಚಿಟ್ಟಿಯೂರರು, ಎಂದೂ ಪತ್ನಿಯ ಮಾತಿಗೆ ವಿರೋಧಿಸುವವರಾಗಿರಲಿಲ್ಲ.

ಚಿಟ್ಟಿಯೂರರು ಒಂದು ದಿನ ಅಂಗಡಿಯಲ್ಲಿದ್ದಾಗ ಒಬ್ಬ ಸನ್ಯಾಸಿಯು ಚಿಟ್ಟಿಯೂರರ ಮನೆಗೆ ಬಂದು, 'ತಾನು ಊಟ ಮಾಡಬೇಕು' ಎಂಬ ತನ್ನಿಚ್ಛೆಯನ್ನು ತಿಳಿಸಿದನು. ಚಿಟ್ಟಿಯೂರರ ಪತ್ನಿಯು, ಪರಮ ಭಾವಳಿಯ ಆ ದಿನಗಳಲ್ಲಿ ಬಂದ ಆ ಸನ್ಯಾಸಿಗೆ ಆದರದಿಂದ ಊಟ ಹಾಕಿದಳು. ಊಟವಾದ ಬಳಿಕ ಸಂತಸಗೊಂಡ ಆ ಸನ್ಯಾಸಿ ಚಿಟ್ಟಿಯೂರರ ಪತ್ನಿಗೆ ಒಂದು ಮಂತ್ರೋಪದೇಶ ಮಾಡಿ— 'ಮಂಗಲ ಸ್ನಾನ ಮಾಡಿದ ಬಳಿಕ ಈ ಮಂತ್ರವನ್ನು ಸಾವಿರದ ಎಂಟು ಸಲ ಜಪಿಸಿದರೆ, ನಿನಗೆ ಸ್ವರ್ಗದಲ್ಲಿರುವ ನಿನ್ನ ಪಿತೃಗಳೆಲ್ಲರ ದರ್ಶನವಾಗುತ್ತದೆ! ನಿನಗೆ ಸುಖವಾಗಲಿ!' ಎಂದು ಹೇಳಿ ಹೊರಟು ಹೋದನು. ಮರುದಿನವೇ ಆಕೆ ಮಂಗಲ ಸ್ನಾನ ಮಾಡಿ ದೇವರ ಪೂಜೆ ತೀರಿಸಿ, ಆ ಮಂತ್ರವನ್ನು ಪಠಿಸಿದಳಂತೆ. ಮಂತ್ರದ ಪಠಣೆ ಮುಗಿಯುವುದರೊಳಗಾಗಿಯೇ ಶಂಖ ವಾದ್ಯಗಳ ಧ್ವನಿ ಕೇಳಿಸತೊಡಗಿ ಆ ಬಿಕ್ಕ ದೇವರ ಕೋಣೆಯಲ್ಲೇ ಪಿತೃಗಳೆಲ್ಲರೂ ಬಂದು ಸೇರಿದರಂತೆ. ಮೀನಾಕ್ಷಿಯ ತಂದೆಯ ತಂದೆ! ಚಿಟ್ಟಿಯೂರರ ತಂದೆಯ ತಂದೆ! ಹೀಗೆ ಎಲ್ಲರೂ ಅಲ್ಲಿ ಬಂದಿದ್ದರಂತೆ! ಅದಲ್ಲದೆ ಒಂದು ಕಡೆ ಬಹಿಷ್ಕರರೂ ಸಂಚ ನಾಂಡವರೂ, ಮತ್ತೊಂದು ಕಡೆ ಬಲರಾಮ, ಕೃಷ್ಣ, ಪರಶುರಾಮ ಇವರುಗಳೂ, ಅಲ್ಲಿಗೆ ಬಂದು ಕುಳಿತಾಗ, ಆ ಕೋಣೆಯಲ್ಲಿ ಸ್ಥಳವೇ ಇಲ್ಲದಂತಾಯಿತಂತೆ! ಈ ಅದ್ಭುತ ಪವಾಡದ ದೃಶ್ಯವನ್ನು ಕಂಡ ಮೀನಾಕ್ಷಿಯು "ನಾರಾಯಣ!" ಎಂದು ಚೀತ್ಕರಿಸಿ ಮೂರ್ಛೆಹೋದಳಂತೆ.

ಪತ್ನಿಯ ಚೀತ್ಕಾರ ಕೇಳಿಸುವುದೂ ಚಿಟ್ಟಿಯೂರರು ಮನೆ ಸೇರುವುದೂ ಏಕಕಾಲಕ್ಕೆ ಆಯಿತು. ಅವರು ಒಳಗೆ ಬಂದು ನೋಡುತ್ತಲೇ, ನಿಷಿತ್ರವಾದ ಉಡುಪನ್ನು ಧರಿಸಿದ್ದ ಹಲವರು ದೇವರ ಕೋಣೆಯಲ್ಲಿ ನೆರೆದಿರುವುದನ್ನು ಕಂಡು ಚಿಟ್ಟಿಯೂರರಿಗೆ ಗಾಬರಿಯಾಯಿತು! ಎಲ್ಲರೂ ಖದ್ದರ್ ಬಟ್ಟೆ ಧರಿಸಿದ್ದುದನ್ನು ನೋಡಿದ ಚಿಟ್ಟಿಯೂರರಿಗೆ 'ಇವರು ಗಾಂಧೀಜಿಯವರ ಶಿಷ್ಯರಿರಬೇಕು' ಎಂಬ ಅಲೋಚನೆಯೂ ಉಂಟಾಯಿತು. ಅಲ್ಲಿ ನುಲಗಿದ್ದ ತನ್ನ ಪತ್ನಿಯನ್ನೆಬ್ಬಿಸುತ್ತ ಚಿಟ್ಟಿಯೂರರು ಅಲ್ಲಿ ನೆರೆದ ಮಹಾಶಯರಿಗೆ ಹೇಳಿದರು— 'ನೋಡಿ! ನಿಮ್ಮ ಗಲಾಟೆ ಇಲ್ಲಿ ಬೇಡ. ಪೋಲೀಸಿನವರು ಎಲ್ಲಿಯದರೂ ಕಂಡರೆ ನನಗೆ ಪ್ರಾಣಕ್ಕೆ ಬಂದೀತು! ಆ ಕಡೆದ ಮನೆ ಒಬ್ಬ ವಕೀಲರದು. ತಾವುಗಳು ದಯವಿಟ್ಟು ಅಲ್ಲಿಗೆ ಹೋಗಬೇಕು" ಎಂದರು. ಆಗ ಅವರೆಲ್ಲರೂ ಸಿಲಕಿಲನೆ ನಕ್ಕರಂತೆ! ಇದನ್ನು ನೋಡಿದ ಚಿಟ್ಟಿಯೂರರು—'ನೀವೆಲ್ಲ ನಗುತ್ತೀರಿ! ನಿಮಗೆ ಆಟ! ನೀವು ಜೈಲಿಗೆ ಹೋಗಲೂ ಸಿದ್ಧರಿರಬಹುದು. ಆದರೆ ನಾನು ಅದಕ್ಕೆ ತಯಾರಿಲ್ಲ! ನೀವು ಬೇಗನೆ ಇಲ್ಲಿಂದ ಹೊರಡಿ' ಎಂದರು. ಆಗ ಆ ಸಂಗಡದ ಜನರಲ್ಲಿ ವೃದ್ಧನೊಬ್ಬನು—'ಮಗೂ! ನಿನಗೇನೂ ತಿಳಿಯದಪ್ಪಾ! ನಾನು ನಿನ್ನ ತಂದೆಯ ತಂದೆಯೂಗಿದ್ದೇನಪ್ಪಾ! ನೀನೇಕೆ ಹೆದರುವೆ?' ಎಂದು ನುಡಿಯಲು ಚಿಟ್ಟಿಯೂರರು ದೃಢ ಸ್ವರದೊಡನೆ! 'ನಾಳು ನಿಲ್ಲಿಸಿರಿ. ಇಲ್ಲಿಂದ ಬೇಗ ಹೊರಡಿ" ಎಂದರು. ಆಗ ಆ ವೃದ್ಧರು, ಖಾದಿಯ ಮಹಾತ್ಮೆಯನ್ನು ಹೀಗೆ ವಿವರಿಸಿದರು — 'ನಮಗೂ ಈ ಖಾದೀ ಬಟ್ಟೆಗಳು ವಿಚಾರ ನಿನಗೇನು ತಿಳಿದಿದೆಯಪ್ಪ? ನಾವು ಈ ಭೂಲೋಕದಲ್ಲಿ ಜೀವನ ನಡೆಸುತ್ತಿದ್ದಾಗ ಈ ಖದ್ದರ್ ಬಟ್ಟೆಯನ್ನೇ ಧರಿಸುತ್ತಿದ್ದೆವು. ಇದು ನಮ್ಮ ದೇಶದ ಬಟ್ಟೆ! ಈ ಬಟ್ಟೆ ನಮ್ಮ ಮೈ ಮೇಲೆ ಇದ್ದ ಹಾಗೇ ನಾವು ಸತ್ತು ಸ್ವರ್ಗ ಸೇರಿದೆವು. ಈಗಲೂ ಅದೇ ಬಟ್ಟೆ ನಮ್ಮ ಮೈ ಮೇಲಿದೆ! ಸ್ವರ್ಗದಲ್ಲಿ ಬಟ್ಟೆ ಹಳತಾಗುವುದೂ ಇಲ್ಲ; ಹರಿದು ಹೋಗುವುದೂ ಇಲ್ಲ! ನಿನ್ನ ಪತಿವ್ರತಾ ಶಿರೋಮಣಿಯೂದ ಹೆಂಡತಿ ನಮ್ಮನ್ನು ಕರೆದಳು! ಅದುದರಿಂದ ಬಂದೆವಪ್ಪಾ!" ಚಿಟ್ಟಿಯೂರರು ಈ ಮಾತುಗಳನ್ನು ಕೇಳಿ ಸ್ತಬ್ಧರಾಗಿ ಹೋದರು. ಆವರಿಗೆ ಆ ವೃದ್ಧನ ಮಾತಿನ ಮೇಲೆ ನಂಬಿಕೆಯುಂಟಾಗಲಿಲ್ಲ! ಕೊನೆಗೆ ಅಲ್ಲಿಯೇ ಇದ್ದ ಧರ್ಮರಾಯನಿಗೆ ವಂದಿಸಿ ಚಿಟ್ಟಿಯೂರರು ಕೇಳಿದರು—'ಇವೆಲ್ಲ ನಿಜವೆ? ನೀವು ಒಳ್ಳೆಯವರಂತೆ ತೋರುವಿರಿ. ಸ್ವಲ್ಪ ಹೇಳುವಿರಾ?'

'ನೀನೇನೂ ಗಾಬರಿಯೂಗಬೇಡ ಮಗನೆ! ನಾವು ಈ ಲೋಕದಲ್ಲಿದ್ದಾಗ ಕೈ ಮಗ್ಗದ ಬಟ್ಟೆಯನ್ನೇ ಧರಿಸುತ್ತಿದ್ದೆವು. ಆಗ ನಮಗೆ ಬೇರೆ ಬಟ್ಟೆಯು ಪಂಚಮವೇ ಇರಲಿಲ್ಲ! ಈಗ ನೀನೆಲ್ಲ ಆದನ್ನೇ ಖದ್ದರ್! ಖಾದಿ ಬಟ್ಟೆ! ಎಂದು ಹೇಳುತ್ತಿರುವಿರಿ! ಆಗ ನಮ್ಮ ಕಾಲದಲ್ಲಿ ಈ ಭಾರತದಿಂದ ನಾವು ಹೊರ ದೇಶಗಳಿಗೆ ಬಟ್ಟೆಯನ್ನು ಕಳುಹಿಸುತ್ತಿದ್ದೆವು! ಮಿಲ್ಲುಗಿಲ್ಲು ಆಗ ಒಂದೂ ಇರಲಿಲ್ಲ! ನೀವೂ ಕೂಡ ಈ ಬಟ್ಟೆಯನ್ನೇ ಧರಿಸಬೇಕಪ್ಪಾ! ಈಗ ನಿಮ್ಮ ಈ ದೇಶದಲ್ಲಿ ದಾರಿದ್ರ್ಯವೇ ತುಂಬಿ ಹೋಗಿದೆಯೆಂದು ಕೇಳಿದ್ದೇನೆ! ಇದು ಹೌದೆ ಮಗು?' ಎಂದರು.

ಈಗ ಚಿಟ್ಟಿಯೂರರು ಆವರೆಲ್ಲರ ಬಟ್ಟೆಯನ್ನೂ ತಿಕ್ಕಿ ತಿಕ್ಕಿ ನೋಡಿದರು! ಬಲರಾಮ! ಕೃಷ್ಣ! ಎಲ್ಲರೂ ಖದ್ದರ್ ಬಟ್ಟೆಯನ್ನೇ ಧರಿಸಿದ್ದಾರೆಂಬುದು ಈಗ ಅವರಿಗೆ ಖಚಿತವಾಯಿತು. ಆಗ ಅವರು—'ಅರೆ! ಏನಾಶ್ಚರ್ಯವಿದು? ಈ ಗಾಂಧೀಜೀಯವರು ನಾತ್ರ ಖದ್ದರ್ ಬಟ್ಟೆಯ ಪ್ರಚಾರ ಮಾಡುತ್ತಿರುವರೆಂದು ನಾನು ತಿಳಿದಿದ್ದೆ. ಆದರೆ ಈಗ ನೋಡುವಾಗ ನಮ್ಮ ಪೂರ್ವಜರೂ ಋಷಿ ಮುನಿಗಳೂ ಕೂಡ, ಖಾದೀ ಬಟ್ಟೆಯನ್ನೇ ಧರಿಸುತ್ತಿದ್ದರೆಂದು, ನನಗೆ ಖಚಿತವಾಯಿತು' ಎಂದೆ. ಹೇಳುತ್ತಿರುವಾಗಲೇ ಆ ಸ್ವರ್ಗೀಯ ಆನಂದದಿಂದ ಆವರ ಪತ್ನಿ ಮೀನಾಕ್ಷಿ ಚೇತರಿಸುತ್ತಿದ್ದಳು. ಆಗ ಈ ದಂಪತಿಗಳನ್ನು "ನಿನಗೆ ಶುಭವಾಗಲಿ!" ಎಂದು ಹರಸುತ್ತ ನೆರೆದ ಆ ಮಹಾವ್ಯಕ್ತಿಗಳು ಕ್ಷಣ ಮಾತ್ರದಲ್ಲಿ ಅದೃಶ್ಯರಾದರಂತೆ!"

ಹೀಗೆ ಈ ಕಥೆ ಮುಗಿದಾಗ ಓದುಗರೂ ಸಹ ಅತ್ಯಂತ ಆಶ್ಚರ್ಯದಲ್ಲಿ ಮುಳುಗಿರುತ್ತಾರೆ! ಆದರೆ ಶ್ರೀ ರಾಜಾಜಿಯವರು ಕೊನೆಗೆ—'ನಮ್ಮ ಪೂರ್ವಜರು ಕೈಮಗ್ಗದ ಖಾದೀ ಬಟ್ಟೆಯ ಹೊರತು, ಬೇರೆಯವ ಬಟ್ಟೆಯನ್ನೂ ಧರಿಸುತ್ತಿರಲಿಲ್ಲವೆಂಬುದು ಸತ್ಯದ ವಿಚಾರವಾಗಿದೆ. ಆವರು ಆ ಬಟ್ಟೆಯನ್ನು ಉಪಯೋಗಿಸಿತ್ತಿರುವುದಲೇ ಸ್ವರ್ಗವಾಸಿಗಳಾದರು! ಈಗಲೂ ಸಹ ಆವರಿಗೆ ಆ ಖಾದೀ ಬಟ್ಟೆಯೇ ಆಧಾರವಾಗಿದೆ! ಹಾಗಾದರೆ ನಾವೂ ಸಹ ಆವರಂತೆಯೇ ಖಾದಿಯನ್ನೇ ಏಕ ಉಪಯೋಗಿಸಬಾರದೆ? ನಾವೂ ಸಹ ಖಾದಿಯನ್ನೇ ಬಳಕೆಗೆ ತಂದರೆ, ನಮ್ಮ ಪ್ರಾಚೀನ ಕಾಲದ ಮಹತ್ವವನ್ನು ಈಗಲೂ ಹೊಂದಬಹುದು!' ಎಂದು ಹೇಳಿ ಈ ಕಥೆಯು ಮೂಲ ಉದ್ದೇಶವನ್ನು ಸ್ಪಷ್ಟಪಡಿಸುತ್ತಾರೆ!

ಈ ಕಥೆಯೊಂದು ಪವಾಡದಂತಿದ್ದು ಕೇವಲ ಮಂತ್ರೋಚ್ಚಾರಣೆಯಿಂದಲೇ ಸಂಚ ಪಾಂಡವರನ್ನೂ ಸಿತೃಗಳನ್ನೂ ಬರಮಾಡಿಕೊಂಡು ಅವರೊಡನೆ ಸಂಭಾಷಣೆ ನಡೆಯಲೂ ಸಾಧ್ಯವಾದ ಶ್ರೀ ರಾಜಾಜಿಯವರ ಈ ಕಲ್ಪನಾಶಕ್ತಿ, ಇಂದಿನ ವಿಜ್ಞಾನ ನಂತಹ, ವೈಜ್ಞಾನಿಕ ಸಂಶೋಧನೆಗಳಿಗಿಂತಲೂ ಬಹಳ ಮುಂದುವರಿದಿದೆ! ಭಾವ ಪ್ರಧಾನವಾದ ಈ ಕಥೆ—"ಯಚ್ಭಾವಂತದ್ಭವತಿ" ಎಂಬುದನ್ನು ದೃಢಪಡಿಸುವುದು.

ಪುತ್ತೂರು ಡಿ. ಮುನ್ಸೀಫ್ ಕೋರ್ಟಿನಲ್ಲಿ

R. E. A. 512/62

R. E. P. 507/61. O. S. 182/60

ಮುತ್ತಳ್ಳ ಯಾನೆ ರಾಮಣ್ಣ ಶೆಟ್ಟಿ ಪ್ರಾಯಂಗೈಗಳ ಮೊಕ್ತೇಸರ. ಬಂಟ್ವಾಳ ತಾಲ್ಲೂಕ ಕಸಬಾ ಗ್ರಾಮದ ಕುರುಂಬಳಿಕೆ — —ವಿದ್ರಿ—ಪ್ರತಿವಾದಿ.

ವಿದ್ರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಮೇಲ್ಕಂಡ ದಿಕ್ರಿ ಮೇರೆ ನಿಮ್ಮ ಬಾಬ್ತು ಸ್ಥಿರಾಸಿ ಏಲಂ ಬಗ್ಗೆ ಅಪೀಕ್ಷಿಸಿ ಅರ್ಜಿದಾರಳ ಕಡೆಯಿಂದ ದಾಕ್ಲು ಮಾಡಿದ ಏಲಂ ಇಸ್ತಿವಾರು ಪ ಏಲಂನ ಶರತ್ತುಗಳನ್ನು ನಿರ್ಣಯಿಸುವ ಬಗ್ಗೆ ನ ಆಫೀಸರಾರಿಗೇ ದರ್ಕಾಸ್ತಿಗೆ ನಿಲ್ಲುವರೆ ಪರ್ಮಿಶನ ಕೊಡಿಸಬೇಕಾಗಿ ಮಾಡಿದ ಅರ್ಜಿ ಸದಾ ತಾ. 20—12—1962ಕ್ಕೆ ಯಿಟ್ಟರುವುದರಿಂದ ಆದಕ್ಕೆ ಆಕ್ಷೇಪಣೆಯಿದ್ರೆ ಆ ದಿನ ಸಬ್ರಿ ಕೋರ್ಟಿಗೆ ಮುಂದೆ ಹಾಜರಾಗಿ ಅವಕಾಶ ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲ ತಿಳ್ಸಿಯದೆ.

(*Sd*) C. S Shastry
Vakil for Piff.

ಪುತ್ತೂರು, ತಾ. 24—11—62.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚೆಕ್ಕು ವ್ಯಾದೆ, ನಿರಖು ತೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪದೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.

ಡಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಸುಖೀ ಜೀವನಕ್ಕೆ

ದಂಪತಿಗಳಲ್ಲಿ ಪ್ರೇಮವು ಅವಶ್ಯ

ಒಬ್ಬಾಕೆ ಸಹೋದರಿಯು ನನ್ನ ಬಳಿಗೆ ಬಂದಳು. ಅವಳಿಗೆ ೭ ಮಂದಿ ಮಕ್ಕಳಿದ್ದರು. ಅವಳ ಗಂಡನು ದೃಢಕಾಯ. ನೂ ಸುಂದರನೂ ಆಗಿದ್ದರೂ ಅವಳ ಮುಖ ವೇಕೋ ಬಾಡಿದ್ದೂ ಒಂದು ಕಾರಣ ದಿಂದಾಗಿ ಯೂ ಚಿಂತೆ, ದುಃಖಗಳಿಂದಾಗಿ ಕಾಂತಿಹೀನವಾಗಿದೆ. ಗಂಡನಿಗೆ ತನ್ನ ಸರ್ವಸ್ವವನ್ನು ಅರ್ಪಿಸುವುದೆಂದರೆ ತನಗೆ ಬಹಳ ಕಷ್ಟವೂ, ವೇದನೆಯೂ ಆಗುತ್ತಿದೆಯೆಂದು ನನ್ನೊಡನೆ ಹೇಳಿದಳು. ಅವಳು ಎಂದೂ ಶಾಂತಿಯಿಂದ ಇದ್ದಿಲ್ಲ. ಮದುವೆಯ ಅನಂತರ ಒಂದು ತರದ ಅತೃಪ್ತಿಗ್ರಾಸಿಯಿಂದ ಅವಳು ಉತ್ಪೀಡಿತಳಾಗಿದ್ದಾಳೆ; ಚಿಂತಾಕ್ರಾಂತಳಾಗಿದ್ದಾಳೆ.

ನಾನು ಮನೋ ವೈಜ್ಞಾನಿಕ ರೀತಿಯಿಂದ ಅವಳನ್ನು ಪರೀಕ್ಷಿಸಿದ ಅನಂತರ ಅವಳ ಗಂದನು ತನ್ನ ಕೆಲಸದಲ್ಲಿ ಮಗ್ನನಾಗಿರುತ್ತಾನೆಂದು ನಿಶ್ಚೈಸಿದೆ. ಪತಿಯೊಡನೆ ಪ್ರೇಮದಿಂದ ಸರಸ-ಸಲ್ಲಾಪ ಮಾಡಲು ಅವನಿಗೆ ಒಂದಿಷ್ಟು ಸಮಯ ಪಿಡಿದಿಲ್ಲ. ಬಂದ ಸಂಬಳವನ್ನು ಹೆಂಡತಿಯ ಕೈಗೊಪ್ಪಿಸಿಬಿಡುತ್ತಿದ್ದನು. ಮಕ್ಕಳಆಟ ದವು. ಇದರಲ್ಲಿ ತನ್ನ ಕೆಲಸವಾಯಿತೆಂದೂ ಭಾವಿಸಿ ಆಫೀಸಿಗೆ ಹೊರಟುಹೋಗುತ್ತಿದ್ದ. ಆದರೆ ಅವನ ಹೆಂಡತಿ ಪತಿವ್ರತ ಇದರಿಂದ ನೊಂದು, ಕೊಗಿ ದಿನೇ ದಿನೇ ರೋಗಿಷ ಗತೊಡಗಿದಳು.

ನವ್ಯ ದೇಶದಲ್ಲಿ ಈ ತರದ ಗಂಡಂದಿರಿಂದ ಹೆಂಡಂದಿರ ಮೇಲಾಗುವ ಬಲಾತ್ಕಾರದ ಕಥೆಗಳನ್ನು ಹೆಚ್ಚಾಗಿ ನಾವು ಕೇಳಿತ್ತೇನೆ. ತನ್ನ ಗಂಡನು ತನ್ನನ್ನು ಪ್ರೀತಿಸುವುದಿಲ್ಲ; ತನ್ನ ಪ್ರೇಮಿಸಲ್ಲಿ ತನ್ನನ್ನು ಪ್ರೀತಿಸುವ, ಆಕರ್ಷಿಸುವ ಯಾ ಮರುಳುಗೊಳಿಸುವ ಯತ್ನ ಮಾಡುವುದಿಲ್ಲವೆಂದು ಹೆಂಗಸರು ಕಿಳಿದರೆ ಸಾಕು; ಅವರ ಹೃದಯಕ್ಕೆ ದೊಡ್ಡ ಆಘಾತವಾದಂತೆ ಆಗುತ್ತಾದೆ. ಸ್ತ್ರೀಯು ತನ್ನ ಪ್ರೇಮವನ್ನು ಶಬ್ದಗಳಿಂದ ವ್ಯಕ್ತಪಡಿಸದೆ ತನ್ನ ಮೋಹಕವಾದ ಹಾವ-ಭಾವಗಳಿಂದ, ಮಧುರ ವರ್ತನೆಯಿಂದ ವ್ಯಕ್ತಪಡಿಸುತ್ತಾಳೆ. ತನ್ನ ಗಂಡನಿಗೋಸ್ಕರ ರುಚಿಕರವಾದ ಭೋಜನವನ್ನು ತಯಾರಿಸುತ್ತಾಳೆ. ಪತಿಗೋಸ್ಕರ ಮನೆಯನ್ನು ಶೃಂಗರಿಸುತ್ತಾಳೆ; ಮಕ್ಕಳನ್ನು ಸಲಹುತ್ತಾಳೆ; ಅವನ ಸುಖಶಾಂತಿಯತ್ತ ತನ್ನ ವಿಶೇಷ ಗಮನವನ್ನು ಹರಿಸುತ್ತಾಳೆ ಈ ನ ಪ್ರೇಮವನ್ನು ಬೆಳೆಸಲು ನಾನಾ ವಿಧಗಳಲ್ಲಿ ತನ್ನ ಪ್ರಯತ್ನಗಳನ್ನು ಮಾಡುತ್ತಾಳೆ. ಇದೇ ರೀತಿ ಪ್ರೇಮದ ವ್ಯವಹಾರವನ್ನು ಅವಳು ಗಂಡನಿಂದಲೂ ಅಪೇಕ್ಷಿಸುತ್ತಾಳೆ. ಕೇವಲ ಕಲವು ಸಂದರ್ಭಗಳಲ್ಲಿ ಪತ್ನಿಯೊಡನೆ ಮಾತನಾಡುವುದ; ಅವನ್ನು ಕೂ ಪ್ರಮದಿಂದ ಅವಳನ್ನು ಆಕರ್ಷಿಸಿಕೊಳ್ಳಲು ಸಾಧ್ಯವಿಲ್ಲ. ದೈನಂದಿನದ ಪ್ರೇಮಪೂರ್ಣ ವರ್ತನೆಯಿಂದ ಮಾತ್ರ ರತಿಸುಖ ಪ್ರೇಮವನ್ನು ಹೆಚ್ಚಿಸಿಕೊಳ್ಳಬಹುದು.

ಪತ್ನಿಯ ಮನಸ್ಸಿಗೆ ಹೇರು ಚಂದ್ರಕಾಂತನೆಂದು ಮನೆಯಲ್ಲಿ ಎಲ್ಲಾ ತರದ ಸುಖ-ಭೋಗಗಳಿದ್ದರೂ ಮೋಹಿನಿಗೇಕೋ ತನ್ನ ನೆರಮನೆಯ ಪುಷ್ಪಾಳ ಭಾಗ್ಯದ ಮೇಲೆ ಮತ್ಸರ. ಪುಷ್ಪಳ ಗಂಡ ಬರೀ ಒಂದು ಶಾಲೆಯಲ್ಲಿ ಅಧ್ಯಾಪಕರು. ಆದರೂ ಅವರ ಪಾರಿವಾರಿಕ ಜೀವನವು ಬಹಳ ಸುಖದಿಂದ ಸಾಗುತ್ತಿದೆ. ಆದರೆ ನನ್ನ ಪತಿ - ಮೋಹಿನಿ ಹೇಳುತ್ತಾಳೆ — "ಎಂದೂ ನನ್ನನ್ನು ತೃಪ್ತಿಗೊಳಿಸಲು ಯತ್ನಿಸುವುದಿಲ್ಲ. ನನ್ನ ಸುಖದಿಚ್ಛೆ ಎಂದೂ ಪೂರ್ತಿ ಹರಿಸುವುದಿಲ್ಲ. ಪುಷ್ಪಾಳ ಪತಿಯಾದರೆ ಅವಳೆನ್ನು ವಾರಂಕ್ಕೊಮ್ಮೆ ಸಿನೇಮಾಕ್ಕೆ ಕರೆದುಕೊಂಡು ಹೋಗುತ್ತಾನೆ. ನಾಯಂಕಾಲ ಜೀಗ ಜೀಗ ತನ್ನ ಶಾಲೆಯ ಕೆಲಸಗಳನ್ನು ಮುಗಿಸಿ ಮನೆಗೆ ಬರುತ್ತಾನೆ. ಈ ಪುಷ್ಪೆ ಪುಷ್ಪಳು ಕೂಡಾ ಆದಷ್ಟು ಜೀಗ ತನ್ನ ಉಪಾಹಾರವನ್ನು ಸಿದ್ಧಪಡಿಸುತ್ತಾಳೆ ಚಾ ಕೊಡುವು ಇಬ್ಬರೂ ಒಟ್ಟಿಗೆ ವಾಕಿಂಗ್‌ಗೆ ಹೋಗುತ್ತಾರೆ.

ಆದಿತ್ಯವಾರದಂದು ಮನೆಕುಡ್ಡಗೊಳಿಸಲು, ಮನೆಯನ್ನು ಶೃಂಗರಿಸಲು ಚಂದ್ರಕಾಂತನು ಪುಷ್ಪಳಿಗೆ ಸಹಾಯವಾಗುತ್ತಿದ್ದನು. ಅವಿನ ಅವಳೊಂದಿಗೆ ಕುಳಿತು ಸರಸ-ಸಲ್ಲಾಪ ಮಾಡುವುದಕ್ಕೆ ಹೆಚ್ಚು ಸಮಯ ವಿನಿಯೋಗಿಸುತ್ತಿದ್ದನು. ಅವನಿಗೆ ತನ್ನ ಹೆಂಡತಿಗೆ ಹೊವಿನ ಹೇಲೆ ಬಹು ಪ್ರೇಮವೆಂದು ಗೊತ್ತಿದೆ. ಅವನು ಪ್ರತಿ ದಿನ ಸಾಯಂಕಾಲ ಶಾಲೆಯಿಂದ ಬರುವಾಗ ಮಲ್ಲಿಗೆ ಹೆಂಡೆಂದನ್ನು ತಂದು ತನ್ನ ಪ್ರಿಯತಮೆಯ ಮುಡಿಯನ್ನು ಲಂಕರಿಸುತ್ತಿದ್ದನು.

ಸುಪ್ಪ ನದಾ ಮೋಹಿನಿಯೊಂದಿಗೆ ಮಾತಾಡುವಾಗ ಗರ್ವದಿಂದಲೇ ಮಾತಾಡುತ್ತಾಳೆ. ತಾನು ಗಂಡನ ಪ್ರೇಮವೆಂಬ ಅಮೃತ ಧಾರೆಯಿಂದ ಒದ್ದೆಯಾದವಳೆಂಬುದನ್ನು ತೋರಿಸುತ್ತಾಳೆ ಅವಳ ಮುಗುಳು ನಗೆ ತೋರಿಸುತ್ತಿರುವ ಕಣ್ಣುಗಳು, ನಾಚಿಕೆಯಿಂದ ಕೆಂಪಾದ ಕಪೋಲಗಳು ಮತ್ತು ಆಕರ್ಷಕ ಹಾವ ಭಾವಗಳು — ಇವುಗಳನ್ನು ನೋಡಿ ಮೋಹಿನಿಯ ಮತ್ಸರಿ ಮತ್ತಷ್ಟು ಹೆಚ್ಚಾಗುತ್ತಿತ್ತು.

ಚಂದ್ರಕಾಂತ ತನ್ನ ಪತ್ನಿಯ ವಿವಾಹದ ದಿನವನ್ನೂ, ಜನ್ಮದಿನವನ್ನೂ ಆಚರಿಸಲು ಎಂದೂ ಮರೆಯುತ್ತಿರಲಿಲ್ಲ. ಪತಿಯು ತೋರಿಸುತ್ತಿದ್ದ ಪ್ರೇಮದ ವರ್ಣನೆಯನ್ನೂ ಪುಷ್ಪಾಳು ಮೋಹಿನಿಯೊಡನೆ ಮಾಡಿದಾಗಲಂತೂ ಮೋಹಿನಿಗಾಗುತ್ತಿದ್ದ ವೇದನೆ ಸಹನಾತೀತವಾಗಲಿತ್ತು. ಚಂದ್ರಕಾಂತನಂತಹ ಪತಿಯನ್ನ ಪಡೆದ ಪುಷ್ಪಾಳು ನಿಜಕ್ಕೂ ಧನ್ಯಳೆಂದು ಮೋಹಿನಿಯ ಮನಸ್ಸು ಮತ್ತೆ ಮತ್ತೆ ಮೆಲುಕು ಹಾಕುತ್ತಿತ್ತು.

ಮೋಹಿನಿಯಂತೆ ಗಂಡಂದಿರ ವಿಚಾರವಂಗಿ ಅತೃಪ್ತಿಯಿರುವವರು ತುಂಬಾ ಮಂದಿಯಿರಬಹುದು. ಪ್ರತಿ ದಿನ ಗಂಡನು ತನ್ನ ವ್ಯವಹಾರದಲ್ಲಿ ನಿರಾಶೆಯನ್ನು ಕಠೋರತೆಯನ್ನು ಅಥವಾ ನಿರುತ್ಸಾಹವನ್ನು ತೋರಿಸಿದರೆ ಪ್ರೇಮದ ಉತ್ಥಾರ್ಥತೆ ಅಳಿದು ಹೋಗುವುದರಲ್ಲಿ ಸಂಶಯವಿಲ್ಲ.

ತನ್ನ ಹೆಂಡತಿಯು ಮನೆಯ ಕೆಲಸಗಳಿಂದ ಬಳಲಿದ್ದಾಳೆ ಮಕ್ಕಳ ತಂಟೆ-ಕೂಗಾಟಗಳಿಂದ ನೊಂದಿದ್ದಾಳೆ, ಪಾರಿವಾರಿಕ ವಿಷಯಗಳಿಂದ ಬೆಂದಿದ್ದಾಳೆಂದು ಎಂದೂ ಪುರುಷನು ಯೋಚಿಸುವುದೇ ಇಲ್ಲ. ಪತ್ನಿಗೆ ಎರಡು ಬೈಯ್ಯದಿದ್ದರೆ, ಗದರಿಸಿ ತನ್ನ ಪೌರುಷ ತೋರಿಸದಿದ್ದರೆ, ಅವಳನ್ನು ತನ್ನ ವಿಷಯಾಂತ ಮಾತುಗಳಿಂದ ಗಮ್ಮತ್ತಿಗಳನ್ನಾಗಿ ಮಾಡದಿದ್ದರೆ ಈ ಗಿನ ಪುರುಷರಿಗೆ ನಿದ್ರೆಯೇ ಬರುವುದಿಲ್ಲ.

ತನ್ನ ಪತ್ನಿಯು ಕೂಡಾ ಚಿರನೋತ್ತ ಸದ ಅನುಭೂತಿಯನ್ನು ಮಾಡುತ್ತಾಳೋ, ಇಲ್ಲವೋ ಎಂಬುದನ್ನು ತಿಳಿಯುವ ಗಂಡಂದಿರು ಈಗ ಬೆಂಳಿಗೆಯಷ್ಟು ಇರುವುದು ಸಂಶಯಾಸ್ಪದ. ಹೆಚ್ಚಿನ ಪುರುಷರು ತಮ್ಮ ಸಂಪತ್ತಿಯನ್ನು ಮಾಡಿಕೊಂಡ ಅನಂತರವೂ ತಮ್ಮ ಹೆಂಡತಿಯನ್ನು ತೃಪ್ತಿಪಡಿಸಿ, ಅವಳು ರತಿಕ್ರಿಯೆಗೆ ಸಹಾಯಕಳು ಎಂಬುದನ್ನು ಸಹಾ ಳಿದಿರುವುದಿಲ್ಲ.

ಪತಿಯು ತನ್ನ ಪ್ರತಿಯೊಂದು ವರ್ತನೆ ಸಿಂದಲೂ ತನ್ನ ಪತ್ನಿಯ ಮನಸನ್ನು ಆಕರ್ಷಿಸುತ್ತಿರಬೇಕು. ಪತಿಯು ತನ್ನ ಯ ಧಾರ್ಥ ಪ್ರವರ್ತನೆ ಮತ್ತು ಸಹಯೋಗದಿಂದ ತನ್ನರಸಿಯನ್ನು ಪ್ರಸನ್ನಳನ್ನಾಗಿ ಸಬೇಕು. ತನ್ನ ಮೃದುಪೂರ್ಣ ಪೂತುಗಳಿಂದ ಅವಳ ಹೃದಯದಲ್ಲಿ ಪ್ರೇಮ ರಸಧಾರೆಯನ್ನು ಸೃಜಿಸಬೇಕು.

ಗಂಡ-ಹೆಂಡಂದಿರು ಒಬ್ಬರನ್ನೊಬ್ಬರ ಮೇಲೆ ನಿಜವಾದ ಪ್ರೇಮ, ಸಹಯೋಗ ತಿಳುವಳಿಕೆಗಳನ್ನಿಡದ ಹೊರತು ಸರಪ್ಪರ ಪ್ರೇಮಾದರಗಳು ಹುಟ್ಟಲು ಸಾಧ್ಯವಿಲ್ಲ. ಪ್ರತಿ ದಿನ, ಪ್ರತಿ ಕ್ಷಣದ ಪ್ರೇಮಪೂರ್ಣ ವ್ಯವಹಾರ ಸಹಯೋಗಗಳು ಈ ಲಲಿಸುವಲ್ಲಿ ಯಶಸ್ಸನ್ನುಗಳಿಸಲು ಸಹಾಯವಾಗುತ್ತವೆ ಪುರುಷನು ಹೆಂಡತಿಯೊಡನೆ ಸಹಯೋಗ ಮಾಡುವದು ತನ್ನ ಅಧಿಕಾರವೆಂದು ತಿಳಿದು ವರ್ತಿಸಿದರೆ, ಸ್ತ್ರೀಯೂ ಅಂತೆಯೇ ಪುರುಷನೊಡನೆ ಗಂಡನೆಂಬ ಅಧಿಕಾರದ ಮೇಲೆ ವರ್ತನೆ ಮಾಡಿದರೆ ಆದರಪ್ಪಿಯವ ಆನಂದ ಲಭಿಸೀತು? ಇದು ಬರೀ ಶರೀರದ ಭಾರವನ್ನು ಒಮ್ಮೆ ಮಾತ್ರ ಕಡಿಮೆಮಾಡಿಸಿಂತಾಗುವುದು ಈ ಸಹಯೋಗ ಹೃದಯವನ್ನು ಕಂಪಿಸಲಾರದು; ಮುಟ್ಟಲಾರದು.

ಯೌವನದ ಈ ಸಫಲತೆಯು ದಂಪತಿಗಳ ಮನಸ್ಸಿನಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳನ್ನೂ ಉತ್ತಮ ಕಲ್ಪನೆಗಳನ್ನೂ, ವಿಚಿತ್ರ ಸಹಾನುಭೂತಿಯನ್ನೂ, ಪರಸ್ಪರ ಆಕರ್ಷಣೆಯನ್ನೂ ವೃದ್ಧಾಪ್ಯದಲ್ಲಿ ಕೂಡಾ ಪ್ರೇಮದ ಸಜೀವತೆಯನ್ನೂ ಸುರಕ್ಷಿತವಾಗಿಡ ಪ್ಪದೆ. ವೃದ್ಧಾಪ್ಯದ ದೆಸೆಯಿಂದ ಶರೀರ ಕೃಶವಾಗಿದ್ದರೂ ಯೌವನದ ಮಧುರ ಹಾಗೂ ಎಂದೂ ಮರೆಯಲಾಗದ ಸ್ಮೃತಿಗಳು ಈ ವೃದ್ಧ ದಂಪತಿಗಳ ಜೀವನವನ್ನು ಹಿಂದಿನಂತೆಯೇ ಸುಖಹಾಗೂ ಸೌಂದರ್ಯಪೂರ್ಣವನ್ನಾಗಿ ನಾಡುತ್ತದೆ. ಜೀವನವು ಪರಿಶುದ್ಧ ಹೃದಯದಿಂದ ಅಮೃತಧಾರೆಯಂತೆ ಹರಿಯುವ ಪ್ರೇಮದಿಂದ ಕೂಡಿದ್ದಾಗಿರಬೇಕು. ಇಂತಹ ನಿರ್ಮಲ ಪ್ರೇಮದಿಂದ ಕೂಡಿದ್ದಾಗಿರಬೇಕು ಇಂತಹ ನಿರ್ಮಲ ಪ್ರೇಮದಿಂದ ಕೂಡಿದ ಜೀವನವು ನಿಜಕ್ಕೂ ಧನ್ಯ.

(ಆಧಾರಿತ)

ದಿ ಕರ್ನಾಟಿಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಪೆಚ್ಚಿಸಿದ ತೇವಣಾತಿ ಬಡ್ಡಿ ದರಗಳು:

ಕಾಯ್ದಾ ತೇವಣಾತಿಗಳು:		ವಾ. ನ. ಪೈ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5-00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5-50
ಸೇವಿಂಗ್ಸ್ ಬ್ಯಾಂಕ್ ತೇವಣಿ ತಿಗಳು	,, ,,	3-25

ನಿಮ್ಮ

ನಿವೃತ್ತಿಯ ಉಳಿತಾಯವನ್ನು ಮಾಸಿಕ ಉಳಿತಾಯವನ್ನು

ಹಣ ಡಿಪೋಸಿಟುಗಳಲ್ಲಿ ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3-7-1962

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪	ಉಡುಪಿ ೬-೧೨-೧೯೬೨	ವಾರ ೧೩

ಭಾರತೀಯರ ದೃಢತೆ

ಜಗತ್ತಿಗೆ ಜಗತ್ತೇ ನಿರೀಕ್ಷಿಸುತ್ತಿದ್ದ ದಶಂಬರ ಮೊದಲನೆಯ ದಿನ ಬಂದು ಹೋಯಿತು. ಕೆಂಪು ಚೀನಾವು ತಾನು ಆಕ್ರಮಿಸಿದ್ದ ಭಾರತೀಯ ಭೂಭಾಗದಿಂದ ತನ್ನ ಸೇನೆಯನ್ನು ಏಕಪಕ್ಷೀಯವಾಗಿ ಹಿಂತೆಗೆದುಕೊಳ್ಳಲು ನಿರ್ಧರಿಸಿದ ದಿನವದು. ಪೀಕಿಂಗ್ ರೇಡಿಯೋ ಸಾರಿರುವಂತೆ ಅದು ತನ್ನ ಸೇನೆಯನ್ನು ನೇಫಾದ ಪಶ್ಚಿಮ ಪ್ರದೇಶದ ಎಂದು ತಾ.ಣೆಗಳಿಂದ ಹಿಂದೆ ತೆಗೆಯಿತು.; ಆದರೆ, ಈ ಸಂಬಂಧದಲ್ಲಿ ನವದೆಹಲಿಯಲ್ಲಿ ಯಾವ ತಿಳುವಳಿಕೆಯೂ ಉಂಟಾಗಲಿಲ್ಲ. ಸೇನೆಯು ವಶಕ್ಕೆ ಹೋಗುವುದು ನಿಜವೆಂದಾದರೆ, ಅದು ಮೊದಲೇ ಹೇಳಿದಂತೆಯೇ ಭಾರತೀಯ ಗಸ್ತಿ ದಳವು ಮುಂದುವರಿಯುವುದೆಂದೂ, ಅನ್ಯಾಯವಾಗಿ ಚೀನವು ಆಕ್ರಮಿಸಿದ ನೇಫಾ ಮತ್ತು ಲಡಾಖಗಳಲ್ಲಿ ನಾಗರಿಕ ಆಡಳಿತೆಯನ್ನು ಸಾಧ್ಯವಾದಷ್ಟು ಬೇಗ ಮರು ಸ್ಥಾಪಿಸಲು ಭಾರತೀಯ ಸರಕಾರವು ಪ್ರಯತ್ನಿಸುವುದೆಂದೂ ನವದೆಹಲಿಯ ವಕ್ತಾರೆ ಹೇಳಿದೆ. ಇಂತಹ ಸ್ಪಷ್ಟತೆಯ ಅತ್ಯಾವಶ್ಯಕತೆಯಿದೆ ಎಂದು ಎಲ್ಲರೂ ಒಪ್ಪುತ್ತಾರೆ. ಆದರೆ, ಕೆಂಪು ಚೀನೀಯರ ಹೇಳಿಕೆ ಮತ್ತು ನವಚೀನಾ ವಾರ್ತಾ ಸಂಸ್ಥೆಯ ಸದ್ದಿ ಹಾಗೂ ಪೀಕಿಂಗ್ ರೇಡಿಯೋ ಪ್ರಸಾರಗಳನ್ನು ಸಂಪೂರ್ಣ ನಂಬುವುದು ಮಾತ್ರ ಕಷ್ಟ ಸಾಧ್ಯ; ಹಿಂದಿನಿಂದಲೂ ಹೆಜ್ಜೆ ಹೆಜ್ಜೆಯಲ್ಲಿ ಗತ್ತುಗಾರಿಕೆಯನ್ನೂ ಮಿತ್ರದ್ರೋಹವನ್ನೂ ಪ್ರದರ್ಶಿಸುತ್ತ ಬಂದ ಆ ರಕ್ತ ಪಿಪಾಸು ಸಾಮ್ರಾಜ್ಯ ಶಾಹಿಗಳನ್ನು ಮರಳಿ ನಂಬಿ ತಿರುಗೊಮ್ಮೆ ಮೋಸ ಹೋಗುವಷ್ಟು ತಿಳಿಗೇಡಿಗಳು ಭಾರತೀಯರಲ್ಲ.

ಚೀನೀಯ ಪ್ರಧಾನಿ ಚೌ ಎನ್ ಲಾಯ್‌ರವರು ಯುದ್ಧ ವಿರಾಮ ಘೋಷಣೆಯೇ ಚೌ ಚೌ ಎಂದಿತ್ತು ಇದಕ್ಕೆ ಕೇಳಿದ ಸ್ಪಷ್ಟೀಕರಣವು ಮತ್ತಷ್ಟು ಗೊಂದಲದಿಂದಲೇ ಕೂಡಿದೆ. ಹಾಗಾಗಿ ಕೆಂಪು ಚೀನವು ತನ್ನ ಸಾಮ್ರಾಜ್ಯ ವಿಸ್ತರಣೆಯ ನೀತಿಯನ್ನು ಸಂಪೂರ್ಣ ಬಿಟ್ಟು ಕೊಡುವುದಕ್ಕೆ ಸಿದ್ಧವಿಲ್ಲವೆಂದೂ, ಭಾರತದ ಪಕ್ಷವು ನಿರ್ಬಲವೆಂದೂ ಪ್ರಚಲಿತ ಸಂಘರ್ಷಣೆಯಿಂದ ಯಾವ ಪಕ್ಷವಾದರೂ ಮಾಡಿದ ಪ್ರಗತಿಯ ಕಾರಣದಿಂದ ಏಕ ಪಕ್ಷೀಯ ನಿರ್ಣಯವನ್ನು ಹೇರಬಾರದು ಎಂಬ ಚೌರವರ ಸಿದ್ಧಾಂತವನ್ನೇ ಉಲ್ಲಂಘಿಸಿದಂತಾಗುವುದೆಂದೂ ಪ್ರಧಾನಿ ನೆಹರು ಇವರಿಗೆ ತಿಳಿಸಿದ್ದಾರೆ. ಇದು ನಿಜ ಚೀನೀಯರ ಹೇಳಿಕೆ ಹಾಗೂ ಪತ್ರಗಳು ಅಸ್ಪಷ್ಟವಾಗಿಯೇ ಇರುವುದರಿಂದ ಮುಂದಿನ ಕಾರ್ಯಾಚರಣೆಯನ್ನು ನಿರ್ದಿಷ್ಟ ಪಡಿಸುವುದು ಭಾರತಕ್ಕೆ ಈಗಲೇ ಅಸಾಧ್ಯವಾಗಿದೆ. ಅದೇನೇ ಇದ್ದರೂ ಉಭಯತ್ರರ ನಡುವೆ ದೊಡ್ಡದಿರುವ ಭಿನ್ನಾಭಿಪ್ರಾಯವೆಂದರೆ, ಚೀನೀಯ ಸೇನೆಯು ಹಿಂದೆ ಸರಿದರೂ, ಆ ಪರಿಮಿತಿಯ ರೇಖೆಯಲ್ಲಿದ್ದೆ ಭಾರತವು ಈ ವರ್ಷದ ಸಪ್ತಂಬರ ಆರಂದು ಇದ್ದಲ್ಲಿಗೆ ಸೇನೆಗಳು ಮರಳ ಬೇಕು ಎಂದರೆ, ಚೀನ ಹೇಳುತ್ತದೆ, ೧೯೫೯ರ ನವಂಬರ ಒರಂದು ಇದ್ದಲ್ಲಿಗೆ ಮಾತ್ರವೆಂದು ಇಲ್ಲಿ ಚೀನೀಯರ ಸೂಚನೆಯನ್ನು ಭಾರತವು ಒಪ್ಪಿತೆಂದರೆ, ಅದು ಬಹಳಷ್ಟು ಪ್ರದೇಶವನ್ನು ಕೈ ಬಿಡಬೇಕಾಗುವುದು. ನೂತ್ರನಲ್ಲ ಚೀನವು ಹೇಳುವ ರೇಖೆಯು ಅದರ ಏಕಪಕ್ಷೀಯ ನಿರ್ಣಯದ್ದಾಗಿದೆ. ಅದನ್ನು ಭಾರತವು ಎಂದಿಗೂ ಒಪ್ಪಿದ್ದಿಲ್ಲ; ಒಪ್ಪುವ ಹಾಗೂ ಇಲ್ಲ. ಆದರೆ, ಚೌರವರು ತನ್ನ ವಾದದ್ದನ್ನೇ ದೃಢವಾಗಿ ಉಚ್ಚರಿಸುತ್ತಾರೆ. ಇಷ್ಟು ಮಾತ್ರ ವಲ್ಲದೆ, ತಾನು ನಿಶ್ಕರ್ತವಾಗಿ ಹಿಂದೆ ಸರಿಯುವುದರಿಂದ, ಭಾರತವು ತನ್ನ ವಿರುದ್ಧ ಯೇನಾದರೂ ಕಾರ್ಯಾಚರಣೆ ಕೈಗೊಂಡರೆ, ಹೀಗೆ ಮರಳುವ ಯೋಜನೆಯನ್ನು ಕೈಬಿಡಲಾಗುವುದು ಎಂಬ ಬೆದರಿಕೆಯನ್ನೂ ಚೌ ಹಾಕಿದ್ದಾರೆ. ಅನ್ಯಾಯವನ್ನು ಮಾಡಿದವನು ತನ್ನ ಅನ್ಯಾಯ ಕೃತ್ಯಗಳನ್ನು ಮರೆಮಾಚುವುದಕ್ಕಾಗಿ ಯಾವ ರೀತಿಯಲ್ಲಿ ಸುಳ್ಳು ಗಳನ್ನು ಹೆಣೆಯಬಹುದೋ ಅವೆಲ್ಲವನ್ನೂ ಚಾ ಇಂದು ನೇಯ್ದುಕೊಂಡಿದ್ದಾರೆ. ಆದರೆ, ಈ ಸಂಬಂಧದಲ್ಲಿ ಭಾರತದ ನಿಲುವೆ ಸುದೃಢವಿದೆ. ೧೯೬೨ರ ಸಪ್ತಂಬರ ಆರಂದು ಇದ್ದ ಸ್ಥಳಕ್ಕಾದರೂ ಸೇನೆಯನ್ನು ಮರಳಿಸದೆ ಹೋದರೆ, ಭಾರತವು ಆಕ್ರಮಣವನ್ನು ಸರ್ವ ಶಕ್ತಿಯಿಂದಲೂ ಎದುರಿಸುವುದು. ಈ ಅಚಲ ನಿಶ್ಚಯವನ್ನು ನೆಹರು ಮರಳಿ ಮರಳಿ ಉಚ್ಚರಿಸಿದ್ದಾರೆ.

ವಿಸ್ತರಣಾವಾದಿ ಚೀನಾದ ಅಂತರಾಳ ಅನಂತವೂ ಅರಿಯಲಾರದಷ್ಟು ಆಳವಿದೆ. ಆದರಲ್ಲಿ ಯಾವ ಯಾವ ಬಗೆಯ ಮಾಯಾ ಜಾಲಗಳಿವೆಯೆಂಬುದಿನ್ನೂ ವ್ಯಕ್ತವಾಗಿಲ್ಲ. ಏನೇ ಇದ್ದರೂ ಇಂದು ಭಾರತದ ಸಂರಕ್ಷಣಾ ಬಲವಲ್ಲಿ ಬಲ ತುಂಬಿದೆ. ಅನ್ಯಾಯದ ಕೆಲಶವೆಂದು ಸುರಿಸುಕೊಂಡದ್ದು ಭೂರಿ ಹಾಲಾಹಲವೆಂದು ಪ್ರತ್ಯಕ್ಷವಾಗಿ ಅನುಭವಿಸಿದ ಬಳಿಕ ಈ ಅನುಭವದ ಪಾಠವನ್ನು ನಾವು ಅಲ್ಲಿಯೇ ಮರೆಯುವಂತಿಲ್ಲ. ನಮ್ಮ ಮಿತ್ರ ರಾಷ್ಟ್ರಗಳು, ಕಮ್ಯುನಿಜಂ ವಿರೋಧಿ ದಿಲೇ ಏಕಾಗಬಾರದು?, ನಮಗೆ ಆವಶ್ಯಕ ಸಹಾಯ ಪಲ್ಲಿಸಲು ಮುಂದೆ ಬಂದಿವೆ. ದೇಶದ ಸಮಸ್ತ ನಾಗರಿಕರೂ ಇಂದು ಜಾಗ್ರತನಾಗಿದ್ದಾನೆ. ದೇಶದ ಕಡೆಗೆ ತನ್ನ ಕರ್ತವ್ಯವೇನು ಎಂಬುದನ್ನು ಸರಿಯಾಗಿ ಕಂಡುಕೊಂಡು, ಅದನ್ನು ಪೂರೈಸಲು ಟೊಂಕ ಕಟ್ಟಿದ್ದಾನೆ ದೇಶವು ಪರಕೀಯರ ಪಾದಾಕ್ರಾಂತವಾಗುವುದನ್ನು ಆತನು ಮನೋವಾಕ್ಕಾಯಗಳಿಂದ ಪ್ರತಿಭಟಿಸುತ್ತಾನೆ; ತನು-ಮನ-ಧನಗಳಿಂದ ಸ್ವದೇಶ ರಕ್ಷಣೆಗೆ ಹೋರಾಡುತ್ತಾನೆ. ಚೀನೀಯರು ತಾವು ಆಕ್ರಮಿಸಿದ ಪ್ರದೇಶದಿಂದ ಹಿಂದೆ ಸರಿಯದೆ ಮಾತುಕತೆಯ ಮಾತೇ ಇಲ್ಲವೆಂಬ ಪ್ರಧಾನಿಯವರ ದೃಢ ನಿಲುವಿನಲ್ಲಿ ಮೆಚ್ಚುತ್ತಾನೆ. ಇಂದು ಚೀನೀಯರು ನಿಜವಾಗಿ ಶಾಂತಿಯನ್ನು, ಭಾರತದ ಸ್ನೇಹವನ್ನು ಬಯಸುವುದಾದರೆ, ಯಾವ ಕಾರಗಳನ್ನೂ ಹಾಕದೆ ಅವರು ಮರಳಿ ಹೋಗಬೇಕು; ಮೈಕಮಹೋನ ರೇಖೆಯನ್ನು ದಾಟಿ ಹಿಂದೆ ಸರಿಯಬೇಕು; ಶಾಂತ ವಿಧಾನಗಳಿಂದಲೇ ಗಡಿ ವಿವಾದವನ್ನು ಅಂತಾರಾಷ್ಟ್ರೀಯ ನ್ಯಾಯದಂತೆ ಪರಿಹರಿಸುವ ಛಂದರ್ಭವನ್ನು ಕಲ್ಪಿಸಿಕೊಡಬೇಕು. ಅದನ್ನು ತ್ಯಜಿಸಿ ತಮ್ಮ ವಿಸ್ತರಣಾವಾದನವನ್ನೇ ಮುಂದುವರಿಸುವುದಾದರೆ, ಭಾರತೀಯರು ಆತ್ಮರಕ್ಷಣೆ ಮಾಡಿಕೊಳ್ಳಲು ಆಕ್ರಮಣಗಾರರನ್ನು ಹೊಡೆದೋಡಿಸಲು ಸೂಕ್ತ ಕ್ರಮ ಕೈಗೊಳ್ಳಲೇ ಬೇಕಾಗುತ್ತದೆ. ಈ ಕಾರ್ಯದಲ್ಲಿ ಅವರನ್ನು ಯಾರಾದರೂ ತಡೆಯಲು ಸಾಧ್ಯವಿಲ್ಲ.

ಪಾಕ್-ಭಾರತ ಸಂಬಂಧ

ಹೆರ್ತಿವಾನ್ ಮತ್ತು ಸ್ಯಾಂಡಿಸ್‌ರವರು ಭಾರತದ ಮಿಲಿಟರಿ ಆವಶ್ಯಕತೆಗಳನ್ನು ಕಂಡುಕೊಂಡು, ವಿಚಾರ ವಿನಿವಯವನ್ನು ನವದೆಹಲಿಯಲ್ಲಿ ನೂಡಿದರು. ಈ ಸಂಬಂಧದಲ್ಲಿ ಒಂದು ಒಡಂಬಡಿಕೆಯನ್ನೂ ಸಹಿಸಿಕೊಂಡರು. ಯಾವ ರಾಜಕೀಯ ಶರ್ತಗಳೂ ಇಲ್ಲದೆ, ಕಮ್ಯುನಿಸ್ಟ್ ಚೀನಾದ ವಿರುದ್ಧ ಉಪಯೋಗಿಸುವ ಸೈನಿಕ ಸಾಮಗ್ರಿಗಳು ಭಾರತಕ್ಕೆ ಒಂದು ದೊರೆಯುತ್ತಿರುವಂತಾಗಿದೆ. ಇದು ಸ್ವಾಗತಾರ್ಹವೇ. ಅಮೆರಿಕೆ ಮತ್ತು ಬ್ರಿಟನ್ನಿನ ಈ ನಾಯಕರು ಕಂಡು ಕೊಂಡ ಮತ್ತೊಂದು ವಿಷಯವೆಂದರೆ, ಪಾಕ್-ಭಾರತ ಮಿತ್ರತ್ವ- ಚೀನೀಯರ ಧಾಳಿಯು ಭಾರತಕ್ಕೆ ಮಾತ್ರ ಅಪಾಯಕಾರಿಯಲ್ಲ. ಭಾರತೀಯ ಉಪಖಂಡದ ಮೇಲಾದ ಧಾಳಿ ಆದುದರಿಂದ ಈ ಎರಡು ದೇಶಗಳಲ್ಲಿ ಏನೇ ಭಿನ್ನಾಭಿಪ್ರಾಯ ವಿರಲಿ, ಅದನ್ನು ಬದಿಗೆ ಸರಿಸಿ ಇಬ್ಬರೂ ಕೇಡು ಬಯಸುವ ಚೀನೀಯ ಬಕಾಸುರನನ್ನು ಎದುರಿಸಬೇಕು ಎಂದಿವರೆ ಅಂಬೋಣ. ಪಾಕಿಸ್ತಾನಕ್ಕೆ ಭಾರತದ ಮೇಲೆ ಇರುವ ಸೈದ್ಧಾಂತಿಕ ಆಕ್ಷೇಪಣೆ ಕಾಶ್ಮೀರದ ಪ್ರಶ್ನೆಯು ಮೂಲಾಪನೂನಗಳ ಪ್ರಶ್ನೆಯೆಂದು ಅಧ್ಯಕ್ಷ ಅಯೂಬರು ಹೇಳುತ್ತ ಬಂದಿದ್ದಾರೆ. ಕಾಶ್ಮೀರದ ಭವಿಷ್ಯತ್ತು ನಿರ್ಧರಿಸುವವರು ಕಾಶ್ಮೀರಿಗಳೇ ಹೊರತು ಮತ್ತಾರೂ ಅಲ್ಲ. ಅವರು ಅದನ್ನು ಈಗಾಗಲೇ ದೃಢಪಡಿಸಿಕೊಂಡಿದ್ದಾರೆ. ಇದರಲ್ಲಿ ಆಯ್ಯೂಬರಾಗಲೀ, ನೆಹರುಗಳಾಗಲೀ ಮೂತಾಡುವುದು ಸಾಧ್ಯವಿಲ್ಲ. ಆದುದರಿಂದ ಅದನ್ನೂ ಉಭಯ ಕರ ನಡುವಿನ ಇತರ ಭಿನ್ನಾಭಿಪ್ರಾಯಗಳನ್ನೂ ಪುನರ್ವಿಮರ್ಶಿಸುವಂತೆ ನಾಯಕದ್ವಯರೂ ಒಪ್ಪಿದ್ದಾರೆ. ಈ ಬಗೆಯ ಒಡಂಬಡಿಕೆಗಳಿಗೆ ಉಪರೋಕ್ತ ಪಾಶ್ಚಾತ್ಯ ನಾಯಕರೇ ಕಾರಣ. ಪುನರ್ವಿಮರ್ಶೆ ಎಂದರೇನು? ಎರಡು ದೇಶಗಳ ವಾದಗಳಲ್ಲಿ ಯಾರದು ಸತ್ಯಕ್ಕೆ ಸವೂಪವಿದೆಯೆಂಬುದನ್ನು ನಿರ್ಧರಿಸುವುದು. ಇದಕ್ಕೆ ಇತಿಹಾಸವೆ ಸಾಕ್ಷಿ. ಇಂದು ಭಾರತವು ಈ ವಧದ ವಾದವನ್ನು ಮತ್ತೂ ಮತ್ತೂ ಬೆಳೆಸಲು ಬಯಸುವುದಿಲ್ಲ. ತನ್ನ ನಿಲುವಿನಯನ್ನು ಅದು ಎಂದೋ ಸ್ಪಷ್ಟಪಡಿಸಿದೆ. ಇದನ್ನು ಇನ್ನಷ್ಟ ತಿಳಿಯೂಗಿಸಿ ಪಾಕಿಸ್ತಾನೆಸೊಡನೆ ಕೆಮಿತ್ತಿರುವ ತನ್ನ ಸಂಬಂಧವನ್ನು ಉತ್ತಮಗೊಳಿಸಲು ಅದು ಸದಾ ಸಿದ್ಧವೇ ಇದೆ. ಮುಖ್ಯ ಆಯ್ಯೂಬ್‌ಖಾನರಿಗೆ ಸತ್ಯಾಸತ್ಯತೆಗಳು ಸರಿಯೂಗಿ ಮಂದಟ್ಟಾಗಬೇಕು.

ವಾರ್ತಾವೇದಿಕೆ

ಭಾರತದ ಭದ್ರರಕ್ಷೆ

ಭಾರತವು ಜವಾಹರಲಾಲರ ಕೈಗಳಲ್ಲಿ ಸುದೃಢವಾಗಿ ಉಳಿಯುವುದು ಎಂದು ಮಹಾತ್ಮಾ ಗಾಂಧಿ ಅಂದು ಹೇಳಿದ್ದರು. ಇಂದು ಅದೇ ಮಾತನ್ನು ಜಗತ್ತೂ ಸಾರುತ್ತಿದೆ; ಭಾರತೀಯರೂ ಕಂಡುಕೊಂಡಿದ್ದಾರೆ. ಪ್ರಪಂಚದ ಸರ್ವಶ್ರೇಷ್ಠ ರಾಜಕಾರಣಿಗಳಲ್ಲಿ ಒಬ್ಬರಾದ ನೆಹರುರವರ ದೂರ ದೃಷ್ಟಿಯುತ ವಿದೇಶ ನೀತಿಯ ಒತ್ತಡದಿಂದ ಚೀನಾವು ಆಕ್ರಮಣ ಮಾಡಿದ ಸೇನೆಯನ್ನು ಮರಳಿ ಕರೆಯುತ್ತಿದೆ; ಒಂದೊಮ್ಮೆ ಶತ್ರುಗಳಂತೆ ವರ್ತಾಡುತಿದ್ದ ಅಮೆರಿಕೆ—ಬ್ರಿಟನ್ ಮೊದಲಾದ ಪಾಶ್ಚಾತ್ಯ ಬಣಗಳು ಭಾರತದ ನೆರವಿಗೆ ಮುಂದಾಗಿವೆ. ಚೀನೀಯ ಗಡಿ ವಿವಾದದಲ್ಲಿ ನೆಹರು ಭಾರತದ ಗೌರವವನ್ನು ಉಳಿಸಿಕೊಂಡು ಮುನ್ನಡೆಯುತ್ತಾರೆ ಎಂದು ಭಾರತೀಯರು ದೃಢವಾಗಿ ನಂಬಿದ್ದಾರೆ ಇದು ವ್ಯಕ್ತಿಯ ಮೇಲಣ ಪೂಜಾಭಾವವಲ್ಲ; ಅವರಲ್ಲಿ ಅಡಗಿರುವ ಅದ್ವಿತೀಯ ಶಕ್ತಿಯ ಪ್ರಶಂಸೆ ಮತ್ತು ಆಂಧ್ರನೆ ಮಾತ್ರ.

ಅಡಿಯ ಹಿಂದಿಡೆ ನರಕ

ಸಂರಕ್ಷಣೆಯ ಬಗ್ಗೆ ಅಧಿಕವಾಗಿ ಸಂಪತ್ತನ್ನು ವಿನಿಯೋಗಿಸಬೇಕಾದುದರಿಂದ ಪಾರ್ಲಿಮೆಂಟ್ ಸದಸ್ಯರ ದೃಷ್ಟಿ ಪುದ್ಗವಾನ ಪ್ರತಿಬಂಧನವನ್ನು ಕೆತ್ತು ಹಾಕುವತ್ತ ಸರಿದಿರುವುದು ತಪ್ಪಲ್ಲ; ಏಕೆಂದರೆ, ಈ ರೀತಿಯ ಕ್ರಮ ಕೈಗೊಂಡದ್ದೇ ಆದರೆ, ರಾಜ್ಯ ಸರಕಾರಗಳ ಆದಾಯವು ಗಣನೀಯವಾಗಿ ಹೆಚ್ಚುವುದು. ಉತ್ತರ ಪ್ರದೇಶ ಸರಕಾರವು ಹೀಗೆ ಮಾಡಿ ಆಗ್ರ ಸ್ಥಾನವನ್ನು ಈ ದಿಸೆಯಲ್ಲಿ ಪಡೆದಿದ್ದರೆ, ಗುಜರಾತ ಮತ್ತು ಮಹಾರಾಷ್ಟ್ರಗಳು ಇದನ್ನು ಮಿಂಚಿಧಿಸಿವೆ. ಜನತೆಯ ಜೀವನದ ಮೇಲೆ ಪ್ರಭಾವೀ ಪ್ರಭಾವ ಬೀರುವ ನೈತಿಕ ಪಟ್ಟದ ಸನ್ನಿಧಿಗೆ ಹೇತವಾದ ಈ ಕಾಯದೆಯನ್ನು ಸ್ವೀಕರಿಸಿ ಭಾರತವು ಮುಂದಿಟ್ಟ ಹೆಜ್ಜೆಯನ್ನು ಈಗ ಹಿಂದಿಡುವುದು ನ್ಯಾಯವೆನಿಸುವುದಿಲ್ಲ; ಧನ ಸಂಪಾದನೆಯೆ, ಉಳಿತಾಯದ ಇತರ ವಿಧಾನಗಳು ಬೇಕೆಂಬ ಪ್ಪಿರುವಾಗ ಇಡಿಯ ಭಾರತದ ಮಟ್ಟದಲ್ಲಿ ಈ ಪ್ರಶ್ನೆಯನ್ನು ಪುರೀಲಿಸಬೇಕೆಂಬ ಸಿಜಲಿಂಗಪ್ಪನವರ ಹೇಳಿಕೆಯು ನ್ಯಾಯ; ಆದರೆ, ಆದರ್ಶವನ್ನು ಬಿಟ್ಟುಕೊಡುವುದು ಮಾತ್ರ ಅನ್ಯಾಯ.

ನಾಸೇರರ ಆಸೆತ್ತಿ

ಸಂಯುಕ್ತ ಅರಬ ರಾಷ್ಟ್ರದ ಛಧ್ಯಕ್ಷ ನಾಸೇರರು ಈಗಿನ್ನೆರಾಜಕಾರಣಿಗಳಷ್ಟಿ ಪ್ರಮುಖರು. ಸಂಯೋಜಕಾಲುನೆಯು ರಾಷ್ಟ್ರೀಕರಣದ ವೇಳೆ ಅವರ ಎಚೆಗಾರಿಕೆ ಜಾಗೃಜ್ಜನಿಕವಾಯ್ತು. ಚೀನಾ—ಭಾರತ ಗಡಿ ವಿವಾದದಲ್ಲಿ ತುಂಬು ಆಸಕ್ತಿಯುಳ್ಳ ಇವರು ಶ್ರೀಮತಿ ಭಂಡಾರನಾಯಿಕೆಯವರು ಸೂಚಿಸಿದ ಛಾನಾ ಸಂ. ಲ.

ರಾಷ್ಟ್ರ, ಸಿಂಹಳ, ಬ್ರಹ್ಮ, ಇಂಡೋನೇಶ್ಯ ಮತ್ತು ಕಂಬೋಡಿಯಾಗಳ ಸಮ್ಮೇಳನವು ಸಾಂಕಪ್ಪು ಸರ್ಯೂಲೋಚನೆಗೆ ಮೊದಲು ಸೇರುವುದರಿಂದ ಅಯಶಸ್ಸಿಯಾಗುವುದು ಎಂದು ಅಭಿಪ್ರಾಯಕ್ಕೆ ಬಂದುದರಿಂದ ಅದು ಮುಂದೆ ಬೀಳಕಾಯಿತು. ಯಾವುದೇ ಸಮ್ಮೇಳನವು ನಡೆಯುವುದರಿಂದ ಏನಾದರೂ ಪ್ರಯೋಜನ ದೊರೆಯಬೇಕಲ್ಲದೆ ಸಮ್ಮೇಳನಕ್ಕಾಗಿ ಅದು ನೆರೆದರೆ ನಿಜವಲ್ಲ. ಚೀನಾದ ಆಂತರಂಗವು ಇನ್ನೂ ಅಪ್ಪಿಷ್ಟವಾಗಿ ಅದರ ಬಗ್ಗೆ ಚರ್ಚೆ ನಡೆಸಿ ವ್ಯರ್ಥ ಕಂಠಶೋಷಣೆಯೇಕೆ ಮಾಡಬೇಕು?

(ನಂತರ ಮುಂದಿನದು)

ದು. ಭಾರತೀಯರು ಈ ಕಾರ್ಯದಲ್ಲಿ ಸಫಲರಾಗಲಿ. ತಮ್ಮ ತಾಯಿ ರಕ್ಷಣೆಮಾಡುವ ಈ ಧರ್ಮಾರ ಸಂದರ್ಭದಲ್ಲಿ ಅವರಿಗೆ ದೇವರ ಪೂರ್ಣ ಬೆಂಬಲ ದೊರಕಲಿ. ನಿಮ್ಮ ಈ ಕಾರ್ಯಕ್ಕೆ ನಮ್ಮಿಂದಾಗಬೇಕಾದ ಏನಾದರೂ ಸಹಾಯವಿದ್ದಲ್ಲಿ ನಾವು ಸದಾ ಸಿದ್ಧರಿದ್ದೇವೆ" ಎಂದು ಹೇಳಿ ನೆಹರೂರವರಿಂದ ನಿರಾಶಯಪಡೆದ ಹಾರ್ಯಿರವನ್ನರಿಗೆ ಮತ್ತು ಡುಕನ್ ಸ್ಯಾಂಡಿಸ್ಸರಿಗೆ ಭಾರತವು ಸದಾ ಋಣಿ. ಈ ಎರಡೂ ನಿಯೋಗಗಳ ಸಂದರ್ಶನದಿಂದ ನಮ್ಮ ಶಕ್ತಿಗೆ-ಚೈತನ್ಯಕ್ಕೆ ಒಪ್ಪವಿಟ್ಟಂತೆ, ಬಂಗಾರಕ್ಕೆ ಹುಟವಿಟ್ಟಂತೆ ಆಗದೆ ನಮ್ಮಲ್ಲಿ ದೇಶ ಭಕ್ತಿಯ ಹಸಿವು ಮತ್ತು ಸ್ಫೂರ್ತಿ ಹೆಚ್ಚಿದೆ. ಸ್ವಾತಂತ್ರ್ಯಕ್ಕಾಗಿ ರಕ್ಷಣೆಯ ಪವಿತ್ರ ಯಜ್ಞದ ಹೊಣೆಗಾರಿಕೆಯು ಅರಿವು ಬಲವಾಗಿ ಉಂಟಾಗಿದೆ. ಇಂದು ನಮ್ಮನ್ನು ಯಾರೂ ತಡೆಯುವಂತಿಲ್ಲ. ನಮಗೆ ಚೀನಾದ ದುರಾಕ್ರಮಣಗಾರರನ್ನು ಸದೆಬಡಿಯದೆ ವಿಶ್ರಾಂತಿಯಿಲ್ಲ. ಅವರಿಗೆ ತಕ್ಕ ಬುದ್ಧಿ ಕಲಿಸದೆ ಬಿಡುವಿಲ್ಲ ಇಂಥ ಸಂದರ್ಭದಲ್ಲಿ ನಮಗೆ ಸಹಾಯ ಮಾಡಬಂದ ನವ್ಯ ಆಸ್ಟ್ರೇಷ್ಯಗಳಿಗೆ ನಾವು ಸದಾ ಋಣಿಯಾಗಿದ್ದು ನಮ್ಮ ತಾಯಿಯ ಪೂರ್ಣ ರಕ್ಷಣೆಯ ಈ ಸಮರ ಯಜ್ಞದಲ್ಲಿ ನಮ್ಮ ತನು ಮನಧನಗಳನ್ನು ಅರ್ಪಿಸಿ ಧನ್ಯರಾಗುತ್ತೇವೆ. —ಶ್ರೀನಿವಾಸ ಮತಸಂಯ.

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

O. S. 450/1962.

ದಿ. ನೇಶನಲ್ ಟೊಬೊಕೊ ಸ್ಟೋರ್ಸ್— ಉಡುಪಿ— ಯಿದ್ರ ಪಾರ್ಟ್ನರರ ಯು. ಜಯವಂತ ಶೆಣೈ — ವಾದಿ.

ಮತ್ತು

ಬಿ. ಅನಂತ ಯಾನ್. ಕಾಮತ— ಶ್ರೀನಿವಾಸ ಕಾಮತರ ಮಗ — ಉಡುಪಿ ತಾಲ್ಲೂಕು, ಬೆಳ್ಳೆ ಗ್ರಾಮ — ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಯಿಂ ಮೂಲ್ಕ ತಿಳಿಸುವದೇನಂದರೆ—

ಮೇಲ್ಕಂಡ ವಾದಿಯು ಅಂಗಡಿಯ ಪ್ರತಿವಾದಿಯು ಸದ್ರಿದ — ಲೇವಾದೇವಿ ಬಾಕಿ ಉಸಲು ಬಡ್ಡಿಗೆ ವಾದಿಯು ಮಾಡಿದ ಪೀಲ್ಕಂಡ ದಾವೆಯು — ತಾ. 19.12.62ಕ್ಕೆ ಯಿಟ್ಟಿದೆ ಆ ಕುರಿತು ಪ್ರತಿವಾದಿಗೆ ಅಕ್ಕೀಪ ಜೇಳಕ್ಕೆದ್ದು ಯಿದ್ರೆ ಸದ್ರಿ ದಿನ್ನ ಮೇಲ್ಕಂಡ ಕೋರ್ಟು ಮುಂದ 11 ಗಂಟೆಗೆ ಹಾಜ್ರಾಗಿ ಜಾಬೀರುಮಾಡಿಕೊಳ್ಳತಕ್ಕದ್ದು ಯಂತ ಯಿ ಮೂಲ್ಕ ತಿಳಿಸೋಣಾಗಿಯಿದೆ.

N. V. Kamath,
Advocate for Plff.

ಉಡುಪಿ, 1—12—62.

ಅಲ್ಲಲ್ಲಿಯ ಸುದ್ದಿಸಾರ

ರೋಟರಿ ಸಭೆಯಲ್ಲಿ ಶ್ರೀ ಟಿ. ಎ. ಪೈಗಳ ಭಾಷಣ— ಉಡುಪಿ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ಕಳೆದ ತಾ. 27ರಂದು ಉಪೇಂದ್ರ ಬಾಗಿನಲ್ಲಿ ಅಧ್ಯಕ್ಷ ಶ್ರೀ ಟಿ ರಮೇಶ ಪೈಯರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಪಾರಂಭದಲ್ಲಿ ಅಧ್ಯಕ್ಷರಿಂದಲೂ ಕಾರ್ಯದರ್ಶಿಯವರಿಂದಲೂ ಆತಿಥಿ ಪರಿಚಯವಾದ ನಂತರ ಶ್ರೀ ಟಿ ಎ ಪೈಯರು ಅಂತಾರಾಷ್ಟ್ರೀಯ ಸಮಸ್ಯೆಗಳ ಕುರಿತು ಮಾತನಾಡುತ್ತಾ, ಇಂದು ಚೀನೀಯರ ದುರಾಕ್ರಮಣದಿಂದ ಪ್ರತಿಯೊಬ್ಬ ಭಾರತೀಯನಿಗೂ, ಅತನ ವೈಕ್ತಿಗತ ಸ್ವಾತಂತ್ರ್ಯದ ಅರಿವುಂಟಾಗಿದೆ. ಜಾತಿ ಭೇದಗಳ ಅಗಲವನ್ನಿಸಿದ ಭಾರತದ ಸಕಲ ಜನತೆಯೂ ಇಂದು ಏಕ್ಯದಿಂದ ಚೀನಾ ವನ್ನು ಎದುರಿಸಲು ಸಿದ್ಧವಾಗಿ ಇದೀ ದೋಕ್ ಕೈ ಬೆರಗನ್ನುಂಟುಮಾಡಿದೆ" ಎಂದರು. ಶ್ರೀ ಪೈಗಳು ಮುಂದುವರಿಸುತ್ತಾ ಬರೀ ಸಂಕುಚಿತ ತತ್ವವಾದ ಕಮ್ಯುನಿಸಮ್ ಪ್ರಜಾಸತ್ತುತ್ವದ ಪ್ರಗತಿಯ ರತ್ನವಾದುದರಿಂದಲೇ ಇಂದು ಚೀನಾ ಭಾರತಸಂತಸ ಪ್ರಜಾಪ್ರಭುತ್ವರಾಷ್ಟ್ರವನ್ನು ವಿನಾಕಾರಣ ಕೆಣಕುವಂತಾಗಿದೆ. ಈ ಸಂದರ್ಭದಲ್ಲಿ ಭಾರತದ ಕೆಲಜನತೆಯು ಅಸ್ಪೃಶ್ಯರವು ಬೇಧವನ್ನುಂಟುಮಾಡುವ ವಿಚಾರ ಭಾರತದ ಸಕಲ ರಕ್ಷಣೆಗಳ ಕುರಿತು ನಾವು ತಿಳಿಯಬೇಕು ಮೂಲತ್ವ ಸದಿಸಗಳ ಸೈನಿಕ ಅನುಭವದ ಹಿನ್ನೆಲೆಯಿಂದ ಚೀನಾ ನಮ್ಮ ಮೇಲೆ ಧಾಳಿಮಾಡಿರುವುದೆಂಬುದನ್ನು ಮರೆಯಬಾರದು. ಆದರಿನ್ನು ಇದುರಿಸುವುದು ತ್ರೀಕಿಸುವಷ್ಟು ಸುಲಭವಲ್ಲ. ಇಂತಹ ಸಂದರ್ಭದಲ್ಲಿ ನಾವು ನಮ್ಮ ನಾಯಕರಿಗೆ ಬೆಂಬಲನೀಡಬೇಕು. ಪಂ. ನೆಹರೂರವರ ನಾಯಕತ್ವದ ಮೇಲೆ ಅಚಲ ಶ್ರದ್ಧೆಯಿಟ್ಟು ಅವರ ಆಜ್ಞೆ ಪ್ರಕಾರ ನಡೆಯುವುದು ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನಮ್ಮ ಕರ್ತವ್ಯವಾಗಿದೆ ಎಂದರು.

ಅಧ್ಯಕ್ಷರ ಭಾಷಣದ ಬಳಿಕ ಕಾರ್ಯದರ್ಶಿ ಶ್ರೀ ಎ. ಕೃಷ್ಣರಾಯರು ಅಭಾರ ಮನ್ನಿಸಿದರು.

ಉಡುಪಿ ನಗರ ಸಭೆಯ ಉಪಾಧ್ಯಕ್ಷರಾಗಿ— ಶ್ರೀ ಮಂಜುನಾಥ ಮಸ್ಯೆಸ್ಥರು ಕಳೆದ ತಾ. 30ರಂದು ಜರಗಿದ ಚುನಾವಣೆಯಲ್ಲಿ ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ. ಶ್ರೀಯುತರು ಬೋರ್ಡ್ ಹೈಸ್ಕೂಲಿನ ನಿವೃತ್ತ ಅಧ್ಯಾಪಕರೂ ಉತ್ಸಾಹಿಗಳೂ ನಿಸ್ವಾರ್ಥ ಸೇವಾಪರರೂ ಆಗಿದ್ದಾರೆ ಶ್ರೀಗಳಾವ ಎನ್. ಸೀತಾರಾಮ ಕಾಮತ್, ನಗರ ಸಭಾಪತಿ. ಪಿ. ಆರ್. ಶೆಣೈ, ಎಸ್. ವಿಠಲ ಶೆಟ್ಟಿ ಇವರು ಶ್ರೀ ಸುಧೀಂದ್ರರ ಗುಣಗಾನ ಮಾಡಿ ಶುಭಕೋರಿದರು. ಸುಧೀಂದ್ರರು ತನ್ನನ್ನು ಆವಿರೋಧವಾಗಿ ಆರಿಸಿದ ಬಗ್ಗೆ ಕೃತಜ್ಞತೆಗಳನ್ನು ಸೂಚಿಸಿ ಸಾಷಾವಿದರು.

ಧರ್ಮಸ್ಥಳದಲ್ಲಿ ಸರ್ವಧರ್ಮ ಮತ್ತು ಕನ್ನಡ ಸಾಹಿತ್ಯ ಸಮ್ಮೇಳನಗಳು— ಕಳೆದ ತಿಂಗಳ ತಾ. 26 ಮತ್ತು 27ನೇ ತಾರೀಕುಗಳಲ್ಲಿ ವಿಜಯಭೇರಿಯಿಂದ ನೆರವೇರಿದುವು. ಸರ್ವ ಧರ್ಮ ಸಮ್ಮೇಳನವನ್ನು ಮೈಸೂರು ರಾಜ್ಯದ ಗೃಹ ಸಚಿವರಾದ ಶ್ರೀ ಆರ್ ಎಂ. ಪಾಟೀಲರು ಉದ್ಘಾಟಿಸುತ್ತಾ ಭಾರತವು ತನ್ನ ಶ್ರೇಷ್ಠತೆಯನಾದ ರಾಜನೀತಿ ಹಾಗೂ ಧರ್ಮಗಳಿಂದ ಲೋಕದಲ್ಲಿ ಉತ್ಕೃಷ್ಟ ಸ್ಥಾನ ಗಳಿಸಿರುತ್ತದೆಂದೂ ವೀರರ ಬೀಡೆ ಉಂಟಾದಾಗ ಇಡೀ ಪ್ರಪಂಚವೇ ಭಾರತದ ಕಡೆಗೆ ಆಶ್ಚರ್ಯದಿಂದ ನೋಡುವುದೆಂದೂ ಹೇಳಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಬೆಂಗಳೂರು ರಾಮಕೃಷ್ಣಾಶ್ರಮದ ಶ್ರೀ ತಾಸ್ತ್ರಿ ಸಂದಣಿಯವರು ವಹಿಸಿದ್ದರು. ಅರಂಭದಲ್ಲಿ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡಿದರು ಶ್ರೀ ಡಿ. ಪುಟ್ಟು ಸ್ವಾಮಿಯವರು ಮುಂತ್ರಿಗಳಿಗೂ ಶ್ರೀ ಜಿನರಾಜ ಶಾಸ್ತ್ರಿಯವರು ಶ್ರೀ ಕಾಸ್ತ್ರಿಸಂದಣಿಯವರಿಗೂ ಮಾನ ಪತ್ರಗಳನ್ನು ಪಸ್ಸಿಸಿದರು ಶ್ರೀ ಭಾಸ್ಕರಿನ್ ಶೆಣೈರವರು ಧರ್ಮಾರ ರುಸಂದೇಶ ಓದಿದರು. ಶ್ರೀಗಳಾದ ಸಿದ್ಧಯ್ಯ ಪುರಾಣಿಕ. ಪ್ರೊ| ಕೆ. ಟಿ. ಪಾಂಡುರಂಗಿ, ಸುಬೋಧ ರಮರ್ಸಾಸ್, ಪೊಡಲಾದವರ ಮತ್ತು ಅಧ್ಯಕ್ಷರ ಭಾಷಣಗಳಾದ ಮೇಲೆ ಕೆ. ಎಸ್. ಧರೆಶೇಂದ್ರಯ್ಯನವರು ಧನ್ಯವಾದಗಳನ್ನರ್ಪಿಸಿದರು.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ದ್ದ ಮೈಸೂರು ಸರಕಾರದ ವಾರ್ತಾ ಮತ್ತು ಪ್ರಸಾರ ಶಾಖೆಯ ಡೈರೆಕ್ಟರ್ ಶ್ರೀ ಸಿದ್ದಯ್ಯ ಪುರಾಣಿಕರು ಭಾರತದ ಪವಿತ್ರ ಭೂಮಿಯನ್ನು ಚೀನೀಯರ ದುರಾಕ್ರಮಣದಿಂದ ವಿಮೋಚನೆ ಗೊಳಿಸಲು ಸಮಸ್ತ ಲೇಖಕ್ಷರು ಹೋರಾಡುತ್ತಿರುವಾಗ ದೇಶದಲ್ಲಿ ರಾಷ್ಟ್ರೀಯತೆಯ ಬೆನ್ನೆಲುಬಿನಂತಿರುವ ಜನತೆಯಲ್ಲಿ ಸ್ವಾತಂತ್ರ್ಯ ಪ್ರೇಮದ ಕೆಚ್ಚನ್ನೂ ಸ್ಫೂರ್ತಿಯನ್ನೂ ತುಂಬಿಸಿ ವೀರನ್ಯತೆಯ ಕುರಿಂಯ ಹರಿದು ಬರುವಂತೆ ಮಾಡುವುದು ಸಾಹಿತ್ಯ ಹೊಣೆ ಎಂದರು. ಸಮ್ಮೇಳನದ ಉದ್ಘಾಟನೆಯನ್ನು ತಿರುವಾಂಕೂರು ಸಂಸ್ಥಾನದ ಯುವರಾಜರಾಗಿ ಶ್ರೀ ಮೂತಾಸಂರ ಪರ್ಯದರವರು ನೆರವೇರಿಸಿದರು. ಪ್ರೊ| ಎಸ್.

ರತ್ನಮ್ಮ, ಶ್ರೀಗಳಾದ ಚಿನ್ನ ಬಸವೇಶ್ವರ, ನಂಜುಂಡಾರಾಧ್ಯ, ಮಹಿಷೇನಸ್ವ ಪೊದಕಾವ ವರು ಭಾಷಣ ಮಾಡಿದರು. ಶ್ರೀ ಶಾಖಿವಿದಾಸರು ನಂತರ ಸಲ್ಲಿಸಿದರು. ಧರ್ಮಸ್ಥಳದಲ್ಲಿ ಸ್ಥಿತವರ್ಸ ವೀಪೋತ್ಸವ ಕಾಲದಲ್ಲಿ ನಡೆದು ಬರುವ ಈ ಸಮ್ಮೇಳನಗಳು ವೈಭವದ ಸೊರ್ಣವಾಗಿ ನೆರವೇರುವಂತೆ ಉತ್ಸಾಹಿಗಳಾದ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ಸಕಲ ಸೌಕರ್ಯಗಳನ್ನು ಅದರ್ಶನೀಯವಾಗಿ ಮಾಡಿ ಪ್ಪರು.

ಬ್ರಹ್ಮಾವರದಲ್ಲಿ ಕಾರೆಂತರಿಗೆ ಸನ್ಮಾರ— ಕರ್ನಾಟಕ ಸಂಘದವರು ಕಳೆದ ತಾ. 27ರಂದು ಕಡಲ ತೀರದ ಭಾರ್ಗವ ಶ್ರೀ ಶಿವರಾಮ ಕಾರೆಂತರ ಸಪ್ತತಿ ಸೂರ್ತಿ ಉತ್ಸವವನ್ನು ಮಂಗಳೂರಿನ ಮಾಜಿ ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಆದಿಗರ ಅಧ್ಯಕ್ಷತೆಯಲ್ಲಿ ವೈಭವದಿಂದ ಆಚರಿಸಿದರು. ಶ್ರೀ ಕೆ. ಆರ್ ಪಂಡಿತ್ಯರವರು ಸ್ವಾಗತಿಸಿದ ಬಳಿಕ ಶ್ರೀ ವೈಕಾಡಿ ವೆಂಕಟ ಕೃಷ್ಣರಾಯರು ಕಾರ್ಯಕ್ರಮವನ್ನು ವಿವರಿಸಿ ನರದಿಯನ್ನು ಹೇಳಿ ಅತಿಥಿಗಳ ಪರಿಚಯ ಭಾಷಣ ಮಾಡಿದರು. ಶ್ರೀ ಎಸ್. ಎ. ಪಾರಂಬಳ್ಳಿಯವರು ಸಂದೇಶ ವಾಚಿಸಿದರು ಅಧ್ಯಕ್ಷರು ಸಂಘದ ಪರವಾಗಿ ಬೆಳ್ಳಿ ಖಡ್ಗಗಳು ಮತ್ತು ಉಡುಗೊರೆಯೊಂದಿಗೆ ಮಾನಪತ್ರವನ್ನು ಸಮರ್ಪಿಸಿದರು. ಶ್ರೀಮತಿ ಲೀಲಾ ಕಾರಂತರಿಗೂ ಉಡುಗೊರೆಗಳನ್ನಿತ್ತು ಸನ್ಮಾನಿಸಿದರು. ಶ್ರೀ ಎಚ್. ಸುಬ್ರಹ್ಮಣ್ಯ ಭಟ್ಟರು ಮಾನಪತ್ರವನ್ನು ಓದಿದರು ವಿವಿಧ ಸಂಘ ಸಂಸ್ಥೆಗಳಿಂದ ಶ್ರೀ ಕಾರಂತರಿಗೆ ಮಾರ್ಪಡಿಸಲಾಯಿತು. ಶ್ರೀಗಳಾದ ಜಿ.ಎಂ ಭಾಸುಮಾನ್, ಕೆ ಎಲ್ ಕಾರಂತ್, ಎಂ. ನಾರಾಯಣ ಅಮ್ಮಂಗಾರ್ ಯು. ಲಕ್ಷ್ಮೀನಾರಾಯಣ ಆಚಾರ್ಯ ಮೊದಲಾದವರು ಶ್ರೀ ಕಾರಂತರ ಗುಣಗಾನ ಮಾಡಿ ಅವರಿಗೆ ಶ್ರೇಯೋಭಿವೃದ್ಧಿಯನ್ನು ಕೋರಿದರು. ಶ್ರೀ ಕಾರಂತರು ನೊತ್ತಾದಾತ್ತಾ ಸರಳ ಪಂಗಿಯಲ್ಲಿ ಬದುಕಲಿಕ್ಕಾಗಿ ತಾನು ಕೈಕೊಂಡ ಪ್ರಯೋಗಗಳನ್ನು ವಿವರಿಸಿದರು. ಅಧ್ಯಕ್ಷ ಭಾಷಣವಾದ ಮೇಲೆ ಶ್ರೀ ವೈಕಾಡಿ ವೆಂಕಟಕೃಷ್ಣ ರಾಯರು ಧನ್ಯವಾದಗಳನ್ನರ್ಪಿಸಿದರು. ರಾತ್ರಿ ಶ್ರೀ ಬಿ. ವಿ ಆಚಾರ್ಯರು ಭೋಜನ ಸತ್ಕಾರವಿತ್ತರು.

ಬ್ರಹ್ಮಾವರದಲ್ಲಿ ನಿರ್ಮಲ ಪಾ. ಎ ಶಾಲೆಯ ರಜತೋತ್ಸವವು ಕಳೆದ ತಾ. 25ರಂದು ಸಂ. ಶ್ರೀ ಎಸ್ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಶಿವರಾಮ ಶೆಟ್ಟಿಯವರಿಂದ ಸ್ವಾಗತ ರೆ ಫಾ. ಅಲಫ್ರೆಡ್ ರೋಸರವರಿಂದ ವರದಿವಾಚನಗಳಾದ ಮೇಲೆ ಶ್ರೀ ವಿಠಲ ಪಿಯೋ ನಿರ್ತಕಿಯರು ಭಾಷಣ ಮಾಡಿದರು ಅಧ್ಯಕ್ಷರ ಭಾಷಣವಾದ ಮೇಲೆ ವಿವಿಧ ವಿನೋದಾವಳಿಗಳಾದವು.

ವಿದ್ಯುತ್ ಉದ್ಘಾಟನೆ— ನಿಡಂಬೂರು ಪಂಚಾಯತ ವಿಸ್ತೀರ್ಣದೊಳಗೆ ವಿದ್ಯುತ್ ಸರಬರಾಜು ಮಾಡುವ ಸಣ್ಣರಂಭವು ನಿಡಂಬೂರು ಪಂಚಾಯತ ಆಫೀಸಿನಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಕಳೆದ ತಾ. 30 ರಲ್ಲಿ ನೆರವೇರಿತು. ಶ್ರೀ ಎಂ. ಮುದ್ದಣ್ಣ, ಎಂ. ಎಲ್. ಎ. ಆವರು ವಿದ್ಯುತ್ ಉದ್ಘಾಟನೆ ನೆರವೇರಿಸಿದರು.

ಸಿಂಡಿಕೇಟ್ ಬೇಂಕಿನವರು— ರಾಷ್ಟ್ರೀಯ ರಕ್ಷಣಾ ಬಾಂಡುಗಳಲ್ಲಿ ಮೂಸಿಕ ಕಂತುಗಳ ತಳಹದಿಯಲ್ಲಿ ಒಂದು ಕೋಟಿ ರೂ.ಗಳನ್ನು ನಿನಿಯೋಗಿಸಲೂ ರಕ್ಷಣಾ ನಿಧಿಗೆ ಒಂದು ಲಕ್ಷದ ಐವತ್ತೊಂದು ಸಾವಿರ ರೂ.ಗಳನ್ನು ಕೊಡಲೂ ನಿರ್ಧರಿಸಿದುವರೆಂದು ತಿಳಿದುಬಂದಿದೆ ಬೇಂಕಿನ ನಿಬಂದಿಯವನು 15 ಸಾವಿರ ರೂ.ಗಳನ್ನು ನಿಧಿಗೆ ತೆತ್ತಿರುವನು.

ಎಂ ಜಿ. ಎಂ. ಕಾಲೇಜು— ಪ್ರೊ. ಎಂ. ಜಿ ಶ್ರೀನಿವಾಸರಾವ್ ಸ್ಮಾರಕ ಅಂತರ ಕಾಲೇಜು ಪದಾರ್ಥಗಳ ಉದ್ಘಾಟನೆಯನ್ನು ಇದೇ ತಾ. 1ರಂದು ಡಾ ಟಿ. ಎಂ ಎ. ಪೈಯವರು ಎಂ ಜಿ. ಎಂ. ಕಾಲೇಜು ಆವರಣದಲ್ಲಿ ನೆರವೇರಿಸಿದರು. ಮರುದಿನ ಮುಕ್ತಾಯ ಸಮಾರಂಭವು ಸರ್ ಜಡ್ಜ್ ಶ್ರೀ ಜಿ. ಕುಲಕರ್ಣಿಯವರಅಧ್ಯಕ್ಷತೆಯಲ್ಲಿ ನೆರವೇರಿತು.

ತೆಂಕನಿಡಿಯೂರು— ಇಲ್ಲಿಗೆ ವಿದ್ಯುತ್ ಸರಬರಾಯಿಯ ಉದ್ಘಾಟನಾ ಸಮಾರಂಭವು ಕಳೆದ ತಾ 29ರಂದು ಗದ್ದಿಮಜಲು ಶಾಲಾ ಕಟ್ಟಡದಲ್ಲಿ, ಜ್ಯೋತಿ ಪೆನಲ್ಮೆಂಟ್ ಆಫೀಸರ್ ಶ್ರೀ ಎ. ಕೊರಗಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಎ. ಜೆ ಅಲ್ಬುಯವರಿಂದ ನೆರವೇರಿಸಲ್ಪಟ್ಟಿತು.

ಧನ್ವಂತರಿ ಜಯಂತಿ— ಉಡುಪಿಯ ಆಯುರ್ವೇದ ಕಾಲೇಜಿನಲ್ಲಿ ಕಳೆದ ತಾರೀಕು 29ರಂದು ಧನ್ವಂತರಿ ಜಯಂತಿಯು ಮುನಿಯೊಲಿನ ಡಾ| ಯು ಕೃಷ್ಣರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಿನ್ಸಿಪಲ್ ಶ್ರೀ ಜಿ. ಬಿ. ಸವಣೂರಿಂದ ಸ್ವಾಗತ, ಶ್ರೀ ಕೃಷ್ಣರಾಯರಿಂದ ಪರಿಚಯ ಭಾಷಣ, ವೀಣಾವಾದನ, ಸಭಿಕರ ಭಾಷಣ ಅಧ್ಯಕ್ಷರಿಂದ ಪ್ರಶಸ್ತಿ ಪತ್ರಕಗಳ ವಿತರಣೆ ಮತ್ತು ಭಾಷಣವಾಯಿತು. ಶ್ರೀ ಕರುಣಾಕರ ಶೆಟ್ಟರು ವಂದನೆ ಸಲ್ಲಿಸಿದರು.

ಉಡುಪಿ ಕ್ರಿಕೆಟ್ ಟೀಮ್— ಹೊಸ ತಂಡವಾಗಿ ಸ್ಥಾಪಿಸಿರುವ ಈ ಟೀಮಿನ ಉದ್ಘಾಟನೆಯು ಇದೇ ತಾ 2ರಂದು ಮುನಿಸಿಪಲ್ ಮೈದಾನ ಶಾಲೆಯಲ್ಲಿ ನಗರ ಸಭಾಧ್ಯಕ್ಷ ಶ್ರೀ ಪಿ. ಆರ್. ಶೆಣೈಯವರಿಂದ ನೆರವೇರಿಸಲ್ಪಟ್ಟಿತು.

In the Court of the Subordinate Judge of South Kanara

R. E. P.No. 32/62
O. S. 93/59

Betweeu:
The State of Mysore ... Petitioner
and
Kamala Shedthi and others ... Respondents

To 4th Respondent
Inas D'Souza: S/o Louis D'Souza, Lorry Driver, Bellary Town Municipality, Bellary.

Please take notice that in the above executi n petition filed by the Petitioner for attachment of the decree passed in favour of Plaintiff against Defendants 3 to 5, the court has ordered attachment of the decree and the said matter stands posted to 22—12—1962 at 11 A. M. for further enquiry. In case you fail to appear on that day the matter will be decided exparte.

(By Order of Court)

M Venkatraya Kamath,
Goverment Pleader.

Mangalore, 3—12—1962.

ಲಢಾಖಿನ ಇತಿಹಾಸದ ರೂಪರೇಖೆಗಳು

(ಶನೇ ಸುಟದಿಂದ)

ವನ್ನು ಬಿಟ್ಟುಕೊಡಬೇಕೆಂಬ ಶರ್ತದ ಮೇಲೆ ಅವರಿಬ್ಬರೊಂಗೆ ರಾಜಿ ನಡೆಯಿಸಿದನು. ಈ ಸಂಧಾನವನ್ನು ನಡೆಯಿಸಿದವನು ಬ್ರಾಂಡ್ಯ ಭಿಕ್ಷು ಬುರುಗಸಾ-ಕಾನು-ಬಾಗ್-ಮೋ.

ದೇವದಾನನು ತನ್ನ ಮಗ ದೇಲಕನಿಗೆ ರಾಜ್ಯಾಧಿಕಾರವನ್ನೊಪ್ಪಿಸಿದನು. ದೇಲಕನು ೧೬೦೫ರಿಂದ ೧೬೪೦ನೇ ಇಸವಿಯ ವರೆಗೆ ರಾಜ್ಯವಾಳಿಕೊಂಡಿದ್ದನು. ಅವನ ಆಡಳಿತ ಕಾಲದಲ್ಲಿ ತನ್ನ ತಂದೆಯು ಶತ್ರುವಿಗೆ ಬಿಟ್ಟುಕೊಟ್ಟಿದ್ದ ಪಂಜಾಬಿನ ಸ್ಪಿತಿ ಜಿಲ್ಲೆಯನ್ನು ಸುನಃ ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಅವನ ರಾಜ್ಯಾಡಳಿತದ ಅಂತ್ಯಕಾಲದಲ್ಲಿ ಬಲತಿಯ ರಾಜನು ಲಢಾಖಿನ ಮೇಲೆ ವಿಜಯೀ ಆಕ್ರಮಣವನ್ನು ನಡೆಸಿದನು. ಆದರೆ ಲಢಾಖಿನ ಜನತೆ ಅದನ್ನು ಹಿಮ್ಮೆಟ್ಟಿಸಿಕೊಳ್ಳುವದಕ್ಕೆ ತಡಮಾಡಲಿಲ್ಲ. ಆಗ ಅಲಿಶೇರನು ಬಲತಿಯ ರಾಜನಾಗಿದ್ದನು. ಆಗ ಬಲತಿಯ ಸೇನೆ ಸೋತು ಹೋಯಿತು. ದೇವದಾನ-ನಾಮ-ಗ್ಯಾಲನ ಕಾಲದಿಂದಲೇ ಲಢಾಖವು ಕಾಶ್ಮೀರದ ಆಧಿಪತ್ಯವನ್ನೊಪ್ಪಿಕೊಂಡು ಕಪ್ಪ ಅಥವಾ ಕರ ಕೊಟ್ಟುಕೊಂಡು ಬಂದಿದೆ. ಹೀಗಿದ್ದರೂ ಗುಲಾಬ ಸಿಂಹನ ಬಹದೂರ್ ಜನರಲ್ ಜೋರಾವರ ಸಿಂಹನು ಟೋಗ್ಡಾ ಸೇನೆಯ ನಹಾಯದಿಂದ ಸೂರ್ಣ ಸೋಲಿಸಿ ಕಾಶ್ಮೀರದೊಂದಿಗೆ ಲಢಾಖನ್ನು ಸೇರಿಸಿಕೊಂಡನು.

ಲಢಾಕಿನ ವಿಜಯ ಪೂತ್ರದಿಂದಲೇ ಜೋರಾವರ ಸಿಂಹನಿಗೆ ಸಂತೋಷ ಉಂಟಾಗಲಿಲ್ಲ. ಅವನು ತ್ರಿವಿಷ್ಟಪವನ್ನೂ ತನ್ನ ಆಧೀನಕ್ಕೆ ತರಲು ನಿಶ್ಚಯಿಸಿಕೊಂಡನು. ಮರುವರ್ಷವೇ ತ್ರಿವಿಷ್ಟಪದ ಮೇಲೆ ಆಕ್ರಮಣ ನಡೆಸಿದನು. ಆದರೆ ದುರ್ಭಾಗ್ಯವಶಾತ್ ಜೋರಾವರಸಿಂಹ ಹಾಗೂ ಅವನ ಸೇನೆಯಲ್ಲಿ ಬಹಳ ಮಂದಿಯು ಮೃತ್ಯುವಿಗೆ ಎರವಾದರು. ಮಳೆ, ಗಾಳಿ ಹಾಗೂ ಶೀತಾದಿಗಳನ್ನು ಅವರಿಂದ ಎದ ರಿಸಲಿಕ್ಕಾಗಲಿಲ್ಲ. ಅಲ್ಲದೆ ಅವರು ತೆಗೆದುಕೊಂಡು ಹೋಗಿದ್ದ ಸಾಮಗ್ರಿಗಳೂ ಮುಗಿದು ಹೋದುದರಿಂದ ಅವರೇ ಮೃತ್ಯುವಿಗೆ ಆಹಾರವಾಗಬೇಕಾಯಿತು.

ಕಾಶ್ಮೀರ, ಅಮೃತಸಾರದ ಸಂಧಿ ಪ್ರಕಾರ ಮಹಾರಾಜಾ ಗುಲಾಬ ಸಿಂಹನಿಗೆ ಮಹಾರಾಜಾ ರಂಜೀತ ಸಿಂಹನಿಂದ ಪುರಸ್ಕಾರ ರೂಪದಲ್ಲಿ ಸಿಕ್ಕಿದೆ. ಅವನ ಮಗ ಹಾಗೂ ಉತ್ತರಾಧಿಕಾರಿ ಮಹಾರಾಜಾ ರಣವೀರ ಸಿಂಹನ ಆಡಳಿತ ಕಾಲದಲ್ಲಿ ಗಿಲಗಿತ್ ಹಾಗೂ ಅದರ ಸಮೀಪದ ಪ್ರದೇಶ ಕೂಡಾ ಜಮ್ಮೂ ಮತ್ತು ಕಾಶ್ಮೀರದೊಂದಿಗೆ ಸೇರಿಸಲ್ಪಟ್ಟಿತು. ಅಂದಿನಿಂದಲೇ ಜಮ್ಮೂ, ಕಾಶ್ಮೀರ, ಲಢಾಖ್ ಮತ್ತು ಗಿಲಗಿತ್‌ದ ಇತಿಹಾಸವೂ ಒಂದೇಯಾಗಿ ಇದೆ

ಆದರೂ ೧೯೬೨ನೇ ಪ್ರಾಣಾಂತರ ವರ್ಷದಲ್ಲಿ ಚೀನೀಯರು ಅದರ ಮೇಲೆ ಆಕ್ರಮಣ ನಡೆಸಿ, ನಮ್ಮ ಭೂಪ್ರದೇಶದ ಮೇಲೆ ರಾಜನಕ್ಕೆ ವಿರೋಧವಾಗಿ ಅಧಿಕಾರ ನಡೆಸುತ್ತಿದೆ ನಾವೀಗ ೧೯೬೨ನೇ ಇಸವಿಯ ದುರ್ಘಟನೆಯ ಪುನರಾವರ್ತನೆಯನ್ನು ಕಾಣುತ್ತಿದ್ದೇನೆ. ವ್ಯತ್ಯಾಸವೆಂದರೆ ಇದೀಗ ಆಕ್ರಮಣ ನಡೆಯುತ್ತಿರುವದು ಪಾಕಿಸ್ತಾನದಿಂದಲ್ಲ, ಆದರ ಬದಲು, ಕೆಂಪು ಚೈನಾದಿಂದ, ಲಢಾಖ್ ಸೇರಿರುವ ಭೂಭಾಗದ ಮೇಲೆ ಕೆಂಪು ಚೈನಾದ ಸಾಮ್ರಾಜ್ಯಲಾಲಸೀ ಆಶಾದೃಷ್ಟಿ ಬಿದ್ದಿದೆ. [ಆದನ್ನೆದುರಿಸಲು ಭಾರತೀಯರೆಲ್ಲರೂ ಭಿನ್ನಭಾವಗಳನ್ನು ಹೂರ್ಣ ಮರೆತು ವಿರಾಟಪುರುಷರ್ಧಂತೆ ಒಂದಾಗಬೇಕಾಗಿಯದೆ. ಈ ಒಕ್ಕಟ್ಟು ಇಂದಿಗೆ ಮಾತ್ರವಲ್ಲ, ಅನವರತವೂ ಇರಬೇಕು. ಅದ ಕ್ಕಾಗಿಯೇ ಮುನ್ನೆಚ್ಚರಿಕೆಯಿಂದಲೇ ಸ್ವಾವಿ-ವಿನೇಕಾನಂದರು—ಕಬ್ಬಿಣದಮೊಸ ಖಂಡಗಳೂ, ಉಕ್ಕಿನ ನರನಾಡಿಗಳೂ ರುವ ಮೂರು ಧೀರ ಪುರುಷರಿದ್ದಲ್ಲಿ ಭಾರತದ ಮುಖವನ್ನೇ ಬದಲಾಯಿಸಿಯೇನೆಂದು—ಸೂಚನೆ ಕೊಟ್ಟಿದ್ದರು. ಚೈನಾ ಕೆಂಪು ಹೆಬ್ಬಾತು ಸ್ವಲ್ಪ ನುಂಗಿ ಸ್ವಲ್ಪ ನಿದ್ರಿಸುತ್ತಿದೆಯೊದಲೂ ಪುನಃ ಬರುವದರ ದರಲ್ಲಿ ಸಂದೇಹವಿರುವದಿಲ್ಲ ಭಾರತೀಯರೆಲ್ಲರೂ ಒಂದಾಗುವದು ತೀರಾ ಅವಶ್ಯಕವಿದೆ. —ಶಿ. ಶ.]

ಶಿವಶಂಕರ, ಮಂದಾರು.

(ಶ್ರೀ ವಿಠೋಬ್ರ ಕೆ. ಸರೀನ್ ಪಾಂಚಜನ್ಯ ವಿಶೇಷಾಂಕ)

ಇದ್ದದ್ದು ಇದ್ದ ಹಾಗೆ....

ಪೀಕಿಂಗ್‌ನ ಕನ್ನಡಿಯ ಮೂಲಕ

ನಂಬಿದರೆ ನಂಬಿ ಬಿಟ್ಟರೆ ಬಿಡಿ

"ಚೀಣಾವು ಭಾರತೀಯ ಪ್ರದೇಶದಲ್ಲಿ ಒಂದಂಗುಲದಷ್ಟು ಜಾಗವನ್ನೂ ಆಕ್ರಮಿಸಿಕೊಂಡಿಲ್ಲ, ಆಕ್ರಮಿಸಲೂ ಆಪೇಕ್ಷಿಸುವುದಿಲ್ಲ"—ಉಪ ಪ್ರಧಾನ ಮಂತ್ರಿ ಚೆನ್ ಯಿ—ಪೀಕಿಂಗ್ ರೇಡಿಯೋದಿಂದ ಉದ್ಧೃತ.

"ಚೀಣಾವು, ಉಭಯ ರಾಷ್ಟ್ರಗಳೂ ಒಪ್ಪಿಕೊಂಡಿದ್ದ ಪಂಚಶೀಲ ತತ್ವ ಸದ್ಭಾವನೆ ಮತ್ತು ಸ್ನೇಹಕ್ಕೆ ತಿಲಾಂಜಲಿಯಿತ್ತು ದುರಾಕ್ರಮಣವನ್ನು ಮಾಡಿದೆ; ತನ್ನ ಶಕ್ತಸ್ತ್ರ ದಳಗಳಿಂದ ಭಾರತದ ನೇಲೆ ದೊಡ್ಡ ಪ್ರಮಾಣದ ಧಾಳಿಯನ್ನು ಆರಂಭಿಸಿದೆ"—ಲೋಕ ಸಭೆಯಲ್ಲಿ ಪ್ರಧಾನ ಮಂತ್ರಿ ನೆಹರೂ.

ಂ ಂ ಂ ಂ

ಭಾರತೀಯರಿಗೆ ಸ್ಪಷ್ಟವಾದ ದೃಷ್ಟಿ

"ಭಾರತದ ಇತಿಹಾಸದಲ್ಲಿ ಹಿಂದೆಂದೂ ಸಂಭವಿಸಿರದಂತಹ ದೊಡ್ಡ ಚಕ್ರಾಧಿಪತ್ಯವನ್ನು ಸಂಸ್ಥಾಪಿಸುವ ಮಹತ್ವಾಕಾಂಕ್ಷೆ ನೆಹರೂರವರ ಸತತ ಪ್ರಯತ್ನ.... ಭಾರತೀಯ ಜನತೆಗೆ ಸ್ಪಷ್ಟವಾದ ದೃಷ್ಟಿಯಿದೆ. ನೆಹರೂರವರ ಯೂವ ಶಕ್ತಿಯುತವೂ ಭಾರತದ ವಿಶಾಲ ಜನತೆಯನ್ನು ಮೋಸಗೊಳಿಸಲಾರದು — ಪೀಕಿಂಗ್‌ನ ಪೀಪಲ್ಸ್ ಡೈಲಿ.

"....ನೆಹರು, ರಾಜ್ಯ ವಿಸ್ತರಣೆದಾಹಿಯಲ್ಲ, ಸಮರಾಕಾಂಕ್ಷಿಯಲ್ಲ, ಸಾಮ್ರಾಜ್ಯಶಾಹಿಪರವಾದವರೂ ಅಲ್ಲ. ಅವರು ಇಂದು, ಕೊಟ್ಯಾಂತರ ಶಾಂತಿಪ್ರಿಯರಾದ ಭಾರತೀಯ ಜನತೆಯ ಆಭಿಲಾಷೆಯನ್ನು ವ್ಯಕ್ತಪಡಿಸುತ್ತಾರೆ."—

ನವದೆಹಲಿಯ ಕಮ್ಯೂನಿಸ್ಟ್ ವಾರಪತ್ರಿಕೆ

"ನ್ಯೂ ಏಜ್"—ಸಂಪಾದಕೀಯ.

ಕಹಿ—ಕಹಿ

"ಕಳೆದ ಕೆಲವು ದಿನಗಳಿಂದ ಭಾರತ ಸರ್ಕಾರದವರು ಚೀನೀ ರಾಷ್ಟ್ರೀಯರನ್ನು ಬಂಧಿಸುತ್ತಿರುವರು"—ರೇಡಿಯೋ ಪೀಕಿಂಗ್.

ನವದೆಹಲಿಯಲ್ಲಿರುವ ಚೀನಿ ನಿವಾಸಿಗಳು ಪ್ರಧಾನ ಮಂತ್ರಿಗಳಿಗೆ ೨೦೦ರೂ ಗಳನ್ನು ಖರ್ಚಿಸಿ, ಪತ್ರವೊಂದನ್ನು ಬರೆದು ಅದರಲ್ಲಿ, "ಭಾರತದ ಪವಿತ್ರ ನೆಲದ ಮೇಲೆ, ಚೀನೀಯರು ಮಾಡಿರುವ ನಗ್ನ ದುರಾಕ್ರಮಣದ ವಿರುದ್ಧ ಭಾರತ ಸರ್ಕಾರದವರು ಕೈಗೊಂಡಿರುವ ಕಾರ್ಯನೀತಿಗೆ ಪೂರ್ಣ ಬೆಂಬಲ ನೀಡುವುದಾಗಿಯೂ ಭಾರತೀಯ ಪ್ರದೇಶದ ಮೇಲೆ ಚೀನೀ ಸರ್ಕಾರವು ಆಕ್ರಮವಾಗಿ ಹೆಣ್ಣು ಸ್ಥಾಪಿಸಿ ನೆಲೆಸತೊಡಗಿರುವುದನ್ನು ತಾವು ತೀವ್ರವಾಗಿ ಖಂಡಿಸಿರುವುದಾಗಿ ತಿಳಿಸಿರುವರು,

—ದೆಹಲಿ ದಿನಪತ್ರಿಕೆಯಲ್ಲಿನ ಸುದ್ದಿ.

ಗಿಳಿಯ ಪಾಠ

"ಕಳೆದ ಮೂರು ವರ್ಷಗಳಿಗೂ ಹೆಚ್ಚು ಅವಧಿಯಲ್ಲಿ ಕಂಡುಕೊಂಡ ಕಠಿಣ ಸತ್ಯವೆಂದರೆ, ತ್ವರಿತಗತಿಯ ಸಾಹಸಿಗಳ ವಿರುದ್ಧ ಆಗತ್ಯವಾದ ಹೋರಾಟವನ್ನು ನಡೆಸಿ, ಅವರನ್ನು ಕೆಂಚ ಮಟ್ಟಿಗೆ ಸಾಮ್ಯಗೊಳಿಸುವುದು ಸಾಧ್ಯನೆಂಬ ಅಂಶ."

—ಪೀಕಿಂಗ್ ರೇಡಿಯೊ.

ಆದರೆ, ಆಧ್ಯಕ್ಷ ಮಾವೊ, ಅವರಿಗೂ ಮುಂದಿದ್ದಾರೆ. ಅವರ "ಯುದ್ಧ ಮತ್ತು ವ್ಯೂಹ ಸಮಸ್ಯೆಗಳು" ಎಂಬ ಪುಸ್ತಕದಲ್ಲಿ "ರಾಜಕೀಯ ಶಕ್ತಿ ಬಂದೂಕಿನ ನಳಿಕೆಯಿಂದ ಸಂವರ್ಧಿಸುತ್ತಿದೆ....ಬಂದೂಕಿನಿಂದ ಮಾತ್ರವೇ ಇಡೀ ವಿಶ್ವವನ್ನು ಪುನರಪಿ ರೂಪಿರಬಹುದು ಎಂದು ಬೇಕಾದರೂ ನಾವು ಹೇಳಬಹುದು."ಎಂದಿದ್ದಾರೆ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಡಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ವಿ| ಶ್ರೀ. ಕೊರಡ್ಡಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕ ರವಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಿನ್ಲಿ ಶ್ರೀನಿವಾಸ್ ಬುಕ್‌ಸ್ಟಾ, ಸ್ಟೂಲ್ ಬುಕ್ ಕೊ., ಕೆನರಾ ಕೊಲೆಜ್ಟ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿ ಯೂ, ಪುತ್ತೂರಲ್ಲಿ ಪೊಸ್ಕುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ನಿರ್ವಿಕಾರ ಮನಸ್ಸು ನಿರ್ವ್ಯಾಧಿ ಶರೀರ

(ಅನೇ ಹುಟದಿಂದ)

ಪಚಾರದಿಂದ್ಕೂಡಿ ಈ ರೀತಿಯು ಕುರುಡತೆಯನ್ನು ದೂರಮಾಡಬಹುದು.

ಇದೇ ರೀತಿ ನಮ್ಮ ಮಿದುಳಿನಲ್ಲಿ ಹುಟ್ಟುವ ಬೇರೆ ವಿಕಾರಗಳ ಕಾರಣದಿಂದ ಇತರ ಕೆಲವು ದೃಷ್ಟಿದೋಷಗಳೂ ಉತ್ಪನ್ನವಾಗಬಹುದು. 'ಸಿಜೋಫ್ರೆನಿಯಾ' ಎಂಬಲ್ಲಿರುವ ಮನುಷ್ಯರಿಗೆ ಕೋಣೆಯಲ್ಲಿರುವಾಗ ಆದರ ಗೋಡೆಗಳು ಒಮ್ಮೆಲೆ ಹತ್ತಿರ ಬಂದಂತೆ ಭಾಸವಾಗಿ ತಾವು ಆ ಗೋಡೆಗಳ ಮಧ್ಯೆ ಸಿಕ್ಕಿ ನುಜ್ಜುಗುಜ್ಜಾದಂತೆ ಅನುಭವಿಸುತ್ತಾರೆ ವಿಭ್ರಮೆಯಲ್ಲಿರುವ ರೋಗಿಗೆ ತನ್ನ ಬಳಿಯಲ್ಲಿರುವ ವಸ್ತುಗಳು ಸಾವಿರ ಪಾಲು ದೊಡ್ಡದಾಗಿರುವಂತೆ ಕಾಣುತ್ತವೆ. ನಾವು ಅತ್ಯಂತ ಗಹನವಾದ ಚಿಂತೆಯಲ್ಲಿ ಮುಳುಗಿದ್ದರೆ ಯಾ ಇತರ ಸಮಸ್ಯೆಗಳಿಗೆ ಯಾವ ಪರಿಹಾರವನ್ನು ಹುಡುಕಲು ಅಸಫಲರಾಗಿದ್ದರೆ, ನಮಗೆ ಸುತ್ತಮುತ್ತಲಿನ ವಸ್ತುಗಳು ಕಾಣುವುದೇ ಇಲ್ಲ. ಒಂದು ವೇಳೆ ಕಂಡರೂ ಅವು ಮಂಮಯವಾಗಿ, ಅಸ್ಪಷ್ಟವಾಗಿ ಕಂಡುಬರುತ್ತವೆ ಜ್ವರ, ಬಹಳ ಬಳಲಿಕೆ ಕಡು ಔಷಧಿಗಳು ಮತ್ತು ಹಸಿವೆ ಬಾಯಾರಿಕೆಗಳೂ ನಿಮ್ಮ ದೃಷ್ಟಿಯು ನೋಲೆ ಬಹಳ ಪರಿಣಾಮ ಮಾಡಬಲ್ಲವು.

ಮಿದುಳು ನಮ್ಮ ದೃಷ್ಟಿಗೆ ಮೂಲ ತತ್ವವಾಗಿದ್ದರೂ ಹೆಚ್ಚಿನ ಎಲ್ಲಾ ದೃಷ್ಟಿ ದೋಷಗಳೂ ಕಣ್ಣುಗಳು ಕೆಡುವುದರಿಂದಲೇ ಉತ್ಪನ್ನವಾಗುತ್ತವೆ ಹೊರತು ಮೂಲ ಸಿಕ ದೋಷಗಳಿಂದಲ್ಲ. ಕಡಿಮೆ ಕಾಣುವುದು ಯಾ ದೂರದ ವಸ್ತುಗಳು ದೃಷ್ಟಿಗೆ ಬಾರದೆ ಇರುವುದು. ಜ್ವಾಲೆ, ಹೊಗೆ, ಒಮ್ಮೆಯೇ ಎರಡು ಆಕೃತಿಗಳು ಕಂಡುಬರುವುದು ಮೊದಲಾದುವುಗಳು ಪೂರ್ಣ ಅಕ್ಷಿ ದೋಷದ ಚಿಹ್ನೆಗಳಾಗಿವೆ.

ನಾವು ಬೇರೆ ಬೇರೆ ಬಣ್ಣಗಳನ್ನು ಯಾವ ಪ್ರಣಾಲಿಯಿಂದ ನೋಡುತ್ತೇವೆ ಎಂಬುದು ಇನ್ನೂ ರಹಸ್ಯವಾಗಿಯೇ ಉಳಿದಿದೆ. ಇವಕ್ಕೋಸ್ಕರ ಸಾಮಾನ್ಯವಾಗಿ ಬಣ್ಣದ ಕುರುಡತೆಯನ್ನು ಹೋಗಲಾಡಿಸಲು ಈ ತನಕ ಯಾವ ಉಪಾಯವೂ ಸಿಗಲಿಲ್ಲ. ವೈಜ್ಞಾನಿಕರ ಅಭಿಪ್ರಾಯದಂತೆ ಈ ಬಣ್ಣದ ಕುರುಡತೆಯು ವಂಶಪಾರಂಪರ್ಯವಾಗಿ ಬರುತ್ತದೆ. ಮತ್ತು ಅದು ಮಗುವಿನ ವ್ಯಕ್ತಿತ್ವದಲ್ಲಿ ಜನ್ಮದಾರಭ್ಯ ಬಂದ ದೋಷವಾಗಿಯೇ ಉಳಿಯುತ್ತದೆ.

ಬಣ್ಣಗಳ ವಿಚಾರದಲ್ಲಿ ಅತ್ಯಂತ ವಿಚಿತ್ರವಾದ ಹಾಗೂ ಮನೋರಂಜಕ ದೋಷಗಳು ಆಗಿವೆ. ಇತ್ತೀಚೆಗೆ ಒಬ್ಬ ವಾನೀ ಶೋಧಕನು ಯಾವುದಾದೂ ಕೆಲವು ವಸ್ತುಗಳು ಹಳದಿ, ಬಿಳಿ ಯಾ ಹಸುರು ಬಣ್ಣದಲ್ಲಿದ್ದರೆ, ಅವು ನೀಲಿ ಯಾ ಕಪ್ಪು ಬಣ್ಣದ ಸಮೂಹ ಅಳತೆಯು ವಸ್ತುಗಳಿಂತ ಅತ್ಯಂತ ದೊಡ್ಡದಾಗಿಯೂ ಸುಂದರವಾಗಿಯೂ ತೋರುತ್ತದೆ ಎಂದು ಶೋಧಿಸಿದ್ದಾನೆ. ನೇತ್ರನಿನ ವ್ಯಾಪಾರಿಗಳು ಹೆಚ್ಚಾಗಿ ಈ ಪದ್ಧತಿಯ ಉಪಯೋಗವನ್ನು ಜಾಹೀರಾತುಗಳಲ್ಲಿ ಮಾಡುತ್ತಾರೆ! "ಮಹಿಳೆಯರಿಗೋಸ್ಕರ ಶುಭ ಸಮಾಚಾರ! ನಮ್ಮ ಕಡು ಬಣ್ಣದ ವಸ್ತ್ರಗಳನ್ನು ಧರಿಸಿ ನಿಮ್ಮ ಸ್ಕೂಲತೆಯನ್ನು ಅಡಗಿಸಿಕೊಳ್ಳಿರಿ"

ಕಣ್ಣು ನಿಮ್ಮ ದೇಹ ಪ್ರಣಾಲಿಯಿಂದ ವಿಶೇಷವಾಗಿ ವಿದುಳಿನಿಂದ ಅತ್ಯಧಿಕ ಸಂವೇದನಶೀಲ ಸಂಬಂಧ ಇಟ್ಟುಕೊಳ್ಳುತ್ತದೆ. ಆದುದರಿಂದಲೇ ಕಣ್ಣಿನಲ್ಲಿ ಕಾಮು ಕ್ರೋಧ, ಸಂತೋಷ, ಹುಸ್ಸಿರು, ಪ್ರೇಮ ವಾಸನೆ, ದ್ವೇಷ ಮೊದಲಾದುವುಗಳು ಮೂರ್ತಿಮತ್ತಾಗಿ ಇರುತ್ತವೆ. ಕಣ್ಣು ಪ್ರಕೃತಿಯ ಯಾ ಭಗವಂತನ ಅಮೂಲ್ಯ ಕೊಡುಗೆಯಾಗಿದೆ. ಇದರಿಂದಲೇ ನಮ್ಮ ವಾರ್ತನಿಕರು ಆಕಾಶಬ್ರಹ್ಮನಿಗೂ 'ದೃಷ್ಟಾ' ಎಂಬ ಬಿರುದನ್ನು ಕೊಟ್ಟಿದ್ದಾರೆ, ನಿಜವಾದ ಜ್ಞಾನದ ಪರಮ ಸಾಧನವಾದ ಕಣ್ಣಿನ ರಕ್ಷಣೆಯು ಕೇವಲ ಒಂದೇ ಒಂದು ಉಪಾಯವೆಂದರೆ— ವಿಕಾರಹೀನ ಮನಸ್ಸು ಮತ್ತು ವ್ಯಾಧಿರಹಿತ ಶರೀರ.

ಪ್ರಚಲಿತ ಪ್ರಸಂಗ

ಭಾರತೀಯರ ದೃಢ ಸಂಕಲ್ಪ— ಪೀಕಿಂಗಿಗೆ ಪರಮಾಶ್ಚರ್ಯ

ಪೀಕಿಂಗ್ ರೇಡಿಯೋ ಮೂಲಕ ಜನತಾಂಗದ ಸ್ವಾತಂತ್ರ್ಯದ ಪ್ರತಿಪಾದಕನೆಂದು ಹೇಳಿಕೊಳ್ಳುತ್ತಿದೆ.

ನೀವು ನಂಬಬಹುದು ಅಥವಾ ನಂಬದಿರಬಹುದು. ಆದು ನಮ್ಮ ಅವಸ್ಥೆಯ ಬಗ್ಗೆ ಕಣ್ಣೀರು ಸುರಿಸುತ್ತಿದೆ ಮಂಗ್ಕ್ ಜನರಿಗೆ ಭಾರತದ ರಕ್ಷಣಾ ಆಜ್ಞೆಯು ಸಂಕೋಲೆಯನ್ನು ತೊಡಿಸಲಾಗಿದೆ ಎಂದು ಹೇಳುತ್ತಿದೆ. ನಮ್ಮ ಸ್ವಾತಂತ್ರ್ಯಗಳಿಗೆ ಚ್ಯುತಿ ಬಂದಿದೆಯೆಂದು ಪೀಕಿಂಗ್ ಗೋಳಿಡುತ್ತಿದೆ, ನಾವು ಸಮರಕ್ಕಾಗಿ ಸನ್ನಾಹ ಮಾಡುತ್ತಿದ್ದೇವೆಂದು ಹೇಳುತ್ತಿದೆ.

ಆಕ್ರಮಣಕಾರಿ ಚೀನಾದ ಮೃದು ಭಾವನೆಗಳು ನಮ್ಮ ಪರವಾಗಿ ಪ್ರೇರಿಸಿ ಸಲ್ಪಡುತ್ತಿವೆ. ಇದೆಲ್ಲ ತೋಳ ತಾನು ನುಂಗಬೇಕೆಂದಿರುವ ಕುರಿಮರಿಗಾಗಿ ತೋಳ ಕಿರುವನ್ನೇ ಹೃದಯಸ್ಪರ್ಶಿಯಾಗಿದೆ.

ಈ ಪರಿಸ್ಥಿತಿಯಲ್ಲಿ ಭಾರತದ ಸ್ವರೂಪ ಪೀಕಿಂಗಿನ ಆಭೀಷ್ಟದಂತಿಲ್ಲ ನೆಂಬುದು ಎಲ್ಲರಿಗೂ ತಿಳಿದಿದೆ, ಅದು ಪೀಕಿಂಗಿನ ಎಣಿಕೆಯು ವಿರುದ್ಧವಾಗಿದೆ, ಜೆನ್ಟೈಯಪ್ಪನ ಕುಲಭವಾಗಿ ಕತ್ತರಿಸಲ್ಪಟ್ಟ ಚಾಕುವಿನಂತೆ ನುಸುಳುಗ್ಗ ಬಹುದೆಂದು ಅದು ಸಜ್ಜವಾಗಿಯೇ ಯೋಚಿಸಿತು. ಏಕೆಂದರೆ ನಾವು ಅನಿರೀಕ್ಷಿತವಾಗಿ ಸಿಕ್ಕಿಬಿದ್ದೆವು. ನಾವು ನಮ್ಮ ಸೈನ್ಯವನ್ನು ಸ್ಥಳ ಸ್ವೆಗೆಳಿಸಿ ಪ್ರತಿಭಟಿಸಲು ಸಾಧ್ಯವಾಗುವುದಿಲ್ಲವೆಂದು ಅವರು ಆಶಿಸಿದ್ದರು.

ಆದರೆ ಚೀನಾದ ಮುಖಂಡರು ಎಲ್ಲೋ ದೊಡ್ಡ ತಪ್ಪು ಮಾಡಿದರು. ಬಹುಶಃ ಆ ತಪ್ಪು ಅನಿವಾರ್ಯವಾಗಿತ್ತು ಚೀಜೀಯರ ಆಲೋಚನಾ ವಿಧಾನದಲ್ಲಿ ಅದು ಸ್ವಾಭಾವಿಕವೇ ಸರಿ. ಸ್ವಾತಂತ್ರ್ಯ ವೆಂದರೆ ಅವರದು ಬೇರೆ ಅರ್ಥವಿದೆ. ಸ್ವಾತಂತ್ರ್ಯ ರಕ್ಷಣೆಗಾಗಿ, ಭಾರತ ಭೂಮಿಯ ಐಕ್ಯದ ಸುರಕ್ಷಣೆಗಾಗಿ ಭಾರತೀಯರು ನೂಡಿರುವ ದೃಢ ಸಂಕಲ್ಪ ಅವರ ಎಣಿಕೆಗೆ ಬಾರದು, ಆದ್ದರಿಂದ ಅವರು ನಮ್ಮ ಪ್ರತಿಕ್ರಿಯೆಗಳಿಂದ ಭೀತಿಗೊಂಡಿದ್ದಾರೆ.

ವಿರೋಧಿಗಳ ಶಿಕ್ಷೆಯನ್ನು ಅಲ್ಪವಾಗಿ ಕಾಣುವುದು ಚೀಜೀಯರ ಪ್ರಚಾರ ಸಾಧನದ ವೈಖರಿ, ಆದರೆ ತಾವು ಹೇಳುವುದನ್ನೆಲ್ಲಾ ನಿಜವೆಂದು ನಂಬುವುದು ಚೀಜೀಯರಿಗೆ ಅಸಾಮಾನ್ಯರಿ. ವಾಸ್ತವಿಕ ಚಿತ್ರವನ್ನು ನೋಡಲಾರದಷ್ಟು ಅವರ ದೃಷ್ಟಿ ಮಂದವಾಗಿದೆಯೇ?

ಇದೇನು ಅವರಿಗೆ ಕೀರ್ತಿ ತರುವುದಿಲ್ಲ, ಸಮೃದ್ಧಾನವನ್ನೂ ತರುವುದಿಲ್ಲ. ಇಡೀ ದೇಶವೇ ಶತ್ರುಪಾಣಿಯೂಗಿ ಅವುಗೆ ದುರಾಗಿ ನಿಂತಿದೆ.

ಇಲ್ಲೇನು ಬಲಾತ್ಕಾರದ ಸೈನ್ಯ ಜನವಣೆಯೂಗಿಲ್ಲ. ರಾಷ್ಟ್ರವೆಲ್ಲಾ ಸೈನ್ಯಕ್ಕೆ ಸೇರಲು ಮೊರೆಯಿಡುತ್ತಿದೆ. ಇದರಿಂದ ಪೀಕಿಂಗಿಗೆ ಆಶ್ಚರ್ಯವಾಗದೆ ಮತ್ತೇನು?

ಜನರು ತಮ್ಮ ಸ್ವಾತಂತ್ರ್ಯದ ವೇಲೆ ವಿಧಿಸಲಾಗಿರುವ ಕೆಲವು ನಿಬಂಧನೆಗಳನ್ನು ಸ್ವಾಗತಿಸಿದ್ದಾರೆ. ಈ ಸಂಕಲ್ಪಾ ಸಮಯದ ದ್ವಜರಾಷ್ಟ್ರೀಯ ಪ್ರಯತ್ನದಲ್ಲಿ ಪಾಲುಗೊಳ್ಳುವುದೊಂದೇ ಅವರ ಅಪೇಕ್ಷೆಯಾಗಿದೆ. ಈ ಪ್ರಯತ್ನಗಳ ವಿರುದ್ಧ ಬರುವ ಎಲ್ಲ ಅಡ್ಡಿ ಆಡಚಣೆಗಳನ್ನು ತೊಡೆದು ಹಾಕಬೇಕು, ಇದು ತ್ಯಾಗವಲ್ಲ. ಹಸನ್ಮುಖದಿಂದ ನೀಡಿನ ಕಾಣಿಕೆ

ಕಟ್ಟುಪಾಡಿನಲ್ಲಿ ಬೆಳೆದ ಚೀಜೀಯರಿಗೆ, ಈ ಸ್ವಯಂ ಪ್ರೇರಣೆಗಳು ಭಯಂಕರ ಪರಿಣಾಮ ತೋರಿದವು, ತಾನೇ ಪರಿಹಾರಕ್ಕೆ ಈಡು ಮಾಡಿರುವ ತತ್ವವೊಂದರ ಬೆನೆನಲ್ಲಿ ಅವರು ಭಾರತದ ರಕ್ಷಣಾ ಆಜ್ಞೆಯನ್ನು ಟೀಕಿಸುತ್ತಿದ್ದಾರೆ.

ಮರುದಿನವೇ ಆಕೆ ಮಂಗಲ ಸ್ನಾನ ಮಾಡಿ ದೇವರ ಪೂಜೆ ಕೈಗೊಂಡು, ಆ ಮಂತ್ರವನ್ನು ಪಠಿಸಿದಳಂತೆ. ಮಂತ್ರದ ಪಠಣ ಮುಗಿಯುವುದರೊಳಗಾಗಿಯೇ ಶಂಖವಾದ್ಯಗಳ ಧ್ವನಿ ಕೇಳಿಸತೊಡಗಿ ಆ ಚಿಕ್ಕ ದೇವರ ಕೋಣೆಯಲ್ಲೇ ಪಿತೃಗಳೆಲ್ಲರೂ ಬಂದು ಸೇರಿದರಂತೆ. ವಿಶಾಲಾಕ್ಷಿಯ ತಂದೆಯ ತಂದೆ! ಚಿಟ್ಟಿಯೂರರ ತಂದೆಯ ತಂದೆ! ಹೀಗೆ ಎಲ್ಲರೂ ಅಲ್ಲಿ ಬಂದಿದ್ದರಂತೆ! ಅದಲ್ಲದೆ ಒಂದು ಕಡೆ ಪುಷಿವರೂ ಪಂಚ ಪಾಂಡವರೂ, ಮತ್ತೊಂದು ಕಡೆ ಬಲರಾಮ, ಕೃಷ್ಣ, ಪರಶುರಾಮ ಇವರುಗಳೂ, ಅಲ್ಲಿಗೆ ಬಂದು ಕೂಡಿತಾಗ, ಆ ಕೋಣೆಯಲ್ಲಿ ಸ್ಥಳವೇ ಇಲ್ಲದಂತಾಯಿತಂತೆ! ಈ ಅದ್ಭುತ ಪವಾಡದ ದೃಶ್ಯವನ್ನು ಕಂಡ ವಿಶಾಲಾಕ್ಷಿಯು "ನಾರಾಯಣ!" ಎಂದು ಚೀತ್ಕರಿಸಿ ಮೂರ್ಛೆಹೋದಳಂತೆ.

ಪತ್ನಿಯ ಚೀತ್ಕಾರ ಕೇಳಿಸುವುದೂ ಚಿಟ್ಟಿಯೂರರು ಮನೆ ಸೇರುವುದೂ ಸರಿಯಾಯಿತು. ಅವರು ಒಳಗೆ ಬಂದು ನೋಡುತ್ತಲೇ, ವಿಚಿತ್ರವಾದ ಉಡುಪನ್ನು ಧರಿಸಿದ್ದ ಹಲವರು ದೇವರ ಕೋಣೆಯಲ್ಲಿ ನೆರೆದಿರುವುದನ್ನು ಕಂಡು ಚಿಟ್ಟಿಯೂರರಿಗೆ ಗಾಬರಿಯಾಯಿತು! ಎಲ್ಲರೂ ಖದ್ದರ್ ಬಟ್ಟೆ ಧರಿಸಿದ್ದುದನ್ನು ನೋಡಿದ ಚಿಟ್ಟಿಯೂರರಿಗೆ 'ಇವರು ಗಾಂಧೀಜಿಯವರ ಶಿಷ್ಯರಿರಬೇಕು' ಎಂಬ ಆಲೋಚನೆಯೂ ಉಂಟಾಯಿತು. ಅಲ್ಲಿ ಮಲಗಿದ್ದ ತನ್ನ ಪತ್ನಿಯನ್ನೆಬ್ಬಿಸುತ್ತ ಚಿಟ್ಟಿಯೂರರು ಅಲ್ಲಿ ನೆರೆದ ಮಹಾಶಯರಿಗೆ ಹೇಳಿದರು— 'ನೋಡಿ! ನಿಮ್ಮ ಗಲಾಟೆ ಇಲ್ಲಿ ಬೇಡ. ಪೋಲೀಸಿನವರು ಎಲ್ಲಿಯಾದರೂ ಕಂಡರೆ ನನಗೆ ಪ್ರಾಣಕ್ಕೆ ಬಂದೀತು! ಆ ಕಡೆಯ ಮನೆ ಒಬ್ಬ ವಕೀಲರದು. ತಾವುಗಳು ದಯವಿಟ್ಟು ಅಲ್ಲಿಗೆ ಹೋಗಬೇಕು" ಎಂದರು. ಆಗ ಅವರೆಲ್ಲರೂ ತಿಲಕಿಲನೆ ನಕ್ಕರಂತೆ! ಇದನ್ನು ನೋಡಿದ ಚಿಟ್ಟಿಯೂರರು—'ನೀವೆಲ್ಲ ನಗುತ್ತೀರಿ! ನಿಮಗೆ ಆಟ! ನೀವು ಜೈಲಿಗೆ ಹೋಗಲೂ ಸಿದ್ಧರಿರಬಹುದು. ಆದರೆ ನಾನು ಆದಕ್ಕೆ ತಯಾರಿಲ್ಲ! ನೀವು ಬೇಗನೆ ಇಲ್ಲಿಂದ ಹೊರಡಿ' ಎಂದರು. ಆಗ ಆ ಪಂಗಡದ ಜನರಲ್ಲಿ ವೃದ್ಧನೊಬ್ಬನು—'ಮಗೂ! ನಿನಗೇನೂ ತಿಳಿಯದಪ್ಪ! ನಾನು ನಿನ್ನ ತಂದೆಯ ತಂದೆಯಾಗಿದ್ದೇನಪ್ಪಾ! ನೀನೇಕೆ ಹೆದರುವೆ?' ಎಂದು ನುಡಿಯಲು ಚಿಟ್ಟಿಯೂರರು ದೃಢ ಸ್ವರದೊಡನೆ! 'ಸಾಕು ನಿಲ್ಲಿಸಿರಿ. ಇಲ್ಲಿಂದ ಬೇಗ ಹೊರಡಿ" ಎಂದರು. ಆಗ ಆ ವೃದ್ಧರು, ಖಾದಿಯ ಮಹತ್ತ್ವೆಯನ್ನು ಹೀಗೆ ವಿವರಿಸಿದರು— 'ನಮಗೂ ಈ ಖಾದೀ ಬಟ್ಟೆಯ ವಿಚಾರ ನಿನಗೇನು ತಿಳಿದಿದೆಯಪ್ಪ? ನಾವು ಈ ಭೂಲೋಕದಲ್ಲಿ ಜೀವನ ನಡೆಸುತ್ತಿದ್ದಾಗ ಈ ಖದ್ದರ್ ಬಟ್ಟೆಯನ್ನೇ ಧರಿಸುತ್ತಿದ್ದೆವು. ಇದು ನಮ್ಮ ದೇಶದ ಬಟ್ಟೆ! ಈ ಬಟ್ಟೆ ನಮ್ಮ ಮೈ ಮೇಲೆ ಇದ್ದ ಹಾಗೇ ನಾವು ಸತ್ತು ಸ್ವರ್ಗ ಸೇರಿದೆವು. ಈಗಲೂ ಅದೇ ಬಟ್ಟೆ ನಮ್ಮ ಮೈ ಮೇಲಿಪೆ! ಸ್ವರ್ಗದಲ್ಲಿ ಬಟ್ಟೆ ಹಳತಾಗುವುದೂ ಇಲ್ಲ; ಹರಿದು ಹೋಗುವುದೂ ಇಲ್ಲ! ನಿನ್ನ ಪತಿವ್ರತಾ ಶಿರೋಮಣಿಯಾದ ಹೆಂಡತಿ ನಮ್ಮನ್ನು ಕರೆದಳು! ಆದುದರಿಂದ ಬಂದೆವಪ್ಪಾ!" ಚಿಟ್ಟಿಯೂರರು ಈ ಮಾತುಗಳನ್ನು ಕೇಳಿ ಸ್ತಬ್ಧರಾಗಿ ಹೋದರು. ಆವರಿಗೆ ಆ ವೃದ್ಧನ ಮಾತಿನ ಮೇಲೆ ನಂಬಿಕೆಯುಂಟಾಗಲಿಲ್ಲ! ಕೊನೆಗೆ ಅಲ್ಲಿಯೇ ಇದ್ದ ಧರ್ಮರಾಯನಿಗೆ ವಂದಿಸಿ ಚಿಟ್ಟಿಯೂರರು ಕೇಳಿದರು—'ಇದೆಲ್ಲ ಏನು ಗ್ಯಾಪಿಕೊ? ನೀವು ಒಳ್ಳೆಯವರಂತೆ ತೋರುವಿರಿ. ಸ್ವಲ್ಪ ಹೇಳುವಿರಾ?'

'ನೀನೇನೂ ಗಾಬರಿಯಾಗಬೇಡ ಮಗೂ! ನಾವು ಈ ಲೋಕದಲ್ಲಿದ್ದಾಗ ಕೈ ಮಗ್ಗದ ಬಟ್ಟೆಯನ್ನೇ ಧರಿಸುತ್ತಿದ್ದೆವು. ಆಗ ನಮಗೆ ಬೇರೆ ಬಟ್ಟೆಯ ಪರಿಚಯವೇ ಇರಲಿಲ್ಲ! ಈಗ ನೀವೆಲ್ಲ ಆದನ್ನೇ ಖದ್ದರ್! ಖಾದಿ ಬಟ್ಟೆ! ಎಂದು ಹೇಳುತ್ತಿರುವಿರಿ! ಆಗ ನಮ್ಮ ಕಾಲದಲ್ಲಿ ಈ ಭಾರತದಿಂದ ನಾವು ಹೊರ ದೇಶಗಳಿಗೆ ಬಟ್ಟೆಯನ್ನು ಕಳುಹಿಸುತ್ತಿದ್ದೆವು! ಮಿಲ್ಲುಗಿಲ್ಲು ಆಗ ಒಂದೂ ಇರಲಿಲ್ಲ! ನೀವೂ ಕೂಡ ಈ ಬಟ್ಟೆಯನ್ನೇ ಧರಿಸಬೇಕಪ್ಪಾ! ಈಗ ನಿನ್ಮ ಈ ದೇಶದಲ್ಲಿ ದಾರಿದ್ರ್ಯವೇ ತುಂಬಿ ಹೋಗಿದೆಯೆಂದು ಕೇಳಿದ್ದೇನೆ! ಇದು ಹೌದೆ ಮಗು?' ಎಂದರು.

ಈಗ ಚಿಟ್ಟಿಯೂರರು ಅವರೆಲ್ಲರ ಬಟ್ಟೆಯನ್ನೂ ತಿಕ್ಕಿ ತಿಕ್ಕಿ ನೋಡಿದರು. ಬಲರಾಮ! ಕೃಷ್ಣ! ಎಲ್ಲರೂ ಖದ್ದರ್ ಬಟ್ಟೆಯನ್ನೇ ಧರಿಸಿದ್ದಾರೆಂಬುದು ಈಗ ಅವರಿಗೆ ಖಚಿತವಾಯಿತು. ಆಗ ಅವರು—'ಅರೆ! ಏನಾಶ್ಚರ್ಯವಿದು? ಈ ಗಾಂಧೀಜೀಯವರು ಮಾತ್ರ ಖದ್ದರ್ ಬಟ್ಟೆಯ ಪ್ರಚಾರ ಮಾಡುತ್ತಿರುವರೆಂದು ನಾನು ತಿಳಿದಿದ್ದೆ. ಆದರೆ ಈಗ ನೋಡುವಾಗ ನಮ್ಮ ಪೂರ್ವಜರೂ ಋಷಿ ಮುನಿಗಳೂ ಕೂಡ, ಖಾದೀ ಬಟ್ಟೆಯನ್ನೇ ಧರಿಸುತ್ತಿದ್ದರೆಂದು, ನನಗೆ ಖಚಿತವಾಯಿತು' ಎಂದ. ಹೇಳುತ್ತಿರುವಾಗಲೇ ಆ ಸ್ವರ್ಗೀಯ ಆನಂದದಿಂದ ಅವರ ಪತ್ನಿ ವಿಶಾಲಾಕ್ಷಿ ಚೇತರಿಸುತ್ತಿದ್ದಳು. ಆಗ ಈ ದಂಪತಿಗಳನ್ನು "ನಿನಗೆ ಶುಭವಾಗಲಿ" ಎಂದು ಹರಸುತ್ತ ನೆರೆದ ಆ ಮಹಾಶಯರು ಕ್ಷಣ ಮಾತ್ರದಲ್ಲಿ ಅದೃಶ್ಯರಾದರಂತೆ!"

ಹೀಗೆ ಈ ಕಥೆ ಮುಗಿದಾಗ ಓದುಗರೂ ಸಹ ಅತ್ಯಂತ ಆಶ್ಚರ್ಯದಲ್ಲಿ ಮುಳುಗಿರುತ್ತಾರೆ! ಆದರೆ ಶ್ರೀ ರಾಜಾಜಿಯವರು ಕೊನೆಗೆ—'ನಮ್ಮ ಪೂರ್ವಜರು ಕೈಮಗ್ಗದ ಖಾದೀ ಬಟ್ಟೆಯ ಹೊರತು, ಬೇರೆಯಾವ ಬಟ್ಟೆಯನ್ನೂ ಧರಿಸುತ್ತಿರಲಿಲ್ಲವೆಂಬುದು ಸತ್ಯದ ವಿಚಾರವಾಗಿದೆ. ಆವರು ಆ ಬಟ್ಟೆಯನ್ನು ಉಪಯೋಗಿಸುತ್ತಿರುವಾಗಲೇ ಸ್ವರ್ಗವಾಸಿಗಳಾದರು! ಈಗಲೂ ಸಹ ಅವರಿಗೆ ಆ ಖಾದೀ ಬಟ್ಟೆಯೇ ಆಧಾರವಾಗಿದೆ! ಹಾಗಾದರೆ ನಾವೂ ಸಹ ಅವರಂತೆಯೇ ಖಾದಿಯನ್ನೇ ಏಕೆ ಉಪಯೋಗಿಸಬಾರದು? ನಾವೂ ಸಹ ಖಾದಿಯನ್ನೇ ಬಳಕೆಗೆ ತಂದರೆ, ನಮ್ಮ ಪ್ರಾಚೀನ ಕಾಲದಮಹತ್ವವನ್ನು ಈಗಲೂ ಹೊಂದಬಹುದು!' ಎಂದು ಹೇಳಿ ಈ ಕಥೆಯ ಮೂಲ ಉದ್ದೇಶವನ್ನು ಸ್ವಷ್ಟಪಡಿಸುತ್ತಾರೆ!

ಈ ಕಥೆಯೊಂದು ಪವಾಡದಂತಿದ್ದು ಕೇವಲ ಮಂತ್ರೋಚ್ಚಾರಣೆಯಿಂದಲೇ ಪಂಚಪಾಂಡವರನ್ನೂ ಪಿತೃಗಳನ್ನೂ ಬರಮಾಡಿಕೊಂಡು ಆವರೊಡನೆ ಸಂಭಾಷಣೆ ನಡೆಸಲೂ ಸಾಧ್ಯವಾದ ಶ್ರೀ ರಾಜಾಜಿಯವರ ಈ ಕಲ್ಪನಾಶಕ್ತಿ, ಇಂದಿನ ಟೆಲಿವಿಜನ್ ನಂತಹ, ವೈಜ್ಞಾನಿಕ ಸಂಶೋಧನೆಗಳಿಗಿಂತಲೂ ಬಹಳ ಮುಂದುನರಿದಿದೆ! ಭಾವ ಪ್ರಧಾನವಾದ ಈ ಕಥೆ—'ಯದ್ಭಾವಂತದ್ಭವತಿ' ಎಂಬುದನ್ನು ದೃಢಪಡಿಸುವುದು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. A. 512/62

R. E. P. 507/61. O. S. 182/60

ಮುತ್ತಕ್ಕ ಹೆಂಗ್ಸು —ವಾದಿ ಅರ್ಜಿದಾರ್.

ಅಂಗರ ಯಾನೆ ರಾಮಣ್ಣ ಶೆಟ್ಟಿ ನಪ್ಪಿಂಗಳ ಕೈಗಳ ಮೊನ್ನಗ್. ಬಂಟ್ವಾಳ ತಾಲ್ಲೂಕ ಜೆಕ್ರಿಬೈಲ್ಯ ಗ್ರಾಮದ ಕುರುಂಬಳಾಜೆ —

—ಎದ್ರಿ—ಪ್ರತಿವಾದಿ.

ಎದ್ರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನಂದರೆ—

ನೀಲ್ಕುಂಡ ದಿಕ್ಕಿ ಮೇಲೆ ನಿನ್ಮ ಬಾಬ್ತು ಸ್ಟ್ರಾಸಿ ಏಲಂ ಬಗ್ಗೆ ಅರ್ಜಿಕ್ಷಿ ಸಿ ಅರ್ಜಿದಾರಳ ಕಡೆಯಿಂದ ಡಾಕ್ಟ್ರು ಮಾಡಿದ ಏಲಂ ಇಸ್ತಿಹಾರು ಪ ಏಲಂನ ಕರ್ಚುಗಳನ್ನು ನಿರ್ಣಯಿಸುವ ಬಗ್ಗೆ ಪ ಅರ್ಜಿದಾರಳೀಗೆ ಕರ್ಚಸ್ತಿಗೆ ನಿಲ್ಲುವರೆ ಪರ್ಮಿಶನ್ ಕೊಡಿಸಬೇಕಾಗಿ ಮಾಡಿದ ಅರ್ಜಿ ಸದರ ತಾ. 20—12—1962ಕ್ಕೆ ಯಿಟ್ಟರುವುದರಿಂದ ಆದಕ್ಕೆ ಆಕ್ಷೇಪಸಯಿದ್ರೆ ಆ ದಿನ ಸೆದ್ರಿ ಕೋರ್ಟು ಮುಂದೆ ಹಾಜರಾಗಿ ಉತ್ತರಿಸಿಕೊಳ್ಳುತಕ್ಕದ್ದು ಎಂತ ಈ ಮೂಲ್ಯ ತಿಳ್ಸಿಯದೆ.

(*Sd*) C. S. Shastry

Vakil for Plff.

ಪುತ್ತೂರು, ತಾ. 24—11—62.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಸುಖೀ ಜೀವನಕ್ಕೆ

ದಂಪತಿಗಳಲ್ಲಿ ಪ್ರೇಮವು ಅವಶ್ಯ

ಒಬ್ಬಾಕೆ ಸಹೋದರಿಯು ನನ್ನ ಬಳಿಗೆ ಬಂದಳು. ಅವಳಿಗೆ ೩ ಮಂದಿ ಮಕ್ಕಳಿದ್ದರು. ಅವಳ ಗಂಡನು ದೃಢಕಾಯನೂ ಸುಂದರನೂ ಆಗಿದ್ದರೂ ಅವಳ ಮುಖ ವೇಕೋ ಒಂದುದೋ ಒಂದು ಕಾರಣ ದಿಂದಾಗಿ ಯೂ ಚಿಂತೆ, ದುಃಖಗಳಿಂದಾಗಿ ಕಾಂತಿಹೀನವಾಗಿದೆ. ಗಂಡನಿಗೆ ತನ್ನ ಸರ್ವಸ್ವವನ್ನು ಅರ್ಪಿಸುವುದೆಂದರೆ ತನಗೆ ಬಹಳ ಕಷ್ಟವೂ, ವೇದನೆಯೂ ಆಗುತ್ತಿದೆಯೆಂದು ನನ್ನೊಡನೆ ಹೇಳಿದಳು. ಅವಳೆಂದೂ ಶಾಂತಿಯಿಂದ ಇದ್ದಿಲ್ಲ. ಮದುವೆಯ ಅನಂತರ ಒಂದು ತರದ ಅತೃಪ್ತಿಯಿಂದ ಅವಳು ಉತ್ಪೀಡಿತಳಾಗಿದ್ದಾಳೆ; ಚಿಂತಾಕ್ರಾಂತಳಾಗಿದ್ದಾಳೆ.

ನಾನು ಮನೋ ವೈಜ್ಞಾನಿಕ ರೀತಿಯಿಂದ ಅವಳನ್ನು ಪರೀಕ್ಷಿಸಿದ ಅನಂತರ ಅವಳ ಗಂಡನು ತನ್ನ ಕೆಲಸದಲ್ಲಿ ಮಗ್ನನಾಗಿರುತ್ತಾನೆಂದು ನಿಶ್ಚೈಸಿದೆ. ಪತಿಯೊಡನೆ ಪ್ರೇಮದಿಂದ ಸರಸ-ಸಲ್ಲಾಪ ಮಾಡಲು ಅವನಿಗೆ ಒಂದಿಷ್ಟು ಸಮಯ ವಿದ್ದಿಲ್ಲ. ಬಂದ ಸಂಬಳವನ್ನು ಹೆಂಡತಿಯ ಕೈಗೆಕೊಟ್ಟಿಸಿಬಿಡುತ್ತಿದ್ದನು. ಮಕ್ಕಳೂ ಅದುವು. ಇದರಲ್ಲಿ ತನ್ನ ಕೆಲಸವಾಯಿತೆಂದೂ ಭಾವಿಸಿ ಆಸ್ಥರಿಂದಲೇ ತೃಪ್ತನಾಗುತ್ತಿದ್ದ. ಆದರೆ ಅನಸ ಹೆಂಡತಿ ಮಾತ್ರ ಇದರಿಂದ ನೊಂದು, ಕೂಗಿ ದಿನೇ ದಿನೇ ಕೃಶವಾಗತೊಡಗಿದಳು.

ನವ್ಯ ದೇಶದಲ್ಲಿ ಈ ತರದ ಗಂಡಂದಿರಿಂದ ಹೆಂಡಂದಿರ ಮೇಲಾಗುತ್ತ ಬಲಾತ್ಕಾರದ ಕಥೆಗಳನ್ನು ಹೆಚ್ಚಾಗಿ ನಾವು ಕೇಳ-ತ್ತೀನೆ. ತನ್ನ ಗಂಡನು ತನ್ನನ್ನು ಪ್ರೀತಿಸುವುದಿಲ್ಲ; ತನ್ನ ಪ್ರೇಮಿಯಲ್ಲ; ತನ್ನನ್ನು ಪ್ರೀತಿಸುವ, ಆಕರ್ಷಿಸುವ ಯಾ ಮರುಳುಗೊಳಿಸುವ ಯತ್ನ ಮಾಡುವದಿಲ್ಲವೆಂದು ಹೆಂಗಸರು ತಿಳಿದರೆ ಸಾಕು; ಅವರ ಹೃದಯಕ್ಕೆ ದೊಡ್ಡ ಆಘಾತವಾದಂತೆ ಆಗುತ್ತದೆ. ಸ್ತ್ರೀಯು ತನ್ನ ಪ್ರೇಮವನ್ನು ಶಬ್ದಗಳಿಂದ ಪ್ರಕಟಿಸದೆ ತನ್ನ ಮೋಹಕವಾದ ಹಾವ-ಭಾವಗಳಿಂದ, ಮಧುರ ವರ್ತನೆಯಿಂದ ಪ್ರಕಟಿಸಿಕೊಳ್ಳಬೇಕು. ತನ್ನ ಗಂಡನಿಗೋಸ್ಕರ ರುಚಿಕರವಾದ ಭೋಜನವನ್ನು ತಯಾರಿಸುತ್ತಾಳೆ. ಪತಿಗೋಸ್ಕರ ಮನೆಯನ್ನು ಶೃಂಗರಿಸುತ್ತಾಳೆ; ಮಕ್ಕಳನ್ನು ಸಲಹುತ್ತಾಳೆ; ಅವನ ಸುಖಶಾಂತಿಯತ್ತ ತನ್ನ ವಿಶೇಷ ಗಮನವನ್ನು ಹರಿಸುತ್ತಾಳೆ ಅವನ ಪ್ರೇಮವನ್ನು ಬೆಳೆಸಲು ನಾನಾ ವಿಧಗಳಲ್ಲಿ ತನ್ನ ಪ್ರಯತ್ನಗಳನ್ನು ಮಾಡುತ್ತಾಳೆ. ಇದೇ ರೀತಿ ಪ್ರೇಮದ ವ್ಯವಹಾರವನ್ನು ಅವಳು ಗಂಡನಿಂದಲೂ ಅಪೇಕ್ಷಿಸುತ್ತಾಳೆ. ಕೇವಲ ಕೆಲವು ಸಂದರ್ಭಗಳಲ್ಲಿ ಪತ್ನಿಯೊಡನೆ ಮಾತನಾಡುವುದು; ಅವನ್ನು ಹೊಗಳುವುದರಿಂದ ಅವಳನ್ನು ಆಕರ್ಷಿಸಿಕೊಳ್ಳಲು ಸಾಧ್ಯವಿಲ್ಲ. ನೈಜವಿನಿಸದ ಪ್ರೇಮಪೂರ್ಣ ವರ್ತನೆಯಿಂದ ಮಾತ್ರ ಈ ರೀತಿಯ ಪ್ರೇಮವನ್ನು ಹೆಚ್ಚಿಸಿಕೊಳ್ಳಬಹುದು.

ಪದ್ಮಾಳ ಪತಿಯ ಹೆಸರು ಚಂದ್ರಕಾಂತನೆಂದು ಮನೆಯಲ್ಲಿ ಎಲ್ಲಾ ತರದ ಸುಖ-ಭೋಗಗಳಿದ್ದರೂ ಮೋಹಿನಿ ಗೇಕೋ ತನ್ನ ನೆರಮನೆಯ ಪುಷ್ಪಾಳ ಭಾಗ್ಯದ ಮೇಲೆ ಮತ್ಸರ. ಪುಷ್ಪಳ ಗಂಡ ಬರೀ ಒಂದು ಶಾಲೆಯಲ್ಲಿ ಅಧ್ಯಾಪಕರು. ಆದರೂ ಅವರ ವಾದ್ಯಾತ್ಮಿಕ ಜೀವನ ಬಹಳ ಸುಖದಿಂದ ಸಾಗುತ್ತಿದೆ. ಆದರೆ ನನ್ನ ಪತಿ — ನೋಹಿನಿ ಹೇಳುತ್ತಾಳೆ — "ಎಂದೂ ನನ್ನನ್ನು ತೃಪ್ತಿಗೊಳಿಸಲು ಯತ್ನಿಸುವುದಿಲ್ಲ. ನನ್ನ ಸುಖದತ್ತ ಎಂದೂ ದೃಷ್ಟಿ ಹರಿಸುವುದಿಲ್ಲ. ಪುಷ್ಪಾಳ ಪತಿಯಾದರೆ ಅವಳನ್ನು ವಾರಕ್ಕೊಮ್ಮೆ ಸಿನೇಮಾಕ್ಕೆ ಕರೆದುಕೊಂಡು ಹೋಗುತ್ತಾನೆ. ಸಾಯಂಕಾಲ ಬೇಗ ಬೇಗ ತನ್ನ ಶಾಲೆಯ ಕೆಲಸಗಳನ್ನು ಮುಗಿಸಿ ಮನೆಗೆ ಬರುತ್ತಾನೆ. ಈ ಮುದ್ದೆ ಪುಷ್ಪಾಳು ಕೂಡಾ ಅದಷ್ಟು ಬೇಗ ತನ್ನ ಉಪಾಹಾರವನ್ನು ಸಿದ್ಧಪಡಿಸುತ್ತಾಳೆ. ಜಾಕಡಿದು ಇಬ್ಬರೂ ಒಟ್ಟಿಗೆ 'ವಾಕಿಂಗ್'ಗೆ ಹೋಗುತ್ತಾರೆ.

ಆದಿತ್ಯವಾರದಂದು ಮನೆಶುಚ್ಛಗೊಳಿಸಲು, ಮನೆಯನ್ನು ಶೃಂಗರಿಸಲು ಚಂದ್ರಕಾಂತನು ಹುಷ್ಟಿಳಿಗೆ ಸಹಾಯವಾಗುತ್ತಿದ್ದನು. ಅದಿನ ಅವಳೊಂದಿಗೆ ಕಳಿತು ಸರಸ-ಸಲ್ಲಾಪಗಳಾಡುವುದಕ್ಕೆ ಹೆಚ್ಚು ಸಮಯ ವಿನಿಯೋಗಿಸುತ್ತಿದ್ದನು. ಅವನಿಗೆ ತನ್ನ ಹೆಂಡತಿಗೆ ಹೂವಿನ ಮೇಲೆ ಬಹು ಪ್ರೇಮವೆಂದು ಗೊತ್ತಿದೆ. ಅವನು ಪ್ರತಿದಿನ ನಾಯಂಕಾಲ ಶಾಲೆಯಿಂದ ಬರುವಾಗ ಮಲ್ಲಿಗೆ ಜೆಂಡೊಂದನ್ನು ತಂದು ತನ್ನ ನುಡಿಯ ಮುಡಿಯನ್ನು ಲಂಕರಿಸುತ್ತಿದ್ದನು.

ಸುಪ್ತಾ ಸದಾ ಮೋಹಿನಿಯೊಂದಿಗೆ ಮಾತಾಡುವಾಗ ಗರ್ವದಿಂದಲೇ ಮಾತಡುತ್ತಾಳೆ. ತಾನು ಗಂಡನ ಪ್ರೇಮವೆಂಬ ಅಮೃತ ಧಾರೆಯಿಂದ ಒದ್ದೆಯಾದವಳೆಂಬುದನ್ನು ತೋರಿಸುತ್ತಾಳೆ. ಅವಳ ಮುಗುಳು ನಗೆ ತೋರಿಸುತ್ತಿರುವ ಕಣ್ಣುಗಳು, ನಾಚಿಕೆಯಿಂದ ಕೆಂಪಾದ ಕಪೋಲಗಳು ಮತ್ತು ಆಕರ್ಷಕ ಹಾವ ಭಾವಗಳು — ಇವುಗಳನ್ನು ನೋಡಿ ಮೋಹಿನಿಯ ಮತ್ಸರ ಮತ್ತಷ್ಟು ಹೆಚ್ಚಾಗುತ್ತಿತ್ತು.

ಚಂದ್ರಕಾಂತ ತನ್ನ ಪತ್ನಿಯ ವಿವಾಹದ ದಿನವನ್ನೂ, ಜನ್ಮದಿನವನ್ನೂ ಆಚರಿಸಲು ಎಂದೂ ಮರೆಯುತ್ತಿರಲಿಲ್ಲ. ಪತಿಯು ತೋರಿಸುತ್ತಿದ್ದ ಪ್ರೇಮದ ವರ್ಣನೆಯನ್ನೂ ಪುಷ್ಪಾಳು ಮೋಹಿನಿಯೊಡನೆ ಮಾಡಿದಾಗಲಂತೂ ಮೋಹಿನಿಗಾಗುತ್ತಿದ್ದ ವೇದನೆ ಸಹನಾತೀತವಾಗಲಿತ್ತು. ಚಂದ್ರಕಾಂತನಂತಹ ಪತಿಯನ್ನು ಪಡೆದ ಪುಷ್ಪಾಳು ನಿಜಕ್ಕೂ ಧನ್ಯಳೆಂದು ಮೋಹಿನಿಯ ಮನಸ್ಸು ಮತ್ತೆ ಮತ್ತೆ ಮೆಲುಕು ಹಾಕುತ್ತಿತ್ತು.

ಮೋಹಿನಿಯಂತೆ ಗಂಡಂದಿರ ವಿಚಾರವಾಗಿ ಅತೃಪ್ತಿಯಿರುವವರು ತುಂಬಾ ಮಂದಿಯಿರಬಹುದು. ಪ್ರತಿ ದಿನ ಗಂಡನು ತನ್ನ ವ್ಯವಹಾರದಲ್ಲಿ ನಿರಾಶೆಯನ್ನು ಕರೋತೆಯನ್ನು ಅಥವಾ ನಿರುತ್ಸಾಹವನ್ನು ತೋರಿಸಿದರೆ ಪ್ರೇಮದ ಯಥಾರ್ಥತೆ ಅಳಿದು ಹೋಗುವುದರಲ್ಲಿ ಸಂಶಯವಿಲ್ಲ.

ತನ್ನ ಹೆಂಡತಿಯು ಮನೆಯ ಕೆಲಸಗಳಿಂದ ಬಳಲಿಬ್ಬಾಳಿ ಮಕ್ಕಳ ತಂಟೆ-ಕೂಗಾಟಗಳಿಂದ ನೊಂದಿದ್ದಾಳೆ, ವಾರವಾರಕ ವಿಷಯಗಳಿಂದ ಬೆಂದಿದ್ದಾಳೆಂದು ಎಂದೂ ಪುರುಷನು ಯೋಚಿಸುವುದೇ ಇಲ್ಲ. ಪತ್ನಿಗೆ ಎರಡು ಬೈಯ್ಯದಿದ್ದರೆ, ಗದರಿಸಿ ತನ್ನ ಪೌರುಷ ತೋರಿಸದಿದ್ದರೆ, ಅವರನ್ನು ತನ್ನ ವಿಷಸಾರಿತ ಮಾತುಗಳಿಂದ ಗಸ್ಗದಿತಳನ್ನಾಗಿ ಮಾಡದಿದ್ದರೆ ಈ ಗಿನ ಪುರುಷರಿಗೆ ನಿದ್ರೆಯೇ ಬರುವುದಿಲ್ಲ.

ತನ್ನ ಪತ್ನಿಯು ಕೂಡಾ ಚರಮೋತ್ಕರ್ಷದ ಅನುಭೂತಿಯನ್ನು ಪಡೆಯುತ್ತಾಳೋ, ಇಲ್ಲವೋ ಎಂಬುದನ್ನು ತಿಳಿಯುವ ಗಂಡಂದಿರು ಈಗ ಬೆರಳಿಣಿಕೆಯಷ್ಟು ಇರುವುದು ಸಂಶಯಾಸ್ಪದ. ಹೆಚ್ಚಿನ ಪುರುಷರು ತಮ್ಮ ಸಂತಾಪ್ತಿಯನ್ನು ಪೂಡಿಕೊಂಡ ಅನಂತರವೂ ತಮ್ಮ ಹೆಂಡತಿಯನ್ನು ತೃಪ್ತಿಪಡಿಸಿ, ಅವಳು ರತಿಕ್ರೀಯೆಗೆ ಸಹಾಯಕಳು ಎಂಬುದನ್ನು ಸಹಾ ತಿಳಿದಿರುವುದಿಲ್ಲ.

ಪತಿಯು ತನ್ನ ಪ್ರತಿಯೊಂದು ವರ್ತನೆಯಿಂದಲೂ ತನ್ನ ಪತ್ನಿಯ ಮನಸನ್ನು ಆಕರ್ಷಿಸುತ್ತಿರಬೇಕು. ಪತಿಯು ತನ್ನ ಯಥಾರ್ಥ ಪ್ರಶಂಸೆ ಮತ್ತು ಸಹಯೋಗದಿಂದ ತನ್ನರಸಿಯನ್ನು ಪ್ರಸನ್ನಳನ್ನಾಗಿಟ್ಟಿರಬೇಕು. ತನ್ನ ಮೃದುಸೂರ್ಣ ಸೂತುಗಳಿಂದ ಅವಳ ಹೃದಯದಲ್ಲಿ ಪ್ರೇಮ ರಸಧಾರೆಯನ್ನು ಸೃಜಿಸಬೇಕು.

ಗಂಡ-ಹೆಂಡಂದಿರು ಒಬ್ಬರನ್ನೊಬ್ಬರ ಮೇಲೆ ನಿಜವಾದ ಪ್ರೇಮ, ಸಹಯೋಗ ತಿಳುವಳಿಕೆಗಳನ್ನಿಡದ ಹೊರತು ಸರಸ್ವರ ಪ್ರೇಮದರಗಳು ಹುಟ್ಟಲು ಸಾಧ್ಯವಿಲ್ಲ. ಪ್ರತಿ ದಿನ, ಪ್ರತಿ ಕ್ಷಣದ ಪ್ರೇಮಪೂರ್ಣ ವ್ಯವಹಾರ ಸಹಯೋಗಗಳು ಈ ಕಲೆಯಲ್ಲಿ ಯಶಸ್ಸನ್ನು ಗಳಿಸಲು ಸಹಾಯವಾಗುತ್ತವೆ. ಪುರುಷನು ಹೆಂಡತಿಯೊಡನೆ ಸಹಯೋಗ ಮಾಡುವದು ತನ್ನ ಅಧಿಕಾರವೆಂದು ತಿಳಿದು ವರ್ತಿಸಿದರೆ, ಸ್ತ್ರೀಯೂ ಅಂತೆಯೇ ಪುರುಷನೊಡನೆ ಗಂಡನೆಂಬ ಅಧಿಕಾರದ ಮೇರೆ ವರ್ತನೆ ಮಾಡಿದರೆ ಅದರಲ್ಲಿ ಯಾವ ಆನಂದ ಲಭಿಸೀತು? ಇದು ಬರೀ ಶರೀರದ ಭಾರವನ್ನು ಒನ್ಸ್ಮೂ ಮಾತ್ರ ಕಡಿಮೆಮಾಡಿದಂತಾಗುತ್ತದು. ಈ ಸಹಯೋಗ ಹೃದಯವನ್ನು ಕಂಪಿಸಲಾರದು; ಮುಟ್ಟಲಾರದು.

ಯೌವನದ ಈ ಸಫಲತೆಯು ದಂಪತಿಗಳ ಮನಸ್ಸಿನಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳನ್ನೂ ಉತ್ತಮ ಕಲ್ಪನೆಗಳನ್ನೂ, ವಿಚಿತ್ರ ಸಹಾನುಭೂತಿಯನ್ನೂ, ಪರಸ್ಪರ ಆಕರ್ಷಣೆಯನ್ನೂ ವೃದ್ಧಾಪ್ಯದಲ್ಲಿ ಕೂಡಾ ಪ್ರೇಮದ ಸಜೀವತೆಯನ್ನೂ ಸುರಕ್ಷಿತವಾಗಿಡುತ್ತದೆ. ವೃದ್ಧಾಪ್ಯದ ದೆಸೆಯಿಂದ ಶರೀರ ಕೃಶವಾಗಿದ್ದರೂ ಯೌವನದ ಮಧುರ ಹಾಗೂ ಎಂದೂ ಮರೆಯಲಾಗದ ಸ್ಮೃತಿಗಳು ಈ ವೃದ್ಧ ದಂಪತಿಗಳ ಜೀವನವನ್ನು ಹಿಂದಿನಂತೆಯೇ ಸುಖಹಾಗೂಸೌಹಾರ್ದಪೂರ್ಣವನ್ನಾಗಿ ಮಾಡುತ್ತದೆ. ಜೀವನವು ಪರಿಶುದ್ಧ ಹೃದಯದಿಂದ ಅಮೃತಧಾರೆಯಂತೆ ಹರಿಯುವ ಪ್ರೇಮದಿಂದ ಕೂಡಿದ್ದಾಗಿರಬೇಕು. ಇಂತಹ ನಿರ್ಮಲ ಪ್ರೇಮದಿಂದ ಕೂಡಿದ್ದಾಗಿರಬೇಕು ಇಂತಹ ನಿರ್ಮಲ ಪ್ರೇಮದಿಂದ ಕೂಡಿದ ಜೀವನವು ನಿಜಕ್ಕೂ ಧನ್ಯ.

(ಆಧಾರ.)

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಬೊಂಗಳಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ತೇವಣಾತಿ ಬಡ್ಡಿ ದರಗಳು:

ಕಾಯಂ ತೇವಣಾತಿಗಳು:		ರೂ. ನ.ಪೈ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಪದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5-00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5-50
ಸೇವಿಂಗ್ಸ್ ಬ್ಯಾಂಕ್ ತೇವಣಿ ತಿಂಗಳು	,, ,,	3-25

ನಿಮ್ಮ

ನಿಸನಿಶ್ಚಿತ ಉಳಿತಾಯವನ್ನು / ಮಾಸಿಕ ಉಳಿತಾಯವನ್ನು
ಹನಿ ಡಿವೋಸಿಟುಗಳಲ್ಲಿ / ಕ್ಯುಮುಲೇಟಿವ್ ಡಿವೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3—7—1962

ಕಣ್ಣಿನ ರಕ್ಷಣೆಗೆ ಉಪಾಯ

ನಿರ್ವಿಕಾರ ಮನಸ್ಸು ನಿರ್ವ್ಯಾಧಿ ಶರೀರ

ಕಣ್ಣಾರೆ ಕಂಡದ್ದು ಎಂದೂ ಸುಳ್ಳಾಗುವುದಿಲ್ಲ ಎಂಬ ಗಾದೆಯನ್ನು ಮನುಷ್ಯ ಮಾಡಿರುತ್ತಾನೆ. ಇದರ ಒಟ್ಟಿಗೇ ಸತ್ಯಕ್ಕೂ ಸುಳ್ಳಿಗೂ ನಾಲ್ಕೇ ಅಂಗುಲ ಅಂತರ ಎಂಬ ಗಾದೆಯೂ ಪ್ರಚಾರದಲ್ಲಿದೆ. ಆದರೆ ಈ ಮಾತು ಬರೇ ಕವಿಯಲ್ಲೇ ಉಳಿದರೆ ಕಾರ್ಯತಃ ಉಪಯೋಗವಾಗದಿದ್ದರೆ, ಅದರ ಯಥಾರ್ಥತೆಯು ಸಂದಿಗ್ಧವಾಗಿಯೇ ಉಳಿಯುವುದು.

ನಮ್ಮ ದೇಶದ ವೇದಾಂತಿಗಳು ದಾರ್ಶನಿಕರು ತಮ್ಮ 'ಸರ್ವರಜ್ಜು', 'ಮೃಗಮರೀಚಿಕಾ' ಮೊದಲಾದ ಉದಾಹರಣೆಗಳನ್ನು ಕೊಟ್ಟು ನಾವು ಯೂಹಿದನ್ನೆಲ್ಲಾ ಕಾಣುತ್ತೇವೋ ಅವೆಲ್ಲಾ ಮಿಥ್ಯೆಯಂದೂ, ಒಂದು ಸೂಯೆಯೆಂದೂ ಸತ್ಯವನ್ನು ಕಾಣಲು ಈ ದೈಹಿಕ ಚಕ್ಷುಗಳು ಸಮರ್ಥವಲ್ಲವೆಂದೂ ಸಾಧಿಸುತ್ತಿದ್ದಾರೆ.

ಇಂದಿನ ವಿಜ್ಞಾನಿಗಳೂ ಈ ಜಿಜ್ಞಾಸೆಯನ್ನು ಬಿಟ್ಟು ಹಾಕುವುದಿಲ್ಲ. ನಮ್ಮ ದಾರ್ಶನಿಕರು ಮತ್ತು ವಿಜ್ಞಾನಿಗಳ ಅಭಿಪ್ರಾಯದಲ್ಲಿ ಸ್ವಲ್ಪ ಅಂತರವಿದೆ. ಆದರೂ ಕಣ್ಣಿನ ಮೇಲೆ ನಿರರ್ಥಕವಾದ ವಿಶ್ವಾಸವನ್ನಿಡದಿರುವುದರಿಂದಲೇ ಒಳಿತಿದೆ ಎಂಬ ಮಾತಿನಲ್ಲಿ ಸಹ ಮತವಾಗಿದ್ದಾರೆ.

ವಾಸ್ತವವಾಗಿಯೂ ಒಂದೇ ವಸ್ತುವನ್ನು ಒಬ್ಬಬ್ಬ ಮನುಷ್ಯ ಒಂದೊಂದು ದೃಷ್ಟಿಯಲ್ಲಿ ಕಾಣುತ್ತಾನೆ. ದೃಷ್ಟಿಯು ಕೂಡ ಪ್ರೇಮ, ದ್ವೇಷರಾಗ, ತಿರಸ್ಕಾರ ಮೊದಲಾದ ಭಾವನೆಗಳಂತೆಯೇ ವ್ಯಕ್ತಿಗತವಾಗಿರುತ್ತದೆ. ಆದುದರಿಂದ ಕಣ್ಣಿನ ಗೋಲವು ಸಜೀವವಾಗಿಯೂ ಒಂದು ಉಪಕರಣ ಮಾತ್ರವಾಗಿದೆ. ನೋಡುವ ನಿಜವಾದ ವಸ್ತುವೆಂದರೆ ಮನಸ್ಸು ಮಿದುಳಿನಲ್ಲಿರುವ ದೃಷ್ಟಿ ನರಗಳಿಗೆ ಆಘಾತವಾದರೆ ಮನುಷ್ಯನು ದೃಷ್ಟಿ ಹೀನನಾಗುವುದರಲ್ಲಿ ಸಂದೇಹವಿಲ್ಲ. ಇದೇ ರೀತಿ ಮಿದುಳಿನ ಕೋಶ ಮತ್ತು ಸಂದೇಶ ಕೇಂದ್ರಗಳಿಗೆ ಆಘಾತ ತಗಲಿದರೆ ನಾವು ಏನನ್ನು ನೋಡುತ್ತೇವೆಯೋ, ಅದು ನಿಜವಾದ ಸ್ವಸ್ಥ ದೃಷ್ಟಿಯಿಂದ ನೋಡಿದುದಕ್ಕಿಂತ ತೀರಾ ಭಿನ್ನವಾಗಿರುತ್ತದೆ; ಈ ದೃಷ್ಟಿದೋಷವು ಮನುಷ್ಯನನ್ನು ಹುಚ್ಚನನ್ನಾಗಿ ಕೂಡಾ ಮಾಡಿ ಬಿಡುತ್ತಾದೆ.

ಕಣ್ಣುಗಳು ನಿಜವಾಗಿಯೂ ಮಿದುಳಿನ ಹೊರಗಿನ ಎರಡು ದ್ವಾರಗಳಾಗಿವೆ. ಇವುಗಳ ಮೂಲಕವೇ ಪ್ರಕಾಶದಿಂದ ಪ್ರಭಾವಿತವಾದ ಎಲ್ಲಾ ವಸ್ತುಗಳನ್ನು ನಾವು ಗ್ರಹಣ ಮಾಡುತ್ತೇವೆ ಮತ್ತು ದೇಹ ಯಂತ್ರದ ವಿಭಿನ್ನ ಕೋಶಗಳು, ಗ್ರಂಥಿಗಳೇ ಮೊದಲಾದವುಗಳ ಮೂಲಕ ಆಗುವ ವಿಭಿನ್ನ ಪ್ರತಿಕ್ರಿಯೆಗಳನ್ನು ಮತ್ತು ಕೆಲಸಗಳನ್ನು ಅವುಗಳು ಸೃಷ್ಟಿಸುತ್ತವೆ.

ನಾವು ಕಣ್ಣಿನಿಂದ ನೋಡುವ ರಹಸ್ಯವು 'ರೆಟಿನಾ'ದಲ್ಲಿ ಅಡಗಿಕೊಂಡಿದೆ. ಈ ಅತ್ಯಂತ ಸಂವೇದನ ಶೀಲವಾವರಣಾರ್ಥವು ಪ್ರಕಾಶದ ಕಿರಣಗಳನ್ನು ವಿದ್ಯುತ್ತರಂಗಗಳಾಗಿ ಪರಿವರ್ತನೆ ಮಾಡುತ್ತದೆ. ಅತ್ಯಂತ ತೆಳುವಾದ ಮತ್ತು ಸುಕುಮಾರವಾದ ಈ 'ರೆಟಿನಾ'ವು ಚಿಕ್ಕು ಗೋಲದ ಹಿಂಬಾಗದಲ್ಲಿದೆ. ಇದರಲ್ಲಿ ೧೩ಕೋಟಿ ಸ್ಪಂದನ ಕೋಶಗಳಿವೆ. ಇವುಗಳು ಪ್ರಕಾಶದ ಅಲೆಗಳನ್ನು ವಿದ್ಯುತ್ತಾಗಿ ಪರಿವರ್ತಿಸಿ ಮಿದುಳಿನ 'ಸೆರಿಬ್ರಮ್' ಗೆ ಮುಟ್ಟಿಸುತ್ತವೆ.

ಚಿಕ್ಕು ಗೋಲಗಳ ಮೇಲ್ಭಾಗದಲ್ಲಿ 'ಲೆನ್ಸ್'ಗಳಿವೆ, ಈ 'ಲೆನ್ಸ್'ಗಳು ದೃಶ್ಯವನ್ನು ಸ್ಪಷ್ಟ ರೂಪದಲ್ಲಿ ಮಿದುಳಿಗೆ ಮುಟ್ಟಿಸಲು ಜವಾಬ್ದಾರರಾಗಿರುತ್ತವೆ. ಕೆಲವು ವಸ್ತುಗಳು ಬಹಳ ಅಳದಲ್ಲಿರುವಂತೆ ಕಾಣಲು ಕಣ್ಣುಗಳ ವಿಭಾಗವಾಗುವಿಕೆಯೇ ಕಾರಣವಾಗಿದೆ. ಉದಾಹರಣೆಗಾಗಿ ನೀವೊಮ್ಮೆ ಕಣ್ಣನ್ನು ಮುಚ್ಚಿರಿ; ಆಗ ದೃಷ್ಟಿಯ ಕ್ಷೇತ್ರವು ಕಡಿಮೆಯೆಂದರೆ ೧೫೫ ಪ್ರತಿಶತವಾದರೂ ಕಡಿಮೆಯಾಗುತ್ತದೆ. ಪುಟ್ಟ ಮಗುವೊಂದು ರೊಟ್ಟಿ ಮತ್ತು ಚೆಂಡನ್ನು ಕಂಡ ಬಳಿಕ ಆಗಸದಲ್ಲಿ ಹೊಳೆಯುತ್ತಿರುವ ಚಂದ್ರನನ್ನು ಕಂಡರೆ, ಅದನ್ನೂ ಆ ರೊಟ್ಟಿ ಮತ್ತು ಚೆಂಡುಗಳಷ್ಟೇ ಸಮೀಪವುಳ್ಳದ್ದೆಂದು ತಿಳಿಯುತ್ತದೆ. ಆಕಾರಗಳಲ್ಲಿ ಇವೆಲ್ಲ ಸದೃಶ್ಯವಿರುವುದರಿಂದಲೇ ಈ ಭ್ರಮೆಉಂಟಾಗುತ್ತದೆ ಅದೇ ಮಗುವಿಗೆ ತಾನು ದೊಡ್ಡದಾದಾಗ ದೂರದ ವಸ್ತುವು ಚಿಕ್ಕದಾಗಿ ಕಾಣುವುದೆಂದೂ ಹತ್ತಿರದ ವಸ್ತು ದೊಡ್ಡದಾಗಿ ಕಾಣುವುದೆಂದೂ ತನ್ನ ದೈನಿಕ ಜೀವನದ ಅಧಾರದ ಮೇಲೆ ಸ್ವತಃ ಅನುಭವವಾಗುತ್ತದೆ.

ವಸ್ತುಗಳನ್ನು ನೋಡುವುದರಲ್ಲಿ ಇತರ ತತ್ವಗಳ ಹೊರತು, ನಿಮ್ಮ ಜ್ಞಾನ, ಅನುಭವ ಮತ್ತು ವ್ಯಕ್ತಿತ್ವಗಳು ಬಹಳ ಮಹತ್ವಪೂರ್ಣವಾಗಿವೆ. ಹಳ್ಳಿಯಲ್ಲಿರುವ ಒಬ್ಬ ವ್ಯಕ್ತಿ ಒಂದು ಚಿಕ್ಕ ಸೇಬಿನಷ್ಟು ಮೂರಂತಸ್ತಿನ ಕಟ್ಟಡವನ್ನೇ ಗಗನ ಚುಂಬಿಯಂತೆ ಕಾಣುತ್ತಾನೆ. ಆದರೆ ನ್ಯೂಯಾರ್ಕ್ ನಗರದಲ್ಲಿರುವ ಒಬ್ಬ ನಾಗರಿಕ ಬೊಂಬಾಯಿಯಲ್ಲಿರುವ ಎಂಟಂತಸ್ತಿನ ಕಟ್ಟಡಗಳನ್ನು ದೊಡ್ಡವುಗಳೆಂದು ತಿಳಿಯುವುದೇ ಇಲ್ಲ. ಈ ವಿಚಾರದಲ್ಲಿ ಮನೋವೈಜ್ಞಾನಿಕರ ಕೆಲವು ಪ್ರಯೋಗಗಳು ಅತ್ಯಂತ ಮನೋರಂಜಕವಾಗಿಯೂ ಜ್ಞಾನವರ್ಧಕವಾಗಿಯೂ ಇವೆ.

ಬೇರೆ ಬೇರೆ ವರ್ಗಗಳ ಸಮೂಹ ಪ್ರಾಯಶ್ಚರಾದ ಹತ್ತು ಮಕ್ಕಳ ಮುಂದೆ ಎರಡು ಆಣೆಯ ಪಾವಲಿಗಳನ್ನೂ ಮತ್ತು ಅದೇ ಆಕಾರದ ಮತ್ತು ಗಾತ್ರದ ಕಾರ್ಡ್ ಬೋರ್ಡಿನ ತುಂಡುಗಳನ್ನು ಇಡಬೇಕು. ಮುಂದೆ ಆ ಮಕ್ಕಳೊಡನೆ ಎಂಟಾಣೆಯ ಪಾವಲಿಗಳು ದೊಡ್ಡವೋ, ಯೂ ಕಾರ್ಡ್ ಬೋರ್ಡಿನ ತುಂಡುಗಳು ದೊಡ್ಡವೋ ಎಂದು ಪ್ರಶ್ನಿಸಿದರೆ ಬಡ ಮಕ್ಕಳು ಅವೇಲಿ ಪಾವಲಿಗಳನ್ನು ೭೫ ಪ್ರತಿಶತ, ಮಧ್ಯಮ ವರ್ಗದ ಮಕ್ಕಳು ೨೦ ಪ್ರತಿಶತ, ಮತ್ತು ಸಂಪನ್ನ ವರ್ಗದ ವಿದ್ಯಾರ್ಥಿಗಳು ೫೫ ಪ್ರತಿಶತ, ದೊಡ್ಡವೆಂದೂ ತಿಳಿಸುತ್ತಾರೆ.

ವಿಮರ್ಶನ ವಿಕ್ಷೋಭೆಯು ಉತ್ಪನ್ನವಾದ ಮೇಲೆ ಮೃತ್ಯುವಿನ ಭಯವುಂಟಾದರೆ, ಚಿಕ್ಕು ಗೋಲದಂತೆ ಟಿಟಿಟ್ ಸರಿಸುಮಾರಿ ದೃಶ್ಯ ಮನುಷ್ಯ ಏನನ್ನೂ ನೋಡಲಾರ. ಭಯಗೊಂಡ ಪುಟ್ಟ ಮಗು ಕಣ್ಣನ್ನೆ ಕಣ್ಣು ಮುಚ್ಚಿಕೊಳ್ಳುವಂತೆ, ಮಾನವ ಪ್ರಾಣಿಯು ತಪ್ಪಿಸಿಕೊಳ್ಳುವ ಯಾಂತ್ರಿಕತೆಯು ಅವನಿಗೆ ಅನಪೇಕ್ಷಿತವಾದ ದೃಶ್ಯವನ್ನು ನೋಡಲಿಕ್ಕಾಗದಂತೆ ಮಾಡಲು ಅವನನ್ನು ಕೃತ್ರಿಮವಾಗಿ ಕುರುಡನನ್ನಾಗಿ ಮಾಡುತ್ತದೆ. ಮನೋವೈಜ್ಞಾನಿಕರು

(ಇನ್ನೂ ಪುಟ ನೋಡಿರಿ)

ಕ್ಷಯರೋಗಕ್ಕೆ ಗೃಹಚಿಕಿತ್ಸೆ

ಸಾಮಾನ್ಯವಾಗಿ ತಿಳಿಯುವಂತೆ ಕ್ಷಯರೋಗಿಯೊಬ್ಬನು ಅಂತಹ ಅಪಾಯಕಾರಿ ಜನವೇನಲ್ಲ. ಅವನ ಸಂಪರ್ಕ ಬೆಳೆಸುವವರ ಸೋಂಕಣಿಗೆ ಅವನ ಎಂಜಲೇ ಹೆಚ್ಚಾಗಿ ಸಾಮಾನ್ಯ ಕಾರಣವಾಗಿದೆ ಗೃಹಚಿಕಿತ್ಸೆಯನ್ನು ಸುಭದ್ರವಾಗಿ ಮಾಡಬೇಕಾದರೆ, ಕ್ಷಯರೋಗಿಗಳಗಳ ಎಂಜಲನ್ನು ಸರಿಯಾಗಿ ಸಂಗ್ರಹಿಸಬೇಕು ಮತ್ತು ವಿಸರ್ಜಿಸಬೇಕು. ರೋಗಿಯು ಮಾಡಬೇಕಾದುದೇನೆಂದರೆ:—

1. ಕೆಮ್ಮುವಾಗ ಬಾಯಿಯನ್ನು ವಸ್ತ್ರದಿಂದ ಮರೆಮಾಡಿಕೊಳ್ಳಬೇಕು.
2. ಎಂಜಲನ್ನು ಮುಚ್ಚಳದ ಪಾತ್ರೆಯಲ್ಲಿ ಅಥವಾ ಪೀಕದಾನಿಯಲ್ಲಿ ಸಂಗ್ರಹಿಸಬೇಕು.
3. ಎಂಜಲನ್ನು ವಿಸರ್ಜಿಸುವ ಅಥವಾ ಸುಡುವ ಮೊದಲು ಅದನ್ನು ಹತ್ತು ನಿಮಿಷಗಳ ತನಕ ಕುದಿಸಬೇಕು.

ಈ ಸೂಚನೆಗಳನ್ನು ಭಾರತದಲ್ಲಿರುವ ಎಲ್ಲಾ ಮನೆಗಳ ಅವಗಾಹನೆಗೆ ತರಬೇಕಾಗಿದೆ. ಇದಕ್ಕೆ ವ್ಯಾಪಕವಾದ ಆರೋಗ್ಯ ವಿದ್ಯಾ ಪ್ರಸಾರ ಆಗತ್ಯವಾಗಿದೆ. ಟಿಬಿ ಮೊಹರು ಮಾರಾಟ ಚಳವಳವು ಅಂತಹ ವಿದ್ಯಾಪ್ರಸಾರದಲ್ಲಿ ಒಂದು ಭಾಗವಾಗಿದೆ.

ಟಿಬಿ ಮೊಹರುಗಳನ್ನು ಪಡಕೊಳ್ಳಿರಿ ಮತ್ತು ಅದರ ವಿರುದ್ಧ ಹೋರಾಡಲು ಸಹಾಯಮಾಡಿರಿ.

ಒಂದು ಟಿಬಿ ಮೊಹರಿನ ಬೆಲೆ ಬರೇ ಹತ್ತು ನಯೇಪೈಸೆ ಮಾತ್ರ.

ಟಿಬಿ ಮೊಹರುಗಳು ಸಿಗುವ ಸ್ಥಳ:— ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಸರಕಾರಿ ವೆನ್ಲಾಕ್ ಆಸ್ಪತ್ರೆ, ಮಂಗಳೂರು, ಮತ್ತು ಅದರ ವಿವಿಧ ವಿಜನ್ಸಿಗಳಲ್ಲಿ

ಭಾರತದಲ್ಲಿ 13ನೇ ಟಿಬಿ ಮೊಹರು ಮಾರಾಟ ಚಳವಳ

(ನ್ಯೂಡಿಲ್ಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ನಡೆಸಲ್ಪಡುವಂತಾದ್ದು.)

ಈ ಸ್ಥಳ ದಾನ ಮಾಡಿದವರು: **The Bombay Dyeing & Mfg.Co., Ltd., Bombay.**

ಲಢಾಖಿನ ಇತಿಹಾಸದ ರೂಪರೇಖೆಗಳು

1958ರಲ್ಲಿ ಸಾವೂನ್ಯ ರೀತಿಯಲ್ಲಿ ಪ್ರಾರಂಭವಾದ ರಾಂಚಿಯಲ್ಲಿರುವ, ಆದಿವಾಸಿ ಸ್ತ್ರೀಯರ ಕೈಗಾರಿಕಾ ಸಹಕಾರಿ ಕಲಾಕೇಂದ್ರದಲ್ಲಿ 150 ಸ್ತ್ರೀ ಸದಸ್ಯರಿದ್ದಾರೆ. ೨೨ ಸ್ತ್ರೀಯರಿಗೆ ಎಂಬ್ರಾಯಿಡರಿ, ಲೇಸ್ ವರ್ಕ್ ಮತ್ತು ಗೊಂಬೆ ತಯಾರಿಸುವ ತರಬೇತಿಯನ್ನು ಕೊಡಲಾಗುತ್ತಿದೆ. ಮೇಲಿನ ಚಿತ್ರದಲ್ಲಿ ಸ್ತ್ರೀಯರು ಎಂಬ್ರಾಯಿಡರಿ ಕಾರ್ಯದಲ್ಲಿ ನಿರತರಾಗಿರುವುದನ್ನು ನೋಡಬಹುದು.

ಭಾರತದ ಭಾಗವಾಗಿರುವ ಲಢಾಖಿನಲ್ಲಿಂದೂ ಬೌದ್ಧಮತವು ಜೀವಂತ ಉಳಿದುಕೊಂಡಿದೆ. ಕೆಲವಿನಗಳ ಹಿಂದಿನ ಭೀಕರ ದುರ್ಘಟನೆಯಿಂದಾಗಿ ಈ ವಿಶ್ವವಿಖ್ಯಾತ ಭೂಪ್ರದೇಶದತ್ತ ಇಡೀ ವಿಶ್ವದ ಗಮನ ಕೇಂದ್ರೀಕೃತವಾಗಿದೆ. ಲಢಾಖಿನ ವ್ಯಾಪಕ ಇತಿಹಾಸವು ಈಗ ದೊರಕುವುದಿಲ್ಲ. ಅನೇಕ ಸ್ಥಳಗಳಿಂದ ಕಾಲ್ನಡಿಗೆಯಿಂದ ಒಟ್ಟಿಗೆ ಒಂದಿರುವ ಜನರು ಬ್ರಾಹ್ಮಿ ಹಾಗೂ ಖರೋಷ್ಠಿ ಲಿಪಿಯಲ್ಲಿ ಬರೆದಿಟ್ಟಿರುವ ಶಿಲಾಲೇಖನಗಳು ಈ ವಿಷಯದ ಮೇಲಿರುವ ಜೀವಂತ ಹಾಗೂ ಮಹತ್ವಪೂರ್ಣ ಪ್ರಮಾಣಗಳಿವೆ. ಅವುಗಳ ಪ್ರಕಾರ ಈ ಭೂಭಾಗವು ಕಳೆದ ಮುನ್ನೂರು ವರ್ಷಗಳಿಂದ ಭಾರತದ ಅವಿಭಾಜ್ಯ ಅಂಗವಾಗುತ್ತಾ ಬಂದಿದೆಯೆಂಬುದು ಗೊತ್ತಾಗುತ್ತದೆ.

ಶ್ರಿವಿಷ್ಣುಪ [ಟಿಬೇಟು] ಪೃಥಕ್ತ್ವಾಂತ ವೃತ್ತದ ಪ್ರಕಾರ ನೋಚನೊದಲ ಬಾರಿಗೆ ಶ್ರಿವಿಷ್ಣುಪದ ಪ್ರಥಮ ಬೌದ್ಧ ರಾಜ ಸಲೋನೆ-ಬಜಾನೆ-ಸಗಾವ.–ಪೋ ಎಂಬವನು ಹದಿನೇಳನೆಯ ಶತಮಾನದಲ್ಲಿ ಲಢಾಖಿನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಆಗ ರಾಜ್ಯ ಎಷ್ಟು ವಿಸ್ತಾರವಾಗಿತ್ತೆಂದರೆ, ಅದರಲ್ಲಿ ನೇಪಾಲ, ಚೀನ ಚೀನಿ-ತ ಕೆ ಸ್ಕಾನ್, ಗಿಲಗಿತ್ ಮತ್ತು ಲಢಾಕಿನ ಬಹಳ ಅಂಶ ಸೇರಿಕೊಂಡಿತ್ತು. ಆ ದಿನಗಳಲ್ಲಿ ವಿದ್ವಾನ್ ಧೋನಮಿ ಶಾಮ ಧೌತಾ ಹಾಗೂ ಅವನ ಸಹಪಾಠಿಯು ವಿದ್ಯಾರ್ಜನೆಗಾಗಿ ಕಾಶ್ಮೀರಕ್ಕೆ ಬಂದಿದ್ದರು.

ಸಲೋನೆ-ಬಜಾನೆ-ಸಗಾವ.–ಪೋ ನ ಮರಣಾನಂತರ ಲಢಾಖ್ ಶ್ರಿವಿಷ್ಣುಪದ ಪ್ರದೇಶವಾಗಿರಲಿಲ್ಲ ಈ ವಾರ್ತೆಗೆ ಸಾಕ್ಷಿಯಾಗಿ ಇದೆ–ಕಲ್ಯಾಣ ಲೇಖನ-ಸಾಮಗ್ರಿ. ಅವನ ಕೃತಿಯಲ್ಲಿ ಲಲಿತಾದಿತ್ಯನ ಲಢಾಖ್-ವಿಜಯದ ವರ್ಣನೆ ಇದೆ; ಅಲ್ಲದೆ ಶ್ರಿವಿಷ್ಣುಪದ ಜನರ ಹಾಗೂ ಭೋಟಿಯರ [ಲಢಾಕಿನ ನಿವಾಸಿಗಳು] ತಲನೆಯೂ ಇದೆ.

ಖ್ರಿಲದೆ-ಬಜಾನೆ-ಪೋನ ರಾಜ್ಯಾಡಳಿತದ ನಂತರ ಲಢಾಖಿನ ಇತಿಹಾಸ ಕೊಂಚ ಕಾಲದ ವರೆಗೆ ಮೌನನೃತವನ್ನಾಚರಿಸಿತ್ತು. ಆದರ ನಂತರ ಕ್ರಮೇಣ ಬರಬರುತ್ತ ಶ್ರಿವಿಷ್ಣುಪ ರಾಜ್ಯದ ವಿಂಗಡನೆಗೆ ಆರಂಭವಾಗುತ್ತದ; ಅಲ್ಲಿಂದ ಆದು ತುಂಡುತುಂಡಾಗಲು ಆರಂಭವಾಯಿತು. ಅನಂತರದ ರಾಜನು ರಾಜ್ಯವನ್ನುಳಿಸಿಕೊಳ್ಳುವದನ್ನು ಬಿಟ್ಟು ದೇಶದಿಂದ ಓಡಿಹೋದನು. ಆದರೂ ನಠೆಯ ರಾಜ್ಯದ ರಾಜನು ಅವನಿಗೆ ತನ್ನ ತಪುಜೆಯನ್ನಿತ್ತು ಮದುವೆ ಮಾಡಿಸಿದನು. ಮಾವನ ಸಹಾಯದಿಂದ ಲಢಾಖ್, ಗಾಯೂಜ ಹಾಗೂ ಸಪುರಾಂಗದ ಮೇಲೆ ಅಧಿಕಾರವನ್ನಿಟ್ಟುಕೊಂಡನು. ತನ್ನ ಮೃತ್ಯುಕಾಲಕ್ಕಿಂತಲೂ ಮೊದಲೇ ಅವನು ರಾಜ್ಯವನ್ನು ತನ್ನ ಮೂವರು ಸುಕ್ಷ್ಯಳಿಗೆ ಹಂಚಿಕೊಟ್ಟನು. ಈ ಮೂವರಲ್ಲಿ ದವಾಲ.ಗಾಯೂಜ-ಗೆ-ಅಲ್ದೆಯ ಅಳ್ಳಕೆಗೆ ಲಢಾಖ್ ಒಳಗಾಗಿತ್ತು. ಅವನ ಇನ್ನೊಬ್ಬ ಸಹೋದರ ಕುಖೂಥ-ಅಲ್ದೆಯ ಪಾಲಿಗೆ ಗಾಯೂಜದ ಭಾಗ ಸಿಕ್ಕಿತು. ಆದರೆ ನಂತರ ವೈರಾಗ್ಯದಿಂದಾಗಿ ಅವನು ಬೌದ್ಧ ಮತದ ದೀಕ್ಷೆಯನ್ನು ಪಡೆದುದರಿಂದ ತನ್ನ ಪಾಲಿನ ರಾಜ್ಯವನ್ನು ದವಾಲ್–ಗೆ ಈಲ್ದೆಗೆ ಒಪ್ಪಿಸಿಬಿಟ್ಟನು.

ಏಳು ವತ್ಸರ ಹದಿನೇಳನೆ ಶತಮಾನದ ನಡುವೆ ನಡೆದಿರುವ ಘಟನೆಗಳಲ್ಲಿ ಇದು ಒಂದು: ರೇಂಜಿನ ಎಂಬೋರ್ವ ಭೋಟಿಯೂ ರಾಜಕುಮಾರನು ಗುಟಂ ನೇ ಇಸವಿಯಲ್ಲಿ ಕಾಶ್ಮೀರದ ಮೇಲೆ ಜಯಗೊಳಿಸಿಕೊಂಡನು. ಅವನು ತನ್ನ ಶತ್ರುಗಳ ಭಯದಿಂದಾಗಿ ಲಢಾಕಿನಿಂದ ಓಡಿಬಂದಿದ್ದನು ಗಜಖನೇ ಇಸವಿಯಲ್ಲಿ ಮಿರ್ಜಾ ಹೈದರ್ ದುಗಲ್ಲತ್ತನು ಕಾಶ್ಮೀರದ ಮೇಲೆ ಆಕ್ರಮಣ ನಡೆಸಿದನು. ಅವನ ಕ್ರೂರತನದಿಂದ ಜನರು ಬಹಳ ಭಯಭೀತರಾಗಿದ್ದರು. ಹಾಗಾಗಿ ಎಲ್ಲಿಯೂ ಎದುರಿಲ್ಲದ ಕಾರಣ ಅವನು ನೋಬರಾ ಬಾದಿನಿಂದ ಲಢಾಖಿನ ವರೆಗೆ ಜಯ ಪಡೆಯುತ್ತ ಬಂದನು.

ಹದಿನಾರನೆಯ ರತಾಬ್ದಿಯ ಅಂತ್ಯದಲ್ಲಿ ಜೊವಾಂಗ್-ನಾಮ-ಗ್ಯಾಲನ ಆಡಳಿತ ಕಾಲದಿಂದ ಲಢಾಖಿನ ಇತಿಹಾಸ ಸ್ಪಷ್ಟವಾಗಿ ಇದೆ. ಜೊವಾಂಗ್–ನಾಮ-ಗ್ಯಾಲನು ಸಾಧಾರಣ ಹದಿನಾರನೆಯ ಶತಮಾನಾರಂಭದಲ್ಲಿ ಲಡಾಖಿನ ಜನತೆಯ ಮೇಲೆ ವಿಜಯ ವೈಜಯಂತಿಯನ್ನು ಹಾರಿಸಿ ತಾನು ರಾಜನೆಂದು ಘೋಷಿಸಿದನು. ಅವನು ರುದೋಕ ಹಾಗೂ ಶ್ರಿವಿಷ್ಣುಪದ ಸಪ್ತಮ ಭಾಗದ ಮೇಲೆ ಆಕ್ರಮಣ ನಡೆಸಿ ಅದನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನಲ್ಲದೆ, ಅಲ್ಲಿಂದ ಹೇರಿಳ ಧನ-ಧಾನ್ಯಾದಿಗಳನ್ನು ತೆಗೆದುಕೊಂಡು ಬಂದನು. ಈ ಧನಸಂಪತ್ತಿನಿಂದ ಅವನು ಭಗವಾನ್ ಬುದ್ಧನ ಒಂದು ಉನ್ನತ ಮೂರ್ತಿಯನ್ನು ರಚಿಸಿದನು.ಜೊವಾಂಗ್ ನ ಮಗ್ಯಾಲನ ಆಲೋಚನೆಯು ಈ ರೀತಿ ಅನೇಕ ಮೂರ್ತಿಗಳನ್ನು ರಚಿಸುವು ದರಲ್ಲಿತ್ತು. ಆದರೆ, ಅಕಸ್ಮಾತ್ತಾಗಿ ಮೃತ್ಯುವು ಅವನ ಅಭಿಲಾಷೆಯು ಈಡೇರದಂತೆ ತನ್ನ ಕೈವಾದನ್ನು ಚಾಚಿಸಿತು.

ಅವನ ಚಿಕ್ಕ ತಮ್ಮ ಜಾಮೆ-ನಾಮ-ಗ್ಯಾಲನು ರಾಜ್ಯಾಡಳಿತ ಕಡಿವಾಣವನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಜಾಮೆ ನಾಮ-ಗ್ಯಾಲನ ಆಡಳಿತ ನಡೆಯುತ್ತಿದ್ದಾಗ ಪುರೇಕ (ಉಗಿನ ಕರಗಿಲ್) ಜಿಲ್ಲೆಯ ಸಾವಂತನು ಬಲ್ತಿಯ ಗ್ಯಾಲ–ಪೋ [ರಾಜಾ] ನೊಂದಿಗೆ ಸೇರಿಕೊಂಡು ದಂಗೆ ಎದ್ದನು; ತಾನು ಸ್ವತಂತ್ರನೆಂದು ಘೋಷಿಸಿದನು. ಈ ಕ್ರಾಂತಿಯನ್ನು ಮೆಟ್ಟಲು ಜಾಮೆ ನು ಪುರೇಕಕ್ಕೆ ಜೋರಾಗಿ ಸೈನ್ಯವನ್ನು ಆದರೆ ರಸ್ತೆಯಲ್ಲಿ ಭಯಂಕರ ಶುಭ್ರಾನು ಎದುರಾದ ಕಾರಣ ಸೇನೆಯು ಬಹು ಭಾಗ ನಾಶಿಗೆ ತುತ್ತಾಗಬೇಕಾಯಿತು. ಅವನನ್ನು ಬಂಧಿಸಿ ಶ್ರೀನಗರ ಕಾರಾಗೃಹಕ್ಕೆ ಕಳುಹಿಸಲಾಯಿತು.

ಸ್ವದೀನ ರಾಜ ಅಲೀಮಿರರು, ಜಾಮೆಯು ಶರಣು ಬಂದೊಡನೆ ಲೇಹದ ಮೇಲೆ ಆಕ್ರಮಣಗೈದು, ಅದರ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದನು. ಅವನು ಆಕ್ರಮಿಸಿದ್ದ ಬೌದ್ಧ ಸಂಘಕ್ಕೆ ಬೇಕಿ ಕೊಟ್ಟನು. ಆಕ್ರಮಿಸಿದ್ದ ದೇವ-ದೇವತಾದಿಗಳ ಮೂರ್ತಿಗಳನ್ನೊಡೆದನು, ದಾರ್ಮಿಕ ಹಾಗೂ ಐತಿಹಾಸಿಕ ಕೃತಿಕಗಳನ್ನು ಸಿಂಧೂ ನದಿಯೊಳಗೆ ಬಿಸಾಡಿದನು. ಎಲ್ಲ ರೀತಿಯಿಂದಲೂ ವಿಜಯಿಯಾದ ಸೇಲೆ ಲಢಾಕಿನ ಆಡಳಿತಕ್ಕೆ ಏರ್ಪಾಡು ಮಾಡಿ ವಿಂಚಾಲಿಯು ಕ್ಷರ್ದಿಗೆ ಹಿಂತಿರುಗಿದನು.

ಅಲೀಮಿರನು ಬಹಳ ತಿಳುವಳಿಕೆಯ ರಾಜನಾಗಿದ್ದನು. ಬಳಿಕ ಸಮಯದ ವರೆಗೆ ಲಢಾಖಿನ ಮೇಲೆ ಹತೋಟಿ ಇಟ್ಟುಕೊಳ್ಳಲು ಸಾಧ್ಯವಿಲ್ಲವೆಂಬುದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಆ ಕಾರಣದಿಂದಾಗಿ ಅವನು ಹಿಂತಿರುಗಿ ಕ್ಷರ್ದಿಗೆ ಬರುವಾಗ ಜಾಮೆ-ನಾಮ್-ಗ್ಯಾಲನನ್ನು ಬಿಡುಗಡೆಗೊಡಿದನು. ಅವನಿಗೆ ತನ್ನ ಪುತ್ರಿಯನ್ನು ಕೊಟ್ಟು ವಿವಾಹವನ್ನೂ ಮಾಡಿದನು.

ಜಾಮೆಯ ನಂತರ ಅವನ ಮಗ ಸಿಂಗೆ-ನಾಮ-ಗ್ಯಾಲನು ೧೬೨೦ನೇ ಇಸವಿಯ ಸಮಯ ರಾಜ್ಯಭಾರದ ಕಡಿವಾಣವನ್ನು ಕೈಗೆ ತೆಗೆದುಕೊಂಡನು. ಅವನು ಬಹಳ ನೀರ ಹಾಗೂ ಸಾಹಸೀ ರಾಜನಾಗಿದ್ದನು ಅವನು ಆಸುಪಾಸಿನ ಪ್ರದೇಶಗಳನ್ನು ಮಾತ್ರ ತನ್ನ ರಾಜ್ಯಕ್ಕೆ ಸೇರಿಸಿಕೊಂಡದ್ದಲ್ಲದೆ, ಬಲತಿಯ ರಾಜ ಅಹಮ್ಮದ ಖಾನನನ್ನು ಪರಾಜಿತಗೊಳಿಸಿದನು. ಅವನು ತಾನು ಸ್ವತಂತ್ರ ರಾಜನೆಂದು ಘೋಷಿಸಿದನು ಅವನ ರಾಜ್ಯದಲ್ಲಿ ರುದೋಕ ಕೂಡಾ ಸೇರಿಕೊಂಡಿತ್ತು. ಇವನು ಶ್ರಿವಿಷ್ಣುಪದ ರಾಜಧಾನಿ ಲ್ಹಾಸದ ಮೇಲೆ ಆಕ್ರಮಣ ನಡೆಸಬೇಕೆಂದು ಅತ್ತ ಸೇನೆಯನ್ನು ತಿರುಗಿಸಿದನು. ಆಷ್ಟರಲ್ಲೇ, ಭೀತಿಗೊಂಡ ಶ್ರಿವಿಷ್ಣುಪದ ಪ್ರತಿನಿಧಿಯು ಚಹಾ ಸುತ್ತಿ, ಬೆಳ್ಳಂಬಂಗಾರ ದಿಗಳನ್ನು ತೆಗೆದುಕೊಂಡು ಒಂದು ಅರ್ಧ ದಾರಿಯಲ್ಲೇ ಬೇಟಿಯಾಗಿ ಸಂಧಾನಕಾರ್ಯಕ್ಕಾಗಿ ವ್ಯಾಘ್ರಿಸಿಕೊಂಡನು. ಅಲ್ಲಿಂದ ಅವನು ಹಿಂತಿರುಗಿ ಒಂದ ಸ್ವಲ್ಪ ಸಮಯದ ನಂತರ ಮಜಾಂಜಿನ ಸ್ಥಿತಿ ಜಿಲ್ಲೆಯ ಮೇಲೆ ಆಕ್ರಮಣ ನಡೆಸಿ ಅದರ ಮೇಲೆ ಅಧಿಕಾರ ನಡೆಸುತ್ತಿದ್ದನೆಂದೂ ಹೇಳಲಾಗುತ್ತದೆ.

ದೇವದಾನನು ಕಾರನೂ ಹಾಗೂ ಬಲತಿ ಪ್ರದೇಶಗಳ ಸಮಕಾಲೀನ ಮುಖ್ಯ ಸ್ಥರ ಮೇಲೆ ತನ್ನ ಅಧಿಕಾರವನ್ನಿಟ್ಟುಕೊಂಡಿದ್ದನು; ಅವರಿಬ್ಬರೂ ಕಾಶ್ಮೀರದ ಮೊಗಲ ರಾಜ್ಯಾಧಿಕಾರಿಯ ಸಹಾಯದಿಂದಾಗಿ ಕಟ್ಟಿದ ಮೇಲಿದ್ದರು. ಅದರ ನಂತರ ಅವರಿಬ್ಬರೂ ಲಢಾಖಿಗೆ ಅಧಿನಾಯಕರಾಗಲೊಪ್ಪಿಕೊಂಡಿಲ್ಲ ಆದರೆ ಆಷ್ಟರಲ್ಲೇ ಲಢಾಖಿನ ಮೇಲೆ ಸೋಜೋಡಕನು ಆಕ್ರಮಣ ನಡೆಸಿದನು. ಶತ್ರುವನ್ನೆದುರಿಸಲು ತನ್ನಿಂದ ಸಾಧ್ಯವಾಗದಿರುವದನ್ನು ಮನಗಂಡು ಅವನು, ಕಾಶ್ಮೀರದ ರಾಜ್ಯಾಧಿಕಾರಿ ಇಬ್ರಾಹಿಂಖಾನನ ನೆರವನ್ನು ಪಡೆದುಕೊಂಡನು ಅವನು ಅರಿಸೈನ್ಯವನ್ನು ಪೊಡೆದಟ್ಟುವದರಲ್ಲಿ ಸಫಲತೆಯನ್ನು ಪಡೆದನು. ಆದರೆ ಐದು ವರ್ಷಗಳ ನಂತರ ಸೋಜೋಡಕನು ಪುನಃ ಯುದ್ಧಕ್ಕೆ ಇಳಿದನು. ಅವನು ಲೇಹದಲ್ಲಿಯ ಸ್ವಲ್ಪ ಭಾಗವನ್ನು ತನ್ನ ವಶಪಡಿಸಿಟ್ಟುಕೊಂಡನು. ರುದೋಕ ಪ್ರದೇಶ

(ಉಳಿದ ಪುಟ ನೋಡಿರಿ)

ಒಂದೇ ಕಲ್ಲಿನಿಂದ ಎರಡು ಹಣ್ಣುಗಳು!

ರಾಷ್ಟ್ರದ ರಕ್ಷಣೆಗೂ ಜೀವನದ ಭದ್ರತೆಗೂ ಉಳಿತಾಯವು ಅತ್ಯವಶ್ಯ.

ಉಳಿತಾಯ ಮಾಡಿರಿ! ಒಂದು ಸೇವಿಂಗ್ಸ್ ಬ್ಯಾಂಕ್ ತೆರೆಯಿರಿ

ಕೊಪ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪೨	ಉಡುಪಿ ೬-೧೨-೧೯೬೨	ವಾರ ೧೩

ಭಾರತೀಯರ ದೃಢತೆ

ಜಗತ್ತಿಗೆ ಜಗತ್ತೇ ನಿರೀಕ್ಷಿಸುತಿದ್ದ ದಶಂಬರ ಮೊದಲನೆಯ ದಿನ ಬಂದು ಹೋಯಿತು. ಕೆಂಪು ಚೀನಾವು ತಾನು ಆಕ್ರಮಿಸಿದ್ದ ಭಾರತೀಯ ಭೂಬಾಗದಿಂದ ತನ್ನ ಸೇನೆಯನ್ನು ಏಕಪಕ್ಷೀಯವಾಗಿ ಹಿಂತೆಗೆದುಕೊಳ್ಳಲು ನಿರ್ಧರಿಸಿದ ದಿನವದು. ಪೀಕಿಂಗ್ ರೇಡಿಯೋ ಸಾರಿರುವಂತೆ ಅದು ತನ್ನ ಸೇನೆಯನ್ನು ನೇಫಾದ ಪಶ್ಚಿಮ ಪ್ರದೇಶದ ಎಂಟು ರಾಣೆಗಳಿಂದ ಹಿಂದೆ ತೆಗೆಯಿತು; ಆದರೆ, ಈ ಸಂಬಂಧದಲ್ಲಿ ನವದೆಹಲಿಯಲ್ಲಿ ಯಾವ ತಿಳುವಳಿಕೆಯೂ ಉಂಟಾಗಲಿಲ್ಲ. ಸೇನೆಯು ಮರಳಿ ಹೋಗುವುದು ನಿಜವೆಂದಾದರೆ, ಅನು ಮರಳಿದಂತೆಯೇ ಭಾರತೀಯ ಗಸ್ತಿ ದಳವು ಮುಂದುವರಿಯುವುದೆಂದೂ, ಅನ್ಯಾಯವಾಗಿ ಚೀನವು ಆಕ್ರಮಿಸಿದ ನೇಫಾ ಮತ್ತು ಲಡಖಗಳಲ್ಲಿ ನಾಗರಿಕ ಆಡಳಿತೆಯನ್ನು ಸಾಧ್ಯವಾದಷ್ಟು ಬೇಗ ಸ್ಥಾಪಿಸಲು ಭಾರತೀಯ ಸರಕಾರವು ಪ್ರಯತ್ನಿಸುವುದೆಂದೂ ನವದೆಹಲಿಯ ಘೋಷಣೆಯಿದೆ. ಇಂತಹ ಸ್ಪಷ್ಟತೆಯ ಆತ್ಮಗತ್ಯವೆಂದು ಎಲ್ಲರೂ ಒಪ್ಪುತ್ತಾರೆ. ಆದರೆ, ಕೆಂಪು ಚೀನೀಯರ ಹೇಳಿಕೆ ಮತ್ತು ನವಚೀನಾ ವಾರ್ತಾ ಸಂಸ್ಥೆಯ ಸುದ್ದಿ ಹಾಗೂ ಪೀಕಿಂಗ್ ರೇಡಿಯೋ ಪ್ರಸಾರಗಳನ್ನು ಸಂಪೂರ್ಣ ನಂಬುವುದು ಮಾತ್ರ ಕಷ್ಟ ಸಾಧ್ಯ; ಹಿಂದಿನಿಂದಲೂ ಜೆಜ್ಜೆ ಜೆಜ್ಜೆಯಲ್ಲಿ ಗತ್ತುಗಾರಿಕೆಯನ್ನೂ ಮಿತ್ರದ್ರೋಹವನ್ನೂ ಪ್ರದರ್ಶಿಸುತ್ತ ಬಂದ ಆ ರಕ್ತ ಪಿಪಾಸು ಸಾಮ್ರಾಜ್ಯ ಶಾಹಿಗಳನ್ನು ಮರಳಿ ನಂಬಿ ತಿರುಗೊಮ್ಮೆ ಮೋಸ ಹೋಗುವಷ್ಟು ತಿಳಿಗೇಡಿಗಳು ಭಾರತೀಯರಲ್ಲ.

ಚೀನೀಯ ಪ್ರಧಾನಿ ಚೌ ಎನ್ ಲಾಯ್‌ಯವರು ಯುದ್ಧ ವಿರಾಮ ಘೋಷಣೆಯೇ ಚೌ ಚೌ ಎಂದಿತ್ತು. ಇದಕ್ಕೆ ಕೇಳಿದ ಸ್ಪಷ್ಟೀಕರಣವು ಮತ್ತಷ್ಟು ಗೊಂದಲದಿಂದಲೇ ಕೂಡಿದೆ. ಹಾಗಾಗಿ ಕೆಂಪು ಚೀನವು ತನ್ನ ಸಾಮ್ರಾಜ್ಯ ವಿಸ್ತರಣೆಯ ನೀತಿಯನ್ನು ಸಂಪೂರ್ಣ ಬಿಟ್ಟು ಕೊಡುವುದಕ್ಕೆ ಸಿದ್ಧವಿಲ್ಲವೆಂದೂ, ಭಾರತದ ಸಶಕ್ತವು ನಿರ್ಬಲವೆಂದೂ ಪ್ರಚಲಿತ ಸಂಘರ್ಷಣೆಯಿಂದ ಯಾವ ಪಕ್ಷವಾದರೂ ಮಾಡಿದ ಪ್ರಗತಿಯ ಕಾರಣದಿಂದ ಏಕಪಕ್ಷೀಯ ನಿರ್ಣಯವನ್ನು ಹೇರಬಾರದು ಎಂಬ ಜಾಗರವರ ಸಿದ್ಧಾಂತವನ್ನೇ ಉಲ್ಲಂಘಿಸಿದಂತಾಗುವುದೆಂದೂ ಪ್ರಧಾನಿ ನೆಹರು ಅವರಿಗೆ ತಿಳಿಸಿದ್ದಾರೆ. ಇದು ನಿಜ ಚೀನೀಯರ ಹೇಳಿಕೆ ಹಾಗೂ ಪತ್ರಗಳು ಅಸ್ಪಷ್ಟವಾಗಿಯೇ ಇರುವುದರಿಂದ ಮುಂದಿನ ಕಾರ್ಯಾಚರಣೆಯನ್ನು ನಿರ್ದಿಷ್ಟ ಪಡಿಸುವುದು ಭಾರತಕ್ಕೆ ಈಗಲೇ ಅಸಾಧ್ಯವಾಗಿದೆ. ಆದೇನೇ ಇದ್ದರೂ ಉಭಯತ್ರರ ನಡುವೆ ದೊಡ್ಡದಿರುವ ಭಿನ್ನಾಭಿಪ್ರಾಯವೆಂದರೆ, ಚೀನೀಯ ಸೇನೆಯು ಹಿಂದೆ ಸರಿದರೂ, ಆ ಪರಿಮಿತಿಯ ರೇಖೆಯಲ್ಲಿದ್ದೆ ಭಾರತವು ಈ ವರ್ಷದ ಸಪ್ತಂಬರ ಆರಂದು ಇದ್ದಲ್ಲಿಗೆ ಸೇನೆಗಳು ಮರಳ ಬೇಕು ಎಂದರೆ, ಚೀನ ಹೇಳುತ್ತದೆ, ೧೯೫೯ರ ನವಂಬರ ೭ರಂದು ಇದ್ದಲ್ಲಿಗೆ ಮಾತ್ರವೆಂದು ಇಲ್ಲಿ ಚೀನೀಯರ ಸೂಚನೆಯನ್ನು ಭಾರತವು ಒಪ್ಪಿತೆಂದರೆ, ಅದು ಬಹಳಷ್ಟು ಪ್ರದೇಶವನ್ನು ಕೈ ಬಿಡಬೇಕಾಗುವುದು. ಮೂತ್ರವಲ್ಲ ಚೀನವು ಹೇಳುವ ರೇಖೆಯು ಅದರ ಏಕಪಕ್ಷೀಯ ನಿರ್ಣಯದ್ದಾಗಿದೆ. ಅದನ್ನು ಭಾರತವು ಎಂದಿಗೂ ಒಪ್ಪಿದ್ದಿಲ್ಲ; ಒಪ್ಪುವ ಹಾಗೂ ಇಲ್ಲ. ಆದರೆ, ಚೌರವರು ತನ್ನ ವಾದವನ್ನೇ ದೃಢವಾಗಿ ಉಚ್ಚರಿಸುತ್ತಿರೆ. ಇಷ್ಟು ಮಾತ್ರವಲ್ಲದೆ, ತಾನು ಏಕಪಕ್ಷೀಯವಾಗಿ ಹಿಂದೆ ಸರಿಯುವುದರಿಂದ, ಭಾರತವು ತನ್ನ ವಿರುದ್ಧ ಸೇನಾದರೂ ಕಾರ್ಯಾಚರಣೆ ಕೈಗೊಂಡರೆ, ಹೀಗೆ ಮರಳುವ ಯೋಜನೆಯನ್ನು ಕೈಬಿಡಲಾಗುವುದು ಎಂಬ ಬೆದರಿಕೆಯನ್ನೂ ಚೌ ಹಾಕಿದ್ದಾರೆ. ಅನ್ಯಾಯವನ್ನು ಮಾಡಿದವನು ತನ್ನ ಅನ್ಯಾಯ ಕೃತ್ಯಗಳನ್ನು ಮರೆಮಾಚುವುದಕ್ಕಾಗಿ ಯಾವ ರೀತಿಯಲ್ಲಿ ಸುಳ್ಳುಗಳನ್ನು ಕಣೆಯಬಹುದೋ ಅವೆಲ್ಲವನ್ನೂ ಚೌ ಇಂದು ನೇಯ್ದುಕೊಂಡಿದ್ದಾರೆ. ಆದರೆ, ಈ ಸಂಬಂಧದಲ್ಲಿ ಭಾರತದ ನಿಲುಮೆ ಸುದೃಢವಿದೆ. ೧೯೬೨ರ ಸಪ್ತಂಬರ ೮ರಂದು ಇದ್ದ ಸ್ಥಳಕ್ಕಾದರೂ ಸೇನೆಯನ್ನು ಮರಳಿಸದೆ ಹೋದರೆ, ಭಾರತವು ಅಕ್ರಮಣವನ್ನು ಸರ್ವ ಶಕ್ತಿಯಿಂದಲೂ ಎದುರಿಸುವುದು. ಈ ಅಚಲ ನಿಶ್ಚಯವನ್ನು ನೆಹರು ಮರಳಿ ಮರಳಿ ಉಚ್ಚರಿಸಿದ್ದಾರೆ.

ವಿಸ್ತರಣಾವಾದಿ ಚೀನಾದ ಅಂತರಾಳ ಅನಂತನೂ ಅರಿಯಲಾರದಷ್ಟು ಆಳವಿದೆ. ಅದರಲ್ಲಿ ಯಾವ ಯಾವ ಬಗೆಯ ಮಾಯಾ ಜಾಲಗಳಿವೆಯೆಂಬುದಿನ್ನೂ ವ್ಯಕ್ತವಾಗಿಲ್ಲ. ಅದೇ ನೇ ಇದ್ದರೂ ಇಂದು ಭಾರತದ ಸಂರಕ್ಷಣಾ ಬಲದಲ್ಲಿ ಬಲ ತುಂಬಿದೆ. ಅನ್ಯತೆದ ಕಲಶವೆಂದು ಸುರಿಸುಕೊಂಡದ್ದು ಭೂರಿ ಹಾಲಾಹಲವೆಂದು ಪ್ರತ್ಯಕ್ಷವಾಗಿ ಅನುಭವಿಸಿದ ಬಳಿಕ ಈ ಅನುಭವದ ಪಾಠವನ್ನು ನಾವು ಅಲ್ಲಿಯೇ ಮರೆಯುವಂತಿಲ್ಲ. ನಮ್ಮ ಮಿತ್ರ ರಾಷ್ಟ್ರಗಳು, ಕಮ್ಯುನಿಜಂ ವಿರೋಧಿ ದಿಂದಲೇ ಏಕಾಗಬಾರದು, ನಮಗೆ ಆವಶ್ಯಕ ಸಹಾಯ ಪಲ್ಲಿಸಲು ಮುಂದೆ ಬಂದಿವೆ. ದೇಶದ ಸಮಸ್ತ ನಾಗರಿಕರೂ ಇಂದು ಜಾಗ್ರತರಾಗಿದ್ದಾರೆ. ದೇಶದ ಕಡೆಗೆ ತನ್ನ ಕರ್ತವ್ಯವೇನು ಎಂಬುದನ್ನು ಸರಿಯಾಗಿ ಕಂಡುಕೊಂಡು, ಅದನ್ನು ಸಾರೈಸಲು ಟೊಂಕ ಕಟ್ಟಿದ್ದಾನೆ. ದೇಶವು ಪರಕೀಯರ ಪಾದಾಕ್ರಾಂತವಾಗುವುದನ್ನು ಆತನ ಮನೋವಾಕ್ಕಾಯಗಳಿಂದ ಪ್ರತಿಭಟಿಸುತ್ತಾನೆ; ತನುಮನಧನಗಳಿಂದ ಸ್ವದೇಶ ರಕ್ಷಣೆಗೆ ಹೋರಾಡುತ್ತಾನೆ. ಚೀನೀಯರು ತಾವು ಆಕ್ರಮಿಸಿದ ಪ್ರದೇಶದಿಂದ ಹಿಂದೆ ಸರಿಯದೆ ಮಾತುಕತೆಯು ಮಾತೇ ಇಲ್ಲವೆಂಬ ಪ್ರಧಾನಿಯವರ ದೃಢ ನಿಲುವಿನಲ್ಲಿ ಅಚ್ಚುತ್ತಾನೆ. ಇಂದು ಚೀನೀಯರು ನಿಜವಾಗಿ ಶಾಂತಿಯನ್ನು, ಭಾರತದ ಸ್ನೇಹವನ್ನು ಬಯಸುವುದಾದರೆ, ಯಾವ ಕರಾರುಗಳನ್ನೂ ಹಾಕದೆ ಅವರು ಮರಳಿ ಹೋಗಬೇಕು; ಮೈಕಮ ಹೋನ ರೇಖೆಯನ್ನು ದಾಟಿ ಹಿಂದೆ ಸರಿಯಬೇಕು; ಶಾಂತ ವಿಧಾನಗಳಿಂದಲೇ ಗಡಿ ವಿವಾದವನ್ನು ಅಂತರಾಷ್ಟ್ರೀಯ ನ್ಯಾಯದಂತೆ ಪರಿಹರಿಸುವ ಛಂದರ್ಭವನ್ನು ಕಲ್ಪಿಸಿಕೊಡಬೇಕು. ಅದನ್ನು ತ್ಯಜಿಸಿ ತಮ್ಮ ವಿಸ್ತರಣಾವಾದವನ್ನೇ ಮುಂದುವರಿಸುವುದಾದರೆ, ಭಾರತೀಯರು ಆತ್ಮರಕ್ಷಣೆ ಮಾಡಿಕೊಳ್ಳಲು ಆಕ್ರಮಣಕಾರರನ್ನು ಹೊಡೆದೋಡಿಸಲು ಸೂಕ್ತ ಕ್ರಮ ಕೈಗೊಳ್ಳಲೇ ಬೇಕಾಗುತ್ತದೆ. ಈ ಕಾರ್ಯದಲ್ಲಿ ಅವರನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ.

ಪಾಕ್-ಭಾರತ ಸಂಬಂಧ

ಹೆರಿಮನ್ ಮತ್ತು ಸ್ಯಾಂಡಿಸ್‌ರವರು ಭಾರತದ ಮಿಲಿಟರಿ ಅವಶ್ಯಕತೆಗಳನ್ನು ಕಂಡುಕೊಂಡು, ವಿಚಾರ ವಿನಿಮಯವನ್ನು ನವದೆಹಲಿಯಲ್ಲಿ ನೂಡಿದರು. ಈ ಸಂಬಂಧದಲ್ಲಿ ಒಂದು ಒಡಂಬಡಿಕೆಯನ್ನೂ ಸಾಧಿಸಿಕೊಂಡರು. ಯಾವ ರಾಜಕೀಯ ಶರ್ತಗಳೂ ಇಲ್ಲದೆ, ಕಮ್ಯುನಿಸ್ಟ್ ಚೀನಾದ ವಿರುದ್ಧ ಉಪಯೋಗಿಸುವ ಸೈನಿಕ ಸಾಮಗ್ರಿಗಳು ಭಾರತಕ್ಕೆಂದು ದೊರೆಯುತ್ತಿರುವಂತಾಗಿದೆ. ಇದು ಪ್ರಶಂಸನೀಯ. ಅಮೆರಿಕೆ ಮತ್ತು ಬ್ರಿಟನ್ನಿನ ಈ ನಾಯಕರು ಕಂಡು ಕೊಂಡ ಮತ್ತೊಂದು ವಿಷಯವೆಂದರೆ, ಪಾಕ್-ಭಾರತ ಮಿತ್ರತ್ವ- ಬೇನೀಯರ ಧಾಳಿಯು ಭಾರತಕ್ಕೆ ಮಾತ್ರ ಅದುದಲ್ಲ. ಭಾರತೀಯ ಉಪಖಂಡದ ಮೇಲಾದ ಧಾಳಿ ಆದುದರಿಂದ ಈ ಎರಡು ದೇಶಗಳಲ್ಲಿ ಏನೇ ಭಿನ್ನಾಭಿಪ್ರಾಯ ವಿರಲಿ, ಅದನ್ನು ಬದಿಗೆ ಸರಿಸಿ ಇಬ್ಬರಿಗೂ ಕೇಡು ಬಯಸುವ ಚೀನೀಯ ಬಕಾಸುರನನ್ನು ಎದುರಿಸಬೇಕು ಎಂದಿವರ ಅಂಬೋಣ. ಪಾಕಿಸ್ತಾನಕ್ಕೆ ಭಾರತದ ಮೇಲೆ ಇರುವ ವೈಮನಸ್ಸನ್ನು ಎಂದರೆ, ಕಾಶ್ಮೀರ ಪ್ರೇರಿತವಾದುದು. ಕಾಶ್ಮೀರದ ಪ್ರಶ್ನೆಯು ಮೂನಾಪವನೂನಗಳ ಪ್ರಶ್ನೆಯಿಂದ ಅಧ್ಯಕ್ಷ ಅಯೂಬರು ಹೇಳುತ್ತ ಬಂದಿದ್ದಾರೆ. ಕಾಶ್ಮೀರದ ಭವಿಷ್ಯತ್ತು ನಿರ್ಧರಿಸುವವರು ಕಾಶ್ಮೀರಿಗಳೇ ಹೊರತು ಮತ್ತಾರೂ ಅಲ್ಲ. ಅವರು ಅದನ್ನು ಈಗಾಗಲೇ ದೃಢಪಡಿಸಿಕೊಂಡಿದ್ದಾರೆ. ಇದರಲ್ಲಿ ಅಯ್ಯೂಬಖಾನರಿಗಾಗಲೀ, ನೆಹರುಗಳಿಗಾಗಲೀ ಮಾತಾಡುವುದು ಸಾಧ್ಯವಿಲ್ಲ. ಆದುದರಿಂದ ಅದನ್ನೂ ಉಭಯ ಕರರ ನಡುವಿನ ಇತರ ಭಿನ್ನಾಭಿಪ್ರಾಯಗಳನ್ನೂ ಮುನರ್ವಿಮರ್ಶಿಸುವಂತೆ ನಾಯಕಧ್ವಯರೂ ಒಪ್ಪಿದ್ದಾರೆ. ಈ ಬಗೆಯ ಒಡಂಬಡಿಕೆಗಳಿಗೆ ಉಪರೋಕ್ತ ಪಾಶ್ಚಾತ್ಯ ನಾಯಕರೇ ಕಾರಣ. ಮುನರ್ವಿಮರ್ಶೆ ಎಂದರೇನು? ಎರಡು ದೇಶಗಳ ವಾದಗಳಲ್ಲಿ ಯಾರದು ಸತ್ಯಕ್ಕೆ ಸವಿಾಪವಿದೆಯೆಂಬುದನ್ನು ನಿರ್ಧರಿಸುವುದು. ಇದಕ್ಕೆ ಇತಿಹಾಸವೇ ಸಾಕ್ಷಿ. ಇಂದು ಭಾರತವು ಈ ವಿಧದ ವಾದವನ್ನು ಮತ್ತೂ ಮತ್ತೂ ಬೆಳೆಸಲು ಬಯಸುವುದಿಲ್ಲ. ತನ್ನ ನಿಲುಮೆಯನ್ನು ಅದು ಎಂದೋ ಸ್ಪಷ್ಟಪಡಿಸಿದೆ. ಇದನ್ನು ಇನ್ನಷ್ಟು ತಿಳಿಯಗಿಸಿ ಪಾಕಿಸ್ತಾನೊಡನೆ ಕೆಡುತ್ತಿರುವ ತನ್ನ ಸಂಬಂಧವನ್ನು ಉತ್ತಮಗೊಳಿಸಲು ಅದು ಸದಾ ಸಿದ್ಧವೇ ಇದೆ. ಮುಖ್ಯ ಆಯ್ಯೂಬಖಾನರಿಗೆ ಸತ್ಯಸ್ಥತೆಗಳು ಸರಿಯಾಗಿ ಮಂದಟ್ಟಾಗಬೇಕು.

ವಾರ್ತಾನೇದಿಕೆ

ಭಾರತದ ಭದ್ರರಕ್ಷೆ

ಭಾರತವು ಜವಾಹರಲಾಲರ ಕೈಗಳಲ್ಲಿ ಸುದೃಢವಾಗಿ ಉಳಿಯುವುದು ಎಂದು ಮಹಾತ್ಮಾ ಗಾಂಧಿ ಅಂದು ಹೇಳಿದ್ದರು. ಇಂದು ಅದೇ ಮಾತನ್ನು ಜಗತ್ತೂ ಸಾರುತ್ತಿದೆ; ಭಾರತೀಯರೂ ಕಂಡುಕೊಂಡಿದ್ದಾರೆ. ಪ್ರಪಂಚದ ಸರ್ವಶ್ರೇಷ್ಠ ರಾಜಕಾರಣಿಗಳಲ್ಲಿ ಒಬ್ಬರಾದ ನೆಹರುರವರ ದೂರ ದೃಷ್ಟಿಯುತ ವಿದೇಶ ನೀತಿಯ ಒತ್ತಡದಿಂದ ಚೀನಾವು ಆಕ್ರಮಣ ಮಾಡಿದ ಸೇನೆಯನ್ನು ಮರಳಿ ಕರೆಯುತ್ತಿದೆ; ಒಂದೊಮ್ಮೆ ಶತ್ರುಗಳಂತೆ ಮಾತಾಡುತಿದ್ದ ಅಮೆರಿಕೆ—ಬ್ರಿಟನ್ ಮೊದಲಾದ ಪಾಶ್ಚಾತ್ಯ ಬಣಗಳು ಭಾರತದ ನೆರವಿಗೆ ಮುಂದಾಗಿವೆ. ಚೀನೀಯ ಗಡಿ ವಿವಾದದಲ್ಲಿ ನೆಹರು ಭಾರತದ ಗೌರವವನ್ನು ಉಳಿಸಿಕೊಂಡು ಮುನ್ನಡೆಯುತ್ತಾರೆಂದು ಭಾರತೀಯರು ನೃಢವಾಗಿ ನಂಬಿದ್ದಾರೆ ಇದು ವ್ಯಕ್ತಿಯ ಮೇಲಣ ಪೂಜಾಭಾವವಲ್ಲ; ಅವರಲ್ಲಿ ಅಡಗಿರುವ ಅದ್ವಿತೀಯ ಶಕ್ತಿಯ ಪ್ರತಿಶಂಸೆ ಮತ್ತು ಅಂಧನೆ ಮಾತ್ರ.

ಅಡಿಯ ಹಿಂದಿಡೆ ನರಕ

ಸಂದಕ್ಷಣೆಯ ಬಗ್ಗೆ ಅಧಿಕವಾಗಿ ಸಂಪತ್ತನ್ನು ವಿನಿಯೋಗಿಸಬೇಕಾದುದರಿಂದ ಪಾರ್ಲಿಮೆಂಟ್ ಸದಸ್ಯರ ದೃಷ್ಟಿ ಮದ್ಯವಾನ ಪ್ರತಿಬಂಧವನ್ನು ಕಿತ್ತು ಪಾಕಾನತ್ತ ಸರಿದಿರುವುದು ತಪ್ಪಲ್ಲ; ಏಕೆಂದರೆ, ಈ ರೀತಿಯ ಕ್ರಮ ಕೈಗೊಂಡದ್ದೇ ಆದರೆ, ರಾಜ್ಯ ಸರಕಾರಗಳ ಆದಾಯವು ಗಣನೀಯವಾಗಿ ಹೆಚ್ಚುವುದು. ಉತ್ತರ ಪ್ರದೇಶ ಸರಕಾರವು ಹೀಗೆ ಮಾಡಿ ಆಗ್ರ ಸ್ಥಾನವನ್ನು ಈ ದಿಸೆಯಲ್ಲಿ ಪಡೆದಿದ್ದರೆ, ಗುಜರಾತ ಮತ್ತು ಮಹಾರಾಷ್ಟ್ರಗಳು ಇದನ್ನು ವಿರೋಧಿಸಿವೆ. ಜನತೆಯ ಜೀವನದ ಮೇಲೆ ಪ್ರಭಾವೀ ಪ್ರಭಾವ ಬೀರುವ ನೈತಿಕ ವಟ್ಟದ ಸನ್ನತಿಗೆ ಹೇತುವಾದ ಈ ಕಾಯದೆಯನ್ನು ಸ್ವೀಕರಿಸಿ ಭಾರತವು ಮುಂದಿಟ್ಟ ಹೆಜ್ಜೆಯನ್ನು ಈಗ ಹಿಂದಿಡುವುದು ನ್ಯಾಯವೆನಿಸುವುದಿಲ್ಲ: ಧನ ಸಂಪಾದನೆಯು, ಉಳಿತಾಯದ ಇತರ ವಿಧಾನಗಳು ಬೇಕೆಂಬಷ್ಟಿರುವಾಗ ಇಡಿಯ ಭಾರತದ ಮಟ್ಟದಲ್ಲಿ ಈ ಪ್ರಶ್ನೆಯನ್ನು ಪುನರ್ವಿಮರ್ಶಿಸಬೇಕೆಂಬ ನಿಜಲಿಂಗಪ್ಪನವರ ಹೇಳಿಕೆಯು ನ್ಯಾಯ; ಆದರೆ, ಅದರ್ಶವನ್ನು ಬಿಟ್ಟುಕೊಡುವುದು ಮಾತ್ರ ಅನ್ಯಾಯ.

ನಾಸೇರರ ಅಸಕ್ತಿ

ಸಂಯುಕ್ತ ಅರಬ ರಾಷ್ಟ್ರದ ಅಧ್ಯಕ್ಷ ನಾಸೇರರು ಈಗಿನ ರಾಜಕಾರಣಿಗಳಲ್ಲಿ ಪ್ರಮುಖರು. ಸುಯೇಜಕಾಲುವೆಯು ರಾಷ್ಟ್ರೀಕರಣದ ಮೇಲೆ ಅವರ ಎದೆಗಾರಿಕೆ ಜಗಜ್ಜಾಹಿರವಾಯ್ತು. ಚೀನಾ—ಭಾರತ ಗಡಿ ವಿವಾದದಲ್ಲಿ ತುಂಬು ಆಸಕ್ತಿಯುಳ್ಳ ಇವರು ಶ್ರೀಮತಿ ಭಂಡಾರನಾಯಕೆಯವರು ಸೂಚಿಸಿದ ಘಾನಾ, ಸಂ. ಲ.

ನವಯುಗ ಮುದ್ರಣಾಲಯದಲ್ಲಿ ಮುದ್ರಿತ

ರಾಷ್ಟ್ರ, ಸಿಂಹಳ, ಬ್ರಹ್ಮ, ಇಂಡೋನೇಶ್ಯ ಮತ್ತು ಕಂಬೋಡಿಯಗಳ ಸಮ್ಮೇಳನವು ನಾಳೆಯು ಪರ್ಯಾಲೋಚನೆಗೆ ಮೊದಲು ಸೇರುವುದರಿಂದ ಅಯಶಸ್ಸುಗೊಳ್ಳುವುದು ಎಂದು ಅಭಿಪ್ರಾಯಕ್ಕೆ ಬಂದುದರಿಂದ ಅದು ನುಂಡೆ ಬೀಳಕಾಯಿತು. ಯಾವುದೇ ಸಮ್ಮೇಳನವು ನಡೆಯುವುದರಿಂದ ಏನಾದರೂ ಪ್ರಯೋಜನ ದೊರೆಯಬೇಕಲ್ಲದೆ ಸಮ್ಮೇಳನಕ್ಕಾಗಿ ಆದು ನೆರೆದರೆ ನಿರುಪಯುಕ್ತ ಚೀನಾದ ಆಂಶರಂಗವು ಇನ್ನೂ ಆಸ್ಪಷ್ಟವಿರುವಾಗ ಆದರ ಬಗ್ಗೆ ಚರ್ಚೆ ನಡೆಸಿ ವ್ಯರ್ಥ ಕಂರಶೋಷಣೆಯೇಕೆ ಮಾಡಬೇಕು?

(೧ನೇ ಪುಟದಿಂದ)

ದು. ಭಾರತೀಯರು ಈ ಕಾರ್ಯದಲ್ಲಿ ಸಫಲರಾಗಲಿ. ತನ್ಮ್ಮ ಕಾಯ ರಕ್ಷಣೆಗೂಡುವ ಈ ಧೀರ್ಘಾವಧಿಯಲ್ಲಿ ಅವರಿಗೆ ದೇವರು ಪೂರ್ಣ ಬೆಂಬಲ ದೊರಕಲಿ. ನಿಮ್ಮ ಈ ಕಾರ್ಯಕ್ಕೆ ನಮ್ಮಿಂದಾಗಬೇಕಾದ ಯಾವ ಸಹಾಯಕ್ಕೂ ನಾವು ಸದಾ ಸಿದ್ಧರಿದ್ದೇವೆ" ಎಂದು ಹೇಳಿ ನೆಹರೂರವರಿಂದ ವಿದಾಯಪಡೆದ ಹ್ಯಾಮ್ರಿವ ನ್ಸರಿಗೆ ಮತ್ತು ಡಾಕನ್ ಸ್ಯಾಂಡಿಸ್ಸರಿಗೆ ಭಾರತವು ಸದಾ ಋಣಿ. ಈ ಎರಡೂ ನಿಯೋಗಗಳ ಸಂದರ್ಶನದಿಂದ ನಮ್ಮ ಶಕ್ತಿಗೆ-ಚೈತನ್ಯಕ್ಕೆ ಒಪ್ಪವಿಟ್ಟಂತೆ, ಬಂಗಾರಕ್ಕೆ ಘಟವಿಟ್ಟಂತೆ ಆಗದೆ ನಮ್ಮಲ್ಲಿ ದೇಶ ಭಕ್ತಿಯ ಹಸಿವು ಮತ್ತು ಸ್ವಾ ಹೆಚ್ಚಿದೆ. ಸ್ವಾತಂತ್ರ್ಯಶ್ರೀ ರಕ್ಷಣೆಯ ಪವಿತ್ರ ಯಜ್ಞದ ಹೋಳಿಗಾರಿಕೆಯು ಅರಿವು ಬಲವಾಗಿ ಉಂಟಾಗಿದೆ. ಇಂದು ನಮ್ಮನ್ನು ಯಾರೂ ತಡೆಯುವುದಿಲ್ಲ. ನಮಗೆ ಚೀನಾದ ದುರಾಕ್ರಮಣಗಾರರನ್ನು ಸದೆಬಡಿಯುವ ವಿಶ್ವಾಂತಿಯಿಲ್ಲ. ಅವರಿಗೆ ತಕ್ಕ ಬುದ್ಧಿ ಕಲಿಸದೆ ಬಿಡುವಿಲ್ಲ ಇಂಥ ಸಂದರ್ಭದಲ್ಲಿ ನಮಗೆ ಸಹಾಯ ಮಾಡಬಂದ ನಮ್ಮ ಆಪ್ತ ರಾಷ್ಟ್ರಗಳಿಗೆ ನಾವು ಸದಾ ಋಣಿಯಾಗಿದ್ದು ನಮ್ಮ ತಾಯಿಯ ಪೂರ್ಣ ರಕ್ಷಣೆಯ ಈ ಸಮರ ಯಜ್ಞದಲ್ಲಿ ನಮ್ಮ ತನು ಮನಧನಗಳನ್ನು ಅರ್ಪಿಸಿ ಧನ್ಯರಾಗುತ್ತೇವೆ. —ಶ್ರೀರಾಮಾಂತಯ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 450/1962.

ದಿ. ನೇಶನಲ್ ಟೊಬೊಕೊ ಸ್ಟೋರ್ಸು— ಉಡ್ಪಿ— ಯಿದ್ದ ಪಾರ್ಟ್‌ನರ ಯು. ಜಯವಂತ ಶೆಣ್ಯಾ — ವಾದಿ.

ಮತ್ತು

ಬಿ. ಅನಂತ ಯಸ್. ಕಾಮತ— ಶ್ರೀನಿವಾಸ ಕಾಮತರ ಮಗ— ಉಡ್ಪಿ ತಾಲ್ಲ್ಲೂ ಬೆಳ್ಳಾಯರು — ಪ್ರತಿವಾದಿ.

ಇದರೊಳಗೆ

ಸದ್ರಿ ಪ್ರತಿವಾದಿಗೆ ಯಾ ಮೂಲ್ಕ ತಿಳಿಸುವದೇನೆಂದರೆ—

ಮೇಲ್ಕಂಡ ವಾದಿಯ ಅಂಗವಿಯಲ್ಲಿ ಸದ್ರಿ ಪ್ರತಿವಾದಿಯು ನಿಷ್ಠಿದ —ರೇಷಾದೇವಿ ಬಾಕಿ ಅಸಲು ಬಡ್ಡಿಗೆ ವಾದಿಯು ಮಾಡಿದ ಮೇಲ್ಕಂಡ ದಾವೆಯು—ತಾ. 19-12-62ಕ್ಕೆ ಯಿಬ್ಬದಿ ಆ ಕುರಿತು ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿನ ಮೇಲ್ಕಂಡ ಕೋರ್ಟು ಮುಂದೆ 11 ಗಂಟೆಗೆ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ಯಂತ ಯಿ ಮೂಲ್ಕ ತಿಳಿಸೋಣಾಗಿಯದೆ.

N. V. Kamath,
Advocate for Plff.

ಉಡ್ಪಿ, 1—12—62.

ಅಲ್ಲಲ್ಲಿಯ ಸುದ್ದಿಸಾರ

ರೋಟರಿ ಸಭೆಯಲ್ಲಿ ಶ್ರೀ ಟಿ. ಎ. ಪೈಗಳ ಭಾಷಣ—ಉಡುಪಿ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ಕಳೆದ ತಾ. 27ರಂದು ಉಪೇಂದ್ರ ಬಾಗಿನಲ್ಲಿ ಅಧ್ಯಕ್ಷ ಶ್ರೀ ಟಿ ರಮೇಶ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಅಧ್ಯಕ್ಷರಿಂದಲೂ ಕಾರ್ಯದರ್ಶಿಯಿಂದಲೂ ಆತಿಥಿ ಪರಿಚಯವಾದ ನಂತರ ಶ್ರೀ ಟಿ. ಎ ಪೈಯವರು ಅಂತಾರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಕೆಲವು ಮಾತಾಡುತ್ತಾ, ಇಂದು ಚೀನೀಯರ ದುರಾಕ್ರಮಣದಿಂದ ಪ್ರತಿಯೊಬ್ಬ ಭಾರತೀಯನಿಗೂ, ಆತನ ವೈಕ್ತಿಗತ ಸ್ವಾತಂತ್ರ್ಯದ ಅರಿವುಂಟಾಗಿದೆ. ಜಾತಿ ಭೇದಗಳ ಅಗೆರೆಸಿಸಿದ ಭಾರತದ ಸಕಲ ಜನತೆಯೂ ಇಂದು ಒಕ್ಕೊರಿಂದ ಚೀನಾ ನನ್ನು ಎದುರಿಸಲು ನಿಶ್ಚವಾಗಿ ಇದೀ ಲೋಕಕ್ಕೆ ಬೆರಗನ್ನುಂಟುಮಾಡಿದೆ" ಎಂದರು. ಶ್ರೀ ಪೈಗಳು ನುಂಡುವರಿಸುತ್ತಾ ಬರೀ ಸಂಕುಚಿತ ತತ್ವವಾದ ಕಮ್ಯುನಿಸಮ್ ಪ್ರಜಾಸತ್ತಾತ್ಮಕ ಪ್ರಭುತ್ವದ ಪ್ರಭಾವ ರತ್ಯವಾದುದೆಂದರೆ ಇಂದು ಚೀನಾ ಭಾರತದಂತಹ ಪ್ರಜಾಪ್ರಭುತ್ವರಾಷ್ಟ್ರವನ್ನು ನಿರಾಕಾರಣ ಕೆಣಕುವಂತಾಗಿದೆ. ಈ ಸಂದರ್ಭದಲ್ಲಿ ಭಾರತದ ಕೆಲಜನತೆಯ ಅಸಹ್ಯರವು ಬೇಧಜನ್ಯಂಟುಮಾಡುವ ವಿಚಾರ ಭಾರತದ ಸಕಲ ಶಕ್ತಿ ಸೌಲಭ್ಯಗಳ ಅರಿವು ನಾವು ತಿಳಿಯಬೇಕು ಮೂಸತ್ತು ನರೆಪಗಳ ನೈತಿಕ ಅಸುಖವದ ಹಿನ್ನೆಲೆಯಿಂದ ಚೀನಾ ನಮ್ಮ ಮೆಲೆ ಧಾಳಿಮಾಡಿರಬೇಕೆಂಬುದನ್ನು ಮರೆಯಬಾರದು. ಆದರೆನ್ನು ಇಮರಿಸುವುದು ಕಿಸುವ ಶ್ರು ಸುಲಭವಲ್ಲ. ಇಂತಹ ಸಂದರ್ಭದಲ್ಲಿ ನಾವು ನಮ್ಮ ನಾಯಕರಿಗೆ ಬೆಂಬಲಿಸಬೇಕು. ಸು. ನೆಹರೂರವರ ನಾಯಕತ್ವದ ಮೇಲೆ ಅಚಲ ವಿಶ್ವಾಸವಿಟ್ಟು ಅವರ ಅಜ್ಞೆ ಪ್ರಕಾರ ನಡೆಯುವುದು ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನಮ್ಮ ಕರ್ತವ್ಯವಾಗಿದೆ ಎಂದರು.

ಅಧ್ಯಕ್ಷರ ಭಾಷಣದ ಬಳಿಕ ಕಾರ್ಯದರ್ಶಿ ಶ್ರೀ ಎ. ಕೃಷ್ಣರಾಯರು ಆಭಾರ ಮನ್ನಿಸಿದರು.

ಉಡುಪಿ ನಗರ ಸಭೆಯ ಉಪಾಧ್ಯಕ್ಷರಾಗಿ—ಶ್ರೀ ನಂಜುಂಡಾಪ್ಪ ಮಸ್ಕರು ಕಳೆದ ತಾ. 30ರಂದು ಜರಗಿದ ಚುನಾವಣೆಯಲ್ಲಿ ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ. ಶ್ರೀಯುತರು ಬೋರ್ಡ್ ಹೈಸ್ಕೂಲಿನ ನಿವೃತ್ತ ಅಧ್ಯಾಪಕರೂ ಆಗಿದ್ದಾರೆ. ಶ್ರೀಗಳಾದ ಎನ್. ಸೀತಾರಾಮ ಕಾಮತ್, ನಗರ ಸಭಾಪತಿ, ಸಿ. ಆರ್. ಶೆಣೈ, ಎಸ್. ವಿಠಲ ಶೆಟ್ಟಿ ಇವರು ಶ್ರೀ ಮಧ್ವಾಚಾರ್ಯರ ಗುಣಗಾನ ಮಾಡಿ ಶುಭಕೋರಿದರು. ಮಂಜ್ಞಾಚಾರ್ಯರು ತನ್ನನ್ನು ಆವಿರೋಧವಾಗಿ ಆರಿಸಿದ ಬಗ್ಗೆ ಕೃತಜ್ಞತೆಗಳನ್ನು ಸೂಚಿಸಿ ಉತ್ತರಿಸಿದರು.

ಧರ್ಮಸ್ಥಳದಲ್ಲಿ ಸರ್ವಧರ್ಮ ಮತ್ತು ಕನ್ನಡ ಸಾಹಿತ್ಯ ಸಮ್ಮೇಳನಗಳು— ಕಳೆದ ತಿಂಗಳ ತಾ. 26 ಮತ್ತು 27ನೇ ತಾರೀಕುಗಳಲ್ಲಿ ನಿಜವಾಗಿಯೂ ನೆರವೇರಿಯಿತು. ಸರ್ವ ಧರ್ಮ ಸಮ್ಮೇಳನವನ್ನು ನೈಸೂರು ರಾಜ್ಯದ ಗೃಹ ಸಚಿವರಾದ ಶ್ರೀ ಆರ್. ಎಂ. ಪಾಟೀಲರು ಉದ್ಘಾಟಿಸುತ್ತಾ ಭಾರತವು ತನ್ನ ಶ್ರೇಷ್ಠತೆಯುಳ್ಳ ರಾಜನೀತಿ ಹಾಗೂ ಧರ್ಮಗಳಿಂದ ಲೋಕವಲ್ಲಿ ಅತ್ಯುನ್ನತ ಸ್ಥಾನ ಗಳಿಸಿರುತ್ತದೆಂದೂ ದೇಶದ ಐಕ್ಯ ಘನತೆ, ಗೌರವಗಳ ಮೇಲೆ ಆಕ್ರಮಣ ಹೆಚ್ಚಿರುವಾಗ ಜನರಲ್ಲಿ ಮೂಡಬೇಕಾಗಿರುವ ರಾಷ್ಟ್ರರಕ್ಷಣಾ ಭಾವವೇ ವಿಶ್ವಾವಿ ಭಾವವೆಂದೂ ಭಾರತವು ಧರ್ಮ, ಹಾಗೂ ಭಾವೈಕ್ಯ ಭಾವನೆಯಿಂದ ಚೀನಾಕ್ಕೆ ನೆರವನ್ನು ಕೊಡುತ್ತಿದ್ದರೂ ಇಂದು ದು ಮೆರಕ್ಕೆ ನಾಗ ಸೂಚಿಸುತ್ತಿದೆ ಎಂದೂ ಆ ದರೂ ನಮ್ಮ ಧರ್ಮಯುದ್ಧಕ್ಕೆ ಜಯ ಖಚ್ಚಿತ ಯವೆಂದೂ ಹೇಳಿದರು.

ಸಮ್ಮೇಳನವ ಅಧ್ಯಕ್ಷತೆಯನ್ನು ಬೆಂಗಳೂರು ರಾಮಕೃಷ್ಣಾಶ್ರಮದ ಶ್ರೀ ಪ್ರಜ್ಞಾನಂದಪುರಿಯವರು ವಹಿಸಿದ್ದರು. ಆರಂಭದಲ್ಲಿ ಕ್ಷೇತ್ರದ ಧರ್ಮದರ್ಶಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡಿದರು ಶ್ರೀ ಡಿ. ಸುಬ್ಬಿ ಸ್ವಾಮಿಯವರು ಮುಂತಾಗಿ ಗೂ ಶ್ರೀ ಜಿನರಾಜ ಶಾಸ್ತ್ರಿಯವರು ಶ್ರೀ ಶಾಸ್ತ್ರಾನಂದಜೀಯವರಿಗೂ ಮೊದ ಪತ್ರಗಳನ್ನು ಬರಿಸಿದರು. ಶ್ರೀ ಭಾಸ್ಕರನ್ ಶೆಟ್ಟಾರ್‌ರವರು ಸಂದೇಶ ಓದಿದರು. ಶ್ರೀಗಳಾದ ಸಿದ್ಧಯ್ಯ ಪುರಾಣಿಕ, ಪ್ರೊ| ಕೆ. ಟಿ. ಪಾಂಡುರಂಗಿ, ಸುಬೋಧ ರಮಾರಾವ್, ಮೊದಲಾದವರೆ ಮತ್ತು ಅನ್ಯಕ್ಷರ ಭಾಷಣಗಳಾದ ಮೇಲೆ ಕೆ. ಎಸ್. ಧರಣೇಂದ್ರಯ್ಯನವರು ಧನ್ಯವಾದಗಳನ್ನರ್ಪಿಸಿದರು.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆವಹಿಸಿದ್ದ ಪೈಸೂರು ಸರಕಾರದ ವಾರ್ತಾ ಮತ್ತು ಪ್ರಸಾರ ಕಾರ್ಯದರ್ಶಿ ಶ್ರೀ ಸಿದ್ದಯ್ಯ ಪುರಾಣಿಕರು ಭಾರತದ ಪವಿತ್ರ ಭೂಮಿಯನ್ನು ಚೀನೀಯರ ದುರಾಕ್ರಮಣದಿಂದ ಸಾಹಿತಿಯು ಹೊಣೆ ಎಂದರು. ಸಮ್ಮೇಳನದ ಉದ್ಘಾಟನೆಯನ್ನು ತಿರುವಾಂಕೂರು ಸಂಸ್ಥಾನದ ಯುವಮಂಜಾರಾಗಿ ಶ್ರೀ ಮಾರ್ತಾಂಡ ವರ್ಮರವರು ನೆರವೇರಿಸಿದರು. ಪ್ರೊ| ಎಸ್. ರತ್ನಮ್ಮ, ಶ್ರೀಗಳಾದ ಚಿನ್ನ ಬಸವೇಶ್ವರ, ನಂಜುಂಡಾರಾಧ್ಯ, ಸುಸದೇವಪ್ಪ ಮೊದಲಾದವರು ಭಾಷಣ ಮಾಡಿದರು. ಶ್ರೀ ಸ್ವಾಮಿದಾಸರು ಸಂದೇಶ ಸಲ್ಲಿಸಿದರು. ಧರ್ಮಸ್ಥಳದಲ್ಲಿ ಸ್ಥಾಪಿಸಲ್ಪಟ್ಟಿರುವ ರೀಪೋತ್ಸವ ಕಾಲವೆಷ್ಟಿನ ಸಮಯದಲ್ಲಿ ಬರುವ ಈ ಸಮ್ಮೇಳನಗಳು ವೈಭವ ಪೂರ್ಣವಾಗಿ ನೆರವೇರುವಂತೆ ಉತ್ಸಾಹಿಗಳಾದ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ಸಕಲ ಸೌಕರ್ಯಗಳನ್ನು ಆದರ್ಶನೀಯವಾಗಿ ಮಾಡಿದರು.

ಬ್ರಹ್ಮಾವರದಲ್ಲಿ ಕಾರಂತರಿಗೆ ಸತ್ಕಾರ—ಕರ್ನಾಟಕ ಸಂಘದವರು ಕಳೆದ ತಾ. 27ರಂದು ಕರಿದ ತೀರದ ಭಾಗೀರಥ ಶ್ರೀ ಶಿವರಾಮ ಕಾರಂತರ ಷಷ್ಟಿಪೂರ್ತಿ ಉತ್ಸವವನ್ನು ಮಾಗಣರಿನ ಮಾಜಿ ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ವೈಭವದಿಂದ ಆಚರಿಸಿದರು. ಶ್ರೀ ಕೆ. ಆರ್. ಪಂಡಿತ್‌ರವರು ಸ್ವಾಗತಿಸಿದ ಬಳಿಕ ಶ್ರೀ ವೈಕುಂಠಿ ವೆಂಕಟ್ರಾಯರು ಕಾರ್ಯಕ್ರಮವನು ವಿವರಿಸಿದರು. ಶ್ರೀ ಕಾರಂತರು ಸಂಸ್ಥೆಗೆ ಹೇಳಿಕೊಳ್ಳಲು ಪರಿಚಯ ಭಾಷಣ ಮಾಡಿದರು. ಶ್ರೀ ಎಸ್. ಎ. ನಾರಾಯಣ ಅಯ್ಯಂಗಾರ್‌ರವರು ಸಂದೇಶ ವಾಚಿಸಿದರು ಅಧ್ಯಕ್ಷರು ಸಂಸ್ಥೆಯ ಪರವಾಗಿ ಬೆಳ್ಳಿ ರತ್ನಗರು ಮತ್ತು ಉಡುಗೊರೆಯೊಂದಿಗೆ ಮಾನಪತ್ರವನ್ನು ಸಮರ್ಪಿಸಿದರು. ಶ್ರೀಮತಿ ಲೀಲಾ ಕಾರಂತರಿಗೂ ಉಡುಗೊರೆಗಳನ್ನು ಸಮರ್ಪಿಸಿದರು. ಶ್ರೀ ಎಸ್. ಸುಬ್ಬಣ್ಣ ಭಟ್ಟರು ಮಾನಪತ್ರವನ್ನು ಓದಿದರು ವಿವಿಧ ಸಂಸ್ಥೆ ಕಂಪೆನಿಗಳಿಂದ ಶ್ರೀ ಕಾರಂತರಿಗೆ ಮಾಡಲಾಗಿರುವ ಸನ್ಮಾನವನ್ನು ಶ್ರೀ ಕಾರಂತರು ಸ್ವೀಕರಿಸಿದರು. ಶ್ರೀಗಳಾದ ಮರಿಳಿ ಭೀಮರಾವ್, ಕೆ ಎಲ್ ಕಾರಂತ್, ಎಂ. ನಾರಾಯಣ ಅಮ್ಮುಂಜಾಲ್ ಯು. ಲಕ್ಷ್ಮೀನಾರಾಯಣ ಆಚಾರ್ಯ ಮೊದಲಾದವರು ಶ್ರೀ ಕಾರಂತರ ಗುಣಗಾನ ಮಾಡಿ ಅವರಿಗೆ ಶ್ರೇಯೋಭಿವೃದ್ಧಿಯನ್ನು ಕೋರಿದರು. ಶ್ರೀ ಕಾರಂತರು ಮೊತ್ತಾದತ್ತಾ ಪರ ಹಲವಾರು ಬದುಕಲಿ ಕಾಲಾಗಿ ತಾವು ಕೈಕೊಂಡ ಕಾರ್ಯಗಳನ್ನು ವಿವರಿಸಿದರು. ಐಕ್ಯತೆ ಭಾಷಣವಾದ ಮೇಲೆ ಶ್ರೀ ವೈಕುಂಠಿ ವೆಂಕಟ್ರಾಯರು ಧನ್ಯವಾದಗಳನ್ನರ್ಪಿಸಿದರು. ರಾತ್ರಿ ಶ್ರೀ ಡಿ. ವಿ ಆಚಾರ್ಯರು ಭೋಜನ ಕೂಟವನ್ನಿತ್ತರು.

ಬ್ರಹ್ಮಾವರ— ನಿರ್ಮಲ ಸಾ. ಏ ಬ್ಯಾಂಕಿನ ರಜತೋತ್ಸವವು ಕಳೆದ ತಾ. 25ರಂದು ಶ್ರೀ ಎಸ್ ಶ್ರೀಧರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಶಿವರಾಮ ಕಾರಂತರು ಶಿಲ್ಪಿಯವರಿಂದ ಸ್ವಾಗತ ಕೆ ಫಾ. ಅಲ್ಲಿಪ್ಪೆ ರವರ ರಸುಂದೆ ಸರಿಯಾಗಿಪ್ಪೆಗಳ ಮೇಲೆ ಶ್ರೀ ವಿಠಲ ಬಂಟ್ವಾಳ ಕಾರಂತಿಯವರು ಭಾಷಣ ಮಾಡಿದರು ಅಧ್ಯಕ್ಷರ ಭಾಷಣವಾದ ಮೇಲೆ ವಿವಿಧ ವಿನೋದಾವಳಿಗಳಾದವು.

ವಿದ್ಯುತ್ ಉದ್ಘಾಟನೆ—ನಿಡಂಬೂರು ಪಂಚಾಯತ ವಿದ್ಯುತ್‌ದೀಪಗಳಿಗೆ ವಿದ್ಯುತ್ ಸರಬರಾಜು ಮಾಡುವ ಸಣ್ಣೂರಂಭೆಳ್ಳು ನಿಡಂಬೂರು ಪಂಚಾಯತ ಆಫೀಸಿನಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಕಳೆದ ತಾ. 30 ರಲ್ಲಿ ನೆರವೇರಿತು. ಶ್ರೀ ಎಂ. ಮಲ್ಪರಾಜ, ಎಂ. ಎಲ್. ಎ. ಅವರು ವಿದ್ಯುತ್ ಉದ್ಘಾಟನೆ ನೆರವೇರಿಸಿದರು.

ಸಿಂಡಿಕೇಟ್ ಬ್ಯಾಂಕಿನವರು—ರಾಷ್ಟ್ರೀಯ ರಕ್ಷಣಾ ಖಾತೆಯಲ್ಲಿ ಮೂಸಿಕ ಕಂಪನಿಗಳ ತಳಪಾಯಲ್ಲಿ ಒಂದು ಕೋಟಿ ರೂ.ಗಳನ್ನು ವಿನಿಯೋಗಿಸಲೂ ರಕ್ಷಣಾ ನಿಧಿಗೆ ಒಂದು ಲಕ್ಷದ ಐನತ್ತೊಂದು ಸಾವಿರ ರೂ ಗಳನ್ನು ಕೊಡಲೂ ನಿರ್ಧರಿಸಿರುವರೆಂದು ತಿಳಿದುಬರುತ್ತದೆ ಬೇಂಕಿನ ನಿರ್ದೇಶಕ ಮಂಡಲಿಯವರು 15 ಸಾವಿರ ರೂ.ಗಳನ್ನು ನಿಧಿಗೆ ತೆತ್ತಿರುವರು.

ಎಂ ಜಿ. ಎಮ್. ಕಾಲೇಜು—ಪ್ರೊ. ಎಂ. ಜಿ. ಶ್ರೀನಿವಾಸರಾವ್ ಸ್ಮಾರಕ ಅಂತರ್ ಕಾಲೇಜು ಸಂದ್ಯಾಟಗಳ ಉದ್ಘಾಟನೆಯನ್ನು ಇದೇ ತಾ. 1ರಂದು ಡಾ ಟಿ. ಎಂ ಎ. ಪೈಯವರು ಎಂ ಜಿ. ಎಂ. ಕಾಲೇಜು ಆವರಣದಲ್ಲಿ ನೆರವೇರಿಸಿದರು. ಮೊದಿನ ಪಮಾರಂಭ ಸಣ್ಣೂರಂಭೆಳ್ಳು ಸಭಾಭವನ್ಲ್ಲಿ ಶ್ರೀಜ ಬಿ.ಕುಲಕರ್ಣಿಯವರಅಧ್ಯಕ್ಷತೆಯಲ್ಲಿ ನೆರವೇರಿತು.

ತೆಂಕನಿಡಿಯೂರು—ಇಲ್ಲಿಗೆ ವಿದ್ಯುತ್ ಸರಬರಾಜಿಯ ಉದ್ಘಾಟನಾ ಸಣ್ಣೂರಂಭೆಳ್ಳು ಕಳೆದ ತಾ 29ರಂದು ಗರಡಿಮಜಲು ಶಾಲಾ ಆವರಣದಲ್ಲಿ, ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎ. ಕೊರಗಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಎ. ಜೆ ಅಲ್ಲಿಯವರಿಂದ ನೆರವೇರಲ್ಪಟ್ಟಿತು.

ಧನ್ವಂತರಿ ಜಯಂತಿ—ಉಡುಪಿಯ ಆಯುರ್ವೇದಿಕ ಕಾಲೇಜಿನಲ್ಲಿ ಕಳೆದ ತಾರೀಕು 29ರಂದು ಬನ್ವಂತರಿ ಜಯಂತಿಯು ಮುನಿಯಂಡಿತ ಡಾ|| ಯು ಕೃಷ್ಣರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀನಿವಾಸ್ ಶ್ರೀ ಟಿ. ಪಿ. ಸಣ್ಣೂರಂಭೆಳ್ಳು ಸ್ವಾಗತ, ಶ್ರೀ ಕೃಷ್ಣರಾಯರಿಂದ ಪ್ರಾಸ್ತಾವಿಕ ಭಾಷಣ, ಪೀಣ್ಯಾನಾಥ ನ, ಸಭಾಕರ ಭಾಷಣ ಅಧ್ಯಕ್ಷರಿಂದ ಪ್ರಶಸ್ತಿ ಪತ್ರ ವಿತರಣೆ ಮತ್ತು ಭಾಷಣವಾಯಿತು. ಶ್ರೀ ಕರುಣಾಕರ ಶೆಟ್ಟರು ವಂದನೆ ಸಲ್ಲಿಸಿದರು.

ಉಡುಪಿ ಕ್ರಿಕೆಟ್ ಟೀಮ್—ನೂತನವಾಗಿ ಸ್ಥಾಪಿಸಿರುವ ಈ ಟೀಮಿನ ಉದ್ಘಾಟನೆಯು ಇದೇ ತಾ 3ರಂದು ಮಣಿಪಾಲ್ ಮೈದಾನ ಶಾಲೆಯಲ್ಲಿ ನಗರ ಸಭಾಧ್ಯಕ್ಷ ಶ್ರೀ ಪಿ. ಆರ್. ಶೆಣೈಯವರಿಂದ ನೆರವೇರಿಸಲ್ಪಟ್ಟಿತು.

In the Court of the Subordinate Judge of South Kanara

R. E. P.No. 82/62
O. S. 93/59

Between:
The State of Mysore .. Petitioner
and
Kamala Shedthi and others ... Respondents

To 4th Respondent
Inas D'Souza: S/o Louis D'Souza, Lorry Driver. Bellary Town Municipality, Bellary.

Please take notice that in the above executi n petition filed by the Petitioner for attachment of the decree passed in favour of Plaintiff against Defendants 3 to 5, the court has ordered attachment of the decree and the said matter stands posted to 22—12—1962 at 11 A. M. for further enquiry. In case you fail to appear on that day the matter will be decided exparte.

(By Order of Court)

M Venkatraya Kamath,
Goverment Pleader.

Mangalore, 3—12—1962.

ಲಢಾಖಿನ ಇತಿಹಾಸದ ರೂಪರೇಖೆಗಳು

(ಹಿನ್ನೇ ಸುಟದಿಂದ)

ವನ್ನು ಬಿಟ್ಟುಕೊಡಬೇಕೆಂಬ ಶರತ್ತಿದ ಮೇಲೆ ಅವರಿಬ್ಬರೊಳಗೆ ರಾಜಿ ನಡೆಯಿತು. ಈ ಸಂಧಾನವನ್ನು ನಡೆಯಿಸಿದವನು ಬೌದ್ಧ ಭಿಕ್ಷು ಬುರುಗವಾ-ಕಾಮ-ಚಾಗ್-ಜೋ.

ದೇವದಾನನು ತನ್ನ ಮಗ ಜೇಲಕನಿಗೆ ರಾಜ್ಯಾಡಳಿತವನ್ನೊಪ್ಪಿಸಿದನು. ಜೇಲಕನು ೧೭೦೫ರಿಂದ ೧೭೪೦ನೇ ಇಸವಿಯ ವರೆಗೆ ರಾಜ್ಯವಾಳಿಕೊಂಡಿದ್ದನು. ಅವನ ಆಡಳಿತ ಕಾಲದಲ್ಲಿ ತನ್ನ ತಂದೆಯು ಶತ್ರುವಿಗೆ ಬಿಟ್ಟುಕೊಟ್ಟಿದ್ದ ಸಂಜಾಖಿನ ಸ್ಪಿತಿ ಜಿಲ್ಲೆಯನ್ನು ಸುನಃ ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಅವನ ರಾಜ್ಯಾಡಳಿತದ ಅಂತ್ಯಕಾಲದಲ್ಲಿ ಬಲತಿಯ ರಾಜನು ಲಢಾಖಿನ ಮೇಲೆ ವಿಜಯೀ ಆಕ್ರಮಣವನ್ನು ನಡೆಸಿದನು. ಆದರೆ ಲಢಾಖಿನ ಜನತೆ ಅದನ್ನು ಪುನಃ ಪಡೆದುಕೊಳ್ಳುವದಕ್ಕೆ ತಡಮಾಡಲಿಲ್ಲ. ಆಗ ಆಲಿಶೇರನು ಬಲತಿಯ ರಾಜನಾಗಿದ್ದನು. ಆಗ ಬಲತಿಯ ಸೇನೆ ಸೋತು ಜೋಯಿತು. ದೇವದಾನ-ನಾಮ-ಗ್ಯಾಲನ ಕಾಲದಿಂದಲೇ ಲಢಾಖಿವು ಕಾಶ್ಮೀರದ ಆಧಿಪತ್ಯವನ್ನೊಪ್ಪಿಕೊಂಡು ಕಪ್ಪ ಅಥವಾ ಕಗ ಕೊಟ್ಟುಕೊಂಡು ಬಂದಿದೆ. ಹಾಗಿದ್ದರೂ ಗುಲಾಬ ಸಿಂಹನ ಬಹದೂರ್ ಜನರಲ್ ಜೋರಾವರ ಸಿಂಹನು ದೋಗ್ರಾ ಸೇನೆಯ ಸಹಾಯದಿಂದ ಪೂರ್ಣ ಸೋಲಿಸಿ ಕಾಶ್ಮೀರದೊಂದಿಗೆ ಲಢಾಖನ್ನು ಸೇರಿಸಿಕೊಂಡನು.

ಲಢಾಕಿನ ವಿಜಯ ಮೂತ್ರದಿಂದಲೇ ಜೋರಾವರ ಸಿಂಹನಿಗೆ ಸಂತೋಷ ಉಂಟಾಗಲಿಲ್ಲ. ಅವನು ತ್ರಿವಿಷ್ಟಪವನ್ನೂ ತನ್ನ ಅಧೀನಕ್ಕೆ ತರಲು ನಿಶ್ಚಯಿಸಿಕೊಂಡನು. ಮರುವರ್ಷವೇ ತ್ರಿವಿಷ್ಟಪದ ಮೇಲೆ ಆಕ್ರಮಣ ನಡೆಸಿದನು. ಆದರೆ ದುರ್ಭಾಗ್ಯವಶಾತ್ ಜೋರಾವರಸಿಂಹ ಹಾಗೂ ಅವನ ಸೇನೆಯಲ್ಲಿ ಬಹಳ ಮಂದಿಯು ಮೃತ್ಯುವಿಗೆ ಎರವಾದರು. ಮಳೆ, ಗಾಳಿ ಹಾಗೂ ಶೀತಾದಿಗಳನ್ನು ಅವರಿಂದ ಎದುರಿಸಲಿಕ್ಕಾಗಲಿಲ್ಲ. ಅಲ್ಲದೆ ಅವರು ತೆಗೆದುಕೊಂಡು ಹೋಗಿದ್ದ ಸಾಮಗ್ರಿಗಳೂ ಮುಗಿದು ಹೋಗಿದುದರಿಂದ ಅವರೇ ಮೃತ್ಯುವಿಗೆ ಆಹಾರವಾಗಬೇಕಾಯಿತು.

ಕಾಶ್ಮೀರ, ಅಮೃತಸಾರದ ಸಂಧಿ ಪ್ರಕಾರ ಮಹಾರಾಜಾ ಗುಲಾಬ ಸಿಂಹನಿಗೆ ಮಹಾರಾಜಾ ರಂಜೀತ ಸಿಂಹನಿಂದ ಪುರಸ್ಕಾರ ರೂಪದಲ್ಲಿ ಸಿಕ್ಕಿದೆ. ಅವನ ಮಗ ಹಾಗೂ ಉತ್ತರಾಧಿಕಾರಿ ಮಹಾರಾಜಾ ರಣವೀರ ಸಿಂಹನ ಆಡಳಿತ ಕಾಲದಲ್ಲಿ ಗಿಲಗಿತ್ ಹಾಗೂ ಅದರ ಸಮೀಪದ ಪ್ರದೇಶ ಕೂಡಾ ಜಮ್ಮೂ ಮತ್ತು ಕಾಶ್ಮೀರ ದೊಂದಿಗೆ ಸೇರಿಸಲ್ಪಟ್ಟಿತು. ಅಂದಿನಿಂದಲೇ ಜಮ್ಮೂ, ಕಾಶ್ಮೀರ, ಲಢಾಖ್ ಮತ್ತು ಗಿಲಗಿತ್‌ದ ಇತಿಹಾಸವೂ ಒಂದೇಯಾಗಿ ಇದೆ

ಆದರೂ ೧೯೬೨ನೇ ಪ್ರಾಣಹರ ವರ್ಷದಲ್ಲಿ ಖಾಕಿಸ್ತಾನವು ಅದರ ಮೇಲೆ ಆಕ್ರಮಣ ನಡೆಸಿ, ನಮ್ಮ ಭೂಪ್ರದೇಶದ ಮೇಲೆ ಶಾಸನಕ್ಕೆ ವಿರೋಧಾಗಿ ಅಧಿಕಾರ ನಡೆಸುತ್ತಿದೆ. ನಾವೀಗ ೧೯೬೨ನೇ ಇಸವಿಯ ದುರ್ಘಟನೆಯು ಪುನರಾವರ್ತನೆಯನ್ನು ಕಾಣುತ್ತಿದ್ದೇನೆ. ವ್ಯತ್ಯಾಸವೆಂದರೆ ಇದೀಗ ಆಕ್ರಮಣ ನಡೆಯುತ್ತಿರುವದು ಪಾಕಿಸ್ತಾನದಿಂದಲ್ಲ, ಅದರ ಬದಲು, ಕೆಂಪು ಚೈನಾದಿಂದ, ಲಢಾಖ್ ಸೇರಿರುವ ಭೂಭಾಗದ ಮೇಲೆ ಕೆಂಪು ಚೈನಾದ ಸಾಮ್ರಾಜ್ಯಲಾಲಸೀ ಆಶಾದೃಷ್ಟಿ ಬಿದ್ದಿದೆ. [ಅದನ್ನೆದುರಿಸಲು ಭಾರತೀಯರೆಲ್ಲರೂ ಭಿನ್ನಭಾವಗಳನ್ನು ಪೂರ್ಣ ಮರೆತು ವಿಂಗಡಿಸುರುಷರ್ಧಂತೆ ಒಂದಾಗಬೇಕಾಗಿಯದೆ. ಈ ಒಕ್ಕಟ್ಟು ಇಂದಿಗೆ ಮಾತ್ರವಲ್ಲ, ಅನವರತವೂ ಇರಬೇಕು. ಅದಕ್ಕಾಗಿಯೇ ಮುನ್ಸೈಚ್ಛರಿಕೆಯಿಂದಲೇ ಸ್ವಾಮಿ-ವಿನೇಕಾನಂದರು—ಕಬ್ಬಿಣದಮೊಸ ಖಂಡಗಳೂ, ಉಕ್ಕಿನ ನರನಾಡಿಗಳೂರುವ ಮೂರು ಥೀರ ಪುರುಷರ್ದಲ್ಲಿ ಭಾರತದ ಮುಖವನ್ನೇ ಬದಲಾಯಿಸಿಯೇನೆಂದು—ಸೂಚನೆ ಕೊಟ್ಟಿದ್ದರು. ಚೈನಾ ಕೆಂಪು ಹೆಬ್ಬಾತ್ತ ಸ್ವಲ್ಪ ನುಂಗಿ ಸ್ವಲ್ಪ ನಿದ್ರಿಸುತ್ತಿದೆಯೊದರೂ ಪುನಃ ಬರುವದರ ದರಲ್ಲಿ ಸಂದೇಹವಿರುವದಿಲ್ಲ. ಭಾರತೀಯರೆಲ್ಲರೂ ಒಂದಾಗುವದು ತೀರಾ ಅವಶ್ಯಕವಿದೆ. —ಶಿ. ಶ.]

ಶಿವಶಂಕರ, ನುದ್ರಾಸು.

(ಶ್ರೀ ವೀರೇಂದ್ರ ಕೆ. ಸರೀನ್ ಫಾಂಚಜನ್ಯ ವಿಶೇಷಾಂಕ)

ಇದ್ದದ್ದು ಇದ್ದ ಹಾಗೆ....

ಪೀಕಿಂಗ್‌ನ ಕನ್ನಡಿಯ ಮೂಲಕ

ನಂಬಿದರೆ ನಂಬಿ ಬಿಟ್ಟರೆ ಬಿಡಿ

"ಚೀನಾವು ಭಾರತೀಯ ಪ್ರದೇಶದಲ್ಲಿ ಒಂದಂಗುಲದಷ್ಟು ಜಾಗವನ್ನೂ ಆಕ್ರಮಿಸಿಕೊಂಡಿಲ್ಲ, ಆಕ್ರಮಿಸಲೂ ಆಪೇಕ್ಷಿಸುವದಿಲ್ಲ"—ಉಪ ಪ್ರಧಾನ ಮಂತ್ರಿ ಚೆನ್ ಯಿ—ಪೀಕಿಂಗ್ ರೇಡಿಯೋದಿಂದ ಉದ್ಘೋಷಿತ.

"ಚೀನಾವು, ಉಭಯ ರಾಷ್ಟ್ರಗಳೂ ಒಪ್ಪಿಕೊಂಡಿದ್ದ ಪಂಚಶೀಲ ತತ್ವ ಸದ್ಭಾವನೆ ಮತ್ತು ಸ್ನೇಹಕ್ಕೆ ತಿಲಾಂಜಲಿಯಿತ್ತು ದುರಾಕ್ರಮಣವನ್ನು ಮಾಡಿದೆ; ತನ್ನ ಶಕ್ತಸ್ತ್ರ ದಳಗಳಿಂದ ಭಾರತದ ಮೇಲೆ ದೊಡ್ಡ ಪ್ರಮಾಣದ ಧಾಳಿಯನ್ನು ಆರಂಭಿಸಿದೆ"—ಲೋಕ ಸಭೆಯಲ್ಲಿ ಪ್ರಧಾನ ಮಂತ್ರಿ ನೆಹರೂ.

o o o o

ಭಾರತೀಯರಿಗೆ ಸ್ಪಷ್ಟವಾದ ದೃಷ್ಟಿ

"ಭಾರತದ ಇತಿಹಾಸದಲ್ಲಿ ಹಿಂದೆಂದೂ ಸಂಭವಿಸಿರದಂತಹ ದೊಡ್ಡ ಚಕ್ರಾಧಿಪತ್ಯವನ್ನು ಸಂಸ್ಥಾಪಿಸುವ ಮಹತ್ವಾಕಾಂಕ್ಷೆ ನೆಹರೂರವರ ಸತತ ಪ್ರಯತ್ನ.... ಭಾರತೀಯ ಜನತೆಗೆ ಸ್ಪಷ್ಟವಾದ ದೃಷ್ಟಿಯಿದೆ. ನೆಹರೂರವರ ಯಾವ ಕಿಕ್ಕುತನವೂ ಭಾರತದ ವಿಶಾಲ ಜನತೆಯನ್ನು ಮೋಸಗೊಳಿಸಲಾರದು — ಪೀಕಿಂಗ್‌ನ ಪೀಪಲ್ಸ್ ಡೈಲಿ.

"....ನೆಹರು, ರಾಜ್ಯ ವಿಸ್ತರಣೆದಾಹಿಯಲ್ಲ, ಸಮರಾಕಾಂಕ್ಷೆಯಲ್ಲ, ಸಾಮ್ರಾಜ್ಯಶಾಹಿಪರವಾದವರೂ ಅಲ್ಲ. ಅವರು ಇಂದು, ಕೋಟ್ಯಾಂತರ ಶಾಂತಿಪ್ರಿಯರಾದ ಭಾರತೀಯ ಜನತೆಯ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾರೆ."—

ನವದೆಹಲಿಯ ಕಮ್ಯೂನಿಸ್ಟ್ ವಾರಪತ್ರಿಕೆ "ನ್ಯೂ ಏಜ್"—ಸಂಪಾದಕೀಯ.

ಕಹಿ—ಕಹಿ

"ಕಳೆದ ಕೆಲವು ದಿನಗಳಿಂದ ಭಾರತ ಸರ್ಕಾರದವರು ಚೀನೀ ರಾಷ್ಟ್ರೀಯರನ್ನು ಬಂಧಿಸುತ್ತಿರುವರು"—ರೇಡಿಯೋ ಪೀಕಿಂಗ್.

ನವದೆಹಲಿಯಲ್ಲಿರುವ ಚೀನಿ ನಿವಾಸಿಗಳು ಪ್ರಧಾನ ಮಂತ್ರಿಗಳಿಗೆ ೩೦೦ರೂ ಗಳನ್ನು ಸಲ್ಲಿಸಿ, ಪತ್ರವೊಂದನ್ನು ಬರೆದು ಆದರಲ್ಲಿ, "ಭಾರತದ ಪವಿತ್ರ ನೆಲದ ಮೇಲೆ, ಚೀನೀಯರು ಮಾಡಿರುವ ನಗ್ನ ದುರಾಕ್ರಮದ ವಿರುದ್ಧ ಭಾರತ ಸರ್ಕಾರದವರು ಕೈಗೊಂಡಿರುವ ಕಾರ್ಯನೀತಿಗೆ ಪೂರ್ಣ ಬೆಂಬಲ ನೀಡುವುದಾಗಿಯೂ ಭಾರತೀಯ ಪ್ರದೇಶದ ಮೇಲೆ ಚೀನೀ ಸರ್ಕಾರವು ಆಕ್ರಮವಾಗಿ ಹಕ್ಕು ಸ್ಥಾಪಿಸಿ ನೆಲೆಸತೊಡಗಿರುವುದನ್ನು ತಾವು ತೀವ್ರವಾಗಿ ಖಂಡಿಸಿರುವುದಾಗಿ ತಿಳಿಸಿರುವರು.

—ದೆಹಲಿ ದಿನಪತ್ರಿಕೆಯಲ್ಲಿನ ಸುದ್ದಿ.

ಗಿಳಿಯ ಪಾಠ

"ಕಳೆದ ಮೂರು ವರ್ಷಗಳಿಗೂ ಹೆಚ್ಚು ಅವಧಿಯಲ್ಲಿ ಕಂಡುಕೊಂಡ ಕಠಿಣ ಸತ್ಯವೆಂದರೆ, ಶ್ರದ್ಧಿತಗತಿಯ ಸಾಹಸಿಗಳ ವಿರುದ್ಧ ಆಗತ್ಯವಾದ ಹೋರಾಟವನ್ನು ನಡೆಸಿ, ಅವರನ್ನು ಕೆಂಪಂಚ ಮಟ್ಟಿಗೆ ಸಾವ್ಯಗೊಳಿಸುವುದು ಸಾಧ್ಯವೆಂಬ ಅಂಶ."

—ಪೀಕಿಂಗ್ ರೇಡಿಯೊ.

ಆದರೆ, ಅಧ್ಯಕ್ಷ ಮಾವೊ, ಅವರಿಗೂ ಮುಂದಿದ್ದಾರೆ. ಆವರ "ಯುದ್ಧ ಮತ್ತು ವ್ಯೂಹ ಸಮಸ್ಯೆಗಳು" ಎಂಬ ಪುಸ್ತಕದಲ್ಲಿ "ರಾಜಕೀಯ ಶಕ್ತಿ ಬಂದೂಕಿನ ನಳಿಕೆಯಿಂದ ಸಂವರ್ಧಿಸುತ್ತಿದೆ....ಬಂದೂಕಿನಿಂದ ಮಾತ್ರವೇ ಇಡೀ ವಿಶ್ವವನ್ನು ಪುನರಪಿ ರೂಪಿಸಬಹುದು ಎಂದು ಬೇಕಾದರೂ ನಾವು ಹೇಳಬಹುದು."ಎಂದಿದ್ದಾರೆ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿನ್ಮಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಶೀಘ್ರವಾಗಿ ಬರುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಿನಲ್ಲಿ ಶ್ರೀನಿವಾಸ್ ಬುದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕಾಲೇಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ನಿರ್ವಿಕಾರ ಮನಸ್ಸು ನಿರ್ವ್ಯಾಧಿ ಶರೀರ

(ಇನ್ನೇ ಸುಟದಿಂದ)

ಪಚಾರದಿಂದ್ಲೂ ಈ ರೀತಿಯು ಕುರುಡತೆಯನ್ನು ದೂರಮಾಡಬಹುದು.

ಇದೇ ರೀತಿ ನಮ್ಮ ಮಿದುಳಿನಲ್ಲಿ ಹುಟ್ಟುವ ಬೇರೆ ವಿಕಾರಗಳ ಕಾರಣದಿಂದ ಇತರ ಕೆಲವು ದೃಷ್ಟಿದೋಷಗಳೂ ಉತ್ಪನ್ನವಾಗಬಹುದು. 'ಸಿಜೋಫ್ರೆನಿಯಾ' ಎಂಬಲ್ಲಿರುವ ಮನುಷ್ಯರಿಗೆ ಕೋಣೆಯಲ್ಲಿರುವಾಗ ಅದರ ಗೋಡೆಗಳು ಒಮ್ಮೆಲೆ ಹತ್ತಿರ ಬಂದಂತೆ ಭಾಸವಾಗಿ ತಾವು ಆ ಗೋಡೆಗಳ ಮಧ್ಯೆ ಸಿಕ್ಕಿ ನುಜ್ಜುಗುಜ್ಜಾದಂತೆ ಅನುಭವವಾಗುತ್ತದೆ. ವಿಭ್ರಮೆಯಲ್ಲಿರುವ ರೋಗಿಗೆ ತನ್ನ ಬಳಿಯಲ್ಲಿರುವ ವಸ್ತುಗಳು ಸಾವಿರ ಪಾಲು ದೊಡ್ಡದಾಗಿರುವಂತೆ ಕಾಣುತ್ತವೆ. ನಾವು ಅತ್ಯಂತ ಗಹನವಾದ ಚಿಂತೆಯಲ್ಲಿ ಮುಳುಗಿದ್ದಾಗ ಯಾ ಇತರ ಸಮಸ್ಯೆಗಳಿಗೆ ಯಾವ ಪರಿಹಾರವನ್ನು ಹುಡುಕಲು ಅಸಫಲರಾಗಿದ್ದರೆ, ನಮಗೆ ಸುತ್ತು ಮುತ್ತಲಿನ ವಸ್ತುಗಳು ಕಾಣುವುದೇ ಇಲ್ಲ. ಒಂದು ನೇಳೆ ಕಂಡರೂ ಅವು ಮಯಮಯವಾಗಿ, ಅಸ್ಪಷ್ಟವಾಗಿ ಕಂಡು ಬರುತ್ತವೆ ಜ್ವರ, ಬಹಳ ಬಳಲಿಕೆ ಕಡು ಔಷಧಿಗಳು ಮತ್ತು ಹಸಿವೆ ಬಾಯಾರಿಕೆಗಳೂ ನಿಮ್ಮ ದೃಷ್ಟಿಯ ಮೇಲೆ ಬಹಳ ಪರಿಣಾಮ ಮಾಡಬಲ್ಲವು.

ಮಿದುಳು ನಮ್ಮ ದೃಷ್ಟಿಗೆ ಮೂಲ ತತ್ವವಾಗಿದ್ದರೂ ಹೆಚ್ಚಿನ ಎಲ್ಲಾ ದೃಷ್ಟಿ ದೋಷಗಳೂ ಕಣ್ಣುಗಳು ಕೆಡುವುದರಿಂದಲೇ ಉತ್ಪನ್ನವಾಗುತ್ತವೆ ಹೊರತು ಮೂಲ ಸಿಕ ದೋಷಗಳಿಂದಲ್ಲ. ಕಡಿಮೆ ಕಾಣುವುದು ಯಾ ದೂರದ ವಸ್ತುಗಳು ದೃಷ್ಟಿಗೆ ಬಾರದೆ ಇರುವುದು. ಜ್ವಾಲೆ, ಹೊಗೆ, ಒಮ್ಮೆಯೇ ಎರಡು ಆಕೃತಿಗಳು ಕಂಡು ಬರುವುದು ಮೊದಲಾದುವುಗಳು ಪೂರ್ಣ ಅಕ್ಷಿ ರೋಗದ ಚಿಹ್ನೆಗಳಾಗಿವೆ.

ನಾವು ಬೇರೆ ಬೇರೆ ಬಣ್ಣಗಳನ್ನು ಯಾವ ಪ್ರಣಾಲಿಯಿಂದ ನೋಡುತ್ತೇವೆ ಎಂಬುದು ಇನ್ನೂ ರಹಸ್ಯವಾಗಿಯೇ ಉಳಿದಿದೆ. ಇವಕ್ಕೋಸ್ಕರ ಸಾಮಾನ್ಯವಾಗಿ ಬಣ್ಣದ ಕುರುಡತೆಯನ್ನು ಹೋಗಲಾಡಿಸಲು ಈ ತನಕ ಯಾವ ಉಪಾಯವೂ ಸಿಗಲಿಲ್ಲ. ವೈಜ್ಞಾನಿಕರ ಅಭಿಪ್ರಾಯದಂತೆ ಈ ಬಣ್ಣದ ಕುರುಡತೆಯು ವಂಶಪಾರಂಪರ್ಯವಾಗಿ ಬರುತ್ತದೆ. ಮತ್ತು ಅದು ಮಗುವಿನ ವ್ಯಕ್ತಿತ್ವದಲ್ಲಿ ಜನ್ಮದಾರಭ್ಯ ಬಂದ ದೋಷವಾಗಿಯೇ ಉಳಿಯುತ್ತದೆ.

ಬಣ್ಣಗಳ ವಿಚಾರದಲ್ಲಿ ಅತ್ಯಂತ ವಿಚಿತ್ರವಾದ ಹಾಗೂ ಮನೋರಂಜಕ ದೋಷಗಳು ಆಗಿವೆ. ಇತ್ತೀಚೆಗೆ ಒಬ್ಬ ಜಪಾನೀ ಶೋಧಕನು ಯಾವುದಾದರೂ ಕೆಲವು ವಸ್ತುಗಳು ಹೆಳದಿ, ಬಿಳಿ ಯಾ ಹಸುರು ಬಣ್ಣದಲ್ಲಿದ್ದರೆ, ಅವು ನೀಲಿ ಯಾ ಕಪ್ಪು ಬಣ್ಣದ ಸಮಾನ ಅಳತೆಯ ವಸ್ತುಗಳಿಗಿಂತ ಅತ್ಯಂತ ದೊಡ್ಡದಾಗಿಯೂ ಸುಂದರವಾಗಿಯೂ ತೋರುತ್ತದೆ ಎಂದು ಶೋಧಿಸಿದ್ದಾನೆ. ಫೇರನಿನ ವ್ಯಾಪಾರಿಗಳು ಹೆಚ್ಚಾಗಿ ಈ ಪದ್ಧತಿಯ ಉಪಯೋಗವನ್ನು ಜಾಹೀರಾತುಗಳಲ್ಲಿ ಮಾಡುತ್ತಾರೆ! "ಮಹಿಳೆಯರಿಗೋಸ್ಕರ ಶುಭ್ರ ಸವಾಚಾ! ನಿಮ್ಮ ಕಡು ಬಣ್ಣದ ವಸ್ತ್ರಗಳನ್ನು ಧರಿಸಿ ನಿಮ್ಮ ಸ್ಫೂರ್ತಿಯನ್ನು ಅಡಗಿಸಿಕೊಳ್ಳಿರಿ"

ಕಣ್ಣು ನಿಮ್ಮ ದೇಹ ಪ್ರಣಾಲಿಯಿಂದ ವಿಶೇಷವಾಗಿ ಮಿದುಳಿನಿಂದ ಅತ್ಯಧಿಕ ಸಂವೇದನಶೀಲ ಸಂಬಂಧ ಇಟ್ಟುಕೊಳ್ಳುತ್ತದೆ. ಆದುದರಿಂದಲೇ ಕಣ್ಣಿನಲ್ಲಿ ಕಾಮ, ಕ್ರೋಧ, ಮದ, ಮತ್ಸರ, ಪ್ರೇಮ ವಾಸನೆ, ದ್ವೇಷ ಮೊದಲಾದುವುಗಳು ಮೂರ್ತಿವತ್ತಾಗಿ ಇರುತ್ತವೆ. ಕಣ್ಣು ಪ್ರಕೃತಿ ಯಾ ಭಗವಂತನ ಅಮೂಲ್ಯ ಕೊಡುಗೆಯಾಗಿದೆ. ಇದರಿಂದಲೇ ನಮ್ಮ ವಾರ್ಶನಿಕರು ಆ ಪರಬ್ರಹ್ಮನಿಗೂ 'ದೃಷ್ಟಾ' ಎಂಬ ಬಿರುದನ್ನು ಕೊಟ್ಟಿದ್ದಾರೆ, ನಿಜವಾದ ಜ್ಞಾನದ ಪರಮ ಸಾಧನವಾದ ಕಣ್ಣಿನ ರಕ್ಷಣೆಯು ಕೇವಲ ಒಂದೇ ಒಂದು ಉಪಾಯನೆಂದರೆ— ವಿಕಾರಹೀನ ಮನಸ್ಸು ಮತ್ತು ವ್ಯಾಧಿರಹಿತ ಶರೀರ.

ಪ್ರಜಲಿತ ಪ್ರಸಂಗ

ಭಾರತೀಯರ ದೃಢ ಸಂಕಲ್ಪ— ಪೀಕಿಂಗಿಗೆ ಪರಮಾಶ್ಚರ್ಯ

ಪೀಕಿಂಗ್ ರೇಡಿಯೋ ಮೂಸನ ಜನಾಂಗದ ಸ್ವಾತಂತ್ರ್ಯದ ಪ್ರತಿಪಾದಕನೆಂದು ಹೇಳಿಕೊಳ್ಳುತ್ತಿದೆ.

ನೀವು ನಂಬಬಹುದು ಅಥವಾ ನಂಬದಿರಬಹುದು. ಆದು ನಮ್ಮ ಅವಸ್ಥೆಯ ಬಗ್ಗೆ ಕಣ್ಣೀರುಸುರಿಸುತ್ತಿದೆ. ನುಗ್ಗಾ ಜನರಿಗೆ ಭಾರತದ ರಕ್ಷಣಾ ಆಜ್ಞೆಯು ಸಂಕೋಲೆಯನ್ನು ತೊಡಿಸಲಾಗಿದೆ ಎಂದು ಹೇಳುತ್ತಿದೆ. ನಮ್ಮ ಸ್ವಾತಂತ್ರ್ಯಗಳಿಗೆ ಚ್ಯುತಿ ಬಂದಿದೆಯೆಂದು ಪೀಕಿಂಗ್ ಗೋಳಿಡುತ್ತಿದೆ, ನಾವು ಸಮರಕ್ಕಾಗಿ ಸನ್ನಾಹ ಮಾಡುತ್ತಿದ್ದೇವೆಂದು ಹೇಳುತ್ತಿದೆ.

ಆಕ್ರಮಣಕಾರಿ ಚೀನಾದ ಮೃದು ಭಾವನೆಗಳು ನಮ್ಮ ಪರವಾಗಿ ಪ್ರೇರೇಪಿಸಲ್ಪಡುತ್ತವೆ. ಇದೆಲ್ಲ ತೋಳ ತಾನು ನುಂಗಬೇಕೆಂದಿರುವ ಕುರಿಮರಿಗಾಗಿ ಲೋಕಿಸುವಷ್ಟೇ ಹೃದಯಸ್ಪರ್ಶಿಯಾಗಿದೆ.

ಈ ಪರಿಸ್ಥಿತಿಯಲ್ಲಿ ಚಾರತದ ಸ್ವರೂಪ ಪೀಕಿಂಗಿನ ಅಭೀಪ್ಸದಂತಿಲ್ಲ ವೆಂಬುದು ಎಲ್ಲರಿಗೂ ತಿಳಿದಿದೆ, ಅದು ಪೀಕಿಂಗಿನ ಎಣಿಕೆಯ ವಿರುದ್ಧವಾಗಿದೆ, ಜಿಣ್ಣಿಯನ್ನು ಸುಲಭವಾಗಿ ಕತ್ತರಿಸಬಲ್ಲ ಚಾಕುವಿನಂತೆ ನುನ್ನುಗ್ಗ ಬಹುದೆಂದು ಅದು ಸಕಜವಾಗಿಯೇ ಯೋಚಿಸಿತು. ಏಕೆಂದರೆ ನಾವು ಅನಿರೀಕ್ಷಿತರಾಗಿ ಸಿಕ್ಕಿ ಬಿದ್ದೆವು. ನಾವು ನಮ್ಮ ಸೈನ್ಯವನ್ನು ವೈಮನಸ್ಯಗೊಳಿಸಿ ಪ್ರತಿಭಟಿಸಲು ಸಾಧ್ಯವಾಗುವುದಿಲ್ಲವೆಂದು ಅವರು ಆಶಿಸಿದ್ದರು.

ಆದರೆ ಚೀನಾದ ಮುಖಂಡರು ಎಲ್ಲೋ ದೊಡ್ಡ ತಪ್ಪು ಮಾಡಿದರು. ಬಹುಶಃ ಆ ತಪ್ಪು ಅನಿವಾರ್ಯವಾಗಿತ್ತು. ಚೀನೀಯರ ಆಲೋಚನಾ ವಿಧಾನದಲ್ಲಿ ಆದು ಸ್ವಾಭಾವಿಕವೇ ಸರಿ. ಸ್ವಾತಂತ್ರ್ಯ ವೆಂದರೆ ಅವರದು ಬೇರೆ ಅರ್ಥವಿದೆ. ಸ್ವಾತಂತ್ರ್ಯ ರಕ್ಷಣೆಗಾಗಿ, ಭಾರತ ಭೂಮಿಯ ಐಕ್ಯದ ಸುರಕ್ಷಣೆಗಾಗಿ ಭಾರತೀಯರು ಮಾಡಿರುವ ದೃಢ ಸಂಕಲ್ಪ ಅವರ ಎಣಿಕೆಗೆ ಬಂದಿರದು, ಆದ್ದರಿಂದ ಅವರು ನಮ್ಮ ಸ್ಪಂದನೆಯಿಂದಲೇ ಭೀತಿಗೊಂಡಿದ್ದಾರೆ.

ವಿರೋಧಿಗಳ ಶಿಕ್ಷಣವನ್ನು ಅಲ್ಪವಾಗಿ ಕಾಣುವುದು ಚೀನೀಯರ ಪ್ರಚಾರ ಸಾಧನದ ವೈಖರಿ, ಆದರೆ ತಾವು ಹೇಳುವ ದನ್ನೆಲ್ಲಾ ನಿಜವೆಂದು ನಂಬುವುದು ಚೀನೀಯರಿಗೆ ಅಪಾಯಕಾರಿ. ವಾಸ್ತವಿಕ ಚಿತ್ರವನ್ನು ನೋಡಲಾರದಷ್ಟು ಅವರ ದೃಷ್ಟಿವಂಡವಾಗಿದೆಯೇ?

ಇದೀಗ ಅವರಿಗೆ ಕೀರ್ತಿ ತರುವುದಿಲ್ಲ, ಸಮಾಧಾನವನ್ನೂ ತರುವುದಿಲ್ಲ. ಇದೀ ದೇರವೇ ಶಸ್ತ್ರಾಣಿಯೂಗಿ ಅವರಿಗೆ ದುರಂಗಿ ನಿಂತಿದೆ.

ಇಲ್ಲೀನು ಬಲಾತ್ಕಾರದ ಸೈನ್ಯ ಜನವಣೆಯೂಗಿಲ್ಲ. ರಾಷ್ಟ್ರವೆಲ್ಲಾ ಸೈನ್ಯಕ್ಕೆ ಸೇರಲು ಮೊರಿಯಿಡುತ್ತದೆ. ಇದರಿಂದ ಪೀಕಿಂಗಿಗೆ ಅಶ್ಚರ್ಯವಾಗದೆ ಮತ್ತೇನು?

ಜನರು ತಮ್ಮ ಸ್ವಾತಂತ್ರ್ಯವ ವೇಲೆ ವಿಧಿಸಿರುವ ಕೆಲವು ನಿಬಂಧನೆಗಳನ್ನು ಸ್ವಾಗತಿಸಿದ್ದಾರೆ. ಈ ಸೇಕ್ಷ್ಯ ಸಮಯದ ರಾಷ್ಟ್ರೀಯ ಪ್ರಯತ್ನದಲ್ಲಿ ಪಾಲುಗೊಳ್ಳುವುದೊಂದೇ ಅವರ ಅಪೇಕ್ಷೆಯಾಗಿದೆ. ಈ ಪ್ರಯತ್ನಗಳ ವಿರುದ್ಧ ಬರುವ ಎಲ್ಲ ಅಡ್ಡಿ ಆಡಚಣೆಗಳನ್ನು ತೊಡೆದು ಹಾಕಬೇಕು, ಇದು ತ್ಯಾಗವಲ್ಲ. ಹೆಸರ್ಮಾ ಖದಿಂದ ನೀಡಿದ ಕಾಣಿಕೆ

ಕಟ್ಟುಪಾಡಿನಲ್ಲಿ ಬೆಳೆದ ಚೀನೀಯರಿಗೆ, ಈ ಸ್ವಯಂ ಪ್ರೇರಣೆಯು ಭಯಂಕರ ಪರಿಣಾಮ ತೋರಿಸಿದೆ, ತಾನೇ ಪರಿಹಾರಕ್ಕೆ ಉಡುಪು ನೂಡಿರುವ ತತ್ವವೊಂದರ ಹೆಸರಿನಲ್ಲಿ ಇವರು ಭಾರತದ ರಕ್ಷಣಾ ಆಜ್ಞೆಯನ್ನು ಟೀಕಿಸುತ್ತಿದ್ದಾರೆ.

ಚೀನೀಯರು ಇಷ್ಟು ತೀವ್ರವಾಗಿ ಕಂಡಿರುವ ನಿಬಂಧನೆಗಳಾದರೂ ಯಾವುವು? ರಾಷ್ಟ್ರ ಘಾತಕ ಮತ್ತು ಸಮೂಹ ಘಾತುಕ ಜನರನ್ನು ಅಡಗಿಸುವುದೇ ಅವುಗಳ ಉದ್ದೇಶವಾಗಿದೆ. ನೆಮ್ಮ ಸುರಕ್ಷತೆಗೆ ಧಕ್ಕೆ ತರುವಂತಹ ಕಾರ್ಯಗಳನ್ನು ದಮನ ಮಾಡುವುದೇ ಅವುಗಳ ಉದ್ದೇಶ; ದೇಶಾಭಿಮಾನಿ ಪ್ರಜೆಗೆ ಯಾವ ರೀತಿಯಲ್ಲಿಯೂ ಅವುಗಳಿಂದ ನಿರ್ಬಂಧವಿರುವುದಿಲ್ಲ. ಆದಕ್ಕೆ ಪ್ರತಿಯಾಗಿ ವಿನಾಶಕಾರಿ ಕೃತ್ಯಗಳಲ್ಲಿ ತೊಡಗಿರುವವರಾಗೂ ಶೋಷಣೆಗೆತೊಡಗಿರುವವರನ್ನು ತಡೆಯಲಾಗುವುದೆಂದು ಹರ್ಷಿಸುತ್ತಾನೆ. ಈ ನಿಬಂಧನೆಗಳು ತಾನೇ ತನ್ನ ಸ್ವಾತಂತ್ರ್ಯಗಳ ಮೇಲೆ ಸಂತೋಷದಿಂದ ವಿಧಿಸಿಕೊಳ್ಳುವಂತಹವಾಗಿವೆ. ಅತ್ಯಸ್ವಯಂ ನಿಗ್ರಹಣಕ್ಕೆ ಅವಶ್ಯಕವಾಗಿವೆ.

ಬಹುಶಃ ಚೀನೀಯರು ರಕ್ಷಣಾ ನಿಯಮಗಳಿಂದ ನಮ್ಮ ದೇಶದಲ್ಲಿ ಅಳಿದುಳಿದಿರಬಹುದಾದ ನಮ್ಮ ಮಿತ್ರರಿಗೆ ತೊಂದರೆಯಾಗುವುದೆಂದು ಚಿಂತಿಸುತ್ತಿರುವರು. ಅವರ ಹಕ್ಕು ಬಾಧ್ಯತೆಗಳ ಬಗ್ಗೆ ನಾವೇನೂ ಸಂಕೋಚಪಡುವುದಿಲ್ಲ. ಅವರ ಕೃತ್ಯಗಳನ್ನು ಎಚ್ಚರಿಕೆಯಿಂದ ನೋಡುವುದು ರಾಷ್ಟ್ರದ ಕರ್ತವ್ಯ. ಆದರೆ ಇಲ್ಲಿ ಪೀಕಿಂಗಿಗೆ ಮಿತ್ರರಿಲ್ಲವೆಂಬುದು ಖಂಡಿತ. ಚೀನಾ ತನ್ನ ವಿಶ್ವಾಸ ಘಾತಕತನದಿಂದ ಎಲ್ಲ ಮಿತ್ರರನ್ನೂ ಕಳೆದುಕೊಂಡಿದೆ

ಪೀಕಿಂಗ್ ಮೊಸಳೆಯು ಕಣ್ಣೀರನ್ನು ಸುರಿಸುತ್ತಿರುವುದಕ್ಕಾಗಿ ನಾವು ಕೃತಜ್ಞರಾಗಿದ್ದೇವೆಯೆ! ಆದರಿಂದ ನಮಗೆ ಸೋ ಜಿಗವಾಗಿದೆ

ನಮ್ಮ ಸನ್ನಾಹದ ಪ್ರತೀಕದ ಬಗ್ಗೆ ಚೀನೀಯರು ಉತ್ಸುಕರಾಗುವರೆಂದು ನಾವು ನೀರೀಕ್ಷಿಸಿಲ್ಲ: ರಕ್ಷಣಾ ಆಜ್ಞೆಯು ನಾವು ಪೂರ್ಣವಾಗಿ ಸಿದ್ಧವಾಗಿದ್ದೇವೆಂಬುದರ ಒಂದು ಶೋಷಣೆ ಮಾತ್ರ. ಅದು ಗುಲಾಮತನವಲ್ಲ. ಅಪಾಯ ಸವಯದ ಗುರಾಣಿಯದು.

ಚೀನಾದಲ್ಲಿ ಶಿಸ್ತೆಂಬುದು ಮೇಲಿನಿಂದ ಹೊರಿಸುವಂತಹುದು. ಆದರೆ ಅದು ನಮ್ಮ ಮನಸ್ಸಿಚ್ಛೆಯುವ ವಿಜಯ ಸಾಧನೆಯ ಪ್ರತಿಜ್ಞೆ.

[ಆಕಾಶವಾಣಿಯ ಸವಾಚಾರ ಸೇವಾ ವಿಭಾಗದ ಸೌಜನ್ಯ]

ಪೆಚ್ಚು ದುಡಿಯಿರಿ ಎಚ್ಚರದಿಂದ ವೆಚ್ಚಮಾಡಿರಿ

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ.ಎಲ್.ವಿತಾಳ, ಎಂ.ಬಿ.ಬಿ.ಎಸ್)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನೂ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಣಕಲ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ತೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ತೇವಣಾತಿಗಾರರಿಗೆ ಇಲ್ಲಿ ನೈಯತ್ತಿಕ ಸೌಕರ್ಯಗಳು ದೊರೆಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931. Phone No. 240. — ಮಂಗಳೂರು — 3

ನೀವು ತಿಳಿದಿರಬೇಕು

ಚೀಣೀ ಹೆಬ್ಬಾವಿನ ನಿಜರೂಪ

ಚೀನಾ ಹೆಬ್ಬಾವೂ ಹೌದು. ನೊಸಳೆಯೂ ಹೌದು. ಅದು ಕಣ್ಣೀರು ಸುರಿಸಬಲ್ಲದು. ಭಾರತದ ರೈತ ಕಾರ್ಮಿಕರಿಗಾಗಿ ಅದು ಕಣ್ಣೀರು ಸುರಿಸುತ್ತದೆ. 'ಜನತೆಯೇ ಸ್ವರ್ಗ' ವೆಂದು ಹೇಳಿಕೊಳ್ಳುವ ಕಮ್ಯುನಿಸ್ಟ್ ಚೀನಾದಲ್ಲಿ ಹಸಿವು ಮತ್ತು ಮೃತ್ಯುವಿನಿಂದ ಪಾರಾಗುವ ಸಲುವಾಗಿ, ಹಾಂಕಾಂಗಿನಲ್ಲಿ ಆಶ್ರಯವನ್ನು ಬಯಸಿ ಬರುವ ನಾವಿಂರಾರು ಮಂದಿ ಚೀನೀಯರನ್ನು ಕುರಿತು ಚೀನಾವು ಸಹಾನುಭೂತಿಯ ಒಂದು ಮಾತನಾಡಿರುವುದನ್ನು ನೀವೆಂದಾದರೂ ಕೇಳಿದ್ದೀರಾ? ಇಲ್ಲ ನೀವು ಕೇಳಿಲ್ಲ! ಆದರೆ ಪೀಕಿಂಗ್‌ನ ಪಾಲಿಗೆ ಇಂತಹ ಘಟನೆಯೇ ಸಂಭವಿಸಿರುವುದಿಲ್ಲ! ಸುದೈವದಿಂದ ಇಂದು ವಿಶ್ವವು ಸತ್ಯಕ್ಕಾಗಿ, ಪೀಕಿಂಗ್ ರೇಡಿಯೋ ಕೇಳುತ್ತಿಲ್ಲ

ಚೀಣಾದಲ್ಲಿ ಜನತಾ ಸರ್ಕಾರವು ಅಧಿಕಾರಾರೂಢವಾದ ಮೇಲೆ, ಇದು ವರೆಗೆ ಎಷ್ಟು ಮಂದಿ ಸ್ತ್ರೀ ಪುರುಷರು ಮೃತ್ಯುವಿನ ದವಡೆಗೆ ಸಿಲುಕಿದ್ದಾರೆ? ಎಷ್ಟು ಕುಟುಂಬಗಳು, ತಮ್ಮ ಅನ್ನದಾತನನ್ನು ಕಳೆದುಕೊಂಡು ದುಃಖಿಸುತ್ತಿವೆ? ಕುಟುಂಬದ ಸರ್ವಸ್ವನ್ನಿಸಿದ ವ್ಯಕ್ತಿಯು ತನ್ನ ಮನೆಗೆ ಹಿಂತಿರುಗಿ ಬರುವುದಿಲ್ಲ, ಮನೆಯವರಿಗೆ ಅವನ ಸ್ಥಿತಿಗತಿ ಗೊತ್ತಾಗುವುದಿಲ್ಲ. ಇಂತಹವರಿಗಾಗಿ ಪೀಕಿಂಗ್ ಒಂದು ತೊಟ್ಟು ಕಣ್ಣೀರು ಸುರಿಸಿದೆಯೇ? ಚೀಣದಲ್ಲಿ ಮಾನವ ಜೀವನಕ್ಕೆ ಬೆಲೆ ಇಲ್ಲವೆಂಬುದನ್ನು ಅರಿತುಕೊಳ್ಳದಿದ್ದರೆ, ಅವನು ಮನುಷ್ಯನಲ್ಲ, ಕುಟುಂಬಕ್ಕೂ ಅವನಿಗೂ ಏನು ಸಂಬಂಧವಿಲ್ಲ—ಎಂಬ ತತ್ವವನ್ನು ಆಳವಡಿಸಿಕೊಳ್ಳದಿದ್ದರೆ ಆ ಮನುಷ್ಯನು ಮನುಷ್ಯನೇ ಅಲ್ಲ. ಚೀಣದ ಈ ತತ್ವವನ್ನು ಅನುಸರಿಸದಿರುವವರನ್ನು ಬಯಲಿಗೆ ತರಲು, ತಂದೆತಾಯಿಗಳ ವಿರುದ್ಧ ಮಕ್ಕಳನ್ನು ಪತ್ನಿಯ ವಿರುದ್ಧ ಪತಿಯನ್ನು ಪತಿಯ ವಿರುದ್ಧ ಪತ್ನಿಯನ್ನು ಗೆಳೆಯನ ಮೇಲೆ ಗೆಳೆಯನನ್ನು ಎತ್ತಿ ಕಟ್ಟಲಾಗುತ್ತಿದೆ!

ಭಾರತದಲ್ಲಿ ನಾವೆ ಏನು ಮಾಡುತ್ತೇವೆ ಎಂಬುದು ಎಲ್ಲರಿಗೂ ತಿಳಿದಿದೆ, ಇಲ್ಲಿ ಕಾನೂನು ಉಲ್ಲಂಘಿಸಿದವರನ್ನು ಬಂಧಿಸಲಾಗುತ್ತದೆ. ನ್ಯಾಯಾಲಯಗಳಲ್ಲಿ ಅವನ ಅಪರಾಧಗಳ ಬಗೆಗೆ ವಿಚಾರಣೆಯು ನಡೆಯುತ್ತದೆ. ಅಪರಾಧವು ಸ್ಥಿರಪಟ್ಟಲ್ಲಿ ಶಿಕ್ಷೆ ವಿಧಿಸಲಾಗುತ್ತದೆ. ಆದರೆ ಒಂದೇ ಅಪರಾಧಕ್ಕಾಗಿ ಯಾರನ್ನೂ ಎರಡೆರಡು ಸಲ ಶಿಕ್ಷೆಗೆ ಗುರಿಪಡಿಸುವುದಿಲ್ಲ. ಚೀಣದಲ್ಲಿ ದಬ್ಬಾಳಿಕೆ ಮತ್ತು ಕಾನೂನು ಬಾಹಿರವೆನಿಸಿದ ಕೃತ್ಯಗಳು ಗೋಪ್ಯವೆಂಬಂತೆ ಕತ್ತಲಲ್ಲಿ ನಡೆಯುತ್ತವೆ.

ಅನೇಕ ವೇಳೆ ಗೋಪ್ಯವು ಗೋಪ್ಯವಾಗಿಯೇ ಉಳಿಯುವುದಿಲ್ಲ. ಅದು ಬೆಳಕಿಗೆ ಬರುತ್ತದೆ. ಚೀಣೀಯರು ತಮ್ಮ ಪ್ರಗತಿಪರ ಮುನ್ನೆಡೆಯ ಪ್ರಯತ್ನವು ಹಿನ್ನಡೆಯಲ್ಲಿ ಪರ್ಯವಸಾನವಾಗಿರುವಗೋಪ್ಯವನ್ನು (ಗ್ರೇಟ್ ಲೀಪ್‌ಫಾರ್ವರ್ಡ್) ಈಗ ಕಾನಾಡಿಕೊಳ್ಳಲು ಶ್ರಮಿಸುತ್ತಿದ್ದಾರೆ. ತಮ್ಮ ದೇಶದ ಬಹುತೇಕ ಕಡೆಗಳಲ್ಲಿ ಸಂಭವಿಸಿದ ಭೀಕರ ಬರಗಾಲದ ವಿಷಯವನ್ನು ಮುಚ್ಚಿಡಲು ಅವರು ಪ್ರಯತ್ನಪಟ್ಟರು. ಆದರೆ ಅದೂ ಸಾಧ್ಯವಾಗಲಿಲ್ಲ ಬ್ರಹತ್ ಪ್ರಮಾಣದಲ್ಲಿ ಗೋಧಿಯನ್ನು ಕೊಳ್ಳುವುದಕ್ಕಾಗಿ ವಿಶ್ವದ ಗೋಧಿ ಬೆಳೆಯುವ ಎಲ್ಲ ರಾಷ್ಟ್ರಗಳ (ಅವುಗಳಲ್ಲಿಬಹುಮಟ್ಟಿಗೆ ಎಲ್ಲವೂ ಅಮೇರಿಕದ ಮಿತ್ರ ರಾಷ್ಟ್ರಗಳು) ಬಳಿಗೂ ಹೋಗುವ ಪ್ರಸಂಗವು ಕಮ್ಯುನಿಸ್ಟ್ ಚೀನಾಕ್ಕೆ ಬಂದಿತು. ಈ ಮಧ್ಯೆ ಅಮೆರೀಕದಿಂದಲೂ ಆಹಾರ ಧಾನ್ಯಗಳನ್ನು ಕೊಳ್ಳಲು ಚೀನವು ಸಿದ್ಧವಿದೆಯೆಂಬ ವರದಿಗಳು ಕೇಳಿ ಬಂದವು.

ಚೀಣದ ವಿಸ್ತಾರವಾದ ಸ್ವದೇಶದಲ್ಲಿ ಹಸಿವು ನಡೆಸಿದ ತಾಂಡವ ನೃತ್ಯದ ಸುದ್ದಿ ವಿಶ್ವದ ಪತ್ರಿಕೆಗಳಲ್ಲಿ ಪ್ರಕಟವಾಯಿತು ಚೀಣೀಯರಿಗೆ ಅದನ್ನು ನಿರಾಕರಿಸುವುದು ಸಾಧ್ಯವಿರಲಿಲ್ಲ. ಹವಾಮಾನವೇ ಬರಗಾಲಗಳಿಗೆ ಕಾರಣವೆಂದೂ ಚೀಣೀಯರು ಹವಾಮಾನದ ಮೇಲೆ ಆರೋಪ ಹೊರಿಸಿದರು. ಅನಂತರ ಸತ್ಯ ಸಂಗತಿಯನ್ನು ಅವರು ತಮ್ಮದೇ ಆದ ರೀತಿಯಲ್ಲಿ ಒಪ್ಪಿಕೊಂಡರು.

ನಮ್ಮ ರಾಷ್ಟ್ರದಲ್ಲಿ ಯಾರಾದರೂ ಒಬ್ಬರು ಹಸಿವಿನಿಂದ ಮರಣ ಹೊಂದಿದರೆಂಬ ಸುದ್ದಿ ಪ್ರಕಟವಾದರೆ (ಅನಂತರ ಅದು ಸುಳ್ಳೆಂದು ಸಿದ್ಧವಾದರೂ) ಅದು ರಾಜ್ಯ ವಿಧಾನ ಸಭೆಗಳಲ್ಲಿ ಗೊಂದಲವನ್ನೆಬ್ಬಿಸುತ್ತದೆ ಚೀಣದಲ್ಲಿ ಹಸಿವು ಹಾಗೂ ಮೃತ್ಯುವಿನಿಂದ ತಪ್ಪಿಸಿಕೊಳ್ಳಲು, ಸುಮಾರು ೭೦,೦೦೦ಕ್ಕೂ ಹೆಚ್ಚು ಚೀಣೀಯರು ಹಾಂಕಾಂಗಿಗೆ ವಲಸೆ ತೆರಳಿದರೆಂಬ ಸತ್ಯವು ಕಳೆದ ನವೆಂಬೆಳಕಿಗೆ ಬಂದಿತು. ಸಹಸ್ರಾರು ಚೀನೀ ಜನರು ಗಡಿಯಲ್ಲಿ ಬ್ರಿಟಿಷರು ನಿರ್ಮಿಸಿದ ಮುಳ್ಳು ಬೇಲಿಯ ಕೆಳಗೆ ತೂರಿ ಒಳಗೆ ಬಂದರು. ಇನ್ನೂ ನೂರಾರು ಜನ ದಕ್ಷಿಣ ಚೀಣೀಸಮುದ್ರವನ್ನು ಈಜಿ ಬಂದರು.

ಹಾಂಕಾಂಗಿನಲ್ಲಿ ತಮ್ಮನ್ನು ಹಿಡಿದು ಪುನಃ ತಾಯ್ನಾಡಿಗೆ ಮರಳಿ ಕಳುಹಿಸುವ ರೆಂಬ ಭೀತಿಯಿಂದ ಚೀಣೀಯರು ಹೊಲಗಳಲ್ಲಿ ಮೊದೆಗಳ ಮರೆಯಲ್ಲಿ ಅಡಗಿ ಕೊಂಡಿದ್ದರು. ಅವರಲ್ಲಿ ಅನೇಕರಿಗೆ ಮಿತ್ರರು ಮತ್ತು ಆಪ್ತರು ಆಶ್ರಯ ನೀಡಿದರು. ಹಸಿವಿನಿಂದ ಬಳಲುತ್ತಿದ್ದ ಜನರು ಇಷ್ಟೊಂದು ದೊಡ್ಡ ಸ್ವರೂಪದಲ್ಲಿ ವಲಸೆ ಬಂದದ್ದು ಹಾಂಕಾಂಗಿಗೆ ಒಂದು ದೊಡ್ಡ ಸವಾಲ್ಸ್ಯೆಯಾಗಿ ಪರಿಣಮಿಸಿತು. ವಿಶ್ವದ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಗಿ ಪರಿಣಮಿಸಿತು, ಆಗ ಪೀಕಿಂಗ್ ಒಂದು ಕಂಠನಿಯ ಮಾತನ್ನೂ ಆಡಲಿಲ್ಲ ಒಂದು ಹನಿ ಕಂಬನಿಯನ್ನೂ ಸುರಿಸಲಿಲ್ಲ. ಅಸತ್ಯ ಸೃಷ್ಟಿಯಲ್ಲೇ ತಲ್ಲೀನವಾದ ಪೇಕಿಂಗ್‌ಗೆ ಸತ್ಯವನ್ನು ಬಿತ್ತರಿಸಲು ಸಮಯವಿರಲಿಲ್ಲ. ಚೀಣದಿಂದ ೭೦,೦೦೦ ಜನರು ಹಾಂಕಾಂಗಿಗೆ ವಲಸೆ ಪೋದಾಗ ಸಹಾನುಭೂತಿಯಿಂದ ಒಂದು ತೊಟ್ಟು ಕಣ್ಣೀರು ಸುರಿಸದ ಪೀಕಿಂಗ್ ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಡುತ್ತಿರುವ ಭಾರತದ ಕಾರ್ಮಿಕರು ಮತ್ತು ರೈತರ ಬಗೆಗೆ ಸಹಾನುಭೂತಿಯ ಮಾತುಗಳ ಹೊಳೆಯನ್ನು ಹರಿಯಬಿಟ್ಟಿದೆ.

ಔದಾರ್ಯ ಚೀಣಾದಲ್ಲಿ ಮನೆಯಲ್ಲಿ ಆರಂಭವಾಗುವುದಿಲ್ಲ; ತಮ್ಮ ಸೇನೆಯು ಸಾಮ್ರಾಜ್ಯ ಶಾಂತಿಯ ನೆಗ್ಗ ರೂಪದಲ್ಲಿ ಧಾಳಿ ನಡೆಸುವ ಕಡೆ ಆರಂಭಿಸುತ್ತದೆ.

ರಾಷ್ಟ್ರದ ಕರೆ

ಏಳಿರಿಚ್ಚರ ಗೊಳ್ಳಿ ಜಡನಿದ್ದೆಯಂತಳ್ಳಿ
ಭಾರತದ ಉತ್ಕರ್ಷದಿ ನೋಡಿರಲ್ಲಿ
ಭಾರತದ ವೀರರೆ,
ಭಾರತದ ಧೀರೆಯರೆ
ಭಾರತದ ಗೌರವ ಕಾಯ್ವುದಲ್ಲಿ
ಶತಕಾನು ಶತಕಗಳ
ಹೋರಾಟದಿಂ ಪಡೆದ
ಸ್ವಾತಂತ್ರ್ಯಸೌಧವಿದ ರಕ್ಷಿಸಲು ಬನ್ನಿ
ಮಾತೃ ಭೂಮಿಯ ಆತ್ಮ
ಗೌರವವ ರಕ್ಷಿಸಿ
ಹುತಾತ್ಮರಾಗುವ ಧೈರ್ಯ
ತಳೆದು ಬನ್ನಿ ॥ ೧ ॥

ಭಾರತದ ಗೌರವದ
ನೇರು ಪರ್ವತವನ್ನು
ವಿೂರಿ ಮುನ್ನುಗ್ಗುತಿಹ ವೈರಿನೋಡಲ್ಲಿ
ಭಾರತಿಯ ಸಂಸ್ಕೃತಿಯ
ನಾಶಗೈಯಲು ಬರುವ
ಚೀನಿ ರಾಕ್ಷಸರನ್ನು ಹರಿದು ಚೆಲ್ಲಿ
॥ ೨ ॥

ತಾಯ್ನಾಡ ರಕ್ಷಣೆಗೆ
ಹೋರಾಡಿ ಮಡಿದಿರುವ
ಧೀರ ಯೋಧರ ಸ್ಫೂರ್ತಿಸ್ಮೆರಣೆನೂಡಿ
ಆಯುಧ-ಆಧಾನದಲಿ
ಮೈ ಕೊರೆವ ಚಳಿಯಲ್ಲಿ
ಹೋರಾಡುತಿಹರಲ್ಲಿ ನೆರವು ನೀಡಿ॥೩॥

ಸಾಮ್ರಾಜ್ಯ ವಿಸ್ತಾರ
ದಾಹದಿಂನೆಗ್ಗುತಿಹ
ಆಸುರ ಶಕ್ತಿಯ ಕಂಡು ಬೆದರ ಬೇಡಿ
ನೀರ ಉತ್ಸಾಹದಿಂ
ತಿಸ್ತು ಸಂಯಮದಿಂದ
ಕ್ರೂರ ವೈರಿಯನಿಂದು ಹೊರಗೆ
ದೂಡಿ ॥ ೪ ॥

ಭಾರತದ ಕುಬೇರೋಟ
ಎಚ್ಚರೆಬ್ಬರಗೊಳ್ಳಿ
ಸಿಂಹ ಸ್ವಪ್ನವ ಬಿಟ್ಟು ಕೆರಳಿ ನಿಲ್ಲಿ
ಭಾರತಿಯರೊಗ್ಗಟ್ಟು
ಧೀರ ದೀಕ್ಷೆಯತೊಟ್ಟು
ವ್ಯಾಣವನು ಪಣಕಿಟ್ಟು ಕಣ
ಕೆಳಿಯಿರಿ ॥ ೫ ॥

ವಿತಲ ಶೆಟ್ಟಿ, ಅಧ್ಯಾಪಕ
ಕೋಟೇಶ್ವರ

ನಗೆಪನಿ

ವ್ಯಾಪಾರಿ— (ಫೋನಿನಲ್ಲಿ) ಡಾಕ್ಟರ್, ನಮ್ಮ ಹಡುಗ ನನ್ನ ಪೆನ್ನನ್ನು ನುಂಗಿಬಿಟ್ಟಿದ್ದಾನೆ; ದಯವಿಡಿ ಕೂಡಲೇ ಈ ಕಡೆ ಬನ್ನಿ.

ಡಾಕ್ಟರ್— ಸರಿ ಸರಿ! ಈಗಲೆ ಹೊರಟು ಬಿಡುತ್ತೇನೆ. ಆದರೆ ನಾನು ಬರುವ ವರೆಗೆ ನೀನೇನು ಮಾಡುತ್ತೀರಿ?

ವ್ಯಾಪಾರಿ— ಅಷ್ಟರ ತನಕ ನಾನೊಂದು ಪೆನ್ಸಿಲನ್ನು ಉಪಯೋಗಿಸಿಕೊಳ್ಳುತ್ತೇವೆ.

೦ ೦ ೦

ಒಂದು ಸಂತೋಷ ಕೂಟದ ಮಧ್ಯೆ ಅಕಸ್ಮಾತ್ತಾಗಿ ದೀಪ ನಂದಿಹೋಯಿತು. ಈ ಸಂದರ್ಭವನ್ನುಸಯೋಗಿಸಿಕೊಂಡು ಒಬ್ಬ ತರುಣ ಬಳಿಯಲ್ಲಿದ್ದ ತರುಣಿಗೆ ಒಂದು ಮುತ್ತು ಕೊಟ್ಟ. ಸ್ವಲ್ಪ ಸಮಯ ಕಳೆದು ದೀಪಗಳು ಬೆಳಗಿದಾಗ ಆ ತರುಣಿ ಕೇಳಿದಳು— 'ನಿನ್ನೇಕೆ ನನಗೆ ಮುತ್ತು ಕೊಟ್ಟೆ?'

ತರುಣ ಸಾವಧಾನದಿಂದ ಉತ್ತರಿಸಿದ— "ನಿನಗೆ ಆದು ಇಷ್ಟವಿಲ್ಲವಾದರೆ ಆದನ್ನು ಹಿಂದಕ್ಕೆ ಕೊಟ್ಟುಬಿಡು.

—ರಮೂನಂದ ಬನಾರಿ, ಪೇಲಂಪಾಡಿ.

ಯೊಸ ಪುಸ್ತಕ—
'ನಚಿಕೇತ'ರ
ನವೀನ ಕಾದಂಬರಿ—
ಹಸುರು ಹಂಸ
ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ.
ನವಯುಗ ಪ್ರೆಸ್, ಉಡುಪಿ.

ಕವಲು ದಾರಿ—ಕೆಂಪು ದೀಪ

ಹಮ್ ಕಥಾ ಸುನಾತೀ ಹೈ

—ಸುದಾಸ.

ಅದೆಷ್ಟವು ಒಂದು ಬಗೆಯ ಹುಚ್ಚು; ಎಂಬುದು ಅನುಭವವುಳ್ಳ ಕೆಲವರ ಅಭಿಪ್ರಾಯ.

ಈ ಹುಚ್ಚು ಎಲ್ಲರಿಗೆ ಅಂಟಿಕೊಳ್ಳಲು ಸಾಧ್ಯವಿಲ್ಲ—ಸಾಧುವೂ ಅಲ್ಲ, ಎಂಬುದು ವಿಚಾರಶೀಲರ ಅಭಿಪ್ರಾಯ.

ಎಲ್ಲರೂ ಈ ಹುಚ್ಚು ಹೊಳೆಯಲ್ಲಿ ಮುಳುಕಿದರೆ, ಆದೇಶಕ್ಕೆಂದೂ ಕೇಡಿಲ್ಲ, ಎಂಬುದು ನಮ್ಮ ಅಭಿಪ್ರಾಯ.

ರಕ್ತಾಂಜಲಿ; ಎಂತಹ ಬಿಸಿಯುಸಿರಿನ ಬಯಕೆಯ ಹೆಸರೇ ನಿನ್ನದು? ಅಲ್ಲ, ನಿನ್ನದು? ನಲ್ವತ್ತೈದು ಕೋಟಿ ಭಾರತೀಯರ ಹೆಸರು; ರಕ್ತಾಂಜಲಿ.

ದಾಸ್ಯ ಭಾರತದ ಅನುಭವಗಳು ಇನ್ನೂ ಹಸಿಯಾಗಿಯೇ ಉಳಿದಿದೆ. ತಾಯಿ ಭಾರತಿಯನ್ನು ಪರದಾಸ್ಯ ಬಂಧನದಿಂದ ಮುಕ್ತಗೊಳಿಸಲು ನಮ್ಮವರು ನಡೆಸಿದ ಹೋರಾಟ—ಆ ಹೋರಾಟದಲ್ಲಿ ಅವರು ಗರ್ಜಿಸಿದ ವೀರ ಘೋಷ, ಇನ್ನೂ ಪ್ರತಿಧ್ವನಿಸುತ್ತಲೇ ಇದೆ, ಭಾರತದ ನೂಲಿ ಮೂಲೆಯಿಂದ.

ವತನ್‌ಕಿ ರಾಹಮೆ ವತನ್‌ಕಿ
ನವ್‌ಜವಾನ್ ರಹೀದ್ ಹೋ
ಮುಕಾರತೇಹೈ ಹಿ ಜವಿನ್
ಆ ನವೂನ್ ರಹೀದ್ ಹೋ

—ಎಂಬ ಹಾಡು ಸ್ಫೂರ್ತಿ ಕೊಡುತ್ತಿದೆ.

ದೂರಹೋ ಏ ದುನಿಯಾವಾಲೆ
ಹಿಂದೂಸ್ತಾನ್ ಹಮಾರಾ ಹೈ

—ಮತ್ತೆ ಕೇಳಿಬರುತ್ತಿದೆ. ಹೃದಯ ತುಂಬಿ ಬರುತ್ತಿದೆ. ರಕ್ತ ಕಾವೇರುತ್ತಿದೆ.

ಸ್ವಾತಂತ್ರ್ಯ ಸಮರರಂಗಣಕ್ಕೆ ಯಾವ ವ್ಯಕ್ತಿಗಳು—ಕೆಚ್ಚೆದೆಯ ಗಂಡುಗಲಿಗಳು ಧುಮುಕಿದರೋ, ಯಾವ ವ್ಯಕ್ತಿಗಳು ತಮ್ಮವೆಲ್ಲವನ್ನೂ ಸ್ವಂತಾಜ್ಯ ಚಳವಳಿಗೆ ಒಪ್ಪಿಸಿದರೋ, ಯಾವ ವ್ಯಕ್ತಿಗಳಿಗೆ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿ ಬಾಳುವುದು ಅಪ್ರಿಯವಾಗಿ ಕಂಡಿತೋ, ಪರಕೀಯರ ದಬ್ಬಾಳಿಕೆಯಲ್ಲಿ ಭಾರತವು ನರಳುತ್ತಿರುವುದನ್ನು ಕಂಡು, ಮನೆ ಮಠಗಳೊಳಗೆ ಇದ್ದು ಕೊಂಡಿರುವದು ಯಾವ ವ್ಯಕ್ತಿಗಳಿಗೆ ಅಪ್ರಿಯವಾಗಿ ಕಂಡಿತೋ, ಯಾವ ವ್ಯಕ್ತಿಗಳು ಸರ್ವಾಂಗ ಸುಂದರ ಭಾರತದ ಭವಿಷ್ಯದ ಕನಸು ಕಂಡಿದ್ದರೋ, ಸ್ವಯಾರಿಲ್ಲ ಭಾರತಕ್ಕಾಗಿ ನೂಡಿ ಮಡಿದು ಅಮರರಾದರೋ, ದಾಸ್ಯದ ಸೆರೆಯಲ್ಲಿ ಮುದುಡಿ ಮಲಗಿದ್ದ ಭಾರತ ಸಿಂಹವನ್ನು ಯಾರು ಕೆರಳಿಸಿದರೋ, ಸ್ವತಂತ್ರ ಮಾಗಿ ಬಾಳು ಎನ್ನುವದನ್ನು ಯಾರು ಕಲಿಸಿದರೋ—

—ಅವರೆಲ್ಲರ ಹೆಬ್ಬಯಕೆಗಳನ್ನು ಪಾಲಿಸುವ ಕರ್ತವ್ಯದ ಹೆದ್ದಾರಿ, ಇಂದೀಗ ಬೆಳಕುಕಂಡಿದೆ. ಅವರೆಲ್ಲರ ಮಹೋನ್ನತ ಚಾರಗಳಿಗೆ ಈ ರಕ್ತಾಂಜಲಿ ಮುಡಿಪು.

ವೀರ ಯೋಧರೇ—

ನೀತಿಗೆಟ್ಟ ಜೀವನವನ್ನು ಹಿಮ್ಮೆಟ್ಟಿಸಲು ನೀವು ಕಲಿತನದಿಂದ ಹೋರಾಡುತ್ತಿದ್ದೀರಿ. ನಿಮ್ಮ ಜೊತೆಗೂಡಲು ಪ್ರತಿಯೊಬ್ಬ ಭಾರತೀಯನು ಟೊಂಕಕಟ್ಟಿರುತ್ತಾನೆ. ಸ್ವಚಿಂತನೆಯನ್ನು ಯಾವ ದೇಶ ದ್ರೋಹಿಯು ಮೂಡ ಬಯಸುವನೇನೋ, ಆ ವ್ಯಕ್ತಿಯ ಬಯಕೆಗಳನ್ನು ಮಣ್ಣಾಗಿಸುವ ಹೊಣೆಯನ್ನೂ ಪ್ರತಿಯೊಬ್ಬ ಭಾರತೀಯನೂ ಹೊತ್ತಿರುತ್ತಾನೆ. ನಮ್ಮ ರಕ್ತದ ಒಂದೊಂದು ಬಿಂದುವೂ ಭಾರತದ ರಕ್ಷಣೆಗಾಗಿ ವಿನಿಯೋಗಿಸಲ್ಪಡುತ್ತದೆ. ಕೆಲವೊನ್ಮೆ ನಿಮಗಾಗಿ ನಾವು ಕಣ್ಣೀರು ಸುರಿಸಿದ್ದೇವೆ. ಆದರೆ ಆ ಕಣ್ಣೀರು ನಮ್ಮ ಕೆನ್ನೀರು ಬುಕ್ಕೆ ಹರಿಯುವಂತೆ ನೂಡಿದೆ.

ನಾವು—ಭಾರತೀಯ ಗರ್ಭ ನಿವಾಸಿಗಳು—ನಿಮ್ಮ ಜೊತೆಗೂಡಿ, ಭಾರತಿಗಾಗಿ ಮೂಡಿಸುಡಿಯಲು ಸಿದ್ಧರಾಗಿದ್ದೇವೆ. ನಿಮ್ಮ ಜೊತೆಯಲ್ಲಿ ನಾವು ವೀರ ಘೋಷಣೆ ನೂಡುತ್ತೇವೆ.

ವಂದೇ ಮಾತರಂ.

ವಿಶ್ವ ವಂದ್ಯ ಭಾರತಾಂಗೆಲ್ಗೆ—ಬಾಳ್ಗೆ ಒಂದು ಹಾಡು, ದೂರದ ತಾಣದಿಂದ ಮತ್ತೆ ಕೇಳಿ ಬರುತ್ತಿದೆ—

—ಆಜ್ ಹಿಮಾಲಯ್ ಕೀ ಜೋಟೀಸೆ
ಫಿರ್ ಹಮ್‌ನೇ ಲಲಕಾರಾ ಹೈ
ದೂರ್ ಹರೋ—ದೂರ್ ಹರೋ ಏ
ದುನಿಯಾವಾಲೆ
ಹಿಂದೂಸ್ತಾನ್ ಹಮಾರಾ ಹೈ

ಮತ್ತೆ ಮಂತ್ರ ಘೋಷ—

—ಜಯ ಭಾರತ, ಜಯ ಹಿಂದ್.

ನಾವೇನು ಮಾಡಲಿಲ್ಲ!

ಕೆಂಪು ಚೀನದ ನಗ್ನ, ಹೀನ ಆಕ್ರಮಣವನ್ನು ವಿರೋಧಿಸುವ ಮಹತ್ತರವಾದ ಕಾರ್ಯದಲ್ಲಿ ಅಖಂಡ ಭಾರತವು ತನ್ಮಯವಾಗಿರುವ ಈ ಹೊತ್ತಿನಲ್ಲಿ, ಸ್ವತಂತ್ರ ಭಾರತದ ಸಾಧನೆಗಳ ಬಗ್ಗೆ ಅಕೃತ್ರಿಯನ್ನು ವ್ಯಕ್ತಪಡಿಸಿ ಕೆಲವೊಂದು ವರ್ಗವು ಹೊರಡಿಸುತ್ತಿರುವ ಆಗಸ್ಪರವೆ, ನಾಡಿನ ಅಶಿಕ್ಷಿತ ಹಾಗೂ ಅರ್ಧ ಶಿಕ್ಷಿತ ಜನರಲ್ಲಿ ಭ್ರಾಂತಿಯನ್ನುಂಟು ಮಾಡುತ್ತಿರುವುದನ್ನು ನಿರ್ಲಕ್ಷಿಸಲಾಗದು. ಜನತೆಯ "ಜೇಕು" ಎನ್ನುವ ಹೆಂಬಲವಲ್ಲಿ ಪ್ರಗತಿಯ ದ್ಯೋತಕವಾಗಿದ್ದರೂ, ಈ ವಿಷಮ ಸಂದರ್ಭದಲ್ಲಿ ಯಾವ ರೀತಿಯ ಬೊಬ್ಬಾಟವಾಗಲೀ, ಭಾವೋದ್ರೇಕವಾಗಲೀ ಸಲ್ಲದು. ನಾಡಿನ ರಕ್ಷಣೆಯ ವಿಚಾರದಲ್ಲಿ ಬಡವ ಬಲ್ಲಿದನೆಂಬ ಬೇಧವಿಲ್ಲದೆ ಎಲ್ಲರೂ ತೋರಿಸುತ್ತಿರುವ ಕಳಕಳಿಯು ಅಭಿನಂದನಾರ್ಹವೇ ಸರಿ. ಸ್ವತಂತ್ರ ಭಾರತವು ರಕ್ಷಣೆಯ ಬಗ್ಗೆ ಸಾಕಷ್ಟು ಗಮನ ನೀಡಿಲ್ಲವೆಂಬ ಮಾತು ಸತ್ಯಕ್ಕೆ ದೂರವಾದುದೆನ್ನಬಹುದು. ಜನಮನದ ನಾಯಕ ಜವಾಹರಲಾಲರಂತೆಯೆ ದೃಷ್ಟವು ಕೇವಲ ರಣರಂಗದಲ್ಲಿ ಮಾತ್ರವಲ್ಲ, ಆಫೀಸು, ಕಾರ್ಖಾನೆಗಳಲ್ಲಿ ಹಾಗೂ ಹೊಲಗಳಲ್ಲಿ ಜರಗುವುದೆಂಬ ತತ್ವಾನುಸಾರ ನಾವು ರಾಷ್ಟ್ರದ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡೇ ಕೃಷಿ, ಕೈಗಾರಿಕೆಗಳ ಬಗ್ಗೆ ಸಾಕಷ್ಟು ಗಮನವನ್ನು ಕೊಡುತ್ತಾ ಬಂದಿರುವೆವೆ. ನಮ್ಮ ಯೋಜನೆಗಳು ನಿರೀಕ್ಷಿಸಿದ ಫಲವನ್ನು ಕೊಟ್ಟಿರದಿದ್ದಲ್ಲಿ, ಜನತೆಯು ಸಹಕಾರ ಸಹಕಾರ್ಯದ ರೂಪಣದಲ್ಲಿ ಸಂಪೂರ್ಣ ಸಹಕಾರಕ್ಕೆ ಸಿಗದಿದ್ದುದೂ ಮುಖ್ಯ ಕಾರಣ. ವೈರಿಯು ಹರಾತ್ತಾಗಿ, ಹಿಂಬದಿಯಿಂದ ಬಂದು ನಮ್ಮನ್ನು ಕಿವಿಯುಮ, ಯತ್ನವನ್ನು ಮಾಡಿದ್ದರೂ, ಸತ್ಯಧರ್ಮಗಳನ್ನೇ ಪಾಲಿಸುತ್ತಾ ಬಂದಿರುವ ನಮಗೇ ಜಯ ಕಟ್ಟಿಟ್ಟ ಬೆಂಬುದಲ್ಲವೆ ಯಾರಿಗೆ ಅನುಮಾನವಿದೆ?

—ಶ್ರೀ ಪಾ. ಚಂ. ಚಡಗ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
R E A. 548/1962 R.L.P. 107/62.
ಸಾಬ್ಜಾನ್ ಸಾಹೇಬ— ಥಾರ್ಯಕ್ಷಿ ಅರ್ಜಿದಾರ.
ಮತ್ತು
ನಗರ ರಸೂಲಸಾಳ ಪೆಟ್ಟಿ ಕೂಡಾ —ಎದ್ರಿರು.
೩ನೇ ಎದ್ರಿ A ಆಪಂಡುಲ್ ಜ್ಯಾರಿ, ಪಂಜೋಡಿ ಅಬ್ದುಲ್ಲ ಬ್ಯಾರಿಗಳ ಮಗ, ಬಂಟ್ವಾಳ ತಾಲ್ಲ್ಯ, ಮೂಡು ಸಡುಕೋಡಿ ಗ್ರಾಮವು— ಇವರಿಗೆ ಕೋರ್ಟು ಪ್ಯೂಂ ಪ್ರಕಾರ ತಿಳಿಸುಪಡಿಸುವುದೇನೆಂದರೆ —

ಅರ್ಜಿದಾರನು ನೀವು ದಸ್ಕೆರೆ ಮೇರೆ ಮೂಡಿದ ಮೇಲ್ಕಂಡ ಥಾರ್ಯತೆ ಅರ್ಜಿಯು ತಾ. 15_12_62ಕ್ಕೆ ಇಟ್ಟಿರಲಾಗಿದೆ. ಪ್ರಸ್ತುತ ಅವಕ್ಕೆ ನೀವು ಸ್ವತಹ ನ ವಕೀಲರ ದ್ವಾರಾ ಹಾಜರಾಗಿ ಉಪಪಂಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾಗುವುದು. ಎಂತ ಈ ಮೂಲ್ಯ ತಿಳಿಸಿದೆ.

(Sd) C. V. Shastry,
Advocate for claim petition.
ಪುತ್ತೂರು, 21-11-62.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
O. S. No. 217/1961.
ಕಿಲಸ್ಟ್ಲೂರು ಲಕ್ಷ್ಮಿನಾರಾಯಣ ರಾವ್ —ವಾದಿ.
ವೆಂಕಂಮ್ಮ ಕೂಡಾ —ಪ್ರತಿವಾದಿರು.
೬೦೦೦ 11ನೇ ವರೆಗಿನ ಸಪ್ಲಿಮೆಂಟಲ್
—ಪ್ರತಿವಾದಿರು.

5. ಗೌರಿ ಹೆಂಗಸು ಕಾಂತಪ್ಪ ಗೌಡರ ವಿಧವೆ,
6. ಗುಂಮಕ್ಕೆ ಹೆಂಗಸು ಗಂಗಯ್ಯ ಗೌಡರ ವಿಧವೆ.
7. ವೆಂಕಪ್ಪ ನಾಯಕ ಗಂಗಯ್ಯ ಗೌಡರ
8. ಲಕ್ಷ್ಮಣ ನ್ಯೂನರೆ ಮಕ್ಕಳು.
9. ಹೊನ್ನಮ್ಮ ಗಾರ್ಡಿಯರ್ಸ್ ತಾಯಿ
10. ವಸಂತಿ 6ನೇ ಪ್ರತಿವಾದಿ ಗುಂ
11. ಬೊಮ್ಮ ಮಕ್ಕಳ ಹೆಂಗಸು.

ಎಲ್ಲರೂ ಬೆಳ್ತಂಗಡಿ ತಾಲ್ಲ್ಯ ಮಲವಂತಿಗೆ ಗ್ರಾಮದ ಕೆಳಗಿನ ಕೆರಿಯಲುಎಂಬಲ್ಲಿ— ಇವರೆಗೆ ಕೋರ್ಟು ಪ್ಯೂಂ ಪ್ರಕಾರ ತಿಳಿಸುವುದೇನೆಂದ್ರೆ —

ನಾದಿಯು ನೀವು ವಗೈರೆಯರ ಮೇಲೆ ಸಲ್ಲಿಸಿದ ಬಗ್ಗೆ ಮೂಡಿದ ಮೇಲ್ಕಂಡ ದಾವೆಯು ತಾ. 18.12.1962ಕ್ಕೆ ಇಟ್ಟಿರುವುದರಿಂದ ಆವಕ್ಕೆ ನಿಮ್ಮ ಆಕ್ಷೇಪಣೆಗಳಿದ್ರೆ ಸದ್ರಿ ದಿನ ಹೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉಪಪಂಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾಗುವುದು, ಎಂತ ಈ ಮೂಲ್ಯ ತಿಳಿಸಿಯಿದೆ.

(Sd) C. S. Shastry,
Vakil for Plff.
ಪುತ್ತೂರು, 25—11—1962.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.


No-555
Rs.15
Rs.20
ಅಮೇರಿಕನ್ ಪಿಸ್ತೂಲ್ ಆಟೋ
ಮೇಟಿಕ್ 6 ಗುಂಡು ಮತ್ತು 50
ಗುಂಡು ಪಿಮಗೆ ಕೃಷ್ಣಕರವಾಗಿರಬೇಕಲ್ಲಿ
ಹಗ ವಾಣಾಸು ಕೊಡಲಾಗುವುದು.
ತುಂಪಾಗಿದಂಚು ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು
ನಿಮ್ಮ ಸಂರಕ್ಷಣೆಗೂ ಕಳ್ಳಕಾರರ ಭಯವನ್ನೂ ಕ್ರೂರ ವ್ಯಾಪಿಗಳ
ಭಾಧೆಯನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ:6 ಗುಂಡಿನ
ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15
ಮತ್ತೆ 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15,
ನಂ 888 ರೂ 20 ಆ ಮೇಲಿನ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ
ಬೆಲೆ ರೂ. 5. ಪಿಸ್ತೂಲ್ ಜೊತೆಯ ಬೆಲೆ: ರೂ. 6 ಪೋಸ್ಟ್ ಚಾರ್ಜು: ರೂ. 2
REY ROGAS & CO., 23-A, Anand Nagar, BOMBAY-28

KEGD. No. B. 3. 176
LICENCE No. 31
Licensed to Post without Prepayment

ಗೇಹ ರಾಜ್ಯದಲ್ಲಿ

ಕೊತ್ತಂಬರಿ ಸರದ ನೇಫಾಯಾತ್ರೆ

"ಇಗೊಳ್ಳೀಂದ್ರೆ, ಒಂದನೆ ತಾರೀಕು ಮೊನ್ನೆ ಕಳೆದು ಹೋಯ್ತು; ಇನ್ನೂ ತ ರ್ತೀನಿ ಅಂತ ಮಾತು ಕೊಟ್ಟ ಕೊತ್ತಂಬ ರಿ ಸರ ಮಾತ್ರ ಬರ್ಲಿಲ್ಲಲ್ಲ?'

"ಅಯ್ಯೊ, ಆದಕ್ಕೇಕೆ ಮೆರುಗುತ್ತೀಯೊ? ಕೊತ್ತಂಬ್ರಿ ಮೊನ್ನೆ ಒಂದನೇ ತಾರೀಕಿ ಗೇ ಕಂಪ್ಲಿ ಆಂಡ್ಡಿಯಿಂದ ತಂದು ಹಾಕಿ ದ್ದೆ ಅಲ್ಲಾ! ಇಂದು ಆರನೇ ತಾರೀಕು, ಇಷ್ಟರೊಳಗೇನೇ ಒಂದು ಸೇರೂ ಕಚಾ ಯ್ತೆ? ಉರುವಲಿಗೆ ಮಸಿ ಬೇರೆ ತಲ್ಸಿ ಹಾಕಿದ್ದೆ....."

"ಬಿಡೀಂದ್ರೆ, ನಿಮಗೆ ಯಾವಾಗ್ಲೂ ಹೀಗೇ. ಕೊತ್ತಂಬರಿ ಸರ ಅಂತ ಹೇಳಿದ ರೆ, ಕೊತ್ತಂಬ್ರಿ ಬೀಜಾಂತ ನಿಮ್ಮಿವಿಗೆ ಕೇಳಿಸ್ತದೆ".

"ಏ, ಕೊತ್ತಂಬರಿ ಸರಾನೆ? ನೀನೇನು ಕೊತ್ತಂಬ್ರಿ, ಕೊತ್ತಂಬ್ರಿ ಅಂತ ಉರು ಹಾಕ್ತಿಕಂಡೆ. ಅಲ್ಲ, ಮೊನ್ನೆ ತಂದಿದ್ದ ಸೂಜಿ ನೂಲು ಇದೆ ತಾನೆ? ಇಲ್ಲಾ ತಂ ಡಾಗಿ ತುಂಡುಮಾಡಿ ಖಲಾಸಾಯ್ತೆ ಹೇಗೆ?"

"ನಿನ್ಮ ಗಂಡಸರ ವ್ಯಾಪಾರವೇ ಹೀ ಗೆ. ಕೊತ್ತಂಬ್ರಿಸರ ಎನ್ನುತ್ತೂ ಸೂಜಿ ನೂಲು ಎಂದು ಮಾತು ಹಾರ್ಸಿಬಿಡ್ತೀರಿ. ಅಲ್ಲ, ನಿಮಗೆ ಯಾಕೆ ಈಗ ಆಷ್ಟೂ ಅ ರ್ಜಂಟಾಗಿ ಸೂಜಿ ನೂಲು ಬೇಕಾ ಯ್ತೂಂತ?"

"ನನಗಲ್ಲ ಕಣೆ, ನಿನಗೇನೇ. ಇದಿ ಯೋ ಇಲ್ವೊ?"

"ಇದೆ, ಇದೆ. ಇದ್ದದ್ದನ್ನು ತುಂಡುಮಾ ಡಿ ಬಿಸಾಕೆಹಾಕಿದ್ರೆ ಮತ್ತೆ ಬರ್ಬೇಕಾದ್ರೆ ಮಾನಾ ಒಂದು ಸಾಕಾಗದೂಂತ ನನಗೆ ಗೊತ್ತು."

"ಅಷ್ಟಾದ್ರೂ ಜ್ಞಾಪಕವಿದೆಯಲ್ಲಾ ಮತ್ತೆ"

"ಅಲ್ಲಾ, ಈಗ ಯಾಕೆ ಬೇಕು ಸೂಜಿ ನೂಲು? ಏನು ಪಂಚೆ ಆಂಗಿ ಹರಿದಿತ್ತೆ?" ಪೇಟೆಗೆ ಹೋದಾಗಲೇ ನಾರಾಯಣನ ಹತ್ರ ರಫ್ ಹಾಕಿಸಿ ಬರಬಹುದಿತ್ತಲ್ಲ? ಅದಷ್ಟು ಸಲ ಹೇಳಿಸೆ ನಿಮಗೆ, ಬಟ್ಟೆಯ ನ್ನು ದೋಬಿಗೆ ಕೊಡ್ಬೇಡಿ ಅಂತ ನೀವು ಕೇಳಬೇಕಲ್ಲ? ಈಗಿನ ಕಾಲ್ದ ಗಂಡಸ್ರ ಕ ತೆಯೇ ಆಷ್ಟು. ಒಂದು ದಿನಾನೂ ಹರಿ ಯದ ಬಟ್ಟೆ ತೊಟ್ಟುಕೊಳ್ಳೋಕಿಲ್ಲ.'

"ಏನಾಗಿದೆ. ನಿನಗಿಂದೂಂತ? ಅಲ್ಲ ತೆಗ್ದ ಬಾಯಿಗೆ ದೋಬಿಯನ್ನು ಬಯ್ಯು ತ್ತೀಯಲ್ಲ? ಅವನೇನು ಮಾಡಿದ ನಿಂಗೆ? ಅವನ ಬಾಯಿಗೆ ಮಣ್ಣು ಹಾಕೋ ಉ ದ್ಯೋಗ ಯಾರೋ ಕೊಟ್ರು ನಿಂಗೆ"

"ಅವನ ಬಾಯಿಗೆ ಮಣ್ಣು ಅಲ್ಲ. ನ ಮ್ಮ ಬಾಯಿಗ್ನೇ ಮಣ್ಣು ಬೇಕೋ ಹೊತ್ತು ಬರುತ್ತೆ; ಹೀಗೆಯೇ ನೀವು ಮಾ ಡಿ, ಆ ದಿನವೂ ಇಂದೋ ನಾಳೆಯೋ ಬಂದೇ ಬಿಡತ್ತೆ".

"ಅಂದ್ರೆ, ನೀನು ಹೇಳೋದಾದ್ರೂ ಏನು? ಬಾಯ್ಬಿಟ್ಟು ಹೇಳ್ಬಿಡು. ನಿನ್ನ— ವಸ್ತೋಕ್ತಿ, ಧ್ವನಿಯೆಲ್ಲಾ ನನಗೆ ಅರ್ಥ ವಾಗೂದಿಲ್ಲ. ಅಲಂಕಾರ ಶಾಸ್ತ್ರದಲ್ಲಿ ನಾನಂತೂ ಬಹಳ ಹಿಂದೆ.'

"ಅಲಂಕಾರ ಶಾಸ್ತ್ರದಲ್ಲೂ ಹಿಂದೆ! ಅಲಂಕಾರ ಮಾಡೋದ್ರಲ್ಲೂ ಹಿಂದೆ, ಅ ಲಂಕಾರ ಮಾಡಿಸೋದ್ರಲ್ಲೂ ಹಿಂದೆಯೆ!'

"ಎಲಲಾ, ಏನಿದು ಮಾತು? ಸ್ವಲ್ಪ ವಿವರಿಸಿ ಹೇಳಿರಪ್ಪ, ಏನೆ ಶತಮಾನದ ಕಂತೆ ದೇವಿಯವರೆ!"

"ಕಂತಿಯೂ ಇಲ್ಲ ಕುಂತಿಯೂ ಇಲ್ಲಿ ಇಲ್ಲ. ನಾನು ಹೀಗೆಯೇ ಕುಂತಿದ್ದರೆ, ನನ್ನ ಬಾಯಿಗೆಮಣ್ಣು ಮಾತ್ರ"

"ಹಾಗೆಲ್ಲಾ ಬೇಜಾರ್ಮಾಡ ಬೇಡ ಕ ಣ್ಣಾಣಿ. ಕೈಗೆ ಬೇಳೋಸಗಾರ ಕಡಿಮೆ ಯೂದ್ರೂ, ಒಂದನೇ ತಾರೀಕೊಂದಿದೆಯ ಲ್ಲಾ? ಅದನ್ನೇ ಆಡವಿಟ್ಟುಕೊಂಡು ಕಾ ಮ್ತಿ ಬೇಕೆಂಬಷ್ಟುಅಕ್ಕಿ ಸಪ್ಲೈ ಮಾಡಲು ತಯಾರಿರುವಷ್ಟು ದಿನ ಮಣ್ಣು ಬಾಯಿ ಗೆ ಬೀಳೋಕಿಲ್ಲ. ಸೆರಗಿನಲ್ಲಿ ಗಂಟು ಹಾ ಕಿಕೊ ಈ ಮಾತನ್ನ"

"ಜಾಗ ಇದ್ದರೆ ತಾನೇ ಗಂಟು ಹಾ ಕೋದು?"

"ಅಂದರೆ, ಈಗಾಗಲೇ ಗೆಂಟುಬಿದ್ದಾ ಗಿದೆ ಅಂತೀಯ?"

"ಮತ್ತೆ ನಾನು ಹೇಳಿದ್ದೇನು? ಒಂದ ನೇ ತಾರೀಕು ಬಂದ ತಕ್ಷಣವೇ ಕೊ ತ್ತಂಬರಿ ಸರ ಮಾಡಿಸ್ತೇನೆ ಎಂತ ಆ ಸಲ ಸೆರಗಿನಲ್ಲಿ ಗಂಟು ಹಾಕಿಸಿದವರು ನೀನೇ ಅಲ್ಲಾ? ಅದನ್ನು ಮರೀತೇ ಬಿಟ್ಟರಾ?"

"ಛೆ, ಛೆ, ಕೋಪಿಸ್ಕೊಬೇಡ, ರಾಣಿ ನಿನಗಲ್ಲದೆ ಮತ್ತಾರಿಗೆ ನಾನು ಗಂಟು ಹಾಕಿಸೋದು?"

"ಹಾಕಿಸಿದ ಗಂಟನ್ನ ಬಿ ಚ್ಚೋಕೆ ಮಾತ್ರ ಬೇರೆಯವರು ಬರಬೇಕೂಂತ ತೋರುತ್ತೆ"

"ಅಂದ್ರೆ ನೀನ್ಸಿಗ ಕೊತ್ತಂಬರಿ ಸರ ಬೇಕು ತಾನೆ",

"ಹೌದು,"

"ಆಕೊ, ಆದಕ್ಕೆ ನಾನಾಗ ಕೇಳಿದ್ದು, ತಂದ ಕೊತ್ತಂಬರಿ ಇನೆ; ಸೂಜಿನೂಲು ಇದೆ; ಒಂದು ಸರ ನೇಯ್ದುಕೋ.,"

"ಥೂ, ನೀವೇ, ಎಲ್ಲಾ ತಮಾಷೇಲಿ ಯೇ ಕಳೆದುಬಿಡ್ತೀರಿ. ಆ ಕೊತ್ತಂಬ್ರಿ ಸ ರವಲ್ಲ ನಾನ ಕೇಳಿದ್ದು ಬಂಗಾರದ ಕೊ ತ್ತಂಬರಿ ಸರ, ಬಂಗಾರದ್ದು....,"

"ಬಂಗಾರದ ಹೆಣ್ಣಿಗೂ ಬಂಗಾರದ ಕೊತ್ತಂಬರಿ ಬೇಕೆ? ಆಯ್ತು....ಮುಂದಿ ನ ಒಂದನೇ ತಾರೀಕು...,"

"ಅಂತಹ ಎಷ್ಟು ಒಂದನೇ ತಾರೀಕು ಕಳೆದು ಹೋಯ್ತು?"

"ತಿಂಗಳು ಕಳೀತು ಅಂದಾಗ ನೆನಪಿ ಗೆ ಬಂತು ಮೊನ್ನೆ ಒಂದನೇ ತಾರೀಕು ನೇಫಾ ಪ್ರದೇಶದಿಂದ ಕನ್ನ ಸೇನೆಯನ್ನು ಹಿಂದೆ ಕರೆದುಕೊಳ್ಳು ವೆನೆಂದು ಚೌ ಎನ್ ಲಾಯ್ ಹೇಳಿದ್ದ ರು. ಆದರೆ, ಇದುವರೆಗೂ ನೇಫಾ ಅವ ರದ್ದಾಗಿಯೇ ಉಳಿದಿದೆ ನೋಡು."

"ನೇಫಾ ಅನ್ನುತ್ತೂ ನೆನಪಿಗೆ ಬಂತು. ನಿನ್ನೆ ನಮ್ಮ ಸುಶೀಲಕ್ಕ ಬಂದಿದ್ಳು."

"ಏನಂತೆ? ಯಾಕೆ ಬಂದಿದ್ಳು?"

"ಅದೇನೋ ನೇಫಾದಲ್ಲಿ ಯುದ್ಧದ ವಂ ತಿ. ಆದಕ್ಕೆ ರಕ್ಷಣಾನಿಧಿಗೆ ಚಿನ್ನ ಕೊಡು ಅಂತ ಕೇಳಿದ್ಳು."

"ಆದಕ್ಕೆ ನೀನೇನು ಮಾಡಿದೆ?'

"ಮಾಡೂದೇನು? ನಮ್ಮತ್ರೆ ಕೊತ್ತಂ ಬ್ರಿ ಸರ ಮಾಡ್ಸಿ ತರ್ತಾರೆ. ಅದನ್ನು ಒಂ ದು ಬಾರಿ ದೇವರಿಗಿಟ್ಟು, ಒಂದ್ಸಾರಿ ತೊ ಟ್ಟುಕೊಂಡು ಮತ್ತೆ ಒಪ್ಪಿಸ್ತೇನೆ ಅಂತ ಹೇಳಿದೆ.'

"ಸರಿಯಾಯ್ತು ಹೇಳು. ಕನಸಿನ ಬತ್ತ ಕ್ಕೆ ಈಗ್ಲೇ ಗೋಣಿ ಹಿಡಿದಂತಾಯ್ತು. ಅಲ್ಲ, ಮನೆಗೆ ಬಂದವ್ನನ್ನು ಬರಿಗೈಯ ಲ್ಲೇ ಕಳಿಸಿ ಬಿಟ್ಟೆಯ?'

"ಅದು ಹೇಗೆ ಕಳಿಸಲಿ ಹೇಳಿ? ಅವ ರು ಬಂಗಾರ ಬೇಡುತ್ತ ಬಂದಿದ್ದರು. ನ ಮ್ಮ ಮನೇ ಬಂಗಾರವೆಲ್ಲ ಊರಾಗೇ ಗೊ ತ್ತು ನೋಡಿ ಕೊನೆಗೆ ತಂದೆಯವರು ಕೈ ಗೆ ಹಾಕಿದ್ದ ಒಂದೇ ಒಂದು ಜೋಡಿ ಬಳೆ ಗಳನ್ನ ತೆಗೆದುಕೊಟ್ಟು ಬಿಟ್ಟೆ."

"ಹಜ್ಜಾ, ಏನೆಂದೆ? ಬಳೆ ಕೊಟ್ಟುಬಿ ಟ್ಟೆಯ? ನಿನ್ನೆ ನಾನು ಕೇಳಿದಕ್ಕೆ ಹೇಳ ದ್ದೆ, ಒಪ್ಪ ಹಾಕಲು ಕೊಟ್ಟಿದ್ದೇನೆಂತ"

"ನಮತ್ತೇನು ಹೇಳಲಿ? ನಾನು...ದ ಮ್ಯಯ್ಯ"

"ರಾಣೀ ಹಾಗೆಲ್ಲಾ ಅನ್ಬಾರದು. ಭಾ ರತದ ಮೇಲೆಲಿ ಚೀನೀಯರುಹಚ್ಚಿದ ಕೆಸ ರಿನ ಮೇಲೆ ಒಪ್ಪ ಹಾಕಲು ನೀನು ಅದ ನ್ನು ಕೊಟ್ಟೆ. ನಿನ್ನಂತಹ ನೂರಾರು ಮ ಹಿಳೆಯರೂ ಹಾಗೆ ಮಾಡಿದ್ದಾರೆ, ಮಾಡ ಬೇಕು. ನಾನು ಕೂಡ, ನಿನ್ನ ಕೊತ್ತಂಬ ರಿ ಸರವನ್ನುಬಜೆಟಿನಲ್ಲಿ ಇಟ್ಟಿದ್ದೆ ಆ ಕಲಂ ಕತೊಳೆಯಲು ಅದರ ಒಂದುಪಾಂಶವನ್ನು ನಾನು ಒಂದನೆಯ ತಾರೀಕಿಗೆ ಕೊಟ್ಟು ಬಿಟ್ಟಿದ್ದೇನೆ,,

"ಅಂದರೆ!,,

"ಅಂದರೆ, ಸಂಬಳದ ದಿನವನ್ನು ರಕ್ಷ ಣಾ ನಿಧಿಗೆ ಕೊಡುಗೆಯ ದಿನವನ್ನಾಗಿ ಮಾಡಿಕೊಂಡಿದ್ದೇನೆ."

"ಹಾಗಾದರೆ, ನನ್ನ ಕೊತ್ತಂಬರಿ ಸರ...?,,

"ಅದೂ ಒಪ್ಪಹಾಕಲಿಕ್ಕೆ ಹೋಗು ತ್ತಾ ಇದೆ,,

"ನಿನ್ನಂತಹ ಕೋಟಗಟ್ಟಲೆ ಮಹಿಳೆ ಯರ ತ್ಯಾಗವೇ ದೇಶದ ಗೌರವಕ್ಕೆ ಭದ್ರ ಕವಚ.,,

ಸರಿ, ಅಂತೂ ಭಾರತೀಯ ವೊಬ್ಬನು ಳಿದರೆ ಸಾಕು. ಅಲ್ಲವೆ?,,

"ಉಳಿಯುತ್ತದೆ, ನಿನ್ನಂತಹರಿಂದ ಅದು ಉಳಿದೇ ಉಳಿಯುತ್ತದೆ. ರಾತ್ರಿ ಬ ಕಳ ಹೊತ್ತಾಯಿತ, ಹಿಮಗಾಳಿಯೂ, ಬೀಸತೊಡಗಿದೆ; ಬೆಳಿಗ್ಗೆ ಬೇಗನೇ ಕೆಲಸ ಕ್ಕೆ ಹೋಗಬೇಕು.,,

"ಹಜ್ಜಿ....,

—ಗೋರಾ

ರಾಷ್ಟ್ರವೇ ಯುದ್ಧೋನ್ಮುಖವಾಗಿದೆ!

ಗಣಿನಾಡಿನ ಭದ್ರತೆ ಮತ್ತು ಸ್ವಾತಂತ್ರ್ಯ ರಕ್ಷಣೆಗಾಗಿ

ಭಾರತೀಯರೆಲ್ಲರೊಂದಾಗಿ ದುಡಿಯೋಣ
ಕರ್ಮಶಾಲೆಹೊಲಗಳಲಿ ಅಧಿಕ ಉತ್ಪತ್ತಿಗಾಗಿ ಶ್ರಮಿಸೋಣ
ಅಹ-ಅನಾವ್ಯಯಗಳನು ತಡೆದು ಆತ್ಮನಿಗ್ರಹದಿ ಮುನ್ನಡೆದು ಉಳಿಸೋಣ

ರಾಷ್ಟ್ರ ರಕ್ಷಣೆಗಾಗಿ ಅರ್ಪಿಸೋಣ

ಸಿಂಡಿಕೇಟ್ ಬ್ಯಾಂಕ್

— ಶಾಂತಿ ಕಾಲದಂತೆ ಸಮರದಲ್ಲೂ ರಾಷ್ಟ್ರಸೇವೆಯ ಧ್ಯೇಯದಲ್ಲಿ —

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಳಿಂದ ನಿವಾಸ, ಉಡುಪಿ
ಸ್ಥಾಪನೆ: ೧೯೨೫.

Edited Printed & Published by K. H. Shetty, at the Navayuga Press, Udipi, S. India.

ONTRIBUTE
OUR MITE
O OUR
ATIONAL
EFENCE
UND

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 14

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 13—12—1962 ಗುರುವಾರ

20ನೆ ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೨ ಸಂಚಿಕೆ ೧೪

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿರಿ

ಭಾರತ ಚೀನಾ ಗಡಿವಿವಾದಕ್ಕೆ

ಪರೋಕ್ಷಗಳ ಕೊಲಂಬೋ ಸಮ್ಮೇಳನ

ಇಂದು ಜಗತ್ತು ವಿನಾಶದತ್ತ ಸಾಗುತ್ತಿರುವಂತೆ ಕಾಣುತ್ತಿರುವ ಈ ಸಂದರ್ಭದಲ್ಲಿ ಜನರಿಗೆ ಶಾಂತಿಯ ಆವಶ್ಯಕತೆಯುಂಟಾಗುವದು ಸಹಜವಾದರೂ ಅದು ಸುಲಭದಲ್ಲಿ ದೊರತಲಾರದು. ಜಗತ್ತನ್ನೇ ತನ್ನೆಡೆಗೆ ಆಕರ್ಷಿಸಿಕೊಂಡು ಜಗತ್ತಿನ ಶಾಂತಿಗೆ ಭಂಗ ತಂದ ಚೀನೀಯರ ಪಾಶವೀ ಆಕ್ರಮಣದಿಂದ ಇಂದು ಉದ್ಭೂತವಾಗಿರುವ ಸಮಸ್ಯೆ ಯುದ್ಧ ಜಗತ್ತಿನ ಶಾಂತಿಯನ್ನು ಮುರಿದ. ಮಹಾನ್ ವಿಪತ್ತನ್ನುಂಟುಮಾಡಿದೆ. ಜಗತ್ತನ್ನೇ ಎರಡು ಪಂಗಡಗಳನ್ನಾಗಿ ಮಾಡಿ ಸಮರಾಂಗಣಕ್ಕೆ ಭಾರತವನ್ನು ಆಹ್ವಾನಿಸಿದ ಚೀನೀಯ ದೌರವ ಕೃತ್ಯವನ್ನು ನಿಂದಿಸಿದಷ್ಟೂ ಸಾಲದು. ಭಾರತದೊಡನೆ ಮಿತ್ರತ್ವ ಬೆಳೆಸಿ ಮುಂದೆ ಹಗಲು ಮನೆ ನೋಡಿ ರಾತ್ರೆ ಅದೇ ಮನೆಗೆ ನುಗ್ಗಿ ದರೋಡೆ ಮಾಡಿದ' ಎಂಬ ಗಾದೆಯಂತೆ ಮಾಡಿದ ಮನುಷ್ಯತ್ವವನ್ನೇ ಕಳೆದುಕೊಂಡು ಆಕ್ರಮಣ ಮಾಡಿದ ಚೀನಾವನ್ನು ಜಗತ್ತೇ ಛೀಹಿಸ್ಕರಿಸ ಬೇಕು. ಆವರ ಆಕ್ರಮಣ ಆವರಿಗೆ ಮರಿಯಲಾರದಂಥ ಒಂದು ಉತ್ತಮ ಪಾಠ ಕಲಿಸ ಬೇಕು. ತಾವು ಶಾಂತಿಪ್ರಿಯ ರಾಷ್ಟ್ರವೆಂದು ಸಾರಿ ಇಂದು 'ಹೇಳುವುದು ಶಾಸ್ತ್ರ ಇಕ್ಕುವದು ಗಾಳಿ' ಎಂಬಂತೆ ವರ್ತಿಸುತ್ತಿರುವ ಚೀನಾ ಜಗತ್ತಿಗೇ ಗಂಡಾಂತರಕಾರಿ ರಾಷ್ಟ್ರವಾಗಿದೆ. ತಾನೊಬ್ಬನೇ ಜಗತ್ತಿನಲ್ಲಿ ಸುಖಪಡೆದು ಮೆರೆಯಬೇಕು. ಇತರರೆಲ್ಲ ತನ್ನ ಗುಲಾಮರು-ಸೇವಕರು ಎಂದು ಬಗೆದಿರುವ ಆ ಕೆಂಪು ಚೀನಾಕ್ಕೆ ತಕ್ಕ ಶಾಸ್ತಿ ಸೂಡದಿದ್ದರೆ ಬುದ್ಧಿ ಕಲಿಸದಿರಿ ಮುಂದೆಯೂದರೂ ಜಗತ್ತಿಗೆ ಗಂಡಾಂತರ ತಪ್ಪಿದುದಲ್ಲ ಎಂಬುದು ಸರ್ವಥಾ ಸತ್ಯ. ಇಂದು ಚೀನಾ ತನ್ನ ಸ್ವಾರ್ಥ ಸಾಧನೆಗೆ ಮಾನ-ಮರ್ಯಾದೆ ಘನತೆ ಗೌರವಗಳಿಲ್ಲವೆನ್ನು ಕಳೆದುಕೊಳ್ಳಲು ಸಿದ್ಧವಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಜಗತ್ತಿನ ದೃಷ್ಟಿ.

ಚೀನಾದ ಕಮ್ಯುನಿಸ್ಟ್ ಸರಕಾರದ ಬಗ್ಗೆ ಮೊದಲಿಂದಲೂ ಜನರಲ್ಲಿ ಒಳ್ಳೆಯ ಅಭಿಪ್ರಾಯವಿರಲಿಲ್ಲ. ಆಕ್ರಮಣ ಮಾಡುವ ಉದ್ದೇಶ ಚೀನಾದಲ್ಲಿದೆಯೆಂಬುದು ಎಷ್ಟೋ ವರ್ಷಗಳ ಹಿಂದಿನ ಮಾತು. ಇದರಿಂದಲೇ ಚೀನಾದತ್ತ ಜಗತ್ತಿನ ದೇಶಗಳು ಭಯ ಹಾಗೂ ದ್ವೇಷಪೂರ್ಣ ದೃಷ್ಟಿಯಿಂದಲೇ ನೋಡುತ್ತಿದ್ದುದು. ಆದರೆ ಚೌ ಎನ್ ಲಾಯರು ಈ ಮಧ್ಯೆ ಬೆಕ್ಕುಗಳ ಜಗಳವನ್ನು ತೀರ್ಮಾನಿಸಲು ಬಂದ ಮಂಗನಂತೆ ಮುಂದೆ ಬಂದು ಪಂಚಶೀಲಕ್ಕೆ ಸಹಿ ಹಾಕಿ ಇಂದು ಭಾರತದ ಮೇಲೆ ನಗ್ನ ಆಕ್ರಮಣ ಮಾಡಿದ್ದಾರೆ. ಅನೇಕ ಅನಾಗರಿಕವಂತೂ ಚೀನಾದ ಬದ್ಧ ವೈರಿ. ಅಜನ್ಮ ಶತ್ರು. ಕಮ್ಯುನಿಜಮನ್ನು ತನ್ನ ಮ್ಯೆ ವೈರಿಯೆಂದು ತಿಳಿದಿರುವ ಪಾಶ್ಚಾತ್ಯ-ಪೌರ್ವಾತ್ಯ ರಾಷ್ಟ್ರಗಳಿಗೆ ಚೀನಾದ ಪಾಶವೀಕೃತ್ಯಗಳ ಪರಿಚಯವಿಲ್ಲದಿಲ್ಲ. ಯೂರೋಪು ಮತ್ತು ಅಮೇರಿಕ, ಆಸ್ಟ್ರೇಲಿಯಾ ಖಂಡಗಳು ಚೀನಾದ ಇಂದಿನ ಅಸಭ್ಯ ಆಕ್ರಮಣವನ್ನು ಕಂಡೋಕ್ತವಾಗಿ ಟೀಕಿಸಿವೆ. ಆದರ ಆಕ್ರಮಣವನ್ನು ಕುರಿತು "ಇದೊಂದು ಜಗತ್ತಿನ ಶಾಂತಿಪ್ರಿಯ ರಾಷ್ಟ್ರಗಳಿಗೆ ಪಂಥಾಹ್ವಾನ" ಎಂದು ಘೋಷಿಸಿವೆ. ಆದರೆ ಇಂದು ಆ ಘೋಷದ ಮತ್ತು ಏನ್ಯಾದ ಕೆಲವು ರಾಷ್ಟ್ರಗಳು ತಟಸ್ಥವಾಗಿದ್ದು ಮೌನಾಚರಣೆ ಮಾಡುತ್ತಿವೆ. ಇಂದು ಅವುಗಳ ಪರಿಸ್ಥಿತಿ ಎರಡು ದೋಣಿಗಳಲ್ಲಿ ಕಾಲಿಟ್ಟಂತೆ ಆಗಿದೆ. ಅವೆಲ್ಲವುಗಳು ಭಾರತದ ಮೇಲೆ ಚೀನಾ ನಗ್ನ ಆಕ್ರಮಣ ಮಾಡಿದೆಯೇ ಎಂಬುದನ್ನು ಇನ್ನೂ ಅಧ್ಯಯನ ಮಾಡುತ್ತಲೇ ಉಳಿದಂತಿವೆ. ಇಂಥ ರಾಷ್ಟ್ರಗಳಲ್ಲಿ ಘಾನಾ, ಕಾಂಬೋಡಿಯಾ; ಬರ್ಮಾ, ಯುಗೋಸ್ಲಾವಿಯಾ ಮತ್ತು ಈಜಿಪ್ಟ್ ಗಳು ಮುಖ್ಯವಾದವುಗಳೆ.

ಭಂಡಾರನಾಯಿಕೆಯವರ ಪ್ರಯತ್ನ

ಈ ತಟಸ್ಥ ರಾಷ್ಟ್ರಗಳಲ್ಲಿ ಭಾರತದ ನೆರೆಯ ರಾಷ್ಟ್ರ ಸಿಂಹಳ, ಭಾರತ ಚೀನಾ ಗಡಿಸಮಸ್ಯೆಯ ಬಗ್ಗೆ ಒಂದು ಸಮ್ಮೇಳನ ಕರೆಯುವುದೆಂದು ನಿರ್ಧರಿಸಿದುದು ನಿಜಕ್ಕೂ ರಾಜಕೀಯ. ಸಿಂಹಳದ ಪ್ರಧಾನಿ ಶ್ರೀಮತಿ ಭಂಡಾರನಾಯಿಕೆಯವರ ಈ ಯೋಜನೆ ನಿಜಕ್ಕೂ ಜಗತ್ತಿನ ಶಾಂತಿ ರಕ್ಷಣೆಯ ಕಾರ್ಯದಲ್ಲಿನ ಒಂದು ಅಂಶ. ಇತ್ತೀಚೆಗೆ ಜಗತ್ತನ್ನು ತನ್ನ ಎಡೆಗೆ ಸೆಳೆದುಕೊಂಡ ಈ ಕೊಲೊಂಬೊ ಸಮ್ಮೇಲನದ ಬಗ್ಗೆ ವಿಶ್ವವೇ ಕುತೂಹಲಿಯಾಗಿದೆ. ಭಾರತಕ್ಕೆ ಅನೇಕ ಅಮೆರಿಕಾ ಮತ್ತು ಬ್ರಿಟಿಷಿನ ನಿಯೋಗಗಳು ಬಂದು ಹೋದ ನಂತರದ ಪ್ರಮುಖ ಘಟನೆಯೊದ ಇದರ ಕಾರ್ಯವ್ಯಾಪ್ತಿ-ಉದ್ದೇಶ-ಉತ್ಸಾಹವೇ ಮೊದಲಾದುವುಗಳ ಬಗ್ಗೆ ಸ್ಥೂಲವಾಗಿ ವಿಚೇಚಿಸಿದರೂ ಅದು ಅಕ್ಷರಶಃ ಉಪಯುಕ್ತವಾಗದಿರದು.

ಸಮ್ಮೇಳನದ ಹಿನ್ನಲೆ

ಸಿಂಹಳಕ್ಕೆ ಭಾರತದ ಮೇಲೆ ನಗ್ನ ಆಕ್ರಮಣ ಆಗಿದೆಯೆಂಬ ಆರೋಪ ಬಹು ಸಮಯದ ಮೊದಲೇ ಆಗಿದೆ. ಆದರೆ ಅದನ್ನು ಅದು ಬಾಯಿಬಿಟ್ಟು ಹೇಳುವಂತಿಲ್ಲ ಭಾರತದ ಮೇಲೆದಾ ಸಹಾನುಭೂತಿ-ಅನುಕಂಪವಿರುವ ಸಿಂಹಳ ಈ ವರೆಗೆ ಭಾರತದ ಮಿತ್ರ ರಾಷ್ಟ್ರವೇ ಆಗಿದೆ ಚೈನಾದ ಆಕ್ರಮಣವನ್ನು ಸೃಷ್ಟಿಸುವ ಈ ಕೊಲೊಂಬೋ ಸಮ್ಮೇಳನದ ಧ್ಯೇಯ ನಿಜಕ್ಕೂ ಸ್ವಾಗತಾರ್ಹ. ಭಾರತಕ್ಕೆ ಉರ್ಜಿತ ಭಾರತದ ನೀತಿ-ಧೋರಣೆಗಳಿಗೆ ಜಗತ್ತಿನ ಮುಖ್ಯವಾಗಿ ತಟಸ್ಥ ರಾಷ್ಟ್ರಗಳ ಬೆಂಬಲ ಕೊಡುವುದೇ ಆದರ ಅಂತರಂಗದ ಬಯಕೆ. ಆದರೆ ಅದು ಚೀನಾವನ್ನು ತಿರಸ್ಕರಿಸಲಾರದು ಅದರೊರಡನೆ ನಿಷ್ಠುರ ಮಾಡಿಕೊಳ್ಳಲಾರದು. ಯಾಕೆಂದರೆ ವೈರವು ವೈದನನ್ನೇ ಸಾಧಿಸುತ್ತದಷ್ಟೆ.

ಭಾಗವಹಿಸುವ ರಾಷ್ಟ್ರಗಳು

ಸಿಂಹಳ ಪ್ರಧಾನ ಮಂತ್ರಿಯವರು ಕರೆದ ಈ ಸಮ್ಮೇಳನದಲ್ಲಿ ಭಾಗವಹಿಸಲು ಆರುಆಫ್ರೇಷ್ಯಾರಾಷ್ಟ್ರಗಳು ಸಂಪೂರ್ಣವಾಗಿ ಒಪ್ಪಿವೆ. ಆಮಂತ್ರಣದಂತೆ ಒಪ್ಪಿಕೊಂಡ ಪ್ರಮುಖ ಆರು ರಾಷ್ಟ್ರಗಳೆಂದರೆ ಸಂ. ಅ. ಪ್ರಜಾರಾಜ್ಯ ಕಾಂಬೋಡಿಯಾ ಬರ್ಮಾ, ಘಾನಾ ಇಂಡೋನೇಶ್ಯ ಮತ್ತು ಸಿಂಹಳಗಳು. ಆದರೆ ಈ ರಾಷ್ಟ್ರಗಳು ಪ್ರಾರಂಭದಲ್ಲಿ ತೋರಿಸಿದ ಉತ್ಸಾಹವನ್ನು ಮುಂದೆ ತೋರಿಸಲಿಲ್ಲ. ಪ್ರಾರಂಭದಲ್ಲಿ ಈ ಸಮ್ಮೇಳನವು ಪ್ರತಿ ದೇಶದ ನಾಯಕರ ಮಟ್ಟದಲ್ಲಿ ಜರಗುವುದೆಂದು ನಿಶ್ಚಯವಾಗಿದ್ದರೂ ಮುಂದೆ ಕ್ರಮೇಣ ರಾಷ್ಟ್ರ ನಾಯಕರ ಉದಾಸೀನತೆಯೋ ವ ಸಮ್ಮೇಳನದ ಔಚಿತ್ಯಗಳೋ—ಇಂದು ವಿದೇಶ ಮಂತ್ರಿಗಳ ಮಟ್ಟದಲ್ಲಿ ಜರಗುವಂತೆ ಆಗಿದೆ.

ಪ್ರಾರಂಭದ ಪ್ರತಿ ಕ್ರಿಯೆಗಳು

ಕೊಲೊಂಬೋ ಸಮ್ಮೇಲನಕ್ಕೆ ಮೊಟ್ಟ ಮೊದಲು ತುಂಬಾ ಪ್ರೋತ್ಸಾಹದರೆ ಸಹಾನುಭೂತಿ ಸ್ಪತಿಯೊಂದು ದೇಶದಿಂದಲೂ ಸಿಕ್ಕಿತ್ತು. ಆದರೆ ಮೊದಲು ಸಿಂಹಳದ ಈ ಸಮ್ಮೇಲನದ ಬಗ್ಗೆ ನಿರುತ್ಸಾಹ ತೋರಿಸಿದವರು ಘಾನಾದ ಎನ್ ಕ್ರುಮಾರವರು. ಭಾರತ ಚೀನಾ ವಿವಾದದ ಯಥಾರ್ಥ-ಚಿತ್ರಣವನ್ನು ತಿರಿತುಕೊಳ್ಳಲೆ ವಾದಿಸುತ್ತಿರುವರು ಎನ್ ಕ್ರುಮಾ ನಿಜಕ್ಕೂ 'ತನ್ನ ಕುದುರೆಗೇ ಮೂರು ಕಾಲು' ಎಂದು ವಾದಿಸುತ್ತಿದ್ದರು. ತನಗೆ ಕೊಲೊಂಬೋ ಗೆ ಹೋಗಲು ಬಿಡುವಿಲ್ಲವೆಂದು ಮೊದಲು ಹೇಳಿ ಮುಂದೆ ಈ ಸಮ್ಮೇಲನವನ್ನು ತಮ್ಮ ದೇಶದಲ್ಲೇ ಜರಗಿಸಬೇಕೆಂದು ಸೂಚಿಸಿದರು. ಚೈನಾದ ಪರಮ ಮಿತ್ರರೆಂದೆನಿಸಿಕೊಂಡ ಇಂಡೋನೇಶಿಯದ ಸುಕರ್ನೋರು ಈ ಸಮ್ಮೇಲನದಲ್ಲಿ ಭಾಗವಹಿಸಲಾರೆನೆಂದು ಹೇಳಿ ತನ್ನ ಕಾರ್ಯಬಾಹುಳ್ಯದ ಕಾರಣವನ್ನಿಟ್ಟರು. ನಸ್ಸೇರರು ತಮ್ಮ ದೇಶದ ಪ್ರಧಾನ ಮಂತ್ರಿಯವರನ್ನು ಕಳುಹಿಸುತ್ತಾರೆ ಆದರೆ ಕಾಂಬೋಡಿಯಾದ ರಾಜ್ಯ ಪ್ರಮುಖರಾದ ಸಿಂಹ ನೌತಯವರೇ ಇದರಲ್ಲಿ ಭಾಗವಹಿಸುವರೆಂದು ಗೊತ್ತಾಗಿದೆ ಇದರಿಂದ ಈ ಸಮ್ಮೇಲನಗ ವ್ಯಾಪ್ತಿ-ಸರಿಣಾಮ ಬಹು ವಿಶಾಲ ಹಾಗೂ ಪ್ರಭಾವಶಾಲಿಯೂದುದು ಆಗಲಾರದೆಂದು ಬಲ್ಲ ರಾಜಕೀಯ ತಜ್ಞರು ಹೇಳಿದ್ದಾರೆ.

ಭಾರತದ ಪ್ರಭಾವ

ಈ ಸಮ್ಮೇಲನದ ಮೇಲೆ ಭಾರತದ ದಿವ್ಯನಾದ ಪ್ರಭಾವ ಬಿದ್ದಿದೆ. ನೆಹರೂರವರಿಗೆ ಈ ಸಮ್ಮೇಲನ ನಡೆಯುವುದು ಸಂಪೂರ್ಣ ಸಮ್ಮತಿಸಿದೆ. ಆದರೆ ಭಾರತ—ಚೀನಾ ಗಡಿ ವಿವಾದದ ಬಗ್ಗೆ ಸರಿಯಾದ ತಿರಿವು-ಜ್ಞಾನ ತೂಡಿಕೊಳ್ಳಿದ ಈ ರಾಷ್ಟ್ರಗಳು ಶ್ವಲ್ಪ ಉಭಯ ರಾಷ್ಟ್ರಗಳಲ್ಲೂ ಸಂಶಯಪಡುವಂಥಹ ಸ್ಥಿತಿಯನ್ನುದ್ದುವು. ಆದರೆ ನನ್ನ ದೇಶದಿಂದ ಸಂಶಯನನ್ನು ನಿವಾರಿಸಲು ಕೋದ ಶ್ರೀಮತಿ ಲಕ್ಷ್ಮೀ ಮೆನನ್ ಮತ್ತು ಎ. ಕೆ. ಸೇನರು ಈ ಕಾರ್ಯದಲ್ಲಿ ಸಂಪೂರ್ಣ ಸಫಲರಾಗಿದ್ದಾರೆ. ಗಡಿ ವಿವಾದದ ಶ್ವಷ್ಟ ಚಿತ್ರಣಮಾಡಿಕೊಟ್ಟು ಭಾರತದ ಗಡಿ ನೀತಿ-ಧೋರಣೆಗಳನ್ನು ಆವರಿಗೆ ತಿಳಿಸಿ ಹೇಳಿ ಸಂಶಯ ನಿವಾರಿಸಿ ಬಂದಿದ್ದಾರೆ. ಇದರಿಂದ ಈ ಕೊಲೊಂಬೋಸಮ್ಮೇಲನ ಭಾರತದ ಮಟ್ಟಿಗೆ ಬಹಳ ಪರಿಣಾಮಕಾರಿಯಾಗಿದೆ

(ಉಳಿದ ಭಾಗ ನೋಡಿರಿ)

ಭದ್ರತೆ
ಬಾಳಿಕೆಗಾಗಿ
ವೀರಾ

ಇದೀಗ ರಾಷ್ಟ್ರ ರಕ್ಷಣೆ, ಭದ್ರತೆಗಾಗಿ ಹೋರಾಡುವ ಕಾಲವಲ್ಲವೆ?
ನಿಮ್ಮ ಮನೆಯ ಸುರಕ್ಷಿತತೆ, ಭದ್ರತೆಗಳಿಗಾಗಿ ವೀರಾ ಉಕ್ಕಿನ ಫರ್ನಿಚರುಗಳನ್ನು
ಆರಿಸುವುದು ಉಚಿತವಲ್ಲವೆ?
ಮನೆ, ಮಠ, ಆಫೀಸು, ಆಸ್ಪತ್ರೆ, ಕಾಲೆ ಕಾಲೇಜುಗಳಿಗೆ ಅತ್ಯಾವಶ್ಯಕವಾದ
ಯಾವತ್ತೂ ಉಕ್ಕಿನ ಫರ್ನಿಚರುಗಳಿಗೆ ವಿಚಾರಿಸಿರಿ ಯೂ ಸಂದರ್ಶಿಸಿರಿ!

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು— 1.

"ಗೊತ್ತಿಲ್ಲ ಕಣೇ"

ಲೇಖಕ: ಪಿ. ಜಿ. ಸರಮೇಶ್ವರಪ್ಪ, ಚಿತ್ರದುರ್ಗ.

ಪಾತ್ರಧಾರಿಗಳು:

ಗುಂಡು ರಾಯರು, ರವಿ—(ರಾಯರ ಆಳಿಯ), ರತ್ನ—(ರಾಯರ ಮಗಳು).

[ಒಂದು ಮನೆಯ ದೃಶ್ಯ. ರವಿ ಕುರ್ಚಿಯ ಮೇಲೆ ಕುಳಿತುಕೊಂಡು ಚಿಂತಿಸಿರುತ್ತಾನೆ. ಒಮ್ಮೊಮ್ಮೆ ಹುಚ್ಚನಂತೆ ಮೂತನಾಡುತ್ತಾನೆ]

ರವಿ— (ಸ್ವಗತ) ಛೇ! ಹೀಗಾಗಿ ಬಾರದಿತ್ತು. ಒರ್ವ ಹೆಣ್ಣಿನ ಮಾಂಗಲ್ಯ ಕಿತ್ತೊಗೆದ. ಮುಂದೆ ಅವಳ ಜೀವನ? ಈ ರೀತಿಯಾಗಿ ಪ್ರಪಂಚದಲ್ಲಿ ನಡೆದರೆ ಗತಿಯೇನು? ನಾನಿದ್ದರೂ ಉಳಿಸಲಾಗಲಿಲ್ಲ. Oh! My God· (ಚಿಂತಿಸುತ್ತಾ ಕುಳಿತುಕೊಂಡಿರುವನು. ಅನಂತರ ರತ್ನಾಳ ಪ್ರವೇಶ)

ರತ್ನ— ಏನ್ರೀ

ರವಿ— "....."

ರತ್ನ— ಏನ್ರೀ, ನಿಮ್ಮನ್ನೇ ಮೂತನಾಡಿಸಿದ್ದು-

ರವಿ— (ತಲೆ ಎತ್ತಿ ನೋಡುವನು)

ರತ್ನ— Postman ಬಂದನೇ?

ರವಿ— ಗೊತ್ತಿಲ್ಲ ಕಣೇ.

ರತ್ನ— ಈ ದಿನ M. O. ಬರಲಿಲ್ಲ ದಿದ್ದರೆ ರಾತ್ರಿಗೆ ಉಪವಾಸವೇ ಗತಿ. M. O. ಬರಲಿಲ್ಲದಿದ್ದರೆ ನಮ್ಮಪ್ಪನಾದರೂ ಬರಬಹುದು. ಗೋಪು ಸ್ಕೂಲಿಗೆ ಹೋದನೇನ್ರೀ.

ರವಿ — ಗೊತ್ತಿಲ್ಲ.

ರತ್ನ— ರಾಘವೇಂದ್ರರಾಯರ ಹತ್ತಿರ ಹೋಗಿ ಔಷಧಿ ತಂದಿರಾ?

ರವಿ— ಗೊತ್ತಿಲ್ಲ.

ರತ್ನ— ಬೆಳಗ್ಗೆ ಎದ್ದವರು ಕುರ್ಚಿಯಲ್ಲಿಯೇ ಕುಳಿತುಕೊಂಡಿದ್ದಿರೇನು? ಸರಿಹೋಯ್ತು ನೋಡಿ. ಮುಖ ತೊಳೆದು ಕೊಂಡ್ರೆನ್ರೀ.

ರವಿ— ಗೊತ್ತಿಲ್ಲ ಕಣೇ.

ರತ್ನ— ನೀವು ಯಾವ ಲೋಕದಲ್ಲಿ ದ್ದೀರೀ?

ರವಿ— ಗೊತ್ತಿಲ್ಲ.

ರತ್ನ— ಕಾಫಿ ಕುಡಿದಿರಾ?

ರವಿ— ಗೊತ್ತಿಲ್ಲ.

ರತ್ನ— ಗಂಟೆ ಎಷ್ಟಾಯಿತು ಗೊತ್ತಾಯಿತೋ?

ರವಿ — ಗೊತ್ತಿಲ್ಲ.

ರತ್ನ— ಹತ್ತು ಗಂಟೆಯಾಯಿತು. ಆಫೀಸಿಗೆ ಹೋಗುವುದು ಮರೆತಿರೋ ಹೇಗೆ? ಏನು ಹೇಳಲಿ ನಿಮಗೆ. ಇದು ಯಾರ ಗ್ರಹಚಾರವೋ?

ರವಿ— ಗೊತ್ತಿಲ್ಲ ಕಣೇ.

ರತ್ನ—ಏನು ಗೊತ್ತಿಲ್ಲಿ ಬದನೆಕಾಯಿ?

ರವಿ— ಗೊತ್ತಿಲ್ಲ.

ರತ್ನ— ಯಾವ ಮೂತನಾಡಿದರೂ ಗೊತ್ತಿಲ್ಲ ಗೊತ್ತಿಲ್ಲ ಅಂತಿರಲ್ಲಾ. ಯಾವ ಮೋಹಿನಿ ಹಿಡಿದಿದ್ದಾಳೆರ್ರೀ ನಿಮಗೆ?

ರವಿ— ಗೊತ್ತಿಲ್ಲ.

ರತ್ನ— ನಿಮಗೆ ಗೊತ್ತಿದ್ದರೆ ನಾನೇಕೆ ಹೀಗೆ ಬಡಿದುಕೊಳ್ಳುತ್ತಿದ್ದೆ. ನಿಮ್ಮನ್ನು ಕಟ್ಟಿಕೊಂಡು ಹುರಿಯಬೇಕಾಗಿ ಬಂತು. ಸರನುಗೆ ಬೆಳಿಗ್ಗೆನಿಂದಲೂ ಜ್ವರ ಬಿಟ್ಟಿಲ್ಲ. ಶ್ವಲ್ಪ ಔಷಧಿ ತಂದು ಕೊಡಬೇಕು ಅಂತಾ ಗೊತ್ತಾಗುವುದಿಲ್ಲವಲ್ಲ. ನನ್ನ ಹಣೆಬರಹ ಹೀಗೆ ಅಂತಾ ಕಾಣುತ್ತೆ.

ರವಿ— ಗೊತ್ತಿಲ್ಲ ಕಣೇ.

ರತ್ನ— ಕುರ್ಚಿ ಬಿಟ್ಟು ಮೇಲಕ್ಕೇಳಿ. ಇನ್ನೂ ಆಫೀಸಿಗೆ ಹೊತ್ತಾಗುವುದಿಲ್ಲವೇ?

ರವಿ— ಗೊತ್ತಿಲ್ಲ.

ರತ್ನ— (ಕೈ ಹಿಡಿದು ಎಬ್ಬಿಸುತ್ತ) ಮೇಲಕ್ಕೆಳೆ ಏಳಿ ಅಂದ್ರೇ. ಲಕ್ಷಣವಾಗಿ ಮುಖ ತೊಳೆದುಕೊಂಡು ಆಫೀಸಿಗೆ ಹೋಗಿ. ಸಂಜೆಗೆ ಬಂದ ಮೇಲೆ ಸ್ನಾನ ಮಾಡಿದಿರಂತೆ. ಈಗ ಸ್ನಾನ ಮಾಡುತ್ತಾ ಕುಳಿತರೆ ಸಂಜೆ ತನಕ ಬಚ್ಚಲಕ್ಲಿಯೇ ಕುಳಿತು ಬಿಡುತ್ತೀರಾ.ಆ ಮೇಲೆ ಆಫೀಸಿಗೆ ಹೋಗಬೇಕು ಅನ್ನುವುದೇ ನಿಮಗೆ ಗೊತ್ತಾಗುವುದಿಲ್ಲ. ಹಾಗೆ ಆಫೀಸಿನಿಂದ ಬರುವಾಗ ಡಾಕ್ಟರ್ ಹತ್ತಿರ ಹೋಗಿ ಮಗುವಿಗೆ ಔಷಧಿ ತನ್ನಿ. ನಾನು ಹೇಳಿದ್ದು ಗೊತ್ತಾಯಿತೇನ್ರೀ?

ರವಿ— ಗೊತ್ತಿಲ್ಲ.

ರತ್ನ— ಗೊತ್ತಿಲ್ಲ ಗೊತ್ತಿಲ್ಲ. ಇದು ನನ್ನ ಕರ್ಮ. ಹೇ ಪರಮೇಶ್ವರಾ ಎಂತ ಪ ಕಷ್ಟ ತಂದಿಟ್ಟೆಯಲ್ಲಾ. ಇವರಿಗೆ ಬುದ್ಧಿ ಸರಿಯಾಗುವಂತೆ ಮಾಡು ದೇವರೆ. ನಿನಗೆ ಜೋಡಿ ತೆಂಗಿನ ಕಾಯಿ ಒಡೆಯುತ್ತೇನೆ.

ರವಿ— ಅವನಿಗೂ ಗೊತ್ತಿಲ್ಲ.

ರಾಯರು— (ಪ್ರವೇಶ) ಏನಮ್ಮಾ ಗೊತ್ತಿಲ್ಲ?

ರತ್ನ— ಬಾರಪ್ಪ. ಇವರನ್ನು ಕಟ್ಟಿಕೊಂಡು ನನಗೆ ಸಾಕಾಗಿ ಹೋಗಿದೆ. ಬೆಳಿಗ್ಗೆ ಎದ್ದವರು ಮುಖಕ್ಕೆ ಇಷ್ಟು ನೀರು ಹಾಕಿಲ್ಲ. ಚಿಂತೆ ಮಾಡುತ್ತಾ ಕುರ್ಚಿಯಲ್ಲಿ ಕುಳಿತುಕೊಂಡು ಬಿಟ್ಟಿದ್ದಾರೆ. ಏನು ಮೂತನಾಡಿಸಿದರೂ ಗೊತ್ತಿಲ್ಲ ಗೊತ್ತಿಲ್ಲ ಕಣೇ ಅಂತಾರೆ. ಹೂಳಪ್ಪ ಇವರಿಗೆ ಧಾರಿಯೆರೆದೆ?

ರವಿ— ಗೊತ್ತಿಲ್ಲ ಕಣೇ.

ರತ್ನ— ಕೇಳಿದೆನಪ್ಪಾ. ಇವರಿಗೆ ಹುಚ್ಚಾಸ್ಪತ್ರೆಗೆ ಸೇರಿಸಿ ಬಾ. ಇಲ್ಲದೆ ಇದ್ರೆ ನನಗೂ ತಲೆ ಕೆಟ್ಟು ಹೋಗುತ್ತೆ.

ರಾಯರು— ರವಿಗೇನಾಯಿತಮ್ಮಾ.

ರತ್ನ— ಅದೇ ನನಗೂ ಗೊತ್ತಿಲ್ಲಪ್ಪ. ಒಂದು ವಾರದಿಂದ ಹೀಗೆ ಮಾಡುತ್ತಿದ್ದಾರೆ.

ರಾಯರು— ಬ್ರೈನ್ ಲೂಸ್ ಆಗಿದೆಯೋ?

ರವಿ— ಗೊತ್ತಿಲ್ಲ.

ರತ್ನ— ಇವರು ಈ ರೀತಿಯಾಗಿ ಕುಳಿತುಕೊಂಡು ಬಿಟ್ರೆ ಆ ಮೇಲೆ ಇರೋ ಕೆಲಸ ಕಳೆದುಕೊಳ್ಳುತ್ತಾರೆ. ಆ ಮೇಲೆ ತಿಂಡಿಪೆ ಬೇಡಬೇಕಾಗುತ್ತೆ. ಆ ಮೇಲೆ ಯೂರಪ್ಪ ನಮ್ಮನ್ನು ಕಾಪಾಡಬೇಕು?

ರವಿ— ಗೊತ್ತಿಲ್ಲ ಕಣೇ.

ರತ್ನ— ನೋಡಿದೇನಪ್ಪಾ. ಯಾವ ಮೂತನಾಡಿದರೂ ಗೊತ್ತಿಲ್ಲ ಅಂತಾರೆ. ಇವರಿಗೆ ಯಾವಾಗ ಬುದ್ಧಿ ಸರಿಹೋಗುತ್ತೋ ಆದೇ ಚಿಂತೆಯಾಗಿದೆ ನನಗೆ.

ರವಿ— ಗೊತ್ತಿಲ್ಲ ಕಣೇ.

ರತ್ನ — (ಬುಟ್ಟಿಬದಿಂದ) ಅಪ್ಪಾ ನನ್ನ ಗತಿ ಹೀಗಾಗಬೇಕೇ. (ಅಳುವಳು)

ರಾಯರು— ಅಳಬೇಡ ರತ್ನ. ರವಿಗೆ ಹೀಗೇಕಾಯಿತು ಅಂತಾ ನಾನು ತಿಳಿದು ಕೊಳ್ಳುತ್ತೇನೆ. ಹೆದರ ಬೇಡಮ್ಮ.

ರತ್ನ— ನೀನು ಎಷ್ಟೇ ಧೈರ್ಯ ಹೇಳಿದರೂ ನನಗೆ ಎದೆ ಡವ ಡವ ಅಂತಾ ಹೊಡೆಯುತ್ತದೆ. ಆಫೀಸಿನಲ್ಲೂ ಸರಿಯಾಗಿ ಕೆಲಸವೇ ಮಾಡುತ್ತಿಲ್ಲವಂತೆ.

ರಾಯರು— ನೀನು. ಹೆದರ ಬೇಡಮ್ಮಾ. ಗುಣ್ಡದಂತೆ ತಂದೆ ಇರುವಾಗ ನೀನು ಅಧೈರ್ಯ ಪಡಬಾರದು. ರವಿಗೆ ಎಷ್ಟು ದಿವಸದಿಂದ ಹೀಗಾಗಿತ್ತು?

ರವಿ— ಗೊತ್ತಿಲ್ಲ.

ರತ್ನಾ— ಒಂದು ವಾರವಾಗಿರಬಹುದಪ್ಪಾ.

ರಾಯರು— ಮೊದಲು ಚನ್ನಾಗಿದ್ದರೇ.

ರವಿ— ಗೊತ್ತಿಲ್ಲ.

ರತ್ನಾ— ಮೊದಲು ಚನ್ನಾಗಿದ್ದರು. ಈಗ ಎಂಟು ದಿವಸದಿಂದ ಎರಡನೆ ಆಟ್ಟಕ್ಕೆ ಏಣಿಯಿಂದಕ್ಕೆ ಹೋಗಿದ್ದರು. ಆ ದಿನ ಏಣಿಯಿಂದ ಬರುವಾಗಲೇ ಒಂದು ತರವಾಗಿದ್ದರು. ಅಂದಿನಿಂದ ಜಾಸ್ತಿಯೂನು ತ್ತಾ ಇಲ್ಲಿಯ ವರೆಗೆ ಮುಂದುವರಿದಿದೆ.

ರಾಯರು— ಯಾವ ಏಣಿಯನ್ನೂಕ್ಕೆ ಹೋಗಿದ್ದರಮ್ಮಾ

ರವಿ— ಗೊತ್ತಿಲ್ಲ.

ರತ್ನಾ— 'ತಾಯಿ ಕರುಳು'

ರವಿ— ತಾಯಿ ಕರುಳು! (ಕಿರುಚುತ್ತಾ) ಹೂಂ ತಾಯಿ ಕರುಳು. ತಾಯಿ ಮಗ ಸಾಯಬಾರದಿತ್ತು.

ರಾಯರು— ಓ ಹೋ! ಇದು ಏನಿಮೂ ಹುಚ್ಚು ಅಂತಾ ಕಾಣುತ್ತೆ.

ರತ್ನಾ— ಇರಬೇಕಪ್ಪಾ.

ರವಿ— ಡೈರೆಕ್ಟರ್ ಕೊನೆಯಲ್ಲಿ ಅವರಿಬ್ಬರನ್ನು ಸಾಯಿಸಬಾರದಿತ್ತು. ಅವರಿಬ್ಬರೂ ಬದಕಿದ್ದರೆ ಎಷ್ಟು ಚನ್ನಾಗಿರುತ್ತಿತ್ತು ಏನಿಮೂ. ಒಂದು ಹೆಣ್ಣಿನ ಮಾಂಗಲ್ಯವನ್ನೇ ಕಿತ್ತೊಗೆದನಲ್ಲ ಆ ಚಂಡಾಲ.

ರತ್ನಾ— 'ತಾಯಿ ಕರಳಿ'ನ ಕಥೆ ವಿಷಯವಾಗಿ ವಿಚಾರಿಸಿದ್ದಾರೆ.

ರಾಯರು— ಹೌದಮ್ಮಾ ಹೌದು. ನಾನು ಸಹ ನೋಡಿದ್ದೇನೆ.

ರತ್ನ— ಈ ಹುಚ್ಚು ಬಿಡಿಸಲು ಸಾಧ್ಯವಿಲ್ಲವೇನಾಪ್ಪಾ.

ರಾಯರು— ರವಿ ರವಿ (ಎನ್ನುತ್ತಾ ರವಿಯನ್ನು ಮುಟ್ಟುವರು)

ರವಿ— ಯಾರು ನನ್ನ ಮುಟ್ಟುವರು. ದೂರ ಸರಿಯಿರಿ.ದೂರ ಸರಿಯಿರಿ. (ರವಿನೇ ದೂರ ಸರಿದು) ನಾನು.I ಹೌದು ನಾನೇ ಎದುರಲ್ಲಿದ್ದರೂ ಸಹ ಓರ್ವ ಅಬ

(೧೦ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ನಿಕಟ ಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

R. E. P. 405/62 in O. S. 405/59

ರಾಜು ಸೆಟ್ಟಿ —ಇವರ ಜನರಲ್ ಪವರ್ ಆಫ್ ಎಟಾರ್ನಿ ಹೋಲ್ಡರ್ ಸದಾಶಿವ ಸೆಟ್ಟಿ —ಅರ್ಜಿದಾರ

ಮತ್ತು

ಶೇಖರ ಸೆಟ್ಟಿ ಕೂಡ —ಯೆದ್ರಿ

ಇವರೊಳಗೆ

1ನೇ ಯೆದ್ರಿ ಶೇಖರ ಸೆಟ್ಟಿ—ಈಮಲ ಸೆಟ್ಟಿ ಮಗ-ಉಡ್ಪಿ ತಾಲ್ಲೂ ಕಡೆಕಾರು ಗ್ರಾಮದವ್ರಿರುವ್ ಇವರಿಗೆ ಈ ಮೂಲ್ಕ ತಿಳಿಯ ಪಡಿಸುವುದೇನೆಂದ್ರೆ—

ಈ ಅಮಲ್ದಾರ್ರಿಗೆ ಕಾರಣನಾದ ದಿಕ್ರಿಯಲ್ಲಿ ಅವಾಜ್ದಾರಿಯಿರುವ ನ್ಯಾಯಸ್ತಿ ವಿಕ್ರಯದ ಬಗ್ಗೆ ಅರ್ಜಿದಾರನು ಪೂರಿಡಿ ಮೇರಿಗೆ ಅಮಲ್ದಾರಿಯ 1ನೇ ಯೆದ್ರಿಗೆ ಇಸ್ಕಿಹಾರು ನೋಟಿಸಿನ ಬಗ್ಗೆ ತಾ. 21—12—62ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಪಿಗೆ ಇಡೋಣಾಗಿದೆ. 1ನೇ ಯೆದ್ರಿಯು ಸದ್ರಿ ದಿವಸ ಹಗಲು 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗದಿದ್ರೆ ಸದ್ರಿ ಅಮಲ್ದಾರಿ 1ನೇ ಯೆದ್ರಿಯ ಗೈರುಹಾಜ್ರಿಯಲ್ಲಿ ತೀರ್ಮಾನಿಸಲ್ಪಡುತ್ತದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

Vittal Shetty Perody

Advocate for the Petitioner.

Udipi, Dated 4—12—1962.

ಲೇಖಾಂಕ ೧೩

'ಅಬೋಧ ಬಾಲಕ'

ರಾಜಾಜಿಯವರ ಕಲಾಸಿದ್ಧಿ

ಶ್ರೀ ಕೆ. ಎನ್. ಭಟ್, ಶಿರಾಡಿಘಾಲ್.

ಶ್ರೀ ರಾಜಾಜಿಯವರು ಬರೆದ ಈ ಕಥೆ ಹಂಜನರು ದೇವಾಲಯ ಪ್ರವೇಶ ಮಾಡುವ ಸಂದರ್ಭದ ಒಂದು ಕಥೆಯೊಗಿದೆ. ಸಮರ್ಥನಾದ ಸಂಗೀತಗಾರನು, ಆತನಿಗೆ ಯಾವ ರೀತಿಯ ಗೀತೆ ಸಿಕ್ಕಿದರೂ— ಅವನದನ್ನು ಸಂಗೀತರಾಗದ ಜೀವ ಸ್ವರಗಳಂಬ ಶುಶ್ರಾವ್ಯವಾಗಿ ಹಾಡಬಲ್ಲನು. ಕವಿಯ ಕಲ್ಪನಾ ಶಕ್ತಿಗೆ ವಸ್ತುವಿನ ಕೊರತೆಯೇ ಇರಲಾರದು. ಅಂತೆಯೇ ಕಥೆ ಹೇಳುವ ಶಕ್ತಿ ಇದ್ದವರಿಗೆ ಕಥಾವಸ್ತುವನ್ನು ಹುಡುಕುವ ಸಂದರ್ಭವಿರಲಾರದು.; ಕತೆಗಾರರು ಪ್ರತಿದಿನ ನೋಡುವ ನೋಡುತ್ತಿರುವ—ನಿತ್ಯ ಘಟನೆಗಳೇ ಅವರಿಗೆ ಕಥೆ ಬರೆಯಲು ಸ್ಫೂರಕವಾಗಬಲ್ಲವು. ಈ ದೃಷ್ಟಿಯಿಂದ ನೋಡಿದಾಗ ಶ್ರೀ ರಾಜಾಜಿಯವರಿಗೆ ಈ ಸೂತು ಅನ್ವಯಿಸುತ್ತದೆ. ಏಕೆಂದರೆ, ಅವರ ಕಥೆಗಳು, ಕಥಾವಸ್ತುವಿನ ಆಯ್ಕೆ ಮೂಡಿ ಬರೆದ ಕಥೆಗಳಂತಿರದೆ,—ತಮ್ಮ ಮುಂದೆ ನಡೆದ ಯಾವುದಾದರೊಂದು ಘಟನೆಯನ್ನೇ ಕಥೆಯೊಗಿ ಬರೆದಿರುವಂತೆ ವಾಚಕರಿಗೆ ಸ್ಪಷ್ಟವಾಗುವುದು. ಪ್ರಕೃತದ ಈ ಕಥೆಯೂದರೂ ಅಂತೆಯೇ ಇದೆ.

ಈ ಕಥೆಯುಲ್ಲಿ, ಹೊಲೆಯ ಬ್ರಾಹ್ಮಣ ಬಡವಬಲ್ಲಿದನೆಂಬ ಯಾವ ಭೇದಭಾವವನ್ನೂ ಅರಿಯದ ಬ್ರಾಹ್ಮಣರ ಹುಡುಗನೊಬ್ಬನು ಹೊಲೆಯರ ಹುಡುಗನೊಬ್ಬನೊಡನೆ-ಸ್ನೇಹ ಬೆಳೆಸಿರುತ್ತಾನೆ. ಹಿರಿಯರು ಎಷ್ಟು ಹೇಳಿದರೂ ಸುಬ್ಬು ಈ ಸ್ನೇಹವನ್ನು ಬಿಡಲಾರ. ಹಾಗೆಯೆ ಕೃಷ್ಣ ಅಯ್ಯರು ಕೊಲೆಯರ ಹುಡುಗನನ್ನು ಮನೆಯೊಳಗೆ—ಸೇರಿಸುವುದಾದರೂ ಹೇಗೆ? ಎಂಬ ಸಮಸ್ಯೆಯನ್ನು ಬಿಟ್ಟುಹೋದ ಈ ಕಥೆ ಮಕ್ಕಳ, ಶುದ್ಧವಾದ ಮನೋವ್ಯಾಪಾರವನ್ನು ಪ್ರತಿಬಿಂಬಿಸುವುದು

ಕೃಷ್ಣ ಅಯ್ಯರ ಮಗ ಸುಬ್ಬು ತನ್ನ ತಾಯಿಯೊಡನೆ ಒಂದು ದಿನ—'ಈ ದನ ನನಗೆ ಮಾತ್ರ ಹಾಯಲು ಬರುತ್ತಿದೆ. ನಮ್ಮ ಕರೂಪನಿಗೆ ಏಕಮ್ಮಾ ಹಾಯುವುದಿಲ್ಲ?' ಎಂದು ಕೇಳಿದಾಗ—ಆ ತಾಯಿ 'ಕರೂಪನು ಹೊಲೆಯರ ಹುಡುಗ. ಆವನೇ ಆ ದನವನ್ನು ಮೇಯಿಸುವುದರಿಂದ ಆ ದನಕ್ಕೆ ಆತನ ಪರಿಚಯವಿದೆ ನಿನ್ನ ಪರಿಚಯವಿಲ್ಲ" ಎಂದಳು. ಆಗ ಸುಬ್ಬು 'ಹಾಗಾದರೆ ನಾನೂ ಆ ದನವನ್ನು ಮೇಯಿಸಿ ಪರಿಚಯ ಮಾಡಿಕೊಳ್ಳುತ್ತೇನಮ್ಮ!' ಎಂದು ಹಟ ಹಿಡಿದ. ಆಕೆ "ಆದಾಗದು" ಎನ್ನುತ್ತಾಳೆ.

ಸುಬ್ಬು-'ಏಕೇಕಮ್ಮಾ ಆಗದು? ಹೊಲೆಯ ಎಂದರೆ ಏನನ್ನುಮ್ಮ ಆದು? ಅವನನ್ನು ಏಕೆ ಮುಟ್ಟಬಾರದು? ಕರೂಪ ಸ್ನಾನಮಾಡದೆ ಹೊಲೆಯನಾಗಿರುವನಾದರೆ, ನಮ್ಮಲ್ಲೇ ಬಂದು ಮಿಯಲಿ! ಹೇಳಲೇ ನಮ್ಮ?' ಇತ್ಯಾದಿ ಕೇಳಿ ತೊಡಗಿದಾಗ-ಆತನ ತಾಯಿ— 'ಹೊಲೆಯ, ಎಂದರೆ ಏನು? ಹೇಗೆ? ಎಂದು ನಾನು ವಿವರಿಸಿದರೆ, ನಿನಗಿನ್ನೂ ತಿಳಿಯದಪ್ಪಾ! ಸುಮ್ಮನೆ ಒಳಗೆ ಹೋಗು!' ಎಂದಳು. ಇಷ್ಟಾದರೂ ಸುಬ್ಬುಗೆ ಸಮಾಧಾನವಾಗಲಿಲ್ಲ.

ಮತ್ತೊಂದು ದಿನ ಸುಬ್ಬುವಿನ ಮನೆಯಲ್ಲಿ ಹೋಳಿಗೆ ಮಾಡಿದ್ದರು. 'ಅದರಲ್ಲಿ ಒಂದನ್ನು ಕರುಪನಿಗೆ ಕೊಡಬೇಕು! ಮತ್ತೊಂದು ತನಗೆ! ಹಾಗಾದರೆ ಮೂತ್ರ ನಾನು ತಿಂದೇನು! ಇಲ್ಲದಿದ್ದರೆ ಇಲ್ಲ!' ಎಂದು ಸುಬ್ಬು ಹಟಹಿಡಿದನು. ಆಗಕ್ಕೆ ಆತನ ತಾಯಿ, 'ಅಯ್ಯೋ ಈ ದಿಪಾವಳಿಯ ಪುಣ್ಯ ದಿನದಲ್ಲಿ ಹಾಗೆಲ್ಲ ಹೇಳ ಬಾರದಪ್ಪಾ! ಈ ಹೋಳಿಗೆಗಳಲ್ಲಿ ಒಂದನ್ನು ಹೊಲೆಯನಿಗೆ ಕೊಟ್ಟರೆ, ಒಳಗಿರುವುದೆಲ್ಲ ಮೈಲಿಗೆಯಾಗುತ್ತದೆ. ಅದುದರಿಂದ ಕೊಡಬಾರದು ನೀನು ಇನ್ನು ಆವನೊಡನೆ ಆಡಬಾರದಪ್ಪ!' ಎಂದು ಹೇಳಿದಳು. ಆಗ ಸುಬ್ಬು ತಾನೂ ಹೋಳಿಗೆಯನ್ನು ತೆಗೆದುಕೊಳ್ಳದೆ ಕರುಪನ ಹತ್ತಿರ ಹೋಗಿ-ಕೇಳುತ್ತಾನೆ ಅವರ ಸಂಭಾಷಣೆ ನೋಡಿರಿ 'ಏಕರೂಪ! ನೀನು ಹೊಲೆಯನೋ ಹಾಗಾದರೆ ನಾನೂ ಹೊಲೆಯನೋ?'— ಕರೂಪ-'ಅಯ್ಯೋ ನೀವು ಬ್ರಾಹ್ಮಣರು ನಾನು ಮಾತ್ರ ಹೊಲೆಯ!'

'ನಿನಗೆ ತಾಯಿ ಇರುವಳೋ? ಕರುಪ ಅವಳು ನಿನ್ನ ತಾಯಿಯ ಹಾಗೇ ಇದ್ದಾಳೋ? ಅಥವಾ....'

ಕರುಪ— 'ಹೌದು ನಿಮ್ಮ ತಾಯಿಯ ಹಾಗೆಯೇ ಇರುವಳು. ಸುಬ್ಬು—'ಈ ದೀಪಾವಳಿಯಲ್ಲಿ ನೀನು ಎಣ್ಣೆಹಚ್ಚಿ ಮಿಯಲಿಲ್ಲವೇ ಕರೂಪ

ಕರುಪ— 'ಅಯ್ಯೋ! ಮಿಯಲಿಕ್ಕೆ ನಮ್ಮ ಬಾವಿಯಲ್ಲಿ ನೀರೇ ಇಲ್ಲವಲ್ಲ?

ಸುಬ್ಬು- 'ಹಾಗಾದರೆ ನಮ್ಮ ಮನೆಗೆ ಬಾರೋ! ನಮ್ಮಲ್ಲಿ ಅಮ್ಮನಿಗೆ ಹೇಳಿ ನಿನಗೆ ಮಿಯಿಸುತ್ತೇನೆ!'

ಕರುಪ— 'ಅಯ್ಯೋ! ನಾನು ಹೊಲೆಯ! ನನ್ನನ್ನು ನಿಮ್ಮಲ್ಲಿ ಒಳಗೆ ಬಿಡುವರು' ಈ ಸಂಭಾಷಣೆಯ ವೇಳೆಯಲ್ಲೇ ಸುಬ್ಬುವಿನ ಚಿಕ್ಕಪ್ಪ ಪಟಾಕಿ ತಂದುದನ್ನು ರಿತು, ಸುಬ್ಬು ಓಡಿ ಸೋಗಿ ಪಟಾಕಿಯನ್ನು ತೆಗೆದುಕೊಂಡನು. ಮತ್ತು 'ಇದರಲ್ಲಿ ಎರಡು ಪಾಲು, ಮೂಡಿ, ಒಂದು ಕರುಪನಿಗೂ ಕೊಡಪ್ಪ' ಎಂದನು ಇದನ್ನು ಕೇಳಿದ ಕೃಷ್ಣ ಅಯ್ಯರಿಗೆ, ಕೋಪವೂ ಆಶ್ಚರ್ಯವೂ ಏಕ ಕಾಲದಲ್ಲಿ ಉಂಟಾಯಿತು— 'ಏ....ಸುಬ್ಬು...ನೀನು ಆ ಹೊಲೆಯನೊಡನೆ ಕೂಡಿಕೊಂಡು, ಆಡಬೇಡವಪ್ಪಾ! ಹೊಲೆಯರಿಗೆ ಪಟಾಕಿ ಕೂಡಬಾರದು. ಅವರು ಸುಟ್ಟಲೂ ಬಾರದು ತಿಳಿಯುತೇ? ನೀನು ಹೋಗು!" ಎಂದು ಗದರಿಸಿದರು. ಆಸ್ಪರಲ್ಲಿ ಸುಬ್ಬುವಿನ ಅಕ್ಕ ಪಾರ್ವತಿಯು, ವಿಶೇಷ ಬುದ್ಧಿ ಪ್ರಕಟವಾದ ಪಕ್ವತೆಯೊಂದನ್ನು ತೆಗೆದುಕೊಂಡು ಓಡಿ ಬಂದು ಹೇಳಿದಳು.

'ಅಮ್ಮಾ ಇನ್ನು ಹೊಲೆಯರೂ, ದೇವಸ್ಥಾನದೊಳಗೆ ಹೋಗಬಹುದಂತೆ! ಆವರನ್ನು ಒಳಗೆ ಬಿಡುತ್ತಾರಂತೆ! ನೋಡಮ್ಮಾ ಎಂದಾಗ ಆ ತಾಯಿ—ಆಶ್ಚರ್ಯದಿಂದ- "ಏನೋಮ್ಮ! ಹೀಗಾದರೆ, ಇವರ ಪರಿಣಾಮವೇನಾಗಬಹುದೋ ನಾ ಕಾಣೆ!' ಎಂದಳು. ಆಗ ಕೃಷ್ಣಯ್ಯರು —'ನಿನಗಿನ್ನೂ ತಿಳಿದಿಲ್ಲ ಕಣೇ! ಪ್ರಪಂಚವೀಗ ಪರಿವರ್ತನೆ ಹೊಂದುತ್ತಿದೆ" ಎಂದರು.

ಶ್ರೀ ರಾಜಾಜಿಯವರ ಈ ಚಿಕ್ಕ ಕಥೆಯಲ್ಲಿ ಯಾವುದೇ ವಿಶೇಷ ಆಕರ್ಷಣೆ ಕಾಣದಿದ್ದರೂ, ಮಕ್ಕಳ ಮನಸ್ಸು ಎಷ್ಟು ನಿರ್ಮಲವಾದುದು! ಮತ್ತು ಅವರಲ್ಲಿರುವ ಆ 'ಸಮಾನ ಭಾವನೆ' ಎಷ್ಟು ಪವಿತ್ರವಾದುದು? ಎಂಬುದಕ್ಕೆ ಈ ಕಥೆಯ ಸುಬ್ಬುವಿನ ಪಾತ್ರ ಒಂದು ಉದಾಹರಣೆಯಾಗಿದೆ. "ಮಕ್ಕಳೆಂದರೆ ದೇವರಿಗೆ ಸಮ" ಎಂಬ ಭಾವನೆ. ಮಕ್ಕಳ ಈ ವಿಶಾಲ ಹಾಗೂ "ಎಲ್ಲರೂ ಒಂದೇ" ಎಂಬ ಸಮಾನ ಭಾವನೆಯಿಂದಲೇ ಉಂಟಾಗಿದೆ, ಎಂಬುದಕ್ಕೆ ಸಂದೇಹವಿಲ್ಲ.

ಹರ್ಷದ ಸುಗ್ಗಿಯೊಂದಿಗೆ
ಆರಂಭ—ಆ ಪುಸ್ತಕ

ಅದೇ ಕೆನರಾ ಬ್ಯಾಂಕಿನ ಸೇವಿಂಗ್ಸ್ ಖಾತೆಯ

ಪಾಸ್ ಬುಕ್

ನಿಮ್ಮ ಹಣವು ಕೆನರಾ ಬ್ಯಾಂಕಿನಲ್ಲಿ ಬೇಗನೆ ಬೆಳೆಯುವುದಲ್ಲದೆ ವರ್ಷಕ್ಕೆ ಕೇಕಡ

3

ಬಡ್ಡಿಯನ್ನೂ ಸಂಪಾದಿಸುವುದು

ಮೈಸೂರು ರಾಜ್ಯದಲ್ಲಿ ಅತ್ಯಂತ ದೊಡ್ಡದಾದ ಕೆನರಾ ಬ್ಯಾಂಕಿನಲ್ಲಿ ನಿಮ್ಮ ಹಣವನ್ನು ಕೂಡಿಟ್ಟಲ್ಲಿ ನಿಮಗೆ ಸಂಪೂರ್ಣ ಭದ್ರತೆ ಲಭಿಸುವುದು

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಸಮಗ್ರ ಸೇವೆ : : ಸಂಪೂರ್ಣ ಭದ್ರತೆ

ರಿಜಿಸ್ಟರ್ಡ್ ಆಫೀಸು: ಮಂಗಳೂರು
ಆಡಳಿತ ಕಛೇರಿ: ಬೆಂಗಳೂರು

ಹೊಸ ಪುಸ್ತಕ—
'ನವಚೇತ'ರ
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ಸಿಜಾರಿಸಿರಿ.
ನವಯುಗ ಸ್ಟೋರ್ಸ್, ಉಡುಪಿ.

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯಮ್
ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.

ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯೊರ್ಡರು ಮಾಡಿ ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಸನ್ನ ಜೀವನಕಾರಣ

ಮನವನ್ನರಳಿಸುವ ಸುಮಗಳು

ಅರಳಿದ ಹುಸ್ಪವೊಂದನ್ನು ಕಂಡಾಗ ಯಾರ ಹೃದಯವು ತಾನೇ ಅರಳಲಾರದು? ಇಂತಹ ಹೂ ಸಸ್ಯ ಶಾಸ್ತ್ರದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದು ಕೊಂಡಿರುವಂತೆ, ನಮ್ಮ ಮಾನಸಿಕ ಹಾಗೂ ದೈಹಿಕ ಜೀವನದಲ್ಲೂ ತುಂಬಾ ಪರಿಣಾಮವನ್ನು ಬೀರಿಕೊಂಡಿದೆ.

ಹೂಗಳ ಬಾಳು ಅಲ್ಪ. ಅದರಲ್ಲಿಯೇ ಅವು ಸಂತೋಷವನ್ನು ತಾಳುತ್ತವೆ. ಸ್ವರ್ಗ ಸುಖವನ್ನನುಭವಿಸುತ್ತವೆ. "ಇಂದಿನ ದಿನವೇ ನಮ್ಮದು" ಎಂಬ ತತ್ವವನ್ನು ಸಾರುತ್ತಾ ಸುಖವಾಗಿರುವುವು ಹೂಗಳು. ಅವುಗಳಿಗೆ ಮುಸ್ಸಿಲ್ಲ, ಚಿಂತೆಯನ್ನು ತೊರೆದು ಭಾಸ್ಕರನ ಹೊಂಗಿರಣಗಳ ಮೆದ್ದು ನಲಿದಾಡುತ್ತವೆ. ಮುಂದ ಮಾರುತನ ಸ್ಪರ್ಶದಲ್ಲಿ ಮೈ ಮರೆಯುತ್ತವೆ. ಇಂತಹ ಕೋಮಲವಾದ ಸುಮಗಳು ಬೇಸರವನ್ನೂ ಮರೆಯಿಸುತ್ತವೆ. ಉದಯ ರವಿಯ ತಂಪಿಗೆ, ಪಕ್ಷಿಗಳು ಕಲಿ ಕಿಲಿನೆ ಉಲಿಯುತಿರಲು ತಂಗಾಳಿ ಇಂಪಿಗೆ ಪತ್ರಗಳ ಮರೆಯಿಂದ ತಲೆದೂಗಿ ನರ್ತಿಸುವ ಸುಮಗಳನ್ನು ಕಾಣಿರೆ ಯಾರಿಗೆ ತಾನೇ ಹೃದಯ ತುಂಬಿ ಬರದು.

ಹೂಗಳನ್ನು ಸಾಮಾನ್ಯವಾಗಿ ಎರಡು ಜಾತಿಯವುಗಳಾಗಿ ವಿಭಾಗಿಸ ಬಹುದು. ಒಂದನೆಯದು ಹಗಲಲ್ಲಿ ಅರಳುವಂತಹವುಗಳು. ಎರಡನೆಯದು ರಾತ್ರಿ ಕಾಲದಲ್ಲರಳುವ ಹೂಗಳು.

ಹಗಲಲ್ಲಿ ಅರಳುವ ಸುಮಗಳು ಬಣ್ಣ ಬಣ್ಣಗಳಿಂದ ಕೂಡಿರುತ್ತವೆ ಹಲವಾರು ಬಣ್ಣಗಳ ಮಿಶ್ರಣದಿಂದ ಕೆಲವು ಶೋಭಿಸುತ್ತವೆ. ಹೆಚ್ಚಿನ ಹೂಗಳು ತಮ್ಮ ಬಹಿರಂಗ ರೂಪದಿಂದಲೂ ನಮ್ಮನ್ನಾಕರ್ಷಿಸುತ್ತವೆ. ಕೆಲವು ಅವುಗಳ ಆಂತರಂಗದ ಕಂಪಿನಿಂದ ನಮ್ಮ ನಾಸಿಕವನ್ನು ಹೊಕ್ಕು ಹೃದಯವನ್ನು ತುಂಬಿಸುತ್ತವೆ.

ರಾತ್ರಿ ಕಾಲದಲ್ಲಿ ಅರಳುವ ಹೆಚ್ಚಿನ ಎಲ್ಲಾ ಹೂಗಳಿಗೆ ಆಚ್ಚ ಬಿಳಿ ಬಣ್ಣವಿರುತ್ತವೆ. ಕರಿ ನಿಶೆಯಲ್ಲಿ ತನ್ಮ್ಮ ಸ್ವರೂಪವನ್ನು ಶ್ವೇತ ವರ್ಣದಿಂದ ನಮ್ಮನ್ನು ಸ್ವಾಗತಿಸುತ್ತವೆ. ಇಂತಹ ಹೂಗಳಿಗೆ ತೀವ್ರವಾದ ಸುವಾಸನೆಯಿರುವುದು. ಇದೇ ನಿಮಿತ್ತವಾಗಿದೆ.

ಮೃದು ಮಧುರ ಸುಂದರತೆಗಳಿಂದ ಸುಮಗಳನ್ನು ನೆಚ್ಚಿ ಜನರು ಮನೆ ಮಠಗಳ ಎದುರಾಗಲೀ ಸಾಲಿ ಕಾಲೇಜುಗಳಲ್ಲಿಯಾಗಲೀ ಓರಣವಾಗಿ ನೆಟ್ಟು ನಿರಂತರವೂ ಅರಳುತ್ತಿರುವ ಕುಸುಮಗಳನ್ನು ಪಡೆಯಲೆತ್ನಿಸುತ್ತಾರೆ.

ಗುಲಾಬಿಯನ್ನು ಹೂಗಳ ರಾಣಿಯೆನ್ನಬಹುದು. ಅದರ ವರ್ಣ, ರೂಪ, ಸುವಾಸನೆಗಳಿಂದ ಅದು ತನ್ನದೇ ಆದ ಹೊಸತನವನ್ನು ಹೊಂದಿದೆ. ಅನ್ಯ ಪುಷ್ಪಗಳಿಗೆ ಇದು ಸರಿದೂಗದು. ಗುಲಾಬಿಯಲ್ಲಿ ಗುಲಾಬಿವರ್ಣದ ಹೂವೇ ಘನತರವಾದುದು ಮಿಕ್ಕ ಜಾತಿಯ ಗುಲಾಬಿಗಳಿದ್ದರೂ ಅವೆಲ್ಲ ಕೋಮಲೆಯನ್ನು ಅನುಕರಿಸುವ ಕಾಗೆಯಂತೆ!

ಗುಲಾಬಿಯಲ್ಲಿ ಕಾಣುವ ಹೊಸತನವು ಅದರ ಮೈ ಮೂಟ, ಬಣ್ಣದ ವೈದುತ್ವ, ಮತ್ತು ಒಂದು ವಿಧದ ಗಂಭೀರತೆಯಿಂದಾಗಿದೆ.

ಮೊಗಲ ಬಾದಷಹ ಅಕ್ಬರನ ಭಾವ ಚಿತ್ರವೊಂದನ್ನು ಕಂಡಾಗ ಆತನ ಕೈಯಲ್ಲಿದ್ದ ಗುಲಾಬಿಯ ಕಡೆಗೆ ನನ್ನ ದೃಷ್ಟಿ ಬಿತ್ತು! ಆಹಾ! ಬಾದಷಹನಿಗೆ ಸುಮಗಳ ಮೇಲೆಷ್ಟು ಪ್ರೀತಿ. ಅದರಲ್ಲೂ ಗುಲಾಬಿಯೆಂದರೆ ಅಕ್ಬರನಿಗೆಷ್ಟು ಮೆಚ್ಚು ಎಂದೆನಿಸಿದೆ. ಯವನ ಚೆಲುವೆ ನೂರ್ಜಹಾನಳಿಗೆ ಗುಲಾಬಿಯು ಮೇಲಿದ್ದ ಮಮತೆಯೂ ಮನದಲ್ಲಿ ಮೂಡಿತು.

ಗುಲಾಬಿ-ಎಂಬ ಹೆಸರು ಅದರ ಸೊಬಗಿಗೆ ತಕ್ಕುದಾಗಿದೆ. ಮುಟ್ಟದರೆ ಚುಚ್ಚುವ ಮುಳ್ಳಿಗಿಡವೇ ರಮಣೀಯವಾದ ಹೂವನ್ನು ನೀಡುತ್ತದೆ. ಅದರ ನವೀನತೆಗೆ ಮಾರುಹೋಗಿ 'ಗುಲಾಬಿ' ಎಂಬ ಅಕ್ಕರೆಯ ಹೆಸರನ್ನು ಹೆಂಗಸರು ತಮ್ಮ ಹೆಣ್ಣು ಮಕ್ಕಳಿಗಿಡುವರು.

ಕೆಸರಿನಲ್ಲಿ ಬೆಳೆಯುವ ಕಮಲವು ಇನ್ನೊಂದು ಸುಂದರ ಕೊಳ ಸರೋವರದ ಪುಷ್ಪವಾಗಿದೆ. ಕಮಲಪ್ರಿಯ ಎಂಬುದಾಗಿ ಕವಿಗಳು ರವಿಯನ್ನು ಕರೆದಿರುವ ಹೆಲುಬು ನನಗೆ ಮೊದಲಾಗಲಿಲ್ಲ. ಬಳಿ ಸಾರಿದರೆ ಸುಡುವ ಆ ಪ್ರಭಾಕರನಿಗೂ ಕೊಳ ಸರೋವರಗಳ ತಂಪಿನಲ್ಲಿ ಬೆಳೆದು ಅರಳುವ ಕಮಲಕ್ಕೂ ಎಲ್ಲಿಯ ನಂಟು ಎಂದೆನಿಸಿದೆ. ಆದರೆ ಉದಯ ರವಿಯನ್ನು ಕಂಡು ಅರಳಿ, ಆತನನ್ನೇ ಹೃದಯ ತಂಬುವಷ್ಟು ಕಂಡು ತಣಿದು ಆತನು ದಿಗಂತದಲ್ಲಿ ಮರೆಯಾಗಲು ತಾನೂ ಬೇಸರದಿಂದ ಮುದುಡುವ ಈ ಕಮಲವು ನಿಜವಾಗಿಯೂ ರವಿಯ ಪ್ರಿಯೆಯೊಗಿರ ಬಹುದೆಂದು ನಿರ್ಧಾರಕ್ಕೆ ಬಂಪೆ.

ಕಮಲವು ಚಿತ್ರಗಾರರ ಕೈಯಲ್ಲಿ ಕುಣಿದಾಡುವುದನ್ನು ನಾವು ಕಾಣ ಬಹುದು

ಸಂಪಿಗೆಗೆ ತೀವ್ರತರ ಪರಿಮಳವಿದೆ. ಗುಲಾಬಿ, ಕಮಲಗಳ ಪರಿಮಳವು ಗಾಳಿಯಲ್ಲಿ ಸೇರಿ, ನಮ್ಮ ಬಳಿ ಸುಳಿದು ಹೋಗಿ ಬಿಡಬಹುದು. ಆದರೆ ಸಂಪಿಗೆಯ ಪರಿಮಳವು ನಿಂತಲ್ಲಿ ಬಿಡದು.

ಮಲ್ಲಿಗೆಗೆ ಆದರದೇ ಗುಣವಿದೆ. ಅದು ಜಾಜಿಗಿಂತ ದುಂಡಗಿದೆ. ಜಾಜಿ ಉದ್ದನೆಯ ಚೆಲುವೆಯೊದರೆ ಮಲ್ಲಿಗೆಯು ಗಂಡೆದೆಯ ಗರತಿ. ಮಲ್ಲಿಗೆಗಿಂತಲೂ ಜಾಜಿ ಕೋಮಲೆಯೊಗಿದೆ. ಬೇಗನೆ ಬಾಡುತ್ತದೆ. ಬೇಗನೆ ನಲಿದಾಡಿ, ಬೇಸತ್ತು ಹೋಗುವ ಜಾತಿ ಜಾಜಿಯದು ಜಾಜಿಗಿಂತಲೂ ಕೋಮಲತೆಯ ಹೂವೆಂದರೆ ಪಾರಿಜಾತ. ಅದನ್ನು ಕೊಯ್ದು ಅರಿಗಳಿಗೆಯಲ್ಲಿಯೇ ಅದರ ಶೋಭೆ ಕೆಡುತ್ತದೆ ಇಂತಹ ಪಾರಿಜಾತದಿಂದಲೇ ಸತ್ಯಭಾಮಾ ದೇವಿಗೆ ಸವತಿಯ ಮೇಲೆ ಮತ್ಸರವುಂಟಾಗಿ, ಶ್ರೀ ಕೃಷ್ಣನು ಸುರಲೋಕದಿಂದ ಆ ವೃಕ್ಷವನ್ನು ಭೂಲೋಕಕ್ಕೆ ತಂದನೆಂದು ಪುರಾಣಗಳಲ್ಲಿವೆ. ನೀಳವಾದ ಎಸಳುಗಳು ಸೇರಿ ಒಂದು ಹೂವಾಗಿ ರಂಜಿಸುವ ಸೇವಂತಿಗೆಯೂ ಇನ್ನರ ಸ್ತ್ರೀತಿಯನ್ನುಗಳಿಸಿದೆ. ಅದರಲ್ಲೂ ಸಣ್ಣ, ದೊಡ್ಡ ಜಾತಿಯುತ್ತಮಗಳೂ, ಹಳದಿ, ಬಿಳಿವರ್ಣದವುಗಳೂ ಇವೆ.

ಗೊಂಡೆ ಪುಷ್ಪವನ್ನೂ ಸೇವಂತಿಗೆಯ ಜಾತಿಗೆ ಸೇರಿಸ ಬಹುದು. ದುಂಡಗಿನ ಗೊಂಡೆ ಹೂವಿನಲ್ಲಿ ಗಂಡು ಶೋಭೆಯಿದೆ.

ಸಣ್ಣ ಪುಟ್ಟ ಸುಮಗಳು ನಾವಿರಾರು ಇವೆ. ಎಷ್ಟಿದ್ದರೂ ಪ್ರತಿಯೊಂದರಲ್ಲಿಯೂ ಒಂದೊಂದು ವಿಧದ ಚೆಲುವು, ರೂಪ, ಕಂಪು ಹುದಿಗಿರುತ್ತವೆ.

ದಾಸವಾಳಗಳಲ್ಲಿಯೇ ಅನೇಕ ತೆರ. ಕೆಂಪು ದಾಸವಾಳ, ಬಿಳಿ ದಾಸವಾಳ, ಕಶ್ತೂರಿ ದಾಸವಾಳ, ಮೆಣಸು ದಾಸವಾಳ—ಹೀಗೆ ಅನೇಕ ತರದ ದಾಸವಾಳಗಳೇ ಇವೆ. ಆದರೆ ಎಲ್ಲಾ ಜಾತಿಯ ದಾಸವಾಳಗಳ ಸಾಮಾನ್ಯ ಮೇಲ್ನೋಟ ರಚನೆಗಳಲ್ಲಿ ಸಾಮ್ಯತೆಗಳಿರುತ್ತವೆ.

ಅಂತೆಯೇ ಮಲ್ಲಿಗೆಯ ವರ್ಗಕ್ಕೆ ಸೇರಿದ ಪುಷ್ಪಗಳಲ್ಲಿಯೂ ನಾನಾ ಜಾತಿಗಳಿವೆ. ಜಾಜಿ ಮಲ್ಲಿಗೆ, ಗುಡ್ಡು ಮಲ್ಲಿಗೆ, ಕಶ್ತೂರಿ ಮಲ್ಲಿಗೆ, ಮಂಗಳೂರು ಮಲ್ಲಿಗೆ, ಸಂಜೆ ಮಲ್ಲಿಗೆ ಸಾಮಾನ್ಯ ರೂಪಗಳಲ್ಲಿ ಸಾಮ್ಯತೆಯಿದ್ದರೆ ಕೆಲವೊಂದು ವಿಶಿಷ್ಟ ರೂಪ ಚೆಲುವುಗಳಿಂದ ತಮ್ಮ ಇರವನ್ನು ಪ್ರತಿರೂಪಿಸಿಕುತ್ತವೆ.

ಸದಾ ಪುಷ್ಪ ಮತ್ತು ಶಂಕ ಪುಷ್ಪಗಳು ಸಣ್ಣ ಜಾತಿಯ ಹೂಗಳಾಗಿವೆ. ಸದಾಕಾಲವೂ ಹೂಗೊಡುವ ಸದಾ ಪುಷ್ಪದಲ್ಲಿ ಬಿಳಿ, ನಸುಗೆಂಪು ಜಾತಿಯವುಗಳು ಇವೆ. ಶಂಕ ಪುಷ್ಪದಲ್ಲಿಯೂ ಬಿಳಿ, ನೀಲ ಜಾತಿಯೆಂದು ಸ್ಪಷ್ಟಭೇದಗಳಿವೆ.

ದಾಸವಾಳದಂತಹ ಹೂವಿನ ದಳಗಳು ಮಾರಿಯು ನಾಲಿಗೆಯ ರುದ್ರ ಸ್ಮರಣೆಯನ್ನು ತರುತ್ತವೆ. ಇವಲ್ಲದೆ ಅಶೋಕ ಪುಷ್ಪ, ರತ್ನಗಂಧಿ, ಸೂರ್ಯಕಾಂತಿ, ಚಂದ್ರಕಾಂತಿ, ಸಂಜೆ ಮಲ್ಲಿಗೆ, ಮುಂತಾದ ಹೂಗಳಲ್ಲಿಯೂ ವಿಶಿಷ್ಟ ಗುಣಗಳಿವೆ.

ಮೇಲಿನವುಗಳೆಲ್ಲ ನಾವು ಮನೆಯ ಮುಂದೆ, ತೋಟಗಳಲ್ಲಿ ಸಾಕಿ ಬೆಳೆಯುವ ಪುಷ್ಪಗಳು. ಅವುಗಳನ್ನು ನಾಡ ಹೂಗಳು ಎನ್ನಬಹುದು. ಇನ್ನು ನಾಡು ಬಿಟ್ಟು ಕಾಡುಗಳಲ್ಲಿ ಅಲೆದಾಡಲು ಹೋದರೆ ಅಲ್ಲಿಯೂ ನಗುನಗುತ ಸ್ವಾಗತಿಸುವ ಹೂಗಳೆಷ್ಟು?

ಇಲ್ಲಿ ಹೂಗಡಗಳನ್ನು ಯಾರೂ ನೆಟ್ಟವರಿಲ್ಲ. ಅವುಗಳ ಸೊಬಗನ್ನು ಸವಿಯುವರಿಲ್ಲ. ಯಾವ ನಾರಿಯ ಮುಡಿಯನ್ನು ಸೇರಿ ಮೆರೆಯುವ ಭಾಗ್ಯವು ವನಸುಮಕ್ಕೆಲ್ಲಿ? ತಮ್ಮೊಂದಿಗೆ ತಾವಾಗಿ ಮುಂದವರಿತನೆ ತಾಳಕ್ಕೆ ತಲೆದೂಗಿ ನಲಿದಾಡಿ, ಬೇಯುವುವು. ಇಲ್ಲಿಯ ಹೂಗಳಲ್ಲಿ ನಗೆಯಿಲ್ಲ. ಮಾಟವಿಲ್ಲ! ಇದ್ದರೂ ಸವಿಯುವ ರಸಿಕ ಜನರಿಲ್ಲ! ಬೆಟ್ಟದಲ್ಲಿ ಕಾಡಿನಲ್ಲಿ ತಬ್ಬಲಿಯಂತಿರುತ್ತವೆ. ಆದರೆ ರಸಿಕ ನೋಟಕ್ಕೆ ಈ ಹೂಗಳೂ ಕಡಿಮೆಯವುಗಳಲ್ಲ. ಸುತ್ತಲೂ ಏರು ಪೇರುಗಳು ಮುತ್ತಿರುವ ಮರಮಟ್ಟುಗಳು! ಗಿಡಬಳ್ಳಿ ಪೊದರುಗಳು! ಹಸರು ರಾಜ್ಯದ ಹಿನ್ನೆಲೆಯಲ್ಲಿ ಬಣ್ಣ ಬಣ್ಣದ ಹೂಗೊಂಚಲುಗಳು ಶೋಭಿಸುವುದನ್ನು ಕಾಣಬಹುದು. ವಸಂತ ಋತುವಿನಲ್ಲಿ ಈ ಬೆಟ್ಟದ ಸೊಬಗನ್ನು ಕಂಡು ನಲಿಯದವರಾರು?

ಬೆಟ್ಟದ ನಿರ್ಜರ್ಮಭೂಮಿಯಲ್ಲಿ ರುದ್ರತೆಯಿಂದ ಮನಸ್ಸಿಗೆ ಹರ್ಷವನ್ನು ತುಂಬುವವುಗಳು ಕಾಡ ಕುಸುಮಗಳು! ಕೆಲವು ಮೂರಿಯ ನೀಳವಾದ ನಾಲಿಗೆಯಂತಿದ್ದರೆ ಇನ್ನು ಕೆಲವು ರಕ್ತದೋಕುಳಿಯಿಂದ ತೊಯ್ದು ಕೆತನಗಳಂತಿರುತ್ತವೆ. ತೀಕ್ಷ್ಣವಾದ ಘಾಟು ವಾಸನೆಯಿಂದ ಆಗಂತುಕರನ್ನು ಮೂರ್ಛೆಗೊಳಿಸುವ ಕುಸುಮಗಳೂ ಕಾಡಿನಲ್ಲಿವೆ. ಇದನ್ನು ನೋಡುವಾಗ ಎಲ್ಲಿಯ ನಂಟು ಎಂದು ಕಾಣುತ್ತದೆ. ಪುಷ್ಪಗಳಲ್ಲಿಯೂ ಬಹಿರಂಗದಲ್ಲಿ ರಕ್ತ ಆಂತರಂಗದಲ್ಲಿ ವಿಷ ತುಂಬಿರುತ್ತದೆ ಎಂಬುದು ತಿಳಿಯುತ್ತದೆ

ದಾಸವಾಳ, ಕೇಪಳ, ಗರುಡ ಪಾತಾಳಗಳಂತಹ ಹೂಗಳನ್ನು ನೋಡಿರಿ. ರಕ್ತದಲ್ಲಿ ಮುಳುಗಿ ತೆಗೆದ ಹಾಗಿವೆ. ದೇವರು ಆ ಹೂಗಳಿಗೆ ಬೇರೆಬಣ್ಣಗಳನ್ನು ಸೇರಿಸದಿರಲು ಬೇರೆ ಯಾವ ಬಣ್ಣವೂ ಮುಗಿದುದ್ದುದೋ ಏನೋ!

ಇಲ್ಲವಾದರೆ ಕಣಿಲೆ, ಕರವೀರ, ಹಳದಿ ಸೇವಂತಿಗೆ ಹಳದಿ ಸಂಜೆಮಲ್ಲಿಗೆಗಳಿಗೇಕೆ ಬರೀ ಹಳದಿ ವರ್ಣ ಎಂದು ನಮಗೆ ತೋರ ಬಹುದು. ದೇವರು ದೊಡ್ಡ ಕಲಾಗಾರ ಆತನ ಕುಂಚದಲ್ಲಿ ಎಲ್ಲಾ ಬಣ್ಣಗಳೂ ಸೇರಿರ ಬೇಕು. ಮಾನವನಿಗೆ ಒಂದೇ ಬಣ್ಣದಲ್ಲಿ ಚಿತ್ರಿಸಲು ಕಷ್ಟವಾಗಲೆಂದೇ ಹಾಗೆ ರಚಿಸಿದನೋ ಏನೋ!

ಹೂ ಎಂದರೆ ನಮ್ಮವರಿಗೆ ಬಹಳ ಇಷ್ಟ, ಅಂಗಿಯ ಗುಂಡಿಗೂ, ಅಥವಾ ಹೂದೋಟದಲ್ಲಿಯೂ ಹೂಗಳನ್ನು ಕಂಡರೆ ನಮ್ಮ ಜನರಿಗೆ ಎನಂದವಾಗುವುದು. ಹೂಗಳನ್ನು ದಂಡಿಕಟ್ಟಿ ನಾರಿಯರು ಮನದಣಿಯೆ ಮುಡಿದುಕೊಳ್ಳುತ್ತಾರೆ. ಇಂತಹ ಮನೋ ಹರ್ಷದಾಯಕ ಹೂಗಳಿಗಾಗಿ ನಾವು ಮನೆ, ಮಠ, ಮಂದಿರಗಳ ಮುಂಭಾಗದಲ್ಲಿ ಹೂದೋಟವನ್ನು ಚೆನ್ನಾಗಿ ಬೆಳೆಯಿಸಬೇಕು. ಇವು ನಮ್ಮ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯಲ್ಲಿ ತುಂಬಾ ಪರಿಣಾಮವನ್ನು ಬೀರುತ್ತವೆ.

ಶ್ರೀ ಯು. ನಾರಾಯಣ ಸೇರಿಗಾರ.

ಒಂದೇ ಕಲ್ಲಿನಿಂದ ಎರಡು ಹಣ್ಣುಗಳು!

ರಾಷ್ಟ್ರದ ರಕ್ಷಣೆಗೂ ಜೀವನದ ಭದ್ರತೆಗೂ ಉಳಿತಾಯವು ಅತ್ಯವಶ್ಯ.

ಉಳಿತಾಯ ಮಾಡಿರಿ!

ಒಂದು ಸೇವಿಂಗ್ಸ್ ಖಾತೆ ತೆರೆಯಿರಿ

ಕೊಪ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆದಳಿತ ಆಫೀಸು: ಮಂಗಳೂರು.

ದಬ್ಬಾಳಿಕೆಯ ಆಗುಹೋಗು

ಕೃಷ್ಣ ಮೆನನ್ನರ ಅಧಿಕಾರ ಚ್ಯುತಿ

ಚೀನವು ಭಾರತದ ಮೇಲೆ ಆಕ್ರಮ್ಯ ತ್ತಾಗಿ ಮತ್ತು ಅತ್ಯಾಚಾರವಾಗಿ ಪಡೆಸಿದ ದಾಳಿಯಿಂದಾಗಿ ನಮ್ಮ ದೇಶದಲ್ಲಿ ಹಲವಾರು ಮಹತ್ತರವಾದ ಬದಲಾವಣೆಗಳು ಆಗಿವೆ ಮತ್ತು ಆಗುತ್ತಿವೆ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ರಂಗುಗಳಲ್ಲಿ ನಡೆಯುತ್ತಿರುವ ಈ ಪರಿವರ್ತನೆಗಳನ್ನು ಒಂದೊಂದಾಗಿ ಪರಿಶೀಲಿಸುವುದು ಅಗತ್ಯ. ಇವುಗಳಲ್ಲಿ ಮೊತ್ತ ಮೊದಲನೆಯದಾಗಿ ಗಮನಕ್ಕೆ ಬರುವುದು (ನೂಜಿ) ರಕ್ಷಣಾ ಮಂತ್ರಿ ಕೃಷ್ಣ ಮೆನನ್ನರ ಅಧಿಕಾರ ಚ್ಯುತಿ. ಚೀನವು ನಮ್ಮ ಉತ್ತರದ ಗಡಿಗಳನ್ನು ನುಗ್ಗಿ ನಮ್ಮ ಸೈನ್ಯವನ್ನು ಹಿಮ್ಮೆಟ್ಟಲು ಆರಂಭಿಸಿದಾಕ್ಷಣ ದೇಶದ ರಾಜಕೀಯ ಮುಖಂಡರಲ್ಲಿ ಹಲವರು ವೆ ನನ್ನ ರನ್ನು ಟೀಕಿಸತೊಡಗಿದರು. ರಾಜಾಜಿ, ಕೃಪಲಾನಿ, ಅಶೋಕ ಮೆಹತಾ ಮುಂತಾದವರು ರಕ್ಷಣಾ ಖಾತೆಯನ್ನು ಪ್ರಧಾನ ಮಂತ್ರಿ ನೆಹರೂರವರೇ ತೆಗೆದುಕೊಳ್ಳ ಬೇಕೆಂದೂ, ಮೆನನ್ನರನ್ನು ಸರಕಾರದಿಂದ ತೆಗೆದು ಹಾಕಬೇಕೆಂದೂ ಘೋಷಿಸಿದರು. ಈ ಸಲಹೆಗೆ ಅನುಸಾರವಾಗಿ ನೆಹರು ರಕ್ಷಣಾ ಖಾತೆಯನ್ನು ತೆಗೆದುಕೊಂಡು ಮೆನನ್ನರನ್ನು ಅದೇ ಶಾಖೆಯಲ್ಲಿ ಉತ್ಪಾದನಾ ಮಂತ್ರಿಯಾಗಿ ಮಾಡಿದಾಗ ಕೆಲವರ ಮನಸ್ಸಿಗೆ ಮೆನನ್ನರ ಪ್ರಕರಣ ಮುಗಿದಂತೆ ಕಂಡಿತು. ಆದರೆ ಕೆಲವೇ ದಿನಗಳಲ್ಲಿ ವಿರೋಧಿ ಪಕ್ಷದ ಮುಖಂಡರ ಜೊತೆಗೆ ಕಾಂಗ್ರೆಸ್ ಪಕ್ಷದ ಹಲವು ಸದಸ್ಯರು ಒಟ್ಟಾಗಿ ಕೃಷ್ಣ ಮೆನನ್ನರಿಗೆ ಯಾವ ಅಧಿಕಾರವೂ ಕೊಡಕೂಡದೆಂದು ನೆಹರೂರವರನ್ನು ಒತ್ತಾಯಪಡಿಸಿದ ಪರಿಣಾಮವಾಗಿ ಮೆನನ್ನರು ಸಂಪೂರ್ಣ ಅಧಿಕಾರ ಬಿಟ್ಟು ಬಿಡುವಂತಾಯಿತು. ಇದು ಸರಿ ಅಥವಾ ತಪ್ಪು ಎನ್ನುವುದಕ್ಕಿಂತ ಹಿಂಗಾಗಲು ಕಾರಣವೇನೆಂದು ತಿಳಿಯಲು ಇದರ ಹಿನ್ನೆಲೆಯನ್ನು ಪರಿಶೀಲಿಸುವುದು ಅಗತ್ಯ.

ಮೆನನ್ನರು ಚಿಕ್ಕಂದಿನಲ್ಲೆ ಇಂಗ್ಲೆಂಡಿಗೆ ಹೋಗಿ ಅಲ್ಲಿ ಬಹುಕಾಲ ಕಳೆದಿದ್ದರು. ಭಾರತವು ಸ್ವಾತಂತ್ರ್ಯ ಗಳಿಸುವಾಗಲೂ ಅವರು ಇಂಗ್ಲೆಂಡಿನಲ್ಲೆ ಇದ್ದರು. ಇವರು ಗಾಢವಾಗಿ ಕಾಂಗ್ರೆಸ್ ಸರಕಾರದಲ್ಲಿ ಮಂತ್ರಿಯಾಗಲು ಪಂಡಿತ ನೆಹರೂಗೆ ಇವರ ಮೇಲಿದ್ದ ಸ್ನೇಹವೇ ಕಾರಣವೆಂದು ಎಲ್ಲರ ಅಭಿಪ್ರಾಯ. ಮೆನನ್ನರನ್ನು ಕಂಡರೆ ಕಾಂಗ್ರೆಸಿನ ಕೆಲವು ಮುಖಂಡರಿಗೆ ಆಗುತ್ತಿದ್ದಿಲ್ಲ ಉದಾಹರಣೆಯಾಗಿ, ಸರದಾರ ಪಟೇಲರು ಮೆನನ್ನರನ್ನು ಮೆಚ್ಚುತ್ತಿರಲಿಲ್ಲ. ಮೌಲಾನಾ ಆಜಾದರು ಮೆನನ್ನರನ್ನು ಕಟುವಾಗಿ ಟೀಕಿಸುತ್ತಿದ್ದರು. ಈ ಇಬ್ಬರು ಮುಖಂಡರು ಕಾಲವಾದ ಮೇಲೆ ನೆಹರೂರವರ ಇಚ್ಛೆಯನ್ನು ವಿರುದ್ಧವಾಗಿರುವ ರು ಕಾಂಗ್ರೆಸ್ಸಿನಲ್ಲಿ ಉಳಿದಿದ್ದುದರಿಂದ ಮೆನನ್ ಮತ್ತು ನೆಹರು ಗೆಳೆತನ ಇನ್ನಷ್ಟು ಬೆಳೆಯುತ್ತಿನ್ನಬಹುದು.

ಇತರ ಎಲ್ಲಾ ರಾಜಕೀಯ ಪಕ್ಷಗಳು (ಕಮ್ಯುನಿಷ್ಟರನ್ನು ಬಿಟ್ಟರೆ) ಕೃಷ್ಣ ಮೆನನ್ನರನ್ನು ಮೊದಲಿಂದಲೇ ವಿರೋಧಿಸುತ್ತಿದ್ದವು. ಕಳೆದ ಚುನಾವಣೆಯಲ್ಲಿ ಬೊಂಬಾಯಿಯಲ್ಲಿ ಕೃಷ್ಣಮೆನನ್ ವಿರುದ್ಧ ಕೃಪಲಾನಿ ಇವರಿಗಿಳಿದ ನಡೆದ ಹೊಡೆದಾಟ ಎಲ್ಲರಿಗೂ ತಿಳಿದಿದೆ. ಆಗ ಕಮ್ಯುನಿಸ್ಟರನ್ನುಳಿದ ಎಲ್ಲಾ ವಿರೋಧಿ ಪಕ್ಷಗಳು ಕೃಪಲಾನಿಯವರನ್ನು ಸಮರ್ಥಿಸಿ ಸಹಾಯ ಮಾಡಿದ್ದುವು. ಬರೀ ಒಬ್ಬ ವ್ಯಕ್ತಿಯ ಮೇಲೆ ಇಷ್ಟೊಂದು ವಿರೋಧ ಕಂಡು ಬಂದಿರುವುದು ಅತಿ ವಿರಳವೆನ್ನಬೇಕು.

ಮೆನನ್ನರ ಮೇಲಿನ ದೊಡ್ಡ ಅಪವಾದವೆಂದರೆ, ಅವರು ಕಮ್ಯುನಿಸ್ಟರ ಮಿತ್ರತ್ವದಲ್ಲಿದ್ದಾರೆಂದು. ಇದರಿಂದಲೇ ಅವರನ್ನು ಪರೇಲ್, ಅಜಾದ್, ಕೃಪಲಾನಿ, ಅಶೋಕ್ ಮೆಹತಾ ಮುಂತಾದವರು ವಿರೋಧಿಸಲು ಕಾರಣ ಮೆನನ್ನರು ಇಂಗ್ಲೆಂಡಿನಲ್ಲಿರುವಾಗಲೇ ಇವರು ಕಮ್ಯುನಿಷ್ಟ್ ವಾದಿಯೆಂದು ಅಲ್ಲಿಯ ಲೇಬರ್ ಪಕ್ಷದವರು ತೀರ್ಮಾನಿಸಿದ್ದರು. ನಮ್ಮ ದೇಶದಲ್ಲಿ ಕೂಡಾ ಕಮ್ಯುನಿಷ್ಟರು ಇವರನ್ನು ಬಹಳ ವಾಗಿ ಹೊಗಳುತ್ತಿದ್ದರಲ್ಲದೆ ಇಂದಿರಾ ಗಾಂಧಿಯವರ ಅಧ್ಯಕ್ಷವಾದಸ್ಪಷ್ಟ ಸಹಾಯ ನೀಡುತ್ತಿದ್ದುದರಿಂದ ಈ ಸಂಶಯ ಇನ್ನಷ್ಟು ಬಲವಾಗಲು ಕಾರಣವಾಯಿತು ಅವೆಲ್ಲವೆ ಇವರು ಯುಕ್ತರಾಷ್ಟ್ರ ಸಂಸ್ಥೆಗೆ ಹೋದಾಗಲೆಲ್ಲ ರಷ್ಯಾ ಮತ್ತು ಚೀನವನ್ನು ಹೊಗಳುವದಲ್ಲದೆ ಅಮೇರಿಕ ಇಗ್ಲೆಂಡ್ ನೊದಲಾದ ಪಾಶ್ಚಾತ್ಯ ರಾಷ್ಟ್ರಗಳನ್ನು ಖಂಡಿಸುತ್ತಿದ್ದರೆಂದು ಕೆಲವರ ವಾದ.

ಚೀನದ ದಾಳಿಯು ಮೆನನ್ನರ ವೈಲಿನ ಸಂಶಯವನ್ನು ಇನ್ನಷ್ಟು ಹೆಚ್ಚಿಸಿತು. ಚೀನವು ಹಲವಾರು ವರ್ಷಗಳಿಂದಲೂ ಸ್ವಲ್ಪ ಸ್ವಲ್ಪವಾಗಿ ನಮ್ಮ ಗಡಿಗಳನ್ನು ನುಗ್ಗುತ್ತಿದ್ದರೂ ಅದೇನೂ ಮಹತ್ವದ ವಿಷಯವಲ್ಲವೆಂದು ಹೇಳಿ ಪಾಕಿಸ್ತಾನವೇ ನಮ್ಮ ವೈರಿಯೆಂದು ಇವರು ಹೇಳುತ್ತ ಬಂದಿದ್ದರು. ದೊಡ್ಡ ಸ್ವರೂಪದಲ್ಲಿ ಇತ್ತೀಚೆಗೆ ಚೀನವು ನಮ್ಮ ದೇಶವನ್ನು ನುಗ್ಗಿದಾಗ ನಮ್ಮ ಸೈನಿಕರು ಅವರನ್ನು ತಡೆಗಟ್ಟಿ ಹಿಮ್ಮೆಟ್ಟುವಾಗ ರಕ್ಷಣಾ ಮಂತ್ರಿ ಮೆನನ್ನರನ್ನು ಎಲ್ಲರೂ ಸ್ವಾಭಾವಿಕವಾಗಿ ಖಂಡಿಸತೊಡಗಿದರು. ನಮ್ಮ ಸೈನಿಕರು ಸೋತದ್ದಕ್ಕಿಂತಲೂ ಹೆಚ್ಚಿನ ವಿಷಾದಕರವಾದ ವಿಷಯವೆಂದರೆ ಅವರಿಗೆ ಸಾಕಷ್ಟು ಯುದ್ಧೋಪಕರಣಗಳನ್ನೂ ಚಳಿಗೆ ಬೇಕಾದ ಬಟ್ಟೆಬರೆಗಳನ್ನೂ ಒದಗಿಸದಿದ್ದುದು. ಇವುಗಳ ಕೊರತೆಯಿಂದಲೇ ನಮ್ಮ ಸೈನಿಕರು ಸೋಲಬೇಕಾಯಿತು. ಮೆನನ್ನರು ವೀರಾವಿಗಳೆಂದು ಎಲ್ಲರೂ ಒಪ್ಪುತ್ತಾರೆ. ಅವರು ತಮ್ಮ ಕೆಲಸದಲ್ಲಿ ಯಶಸ್ಸು ಹೊಂದದೆ ಇರಲು ಅವರಿಗೆ ಚೀನದ ಮೇಲಿದ್ದ ಅವಾರ ಅಭಿಮಾನವೇ ಕಾರಣವೆನ್ನಬೇಕು ೧೯೫೪ರಿಂದಲೂ ಚೀನವು ತನ್ನ ದುರುದ್ದೇಶವನ್ನು ವ್ಯಕ್ತಪಡಿಸುತ್ತಾ ಬಂದಿದ್ದರೂ ಇದರ ಗುಟ್ಟನ್ನು

(ಅನೇ ಪುಟ ನೋಡಿರಿ)

ಟಿ. ಬಿ. ಮುದ್ರೆ ಅಂಟಿಸಿದ ಒಂದು ಪತ್ರವಾಗಲಿ, ಒಂದು ಉಡುಗೊರೆ ಪೊಟ್ಟಣವಾಗಲಿ, ಇಲ್ಲವೆ ಒಂದು ಅಭಿನಂದನಾ ಕಾರ್ಡಾಗಲಿ ದೊರೆತಾಗ ಅದರಿಂದ ಉಪಕೃತಳಾದ, ಕ್ಷಯರೋಗದಿಂದ ಹಾಸಿಗೆ ಹಿಡಿದ ಚಿಕ್ಕ ಬಾಲಿಕೆಯ ತಾಯಿಯು ತುಂಬಿದ ಹೃದಯದಿಂದ ತನ್ನ ಗಾಢ ಕೃತಜ್ಞತೆಯನ್ನು ಸರಳವಾದ ಮಾತುಗಳಿಂದ ಸೂಚಿಸಿರುವಳು:

"ಟಿ. ಬಿ. ಮುದ್ರೆಯು ಒಂದು ಆಕರ್ಷಕವಾದ ಗುರುತಾಗಿದೆ. ಈ ಮುದ್ರೆಗಳನ್ನು ಕಳುಹಿಸುವವರಿಗೂ ಅದನ್ನು ಪಡೆಯುವವರಿಗೂ ಇದರಿಂದ ಆನಂದವಾಗುತ್ತದೆ. ಅಷ್ಟೇ ಅಲ್ಲದೆ ಇದು ಕ್ಷಯರೋಗದಿಂದ ನರಳುವ ಜನರಿಗೆ ಒಂದು ನೇರ ಸಹಾಯವೂ ಆಗಿದೆ."

ನೀವು ತೆಗೆದುಕೊಳ್ಳುವ ಪ್ರತಿಯೊಂದು ಮುದ್ರೆಯಿಂದ ಒಬ್ಬ ಕ್ಷಯರೋಗಿಗೆ ಸಹಾಯವಾಗುತ್ತದೆ.

ಟಿ. ಬಿ. ಮುದ್ರೆಗಳನ್ನು ಅಧಿಕ ಸಂಖ್ಯೆಯಲ್ಲಿ ಕೊಂಡುಕೊಳ್ಳಿರಿ.

ಒಂದು ಮುದ್ರೆಯ ಬೆಲೆ ಬರೇ ಹತ್ತು ನಯೇಪೈಸೆ.

ಮುದ್ರೆಗಳು ಸಿಗುವ ಸ್ಥಳಗಳು: 1. ಮೈಸೂರು ರಾಜ್ಯದ ಟಿ. ಬಿ. ಸಮಿತಿ, ಸರಕಾರಿ ಟಿ. ಬಿ. ಸೆನೆಟೋರಿಯಂ, ಹಳೆ ಮದ್ರಾಸು ರಸ್ತೆ, ಬೆಂಗಳೂರು.

2. ದಕ್ಷಿಣ ಕನ್ನಡ ಜಿಲ್ಲಾ ಟಿ. ಬಿ. ಸಮಿತಿ, ಸರಕಾರಿ ವೆನ್ಲಾಕ್ ಆಸ್ಪತ್ರೆ, ಮಂಗಳೂರು, ಮತ್ತು ಅದರ ಬೇರೆ ಬೇರೆ ವಿಜಿನ್ಸಿಗಳಲ್ಲಿ.

ಕ್ಷಯರೋಗ ಮುದ್ರೆ ಮಾರಾಟದ ಹದಿಮೂರನೆ ಚಳವಳಿ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ನಡೆಸಲ್ಪಡುವಂಥಾದ್ದು)

ಈ ಸ್ಥಳ— ನವಯುಗ, ಉಡುಪಿ ಇವರ ಸಹಾಯ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪೨	ಉಡುಪಿ ೧೫-೧೨-೧೯೬೨	ವಾರ ೧೪

ಚೀನಾ ಶಾಂತಿ ಬಯಸುವುದೆ?

ಗಳಿಸಿಕೊಂಡ ಸ್ವಾತಂತ್ರ್ಯವನ್ನು ಕಬಳಿಸಲು ಹವಣಿಸಿದ ಕೆಂಪು ಚೀನೀಯರು ವಿಳಪಕ್ಷೇಪಯುವಾಗಿ ಸಮರ ವಿರಾಮ ಸೂಚನೆಯನ್ನು ಮುಂದಿಟ್ಟುದರಿಂದ ಉಂಟಾದ ಸಂದಿಗ್ಧ ಪರಿಸ್ಥಿತಿಯು ಭಾರತ-ಚೀನಾ ಗಡಿಯಲ್ಲಿ ಶಾಂತವಾಗುವ ಸೂಚ್ಯಾಣಗಳು ಗೋಚರಿಸದೆ ಇನ್ನೂ ಪ್ರಶ್ನೋತ್ತರ ರೂಪದಲ್ಲಿಯೇ ನಿಂತಿರುವುದರಿಂದ ಭಾರತೀಯರು ಕಟ್ಟಿದ ಕಂಠಣವನ್ನು ಮತ್ತಷ್ಟು ಬಿಗಿಗೊಳಿಸಲೇ ಬೇಕು. ಈ ಸಿಟ್ಟಿನಲ್ಲಿ ಸಮಸ್ತ ಭಾರತೀಯರೂ ತಮ್ಮ ಸರಕಾರದ ನೀತಿಗೆ ಬೆಂಬಲವಾಗಿ ನಿಂತಿರುವುದು ದಿನದಿಂದ ದಿನಕ್ಕೆ ಸ್ಪಷ್ಟವಾಗಿ ಕಾಣುತ್ತದೆ. ಚೀನೀಯರು ಮುಂದಿಟ್ಟ ಸಮರ ವಿರಾಮ ಸೂಚನೆಯಲ್ಲಿ ಮೂರು ಆಂಶಗಳು ಅಡಕವಾಗಿವೆ. ಆದರೆ ಈ ಆಂಶಗಳನ್ನು ತಾತ್ವಿಕ ಹಾಗೂ ವ್ಯಾವಹಾರಿಕ ದೃಷ್ಟಿಯಿಂದ ಭಾರತವು ಎಂದಿಗೂ ಒಪ್ಪುವುದು ಸಾಧ್ಯವಿಲ್ಲ. ಚೀನಾ ಸೂಚನೆಗಳಲ್ಲಿ ಶಾಂತಿಯಿಂದಲೇ ಗಡಿ ವಿವಾದಗಳನ್ನು ಬಗೆಹರಿಸಿಕೊಳ್ಳುವ ಉದ್ದೇಶವಿದ್ದರೂ ಇರಬಹುದು; ಅದರಿಂದೆ ತನ್ನ ಸಾಮ್ರಾಜ್ಯವಾದದ ವಿಸ್ತರಣಾ ನೀತಿಯ ಕರಿಚ್ಛಾಯೆಯೂ ಇರಬೆಯೆಂಬುದು ಬಾಲಕನೂ ತಿಳಿದುಕೊಳ್ಳಬಹುದಾದ ಸಂಗತಿ. ಭಾರತವು ಸಮರ ವಿರಾಮವನ್ನೂ ಶಾಂತಿಯುತ ಪರಿಹಾರವನ್ನೂ ಸ್ವಾಗತಿಸುವುದಾದರೂ ತನ್ನ ಕನಿಷ್ಠ ಬೇಡಿಕೆಯೊಂದನ್ನು ಆಕ್ರಮಣಕಾರಿ ಚೀನವು ಮನ್ನಿಸಬೇಕೆಂದು ಹೇಳುತ್ತದೆ. ೧೯೬೨ರ ಸಪ್ತಂಬರ್ ೮ನೆ ತಾರೀಕಿನಂದು ವಾಸ್ತವಿಕವಾಗಿ ಎರಡು ಕಡೆಯವರೂ ಇದ್ದಲ್ಲಿಗೆ ಮರಳಿ ಸಮರವನ್ನು ನಿಲ್ಲಿಸಿದ ಬಳಿಕವೇ ಮುಂದಿನ ಮಾತುಕತೆಗೆ ತಾನು ಸಿದ್ಧ, ಈ ಬೇಡಿಕೆಯನ್ನು ಚೀನವೂ ಒಪ್ಪಬೇಕೆಂದು ಹೇಳುತ್ತದೆ. ೧೯೬೨ರ ನವಂಬರ ೭ರಂದು ತಾನಿದ್ದೆನೆಂದು ಹೇಳುವ ಕಾಲ್ಪನಿಕ ರೇಖೆಯನ್ನೇ ಒಪ್ಪಬೇಕೆಂದು ಹಠ ಹಿಡಿಯುವುದಾದರೆ, ಚೀನಾದ ಕೈಯಲ್ಲಿ ಭಾರತದ ಭೂಪ್ರದೇಶವು ಅನ್ಯಾಯವಾಗಿ ಉಳಿಯುವುದಕ್ಕೆ ಭಾರತ ಒಪ್ಪಿದಂತಾಗುವುದು ಮತ್ತು ಇದರಿಂದ ಭಾರತವು ತನ್ನ ಸಮಗ್ರತೆಗೆ ಕುಂದನ್ನು ತಂದುಕೊಟ್ಟಂತಾಗುವುದು. ಇಂತಹ ಅಸಮಾನರವಾದ ಸೂಚನೆಗೆ ಸ್ವಾತಂತ್ರ್ಯ ಪ್ರಿಯರಾದ ಭಾರತೀಯರು ಎಂದೂ ಒಪ್ಪುವುದಿಲ್ಲವೆಂಬುದನ್ನು ನೃಥವಾಗಿ ಭಾರತವು ಚೀನಕ್ಕೆ ತಿಳಿಸಿದೆ.

ಭಾರತವು ಶಾಂತಿಪ್ರಿಯ ರಾಷ್ಟ್ರ. ಅದು ಎಂದಿಗೂ ಯುದ್ಧವನ್ನು ಬಯಸಲಿಲ್ಲ; ಬಯಸುವುದೂ ಇಲ್ಲ. ಆದರೆ ತನ್ನ ಮೇಲೆ ಯಾರಾದರೂ ಯುದ್ಧವ ಕಿಡಿಯನ್ನು ಸುರಿಸಿದರೆ, ಸ್ವಾತಂತ್ರ್ಯ ಮತ್ತು ಸಮಗ್ರತೆಯ ರಕ್ಷಣೆಗಾಗಿ ಭಾರತವು ಎಂದೆಂದಿಗೂ ಹೋರಾಡುವುದು ಅನಿವಾರ್ಯ. ಯುದ್ಧಕ್ಕೆ, ಆದರ ಭೀಕರ ಪರಿಣಾಮಕ್ಕೆ ಹೆದರಿ ತನ್ನ ತನವನ್ನೂ ತನ್ನ ಅಸ್ತಿತ್ವವನ್ನೂ ಸ್ವಾತಂತ್ರ್ಯ ಮತ್ತು ಸಮಗ್ರತೆಗಳನ್ನೂ ಮೆಟ್ಟಿ ನೆಲಸಮ ಮಾಡಿಕೊಳ್ಳಲು ಮುಂದಾಗುವಷ್ಟು ಮೂರ್ಖರೂ ಭೀರುಗಳೂ ಭಾರತೀಯರೆಲ್ಲರೆಂಬುದನ್ನು ಕೆಂಪು ಚೀನೀಯರು ಈಗಾಗಲೇ ಮನಗಂಡಿರದಿರಲಾರರು. ತಮ್ಮ ಅನ್ಯಾಯದ ಈ ಆಕ್ರಮಣವನ್ನು ಅವರು ಇಂದು ಸ್ಥಗಿತಗೊಳಿಸಿರುವುದು ತನ್ನ ಕೃತ್ಯಕ್ಕೆ ತಾನೇ ವೈಫಲ್ಯಪಟ್ಟ ಅಲ್ಲ; ಭಾರತೀಯರ ಮೇಲೆ ಕರುಣೆದೋರಿಯೂ ಅಲ್ಲ. ತಮ್ಮ ಹೋಳಿಗೆಯನ್ನು ಬೇಳೆಸಲು ತುಪ್ಪವೆಲ್ಲಿ ಸಿಕ್ಕೀತು ಎಂಬ ಆಸೆಯಿಂದ ಮತ್ತು ನಿರೀಕ್ಷೆಯಿಂದ. ಏನಿದ್ದರೂ ಚೀನೀಯರಿಗೆ ಇನ್ನು ಅಂತಹ ತುಪ್ಪ ಎಲ್ಲಿಯೂ ದೊರೆಯಲಿಕ್ಕಿಲ್ಲವಾದುದರಿಂದ ಅವರು ಯಾವ ಕನಸನ್ನು ಕಂಡರೂ ಅದು ಕನಸಾಗಿಯೇ ಉಳಿದೀತು; ಉಳಿಯುತ್ತದೆ. ಚೀನೀಯರು ತವ್ಕಬಲವನ್ನು ಹೆಚ್ಚಿಸಲು ಮತ್ತು ಪೂರಯೆಯನ್ನು ಸಮರ್ಪಕಗೊಳಿಸಲು ಬಿಡುವನ್ನು ಬಯಸಿ ಸಮರ ವಿರಾಮ ಘೋಷಣೆ ಮತ್ತು ಹಿಂದೆ ಸರಿಯುವ ನಾಟಕಗಳನ್ನು ಅಭಿನಯಿಸುತ್ತಿದ್ದಾರೆಯೆಂಬ ಕಟು ಸತ್ಯವನ್ನಿಂದು ಎಲ್ಲರೂ ಮನವರಿಕೆಮಾಡಿಕೊಂಡಿದ್ದಾರೆ. ಯಾರನ್ನಾದರೂ ಕೆಲವು ಸಲ ವಂಚಿಸಬಹುದು; ಆದರೆ ಎಲ್ಲರನ್ನೂ ಎಲ್ಲಕಾಲದಲ್ಲಿಯೂ ವಂಚಿಸುವುದು ಯಾರಿಂದಲೂ ಅಸಾಧ್ಯ.ವಿತ್ತತ್ವದಮಂತ್ರವನ್ನು ಉಚ್ಚರಿಸುತ್ತ ದ್ರೋಹ ಬಗೆದ ಚೀನೀಯರ ಆಕ್ರಮಣದ ಮೇಲೆ ಜಾಗತಿಕ ಅಭಿಪ್ರಾಯ ಭಾರತಕ್ಕೆ ಪರವಾಗಿದೆ. ಭಾರತಕ್ಕೆ ಸರ್ವ ವಿಧದ ಸಹಾಯವನ್ನೂ ಸಹಕಾರವನ್ನೂ ನೀಡಲು ಜಗತ್ತಿಗೆ ಜಗತ್ತೇ ಮುಂದೆ ಬಂದಿದೆ, ದೇಶದ ಒಳಗೂ ಹೊರಗೂ ಅನ್ಯಾಯ ಪ್ರತಿಪಾದಕರಾದ ಚೀನೀಯರ ಬಗ್ಗೆ ಕ್ರೋಧ ಭಾವನೆಯು ತಾಂಡವವಾಡುತ್ತಿರುವಾಗ ಅವರು ಮಾಡುವುದಾದರೂ ಏನನ್ನು? ತನ್ನ ನೀತಿಗೆ ಬೆಂಬಲವನ್ನು ಪಡೆಯುವ ಆತುರದಿಂದ ಸತ್ಯವನ್ನು ಮರೆಮಾಚುತ್ತ ಭಾರತದ ಬಗ್ಗೆ ಅಪಪ್ರಚಾರ ನಡೆಸುವಲ್ಲಿ ಚೀನೀಯರು ನೊದನೊದಲಿಗೆ ಯಶಸ್ವಿಯಾದರು; ಆದರೆ, ಇಂದು ಅವರ ಕೈ ಅಲ್ಲಿಯೂ ಹಿಂದೆ ಸರಿಯ ತೊಡಗಿದೆಯೆಂಬುದನ್ನು ನಾವು ಮನಗಾಣಬಹುದು.

ಭಾರತದ ಕನಿಷ್ಠ ಬೇಡಿಕೆಯನ್ನು ಮನ್ನಿಸಿದ ಹೊರತು ಸಂಧಾನದ ಮಾತುಕತೆಯಿಲ್ಲವೆಂಬುದು ಭಾರತೀಯರ ದೃಢ ಪ್ರತಿಜ್ಞೆ. ಕೊಲಂಬೋ ಸಮ್ಮೇಳನದ ಅಭಿಪ್ರಾಯಗಳು ಏನೇ ಇರಲಿ, ಅಥವಾ ಮತ್ತಿತರ ಹೇಳಿಕೆಗಳು ಏನೇ ಇರಲಿ, ಭಾರತವು ಸಂಧಾನ—ಸಮರ ವಿರಾಮಗಳ ಬಗ್ಗೆ ಮುಂದೆ ಬರಬೇಕಾದರೆ, ದುರಾಕ್ರಮಣಕಾರ ಚೀನೀಯರು ತಮ್ಮ ತಮ್ಮ ಹಕ್ಕನಾದದಿಂದ ಹಿಂದೆ ಸರಿಯಬೇಕಾಗುತ್ತದೆ. ತಾನೇ ಆಕ್ರಮಣ ಮಾಡಿ ಮತ್ತೆ ಸಂಧಾನದ ಸೂಚನೆಯನ್ನು ಮುಂದೆ ಇಡುವ ಚೀನದ ಕೃತ್ಯ ಮಾನವ ಸಮಾಜಕ್ಕೆ ಗಂಡಾಂತರಕಾರಕವಾದುದು. ನಮ್ಮ ಭೂಮಿಯಲ್ಲಿ ಪರಕೀಯರು ಕಾಲಿಡಲು ಮಾಡಿ ಬಲವಾಗಿ ಬೇರು ಬಿಡಲು ಪ್ರಯತ್ನಿಸುತ್ತಿರುವ ವಿಷಮ ಪರಮಾಣಕಾರಕ ಸನ್ನಿವೇಶದಲ್ಲಿ ಶತ್ರು ವಿನೊಡನೆ ಮಾತುಕತೆಗೆ ಮುಂದಾಗುವುದಕ್ಕಿಂತ ಅನೀತಿಯು ಮತ್ತೊಂದಿಲ್ಲ. ಈ ಭಾರತದ ನಿಲುವಿನಲ್ಲಿ ಸತ್ಯತೆಯಿದೆ; ಸಮರ ವಿರಾಮದ, ಶಾಂತಿಯುತ ಪರಿಹಾರದ ಇರಾದೆಯಿದೆ. ಅಂತಾರಾಷ್ಟ್ರೀಯ ಗೌರವ ಭಾವನೆಯಡಗಿದೆ. ಈ ದೆಸೆಯಲ್ಲಿ ಭಾರತ ಸರಕಾರದ ನೀತಿಗೆ ಸಕಲ ಭಾರತೀಯರ ಬೆಂಬಲವಿದೆ; ಸ್ವತಂತ್ರ ಜಗತ್ತಿನ ಶುಭಾಶೀರ್ವಾದವಿದೆ. ಆದುದರಿಂದ ಚೀನವು ವಾಸ್ತವಿಕವಾಗಿ ಕದನ—ಆಕ್ರಮಣ ಪ್ರಿಯವಾಗದೆ ಬಿಚ್ಚು ಮನಸ್ಸಿನಿಂದ ಸಮರ ವಿರಾಮ ಸೂಚನೆ ನೀಡಿರುವುದಾದರೆ, ನೆಹರೂರವರು ಭಾರತದ ಪರವಾಗಿ ಮುಂದಿಟ್ಟ ಒಂದು ಸಲಹೆಯನ್ನು ಪ್ರತಿಕರಿಸಬೇಕು; ಇದರಿಂದ ಚೀನವು ತ್ಯಾಗ ಮಾಡಿದಂತಾಗುವುದಿಲ್ಲ; ಶತ್ಯದ ಹಸ್ತವನ್ನು ಎತ್ತಿ ಹಿಡಿದಂತೆ ಮಾತ್ರ ಆಗುವುದು. ಸಂಚಶೀಲವನ್ನು ಒಮ್ಮೆ ಶೂಲದಿಂದ ಇಳಿದರೂ ಆ ಇರಿತದ ಗಾಯವನ್ನು ತುಂಬಿಕೊಟ್ಟಂತೆ ಮಾತ್ರ ಆಗುವುದು. ತಾನು ಮಾಡಿದುದು ದ್ರೋಹವೆಂದು ಚೀನವು ತಿಳಿದು ಅದನ್ನು ಹೋಗಲಾಡಿಸಲು ಇಚ್ಛಿಸುವುದು ನಿಜವೆಂದಾದರೆ, ಭಾರತದ ಸೂಚನೆಯನ್ನು ಒಪ್ಪಲು ಹಿಂದೆ ಮುಂದೆ ನೋಡಬೇಕಾಗಿಲ್ಲ.

ಅಕರಣೆಯ ನೀತಿ

ಸಂರಕ್ಷಣೆಯು ವೆಚ್ಚವನ್ನು ಕೇಂದ್ರ ಸರಕಾರವು ಹೆಚ್ಚಾಗಿ ಹೊರಬೇಕಾಗಿ ಬಂದ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಜನತೆಯು ತ್ಯಾಗಶೀಲವಾಗ ಬೇಕಾದುದು ಅತ್ಯವಶ್ಯ; ಹಾಗಿರುವಾಗ, ಹೆಚ್ಚಿನ ಕರಗಳನ್ನೂ ತೆರಲು ಮುಂದೆ ಬರಬೇಕೆಂಬುದು ಸಹಿವಾದ. ರಾಜ್ಯಗಳು ಶಂಕವ್ಯಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ಸಂಪತ್ತನ್ನು ತಾವೇ ಕೂಡಿಸಿಕೊಳ್ಳಬೇಕೆಂಬುದು ಅನಿವಾರ್ಯ. ಅದಕ್ಕಾಗಿ ಕರಾಕರಣೆಯಲ್ಲಿ ಹೆಚ್ಚಳ ಮಾಡುವುದು ಅವುಗಳ ಕರ್ತವ್ಯ. ಭೂಕಂದಾಯದ ಮೇಲೆ ನೂರಕ್ಕೆ ನೂರರಷ್ಟು ಸರ್ಚಾರ್ಜನ್ನು ಹೊರಿಸುವ ಸಂಬಂಧದ ವಿಧೇಯಕವೊಂದು ಕರ್ನಾಟಕದ ರಾಜ್ಯ ವಿಧಾನ ಸಭೆಯಲ್ಲಿ ಸ್ವೀಕೃತವಾಯಿತೆಂದು ಕೇಳುತ್ತೇವೆ ಇದರನ್ವಯ, ಐದು ಎಕ್ರೆಗಿಂತ ಕಡಮೆ ಭೂಮಿಯಿರುವವನ ಮೇಲೆ ಹೆಚ್ಚಿನ ಕರಭಾರ ಬೀಳುವುದಿಲ್ಲ; ಶ್ರೀಮಂತರಿಗೆ ಕರ ಭಾರವಾದರೂ ಆದನ್ನು ಹೊರುವ ಶಕ್ತಿ ಅವರಲ್ಲಿದೆ. ಆದರೆ, ಇದರಿಂದ ತೊಂದರೆಗೆ ಗುರಿಯಾಗುವರು ಮಧ್ಯಮ ವರ್ಗದವರು ಇದು ತೀರ ದುಸ್ಥಿತಿಯಲ್ಲಿದ್ದವರು ಮತ್ತು ಬೇಳುವವರು ಇಂತಹ ವರ್ಗದ ಜನರು ಎತ್ತ ದೇಶವು ಅಭಿವೃದ್ಧಿಯನ್ನು ಹೊಂದುತ್ತಿರುವಾಗ, ರಕ್ಷಣೆಯ ಭಾರ ಹೆಚ್ಚಿದಾಗ, ಅಧಿಕ ಕರಹೇರುವುದು ಸಮರ್ಥನೀಯವಾದರೂ ಇಂತಹ ಹೇರಿಕೆಗೊಂದು ಮಿತಿಯಿರಬೇಕು ಕಂಠಕರಣೆಯ ನೀತಿಯು ಮಾನವೀಯವಾಗಿರಬೇಕು. ಈಗ, ಒಂದೇ ಸಲಕ್ಕೆ ನೂರಕ್ಕೆ ನೂರರಷ್ಟು ಹೆಚ್ಚಿಸುವುದು ಸಮಂಜಸವೆಂದು ತೋರುವುದಿಲ್ಲ. ಸರಕಾರದ ಸ್ಪಷ್ಟೀಕರಣ—ವಿವರಣೆಗಳು ಏನೇ ಇರಲಿ, ಇದನ್ನು ಎಲ್ಲರೂ ಒಪ್ಪತಕ್ಕವರೇ. ವಿಧಾನ ಸಭೆಯಲ್ಲಿ ಈಗಾಗಲೇ ಈ ವಿಧೇಯಕ ಮಂಜೂರು ಆಗಿರುವುದರಿಂದ ವಿಧಾನ ಪರಿಷತ್ತಿದರೂ ಈ ಪರಿಯ ಹೊರೆಯೊಂದೇ ಬಾರಿಗೆ ಬೀಳದಂತೆ ನೋಡಿಕೊಳ್ಳಬೇಕು.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್—

ರಾಷ್ಟ್ರೀಯ ರಕ್ಷಣಾ ಕಾರ್ಯವನ್ನು ಬಲಪಡಿಸಲು ಸಿಂಡಿಕೇಟ್ ಬೇಂಕು ಹಲವು ವಿಧದ ವಿಶಿಷ್ಟ ಆಸಕ್ತಿಕರ ಸೌಲತ್ತುಗಳನ್ನು ಒದಗಿಸುವುದಲ್ಲದೇ ರಕ್ಷಣ ನಿಧಿಗೆ ರೂ. 1,51,000 ವಂತಿಗೆ ಕೊಡುವುದು ಎಂಬ ವಿಚಾರವನ್ನು ಇದೇ ತಾ. 1 ರಂದು ಕುಳಾಂದ ನಿವಾಸದಲ್ಲಿ ಜರಗಿದ ಸಿಂಡಿಕೇಟ್ ಬೇಂಕಿನ ವಿಶೇಷ ಸಾಧಾರಣ ಸಭೆಯಲ್ಲಿ ಭಾಷಣ ಮಾಡುತ್ತಾ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ ಪೈಯವರು ಜಾಹೀರು ಪಡಿಸಿದರು. ಪ್ರಕೃತ ತಿಂಗಳಲ್ಲಿಯೂ 5 ಲಕ್ಷದಂತೆ ಒಂದು ಕೋಟಿ ರೂಪಾಯಿ ಆಗುವ ತನಕ ಡಿಫೆನ್ಸ್ ಬೋಂಡಿನಲ್ಲಿ ವಿನಿಯೋಗಿಸ ಬೇಕೆಂದು ಸಹ ಬೇಂಕು ನಿರ್ಧರಿಸಿದೆ. ಅಲ್ಲದೇ ಜವಾನರ ಖಾತೆ ಮತ್ತು ಅದರಿಂದ ಹಣಕಳುಹಿಸುವುದನ್ನು ಉಚಿತವಾಗಿ ಮಾಡಬೇಕೆಂದೂ ಸಿಂಡಿಕೇಟಿನ ಎಲ್ಲಾ ಶಾಖೆಗಳ ಶಿಬಂದಿಯವರು ಜವಾನರ ಕುಟುಂಬದವರೊಡನೆ ಸಂಪರ್ಕ ಬೆಳೆಸಿ ಕೊಳ್ಳಬೇಕೆಂದೂ ಸಾಧ್ಯವಾದ ಎಲ್ಲಾ ಸಹಾಯಹಸ್ತವನ್ನೀಯಬೇಕೆಂದೂ ಸೂಚನೆ ಕೊಡಲಾಗಿದೆ.

ಶಿಬಂದಿಯ ಯಾವುದೇ ಸದಸ್ಯನು ತುರ್ತು ಪರಿಸ್ಥಿತಿಯಲ್ಲಿ ಶ್ರಮ ವರ್ತಕ ಸೇವೆಸಲ್ಲಿಸಲು ಮುಂದೆ ಬಂದಲ್ಲಿ ಅವರಿಗೆ ವಿಶೇಷ ಸೌಲತ್ತುಗಳನ್ನು ಕೊಡುವುದಕ್ಕೂ ಬೇಂಕಿನ ಡೈರೆಕ್ಟರರು ನಿರ್ಧರಿಸಿದ್ದಾರೆ. ಇದೇ ದಶಂಬರ 31ರೊಳಗೆ ಆಂತಹ ಸೇವೆ ಸಲ್ಲಿಸಲು ಮುಂದೆ ಬರುವವರಿಗೆ ಮೂಲ ವೇತನದ 25% ವನ್ನು ಹೆಚ್ಚು ಕೊಡಲಾಗುವುದು. ಅಲ್ಲದೇ ಸರ್ವಿಸಿನ ಹಕ್ಕು ಮತ್ತು ವರುಷಕ್ಕೆ 1 ತಿಂಗಳ ಟೋನಸು ಸಹ ಕೊಡಲಾಗುವುದು. ಶ್ರಮವರ್ತಕ ಕಾರ್ಯದಲ್ಲಿ ಅವರಿಗೆ ಭತ್ತೆ ದೊರೆತರೆ, ಇಲ್ಲಿಯೂ ಭತ್ತೆಗೆ ಅವರು ಹಕ್ಕುದಾರರಾಗುತ್ತಾರೆ. ವಿಶಿಷ್ಟ ಸಾಧನೆ ಮತ್ತು ಧೈರ್ಯಕ್ಕೆ ಸರಕಾರದಿಂದ ಯಾವುದಾದರೂ ಬಹುಮಾನ ದೊರೆತರೆ, ಬೇಂಕಿನಿಂದಲೂ ಅವರಿಗೆ ಅಂತಹ ಬಹುಮಾನ ಕೊಡಲಾಗುವುದು.

ಸರಕಾರವು ತೊಡಗುವ ನಾಗರಿಕ ರಕ್ಷಣಾ ತರಬೇತಿಯನ್ನೂ ಬೇಂಕಿನ ಶಿಬಂದಿಗೆ ಕೊಡಲಾಗುವುದು.

ರಾಷ್ಟ್ರೀಯ ರಕ್ಷಣಾ ಬೋಂಡು ಮತ್ತು ಗೋಲ್ಡ್ ಬೋಂಡುಗಳನ್ನು ಜನಪ್ರಿಯ ಗೊಳಿಸಲ್ಕೂ ಅವಶ್ಯಕ ಪರಿಸ್ಥಿತಿಯಲ್ಲಿ ಸರಕಾರದ ಏಜೆಂಟರಾಗಿ ಪ್ರತಿಫಲವಿಲ್ಲದೇ ದುಡಿಯಲಿಕ್ಕೂ ಬೇಂಕು ಸಾಧ್ಯವಾದ ಕೆಲಸ ಮಾಡುವುದೆಂದು ಸಭ ಶ್ರೀ ಟಿ. ಎ. ಪೈಯವರು ಹೇಳಿದರು. ಸಭಾಧ್ಯಕ್ಷತೆಯನ್ನು ಚೇರ್‌ಮೇನ್ ಡಾ। ಟಿ. ಎಂ. ಎ. ಪೈಯವರು ವಹಿಸಿದ್ದರು

ಹಿಂದೀ ಪ್ರಚಾರ ಪರಿಷತ್ತು ಉಡುಪಿ—

ಇದರ ಅಧ್ಯಕ್ಷರಾಗಿ ಶ್ರೀ ಎ. ನರಸಿಂಹ ಬಲ್ಲಾಳರೂ ಉಪಾಧ್ಯಕ್ಷರಾಗಿ ಶ್ರೀ ಬಿ. ಎಸ್ ರಾಮರಾಯರೂ ಆಯ್ಕೆಗೊಂಡರು ಶ್ರೀ ಎಸ್. ಗೋಪೀನಾಥ್ ರಾಯರು ಪ್ರಧಾನ ಕಾರ್ಯದರ್ಶಿಗಳಾಗಿ ಮತ್ತು ಶ್ರೀ ಪಿ. ರಾಜಗೋಪಾಲ ಆಚಾರ್ಯರು ಉಪಕಾರ್ಯದರ್ಶಿಗಳಾಗಿ ಹಾಗೂ ಕೋಶಾಧ್ಯಕ್ಷರಾದರು. ತಾ. ೪ ರಂದು ನೆರೆದ ಕಾರ್ಯಕಾರೀ ಸಮಿತಿಯಲ್ಲಿ ಈ ಆಯ್ಕೆಗಳು ಒಮ್ಮತದಿಂದ ನಡೆದುವು.

ಅಲ್ಲಲ್ಲಿಯ ಸುದ್ದಿಸಾರ

ಬಹುಮೂಸ ವಿತರಣೆ— ಲೈಫ್ ಇನ್‌ಷೂರನ್ಸ್ ಕಾರ್ಪೊರೇಷನ್ನಿನ ಉಡುಪಿ ಶಾಖೆಯ ವತಿಯಿಂದ ವ್ಯವಹಾರ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮೂಸ ವಿತರಿಸುವ ಸಮಾರಂಭವೊಂದು ತಾ. ೧೦ರಂದು ಶ್ರೀ ಟಿ ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಬ್ರಾಂಚ್ ಮೆನೇಜರ್ ಶ್ರೀ ಟಿ ಪಿ ಎನ್ ನಂದಿಯೂರರು ಸ್ವಾಗತ ಭಾಷಣ ಮಾಡುತ್ತಾ ಬಹುಮೂಸವಿತರಣೆಯ ಅನೇಕರು ತಮ್ಮ ಬಹುಮೂಸದ ಮೌಲ್ಯವನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ಕಾಣಿಕೆಯಾಗಿ ಸಮರ್ಪಿಸಿರುವರೆಂದು ಹೇಳಿದರು. ಸೀನಿಯರ್ ಡಿವಿಜನಲ್ ಮೆನೇಜರ ಶ್ರೀ ಟಿ ಆರ್ ಎ ಪೈಗಳು ಬಹುಮೂಸವಿತರಣೆ ಮಾಡಿ ಅಭಿನಂದಿಸಿದರಲ್ಲದೆ, ಕಾರ್ಪೊರೇಷನ್ನು ರಂಪ್ಪಕ್ಕೆ ಅತ್ಯುತ್ತಮ ಸೇವೆಯನ್ನು ಇಂದಿನ ಕಠಿಣ ಪರಿಸ್ಥಿತಿಯಲ್ಲಿ ಸಲ್ಲಿಸಲಾಗುವಂತೆ ಏನೂ ವ್ಯವಹಾರವನ್ನು ದ್ವಿಗುಣಿತಗೊಳಿಸಬೇಕೆಂದು ಸಜಂಟರಿಗೆ ಮತ್ತು ಡೆವಲಪ್‌ಮೆಂಟ್ ಆಫೀಸರರಿಗೆ ಕರೆ ಇತ್ತರು. ಕಾರ್ಪೊರೇಷನ್ನು ಮೊನ್ನೆ ತಾನೆ 1960–61 ವರ್ಷಗಳ ಬಗ್ಗೆ ಹೋಲ್ ಲೈಫ್ ಪಾಲಿಸಿದಾರರಿಗೆ ಸಾವಿರಕ್ಕೆ ವರ್ಷಕ್ಕೆ ರೂ 16ರಂತೆ, ಎಂಡೋಮೆಂಟ್ ಪಾಲಿಸಿದಾರರಿಗೆ ಸಾವಿರಕ್ಕೆ ವರ್ಷಕ್ಕೆ ರೂ 12–80ರಂತೆ ಬೋನಸ್ಸು ವಿತರಿಸುವ ಘೋಷಣೆ ಮಾಡಿರುವುದು ದೆಂದೂ ಅವರು ತಿಳಿಸಿದರು. ಸಭೆಕರ ಪರವಾಗಿ ಶ್ರೀ ಎ ಜೆ ಆಸ್ಟ್ ಮತ್ತು ಶ್ರೀ ಬಿ ಶಾಮರಂಯ ಶೆಟ್ಟಿಯವರು ಸಮಯೋಚಿತವಾಗಿ ಮಾತನಾಡಿದರು. ಅಧ್ಯಕ್ಷ ಶ್ರೀ ಟಿ ಎ ಎ ಪೈಗಳು ತಮ್ಮ ಭಾಷಣದಲ್ಲಿ ಉಳಿತಾಯದ ಸಂದೇಶವನ್ನು ಮನೆಮನೆಗೆ ಒಯ್ಯುವ ಪ್ರತಿಯೊಂದು ಕುಟುಂಬಕ್ಕೂ ಭದ್ರತೆ ಮತ್ತು ರಕ್ಷಣೆಯನ್ನೀಯುವುದು ರಾಷ್ಟ್ರದ ಹಿತ ಹಾಗು ಸಮೂಜ ಕಲ್ಯಾಣದ ದೃಷ್ಟಿಯಿಂದ ಇಂದು ಆತ್ಯಗತ್ಯವಾಗಿದೆ ಎಂದು ತಿಳಿಸಿದರು ಅಸಿಸ್ಟೆಂಟ್ ಡಿವಿಜನಲ್ ಮೆನೇಜರ್ ಶ್ರೀ ಎಲ್. ಎಫ್ ಸಿ ವಾಸ್ ಅವರು ಸಜಂಟರನ್ನು ಉದ್ದೇಶಿಸಿ ಅವರು ಸಮೂಜಕ್ಕೆ ಯೂವ ರೀತಿಯಲ್ಲಿ ಉಪಯುಕ್ತ ಸೇವೆ ನೀಡಬಹುದೆಂದು ವಿವರಿಸಿದರು. ಸಮರಂಥವು ಅಸಿಸ್ಟೆಂಟ್ ಬ್ರಾಂಚ್ ಮೆನೇಜರ್ ಶ್ರೀ ಸಿ ಎಸ್ ಕಾತ್ತೆ ತ್ತಾರರ ಆಭಾರ ಮನ್ನಣೆಯೊಂದಿಗೆ ಮುಕ್ತಾಯವಾಯಿತು.

ಕ್ಷಯರೋಗ ನಿರೋಧಕ ಅಂತಾರಾಷ್ಟ್ರೀಯ ಯೂನಿಯನಿನ ಈಸ್ಟರ್ನ್ ರೀಜನಲ್ ಕಮಿಟಿಯ ದ್ವೈವಾರ್ಷಿಕ ಮೂರನೇ ಸಭೆಯು ಕಳೆದ ತಿಂಗಳಲ್ಲಿ ಬ್ಯಾಂಗಕೋಕ್ (ಥೈಲೆಂಡ್)ನಲ್ಲಿ ಜರಗಿ, ಭಾರತದ ಕ್ಷಯರೋಗ ಸಮಿತಿಯ ಕಾರ್ಯದರ್ಶಿ ಶ್ರೀ ಬಿ ಎಂ ಕರಿಯಪ್ಪನವರು ಕಮಿಟಿಯ ಕಾರ್ಯದರ್ಶಿ—ಖಜಾಂಜಿಯಾಗಿ ಎರಡು ವರುಷಗಳ ಅವಧಿಗಳ ವರೆಗೆ ಮುನ್ನಡೆ ಯುವಂತೆ ಆಯ್ಕೆಮಾಡಲ್ಪಟ್ಟರು.

ಶ್ರೀ ಬಿ ಎಂ ಕರಿಯಪ್ಪನವರು ಬ್ಯಾಂಗಕೋಕ್‌ನಿಂದ ಹಿಂದಿರುಗುವಾಗ ಇತ್ತೀಚೆಗೆ ಸ್ಥಾಪಿತವಾದ ಬರ್ಮಾ ಕ್ಷಯರೋಗ ಸಮಿತಿಯ ಯೂನಿಯನಿನ ತಾತ್ಕಾಲಿಕ ಪರಿಶೀಲನೆಗಾಗಿ ರಂಗೂನಿನಲ್ಲಿ ಮುಕ್ತ ದಿಗೆಳನ್ನು ಕಳೆದರು ಅವರು ನವೆಂಬರ 26ರಂದು ಆ ಸಮಿತಿಯ ಕಾರ್ಯಕಾರಿ ಮಂಡಲದ ಸಭೆಯಲ್ಲಿಯೂ ತಾ 27ರಂದು ರಂಗೂನಿನ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಸಭೆಯಲ್ಲಿಯೂ ಭಾಷಣ ಮಾಡಿದರು ಅವರು ರಂಗೂನಿನ ರಾಮಕೃಷ್ಣ ಮಿಶನಿನ ಆಸ್ಪತ್ರೆಗೂ ಭೇಟಿಯಿತ್ತು ಅಲ್ಲಿ ಸಾಮೂಹಿಕ ಕಾರ್ಯಕರ್ತರನ್ನು ಉದ್ದೇಶಿಸಿ ಕ್ಷಯರೋಗ ನಿರೋಧಕ ಕಾರ್ಯದಲ್ಲಿ ಅಧಿಕಾರಿಗಳ ಕೆಲಸದ ಕುರಿತು ಮಾತನಾಡಿದರು. ತಾ 28ರಂದು ರಂಗೂನಿನ ರೋಟರಿ ಕ್ಲಬ್ಬಿನ ಆತಿಥ್ಯ ಭಾಷಣ ಗಾರಂಗಿಯೂ ಭಾಷಣವಿತ್ತರು.

ರಕ್ಷಣಾ ನಿಧಿಗೆ ಕೆನರಾ ಬೆಂಕಿನ ಕೊಡುಗೆ— ರಾಷ್ಟ್ರೀಯ ರಕ್ಷಣಾ ನಿಧಿಗೆ ದ ಕ ಜಿಲ್ಲೆಯಿಂದ ಕೆನರಾ ಬೆಂಕಿನ ದೇಣಿಗೆಯಾಗಿ ಒಂದು ಲಕ್ಷದ ಒಂದು ರೂಪಾಯಿಯನ್ನು ಇದೇ ತಾ 1ರಂದು ಬೆಂಗಳೂರಲ್ಲಿ ರಂಜ್ಯದ ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರಿಗೆ, ವಿಧಾನಸೌಧದ ಅವರ ಚೆಂಬರಿನಲ್ಲಿ, ಬೆಂಕಿನ ಅಧ್ಯಕ್ಷ ಶ್ರೀ ಕೆ ಪಿ ಪೈ ಪ್ರಭು ಅವರು ಒಪ್ಪಿಸಿದರು ಕೆನರಾ ಬೆಂಕಿನ ಗೋಲ್ಡನ್ ಜುಬಿಲಿ ಸ್ಪೆಷಲ್ ವೆಲ್‌ಫೇರ್ ಫಂಡಿನ ಅಧ್ಯಕ್ಷ ಶ್ರೀ ಚ ಉಮೇಶ ರಂಎರು ಸಹ ಶಿಬಂದಿಯವರ ವಂತಿಗೆ ರೂ 18,051–99 ಮತ್ತು ಬೆಂಕಿನ ಆ ಸ್ಪೆ ವಂತಿಗೆಯು ಎರಡು ಚೆಕ್ಕುಗಳನ್ನು ದ ಕ ಜಿಲ್ಲೆಯಿಂದ ಮುಖ್ಯ ಮಂತ್ರಿಗಳಿಗೆ ಒಟ್ಟಿಗೆ ಸಿದರು ಹೀಗಾಗಿ ಒಟ್ಟು ಕೊಡ ಗೆಯ ಮೊತ್ತವು ರೂ 1,66,103–98 ಆಗುತ್ತದೆ ಈ ಸಂದರ್ಭದಲ್ಲಿ ಆರೋಗ್ಯ ಮಂತ್ರಿ ಜಂ ಕೆ ನಾಗಪ್ಪಾಳ್ವ, ವಿಧಾನ ಸಭಾಧ್ಯಕ್ಷ ಶ್ರೀ ಬಿ. ವೈಕುಂಠ ಬಾಳಿಗಾ ಕೆನರಾ ಬೆಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎ ದಾಮೋದರ ಪೈ, ಡೈರೆಕ್ಟರ್ ಶ್ರೀ ಚಿನ್ನಪ್ಪ ಬಂಗಿ ದೇವದಾಸ ದ ಕ ಜಿಲ್ಲೆಯ ಡಿಪ್ಟಿ ಕಮಿಶನರ್ ಶ್ರೀ ಸಿ ಜೆ ಪದ್ಮನಾಭ ಮತ್ತು ದ ಕ ಜಿಲ್ಲೆಯ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರೂ ಹಾಜರಿದ್ದರು.

ಬೆಳ್ಳಣ್ಣಿನಲ್ಲಿ ರಕ್ಷಣಾನಿಧಿ ಪ್ರಚಾರ ಸಭೆ— ಕಳೆದ ತಾ 27ರಂದು ಬೆಳ್ಳಣ್ಣು ಬೋರ್ಡ್ ಹೈಸ್ಕೂಲಿನ ಆಟದ ಬಯಲಿನಲ್ಲಿ ಊರವರ, ಶಾಲಾ ಮಕ್ಕಳ ಮತ್ತು ಸರಕಾರೀ ಅಧಿಕಾರಿಗಳ ರಕ್ಷಣಾ ನಿಧಿ ಪ್ರಚಾರ ಸಭೆಯು, ತಾಲೂಕು ಬೋರ್ಡ್ ಸದಸ್ಯ ಡಾ| ಕೊಡಪಡ್ಕಲ್ ವೆಂಕಟರಂಯ್ಯರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರಂಭದಲ್ಲಿ ಕಾರ್ಕಳ ತಹಶೀಲ್ದಾರ್ ಶ್ರೀ ಲಿಂಗಪ್ಪಯ್ಯನವರು ಸ್ವಾಗತ ಭಾಷಣ ಮಾಡಿ ಜನತೆಯು ಬೆಂಬಲ ವನ್ನು ಕೋರಿದ ಬಳಿಕ ಸಭಿಕರ ಪರವಾಗಿ ಶ್ರೀಗಳಿಂದ ಬಿ ಎ ಸಾಮಳ್ಕ, ಕಾಳು ಶೆಟ್ಟಿ ಮತ್ತು ಡಾ| ವಿಠೋಧ ರಾವ್ ಇವರು ಭಾಷಣ ಮಾಡಿದರು.

ಡಾ| ಕೊಡಪ್ಪಡ್ಕಲ್ ವೆಂಕಟರಂಯ್ಯರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಚೀನಾದ ದುರಾಕ್ರಮಣದ ಹಿನ್ನೆಲೆಯನ್ನು ವಿವರಿಸಿ, ದೇಶದ ಸಮಗ್ರತೆಯನ್ನೂ ಏಕ್ಯತೆಯನ್ನೂ ಕಾಪಾಡಲೂ ಪ್ರತಿಯೊಬ್ಬನೂ ತನು, ಮನ ಧನಗಳಿಂದ ನೆರವೀಯಬೇಕೆಂದು ಕೇಳಿಕೊಂಡರಲ್ಲದೆ— ತನ್ನ ಕೈ ಬೆರಳಲ್ಲಿದ್ದ ಚಿನ್ನದ ಉಂಗುರವನ್ನು ರಕ್ಷಣಾನಿಧಿಗೆ ಅಪ್ಪೇ ಆಸಿಸಿದರು ಅಲ್ಲದೆ ತನ್ನೆ ರಕ್ತವನ್ನೂ ದಾನವಾಗಿ ಕೊಡುವುದಾಗಿಯೂ ತನ್ನ ಸೈನಿಕ ಕುಟುಂಬದವರಿಗೆ ಉಚಿತ ಚಿಕಿತ್ಸೆ ನೀಡುವುದಾಗಿಯೂ ಸಾರಿದರು ಇದರಿಂದ ಉತ್ತೇಜಿತರಾದ ನೆರೆದ ಸಭಿಕರಲ್ಲಿ ಹಲವರು ನಿಧಿಗೆ ಕಾಣಿಕೆ ನೀಡಲು ಮುಂದಾದರು ಸಭೆಯಲ್ಲಿ ನಗದಿಯಾಗಿ ಸುಮಾರು ರೂ 500—00 ಮತ್ತು ಚಿನ್ನ ಸಂಗ್ರಹಿಸಲಾಯಿತು ಹಲವರು ವಾಗ್ದಾನ ಮಾಡಿದರು ಸಭಾಂತ್ಯದಲ್ಲಿ ಬಿ ನರಸಿಂಹ ಶೆಟ್ಟಿಯವರಿಂದ ಧನ್ಯವಾದ ಸಮರ್ಪಣೆಯೊಂದಿಗೆ ಮುಕ್ತಾಯವಾಯಿತು.

ರಾಷ್ಟ್ರೀಯ ರಕ್ಷಣಾನಿಧಿಗೆ ಕಾಣಿಕೆ - ರಾಷ್ಟ್ರೀಯ ರಕ್ಷಣಾನಿಧಿಗೆ ಶ್ರೀ ಕುಂಜಾರು ಗಿರಿಜಾ ದಾ ಎ ಶಾಲೆಯು ವಿದ್ಯಾರ್ಥಿ ವಿದ್ಯಾರ್ಥಿನಿಯರು ಆಟ ಉತ್ಸುಪದಿಂದ ಸಂಗ್ರಹಿಸಿದ ರೂ 116—31 ಮತ್ತು ಅಧ್ಯಾಪಕ ವೃಂದದ ಒಂದು ದಿನದ ಸಂಬಳ ಮತ್ತು ಮೆನೆಜರರ ವಂತಿಗೆ ಕೂಡಾ ರೂ 53—69 ಒಟ್ಟು ರೂ. 170—00 ನ್ನು ತಾ 4ರಂದು ಮನಿಯೊರ್ಡರ್ ಮೂಲಕ ಕಳುಹಿಸಲಾಯಿತು.

ರಕ್ಷಣಾ ನಿಧಿ ಪ್ರಚಾರ ಸಭೆ— ಉಡುಪಿ ರಾಷ್ಟ್ರೀಯ ರಕ್ಷಣಾ ಸಮಿತಿಯ ನೇತೃತ್ವದಲ್ಲಿ ತಾ 9ನೇ ಸೋಮೆ ರಥದೀಧಿಯಲ್ಲಿ ಪ್ರಚಾರ ಸಭೆಯು ಜರಗಿತು ಶ್ರೀ ಎ ಜೆ ಆಳ್ವೆಯ ಮತ್ತ ಪ್ರಾಸ್ತಾವಿಕ ಭಾಷಣ ವಾಡಿದ ಮೇಲೆ ಶ್ರೀ ಪೆಜಾವರ ವಠೆ ಶ್ರೀ ಪಾದಂಗಳವರೂ ಸಮಿತಿಯ ಅಧ್ಯಕ್ಷ ಶ್ರೀ ಟಿ ಎ. ಪೈಯನರೂ ರಂಸ್ಟ್ರಕ್ಕೆ ತೆದಿರುವ ಗಂಡಾಂತರ ಪರಿಸ್ಥಿತಿ, ಜನತಾ ಕರ್ತವ್ಯ, ನಿಧಿಗೆ ಮಾಡಬೇಕಾದ ತ್ಯಾಗ ಪೂರ್ಣ ಕೊಡುಗೆ ಮೊದಲಾದ ಕುರಿತು ಭಾಷಣ ಮಾಡಿದರು ಸಭೆಯು ಪ್ರಶಾಂತವಾಗಿ ಚಿನ್ನ ಮತ್ತು ನಗದು ಹಣ ಸಂಗ್ರಹವಾಯಿತು.

ತ್ವರಿತದ ಮಹಾ ಸಭೆ— ಉಡುಪಿ ತಾಲೂಕು ಭೂಹ್ಹಾಲಿಕರ ಮತ್ತು ಕೃಷಿಕರ ಸಂಘದ ಕಾರ್ಯಕಾರಿ ಸಮಿತಿಯ ತ್ವರಿತದ ಮಹಾ ಸಭೆಯು ಇದೇ ತಾ 9ರಂದು ಅಧ್ಯಕ್ಷ ಶ್ರೀ ಬಿ ತೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಭೂ ತೀರ್ವೆಯ ಮೇಲೆ ಶೇಕಡಾ 100ಪ್ಪು ಸರ್ ಚಾರ್ಜ್ ಹೊರಿಸಿ ಜಾರಿಗೆನ್ನುವ ಬಗ್ಗೆಲೆದ್ದಿಸಿದಂತೆ ರಕ್ಷಣೆ ಕಾನೂನನ್ನು ಬದಲಾಯಿಸಬೇಕೆನ್ನುವ ತಂತಿ ಮನವಿ ಕಳುಹಿಸಲಾಯಿತು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಪ್ ಕೋರ್ಟಿನಲ್ಲಿ

O S 552/1962

ಮಂಜುನಂತ ಕಮ್ತಿ — ವಾದಿ

ಅಪೊಲಿ ಡಿ ಸೋಜ ಸಾ — ಪ್ರತಿವಾದಿರು

2. ಶ್ರೀ ಇಸ್ತಾಪು ಡಿ ಸೋಜ, ಪಕ್ಕು ಡಿ. ಸೋಜರ ಮಗ್ಗ, ಕಾರ್ಕಳ ತಾಲ್ಲೂಕು ಮುಂಡ್ಕೂರ ಗ್ರಾಮದ ಅಲಂಗಾರ್ ಎಂಬಲ್ಲಿ ರುವವ

2ನೇ ಪ್ರತಿವಾದಿ ಆನ ನಮಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿ ಎಳಗೆ ನೀವು ಕೂಡಾ ಮೂಲಗೆಂಡಿ ಹಕ್ಕಿನಿಂದ ಅನುಭವಿಸಿ ಬರುವ ಆಸ್ತಿ ಬಾಬ್ತು ಕಳದ ತಾ 31—3—62ನೇ ವ್ಯಾದೆಗೆ ವಾದಿಗೆ ಬರತಕ್ಕ ಮೂಲಗೇಣಿ ಗೇಣಿ ಬಡ್ಡಿ ಕೂಡಾ ರೂಪ್ಯಾ 257—64ಕ್ಕೆ ವಾದಿಯು ದಾಕ್ಲು ಮಾಡಿದ ಸದ್ರಿ ದಾವೆಯು ತಾ 22—12—62ಕ್ಕೆ ನಿಮಗೆ ಆಬೈರ ನೋಟೀಸಿಗೆ ಇಟ್ಟಿದೆ ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟ ಹುಕುಂ ಪ್ರಕಾರ ತಿಳಿಸಿಯದೆ

K. V. Kamath,
Advocate fo. Plaintiff

Karkala, 10—12 —62

ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ.

ರಿಜಿಸ್ಟರ್ಡ್ ಆಫೀಸು ವಿಜಯಾ ಬ್ಯಾಂಕ್ ಬಿಲ್ಡಿಂಗ್, ಲೈಬ್ರೆಹೌಸ್ ಹಿಲ್‌ರೋಡು, ಮಂಗಳೂರು 3 ದ ಕ

— ಏಲಂ ನೋಟೀಸು —

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡೆದ ಬಡ್ಡಿ ಕ್ಷಪ್ತ ಕಾಲದಲ್ಲಿ ಮರುಪಾವತಿ ಮಾಡಿಸಿರೆ ತಪ್ಪಿರುವುದರಿಂದಲೂ, ಆ ಬಗ್ಗೆ ಸದ್ರಿಯವರಿಗೆ ಬೇಂಕಿನಿಂದ ಕ್ರಮ ಪ್ರಕಾರವಾದ ರಿಜಿಸ್ಟ್ರಿ ನೋಟೀಸುಗಳನ್ನು ಕೊಟ್ಟಿದ್ದರೂ ಸದ್ರಿ ಲೇವಾಣಿಗಳ ಬಾಬ್ತು ಅಸ್ಸು ಬಡ್ಡಿ ಸೊಬಲಗನು ಸಲ್ಯಾಸದೆ ಬಾಕಿ ವಾಡಿಕೊಂಡಿರುವುದರಿಂದಲೂ, ಸದ್ರಿಯವರು ಈವಿಟ್ಟ ನಗದೀಕರು ತೀರ್ಕಾ 12—12—1962ನೆ ಬುಧವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ ನ ಬೇಂಕಿಗೆ ಒಟ್ಟಕ್ಕಂದ ಇತರ ಯಾವುದೇ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬೇಕಿನ ವತಿಗೆಯಲ್ಲಿ ಬಹಿರಂಗವಾಗಿ ಏಲಂ ಪೊಡಲಾದೀತು ಲಿಲಂನಲ್ಲಿ ಹುಟ್ಟ ಬಂದ ಖರ್ಚು ಸಾಲದ ವೆಬಲಿಗೆ ಕದಿಮೆಯಾದಲ್ಲಿ ಸಂಬಂಧಪಟ್ಟವರ ದೇಹ ಜವಾಬ್ದಾರಿಯಿಂದ ಬೇಂಕಿಗೆ ಒಪ ಏಕೆಂಜನ್ನು ನಸೂಲು ಮಾಡಲಂದೀತು ಎಂಬುವನ್ನು ಈ ಮೂಲಕ ತಿಳಿಸಲಾಗಿದೆ

ಸಾಲದ ನಂಬ್ರ	ಹೆಸರು ಮತ್ತು ವಿಳಿವಿದ	ತಾ 30.9 62ಕ್ಕೆ ಬರತಕ್ಕ ಮೊಬಲಗು
94/60	ಮಹಾ ಬಲ ಸಟ್ಟಿ ಚಿಕ್ಕಯ್ಯ ಸಟ್ಟಿ ಅಳಿಯ, ಸಲ್ಕಾಡು ಮೂಡ್ಡ ಮನೆ, ಕೋಸ್ಟ್ ಕಂಡ್ಲೂರು	ರೂ ನ 29=37
171/60	ಶಿವ, ಚಿಕ್ಕನ ಅಳಿಯ, ಯಜ್ಞಬಿಮನೆ ನಾರ್ಕಳ್ಳಿ ಹರ್ಕೂರು ಗ್ರಾಮ, ಪೋಸ್ಟ್ ಅಲೂರು	53=52
248/61	ಎಸ್. ರಾಮಕೃಷ್ಣ ಭಟ್ಟ, ಕುಪ್ಪಯ್ಯ ಭಟ್ಟ ಮಗ, ಸೌಕೂರು, ಪೋಸ್ಟ್ ಸಲ್ಕಾಡಿ	31=67
308/61	ರಘುರಾಮ ಸಟ್ಟಿ ಗೋವಿಂದ ಸಟ್ಟಿ ಅಳಿಯ ಬೇಲ್ಕೂರು ಪೈಕ್ಕಾಮನೆ, ಕಟ್ಟಿ ಬೆಲ್ಕೂರ್ ಗ್ರಾಮ, ಪೋಸ್ಟ್ ಬೇಲ್ಕೂರು	81=82
353/61	ವಿಟ್ಟಲ ಸಟ್ಟಿ, ಮಂಜಯ ಸಟ್ಟಿ ಅಳಿಯ, ಹುಲಂದಿಮನೆ, ಕೆರಂದಿ ಗ್ರಾಮ, ಪೋಸ್ಟ್ ಕೊಲ್ಲೂರು	59=92
419/61	ವಿಟ್ಟಲ ಸಟ್ಟಿ, ಶಿವರಾಮ ಸಟ್ಟಿ ಮಗ್ಗ, ಕೆರಾಡಿ ಹುಲಂದಿ ಮನೆ, ಕೆರಾಡಿ ಗ್ರಾಮ ಪೋಸ್ಟ್ ಕೊಲ್ಲೂರು	70=67
425/61	ಆನಗಳ್ಳಿ ವೆಂಕಪ್ಪ ಹೆಬ್ಬಾರ, ನಾರಾಯಣ ಹೆಬ್ಬಾರರ ಮಗ, ಆನಗಳ್ಳಿಗ್ರಾಮ, ಪೋಸ್ಟ್ ಆನಗಳ್ಳಿ	159=07
533/61	ಕೃಷ್ಣ, ಗೋವಿಂದನ ಕುಗ ಮೂಡಾಂಬಿನ ಮನೆ, ಹಕ್ಲಾಡಿ ಗ್ರಾಮ, ಪೋಸ್ಟ್ ಹಕ್ಲಾಡಿ	53/02
585/61	ನಾರಾಯಣ ಹೆಬ್ಬಾರ, ವೆಂಕಪ್ಪ ಹೆಬ್ಬಾರರ ಮಗ, ಆನಗಳ್ಳಿ ಗ್ರಾಮ, ಪೋಸ್ಟ್ ಆನಗಳ್ಳಿ	135=37
617/61	ವೈ ಮಂಜಯ್ಯ ಸೆಟ್ಟಿ, ದಾರಪ್ಪ ಸೆಟ್ಟಿ ಅಳಿಯ, ಯಿರಿಕೆಟೆ ಜೊಡ್ಡಮನೆ, ಪೋಸ್ಟ್ ನಾವೆಂಡ	1166=72
651/61	ಎನ್. ಆತ್ಮಪ್ಪ ಸೆಟ್ಟಿ ಅಂತೆಪ್ಪ ಸೆಟ್ಟಿ ಮಗ್ಗ, ಹೇರಾರು ಗ್ರಾಮ ಪೋಸ್ಟ್ ಬೈಂದೂರು ವ. ಕ	32=17
666/61	ಭಜಂಗ ಸೆಟ್ಟಿ, ಮಹಾಬಲ ಸೆಟ್ಟಿ ಮಗ, ಮೂಡ್ಬೆಲು, ಕಳ್ಕಂಜೆ ಗ್ರಾಮ, ಪೋಸ್ಟ್ ಕಳ್ಕಂಜೆ	40=62
672/61	ಕೆ ಮಂಜಯ್ಯ ಸೆಟ್ಟಿ, ಟಿ ಪೋನಪ್ಪ ಸೆಟ್ಟಿ ಮಗ ಕೆಂತಿ, ಅವಸೆಗ್ರಾಮ, ಪೋಸ್ಟ್ ಹಿಲಿಯೂಡ	93=97
690/61	ಜಾಡ್‌ಕಟ್ಟು ಶಿವರಾಮ ಸೆಟ್ಟಿ, ಪೂಡಯ ಸೆಟ್ಟಿ ಅಳಿಯ, ಜಿಂಜ್‌ಕಟ್ಟು ಕಳ್ಕಂಜೆ ಗ್ರಾಮ, ಪೋಸ್ಟ್ ನೆರ್ಕಟ್ಟೆ.	299=62

Office of
THE VIJAYA BANK LTD,
COONDAPUR.
Date 8—12—1962

ಕೆ. ಭಾಸ್ಕರ ಹೆಗ್ಡೆ
Agent

ದೇಶದ ರಕ್ಷಣೆಗಾಗಿ—

ವೀರ ಮಹಿಳೆಯರೇ ಮುಂದೆ ಬನ್ನಿ

ಲೇಖಕರು: ಪ್ರಸಿಲ್ಲಾ ಕಲ್ಲಾಣ

"ದೇಶಕ್ಕೆ ಬಂದಿರುವ ಈ ಸಂಕಟ ಸಮಯದಲ್ಲಿ ಭಾರತದ ಮಹಿಳೆಯರು ಅಭೂತಪೂರ್ವ ಉತ್ಸಾಹ ಪ್ರದರ್ಶಿಸಿರುವುದು ನನಗೆ ತುಂಬಾ ಹೆಮ್ಮೆಯನ್ನುಂಟು ಮಾಡಿದೆ. ಈ ಉತ್ಸಾಹವು ತಾತ್ಕಾಲಿಕ ವಾದುದಲ್ಲವೆಂದು ನಾನು ಆಶಿಸುತ್ತೇನೆ ಮುಂಬರಲಿರುವ ಕಠಿಣತಮ ದಿನಗಳಲ್ಲಿ ಸಹ ಈ ಉತ್ಸಾಹವು ಅಪರಿಮಿತಗೊಳ್ಳುವುದೆಂದೂ ನಾನು ಆಶಿಸುತ್ತೇನೆ. ಮಹಿಳೆಯರ ಈ ಉತ್ಸಾಹವು ಹಿಂದೆ ನಡೆಸಿದ ಎಲ್ಲ ಪ್ರಯತ್ನಗಳಿಗಿಂತಲೂ ಅತಿ ಹೆಚ್ಚಾಗಿ ನಮ್ಮೆಲ್ಲಿ ಏಕ್ಯ ಮತವನ್ನು ಸಾಧಿಸಿಕೊಟ್ಟಿದೆ".

ಕೇಂದ್ರ ನಾಗರಿಕ ಸಮಿತಿಯ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರು ಈಚೆಗೆ ದೇಶದಾದ್ಯಂತ ಮಹಿಳೆಯರಿಗಿತ್ತ ವಿಶೇಷ ಸಂದೇಶವೊಂದರಲ್ಲಿ ಹೇಳಿದ ಮಾತುಗಳಿವು.

ದೇಶದ ರಕ್ಷಣೆಗಾಗಿ ತಮ್ಮ ಸೇವೆ ನಿಲ್ಲಿಸಲು ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಮುಂದೆ ಬರುತ್ತಿರುವುದು ಆಶ್ಚರ್ಯಕರ ಸುದ್ದಿಯೇನಲ್ಲ. ಶತಮಾನಗಳಿಂದಲೂ ಭಾರತದ ಮಹಿಳೆಯರು ದೇಶಕ್ಕೆ ಸಲ್ಲಿಸಿರುವ ತ್ಯಾಗ, ದೇಶ ಭಕ್ತಿ ಅತ್ಯಪೂರ್ವ ರೀತಿಯದಾಗಿದೆ.

ಇತಿಹಾಸದ ವೀರ ರಮಣಿಯರು

ತರುಣಿಯರು ಬಂದೂಕು ಪ್ರಯೋಗವನ್ನು ಕಲಿತುಕೊಳ್ಳಲು ಅಪೇಕ್ಷಿಸಿರುವುದು, ರಣರಂಗಕ್ಕೆ ಹೋಗಲು ತಯಾರಾಗಿರುವುದಾಗಿ ತಿಳಿಸಿರುವುದು, ವಿ.ಲಿಟರಿ ಆಸ್ಪತ್ರೆಗಳಲ್ಲಿ ಪರಿಚಾರಿಕೆಯಂತಾಗಿ ಸೇವೆ ಸಲ್ಲಿಸಲು ಮುಂದೆ ಬಂದಿರುವುದು ಕೆಲವರಿಗೆ ಆನಿರೀಕ್ಷಿತವೆಂದುತೋರಬಹುದು. ಆದರೆ ಭಾರತದ ಮಹಿಳೆಯರಿಗೆ ಇದೊಂದೂ ಹೊಸದಲ್ಲ.

ವೀರ ರಮಣಿಯರು ರಣರಂಗಗಳಲ್ಲಿ ಪ್ರದರ್ಶಿಸಿದ ಸಾಹಸಕಾರ್ಯಗಳು ಭಾರತದ ಇತಿಹಾಸದ ಹುಂಬ ತುಂಬಿ ತುಳುಕುತ್ತಿವೆ. ಇದಕ್ಕೆ ನಿದರ್ಶನಬೇಕೆ? ಇದೋ ಇಲ್ಲಿದೆ ನಿದರ್ಶನ.

ಮರುಷನ ವೇಷಾಕಾರನ್ನು ಧರಿಸಿ ಅಹಮದ್ ನಗರದ ಕೋಟೆಯ ಮೇಲೆ ನಿಂತು ಅಕಬರನ ಸೈನ್ಯದೊಡನೆ ಹೋರಾಡುವಂತಿ ನಗರ ರಕ್ಷಕರಿಗೆ ಹುರಿದುಂಬಿಸಿದ ವೀರ ರಮಣಿ, ಚಾಂದ ಬೀಬಿ, 1857ರ ಸ್ವಾತಂತ್ರ್ಯ ಸಮರದಲ್ಲಿ ಬ್ರಿಟಿಷರೊಡನೆ ಹೋರಾಡಿದ ವೀರ ರಮಣಿ ಝಾನ್ಸಿಯ ಲಕ್ಷ್ಮೀಬಾಯಿ ಇವರ ನಿದರ್ಶನ ಸಾಲದೆ?

ಸ್ವಾತಂತ್ರ್ಯ ಚಳವಳಿಯ ಉದ್ದಕ್ಕೂ ಮಹಿಳೆಯರು ದಿಟ್ಟತನದಿಂದ ಹೋರಾಡಿದ್ದಾರೆ. ಗಾಂಧೀಜಿಯವರಿಂದ ಸ್ಫೂರ್ತಿ ಪಡೆದ ಮಹಿಳೆಯರು ಹೆಸರನ್ನು ಪಡೆಯಾಗಿ ಕಾರಾಗೃಹಗಳಿಗೆ ತೆರಳಿದ್ದಾರೆ, ಅಪಾರ ಕಷ್ಟ ನಷ್ಟಗಳನ್ನು ಸಂತೋಷವಾಗಿಯೇ ಅನುಭವಿಸಿದ್ದಾರೆ.

ಭಾರತೀಯ ಮಹಿಳೆಯರ ಶೀಲ ಸ್ವಭಾವ ಸಾಂಪ್ರದಾಯಿಕವಾಗಿ ನಾರೀತ್ವ ಸಿಸ್ಥೈ ವಸ್ತು ಪರಾಕ್ರಮ ಒಂದು ವಿಚಿತ್ರ ಸಂಯೋಗವೇ ಆಗಿದೆ. ಮರಣ ಅಥವಾ ಆಸನೂನಗಳಲ್ಲಿ ಒಂದನ್ನು ಆರಿಸುವಾಗ ಯಾವುದೇ ಒಂದು ಸನ್ನಿವೇಶದಲ್ಲಿ ಭಾರತೀಯ ಮಹಿಳೆಯರು ಮರಣವನ್ನೇ ಸ್ವಾಗತಿಸುವುದು ಸಹಜ. ಭಾರತದ ಪರಂಪರೆಯಲ್ಲಿ ಸ್ತ್ರೀ ಕೋಮಲಾಂಗಿಯಲ್ಲ. ಸ್ತ್ರೀಯು ಜೀವನದಾಯಿಯೂಗಿರುವುದಷ್ಟೇ ಅಲ್ಲ ಶಕ್ತಿಯ ಅವತಾರವೂ ಹೌದು.

ನೆಹರೂ ಅವರ ಪ್ರಶಂಸೆ

ಭಾರತದ ಮಹಿಳೆಯರನ್ನು ಕುರಿತು ಪ್ರಕಟವಾದ ಪುಸ್ತಕವೊಂದಕ್ಕೆ ಶ್ರೀ ಜವಹರ್‌ಲಾಲ್ ನೆಹರೂ ಅವರು ಮುನ್ನುಡಿಯೊಂದನ್ನು ಬರೆದಿದ್ದಾರೆ. ಮುನ್ನುಡಿಯಲ್ಲಿ ಈ ರೀತಿ ಬರೆದಿದ್ದಾರೆ:— "ಭಾರತದ ಮಹಿಳೆಯರ ಬಗ್ಗೆ ನಾನು ಪಕ್ಷಪಾತಿ. ನಾನು ಈ ಪುಣ್ಯ ಭೂಮಿಯನ್ನು ಸುತ್ತಿದಷ್ಟು ನಮ್ಮ ಸ್ತ್ರೀಯರ ಬಗ್ಗೆ ನನಗೊಂದು ರೀತಿಯ ಹೆಮ್ಮೆಯೂಗುತ್ತಿದೆ. ನಮ್ಮ ಸಮಾಜ ಜೀವನದಲ್ಲಿ ಮತ್ತು ನಮ್ಮ ಇತಿಹಾಸದಲ್ಲಿ ಭಾರತದ ಮಹಿಳೆಯರು ಮಹತ್ವಪೂರ್ಣ ಪಾತ್ರ ವಹಿಸಿದ್ದಾರೆ. ರಾಷ್ಟ್ರೀಯ ಜೀವನದ ನಾನಾ ಕ್ಷೇತ್ರಗಳಲ್ಲಿ ಮಹಿಳೆಯರು ಮಹತ್ವದ ಪಾತ್ರ ವಹಿಸಿದ್ದಾರೆ. ಅವರಲ್ಲಿ ವಿದೂಷಿಯರಿದ್ದಾರೆ, ಯುದ್ಧ ರಂಗಗಳಲ್ಲಿ ಶತ್ರುಗಳೊಂದಿಗೆ ಹೋರಾಡಿದ ವೀರ ರಮಣಿಯರಿದ್ದಾರೆ. ಮಹಿಳೆಯರು ಮನೆಗಳಲ್ಲಿ, ಹಳ್ಳಿಗಳಲ್ಲಿ ಆಥವಾ ದೊಡ್ಡ ದೊಡ್ಡ ಸಮಾಜಗಳಲ್ಲಿ ಸ್ವಂತ ಇಚ್ಛೆಯಿಂದ ನಿರ್ವಹಿಸಿರುವ ಕಾರ್ಯಅಗಾಧವಾದದ್ದು. ಈ ಕಾರ್ಯ ರಾಷ್ಟ್ರದ ಜೀವನಾಧಾರವಾಗಿದೆ."

ಈ ರೀತಿಯೂಗಿ ಭಾರತದ ಗೌರವ ಪೂರ್ಣ ಇತಿಹಾಸದಲ್ಲಿ ಇಂದು ಸುವರ್ಣ ವೃತ್ತಿ ಕಂಡು ಬರುತ್ತಿದೆ. ಇಂದು ಮಹಿಳೆಯರು ಅಗ್ರ ಪಂಕ್ತಿಯಲ್ಲಿದ್ದಾ ಎನ್. ಸಿ. ಸಿ. ತರಬೇತಿಗಾಗಿ ಮುಂದೆ ಬರುತ್ತಿರುವರು. ರಣರಂಗದಲ್ಲಿ ಸೇನೆ ಸಲ್ಲಿಸಲು ಸಾಧ್ಯವಿಲ್ಲದಿರುವವರೂ ಸಹ ಮಹತ್ವ ಪೂರ್ಣ ಕಾರ್ಯವೊಂದನ್ನು ನಿರ್ವಹಿಸಬೇಕಾಗಿದೆ. ಅಂತಹ ಮಹಿಳೆಯರು ಶಸ್ತ್ರಾಸ್ತ್ರಗಳಿಗೆ ಬದಲಾಗಿ ಆಭರಣಗಳನ್ನೂ ಯೋಧರಿಗಾಗಿ ರಕ್ತವನ್ನೂ ನಾಗರಿಕ ರಕ್ಷಣಾ ಕಾರ್ಯಕ್ರಮಗಳನ್ನು ವ್ಯವಸ್ಥೆ ನೋಡುವುದಕ್ಕಾಗಿ ತಮ್ಮ ಸೇವೆಯನ್ನೂ ನೀಡಬಹುದಾಗಿದೆ. ಪತ್ನಿಯರು ಮತ್ತು ಮಾತೆಯರಾಗಿ ಅವರುಗಳು ತಮ್ಮ ಪತಿಯರನ್ನು ರಣರಂಗಕ್ಕೆ ಕಳುಹಿಸಲೇಕು. ಏಕೆಂದರೆ ದೇಶದ ಸಮಗ್ರತೆಯ ರಕ್ಷಣೆಗಿಂತ ಪುಣ್ಯ ಕೆಲಸ ಮತ್ತೊಂದಿಲ್ಲ.

(ಜನೇ ಮಟದಿಂದ)

ತಿಳಿಯದೇ ಹೋದದ್ದು ಮುಖ್ಯವಾಗಿ ಮೆನನ್ನರ ತಪ್ಪು. ಮಂತ್ರಿ ಮಂಡಲವೂ ಇದರಲ್ಲಿ ಸ್ವಲ್ಪ ಮಟ್ಟಿನ ಭಾರ ಹೊರಲೇ ಬೇಕೆನ್ನಬಹುದು. ಮೆನನ್ನರ ತಪ್ಪು, ಅದು, ಇದು, ಎನ್ನುವುದಕ್ಕಿಂತ ವಿನೋಬಾ ಭಾವೆಯವರಂತೆ ಈ ಸಂದಿಗ್ಧ ಸ್ಥಿತಿಯಲ್ಲಿ ಜನರಿಗೆ ಮೆನನ್ನರ ವೇಲೆ ನಂಬುಗೆ ಕಡಿಮೆ ಯೂದುದೆ ಮುಖ್ಯ ಕಾರಣ ಅದುದರಿಂದ ಅವರು ಅಧಿಕಾರ ತ್ಯಾಗ ಮಾಡಿರುವುದು ದೇಶದ ದೃಷ್ಟಿಯಿಂದ ಹಿತಕರ ಕೃಷ್ಣ ಮೆನನ್ನರ ತಿಳುವಳಿಕೆಯನ್ನೂಬುದ್ಧಿವಂತಿಕೆಯನ್ನೂ ಸರಕಾರದಲ್ಲಿ ಅಲ್ಲವಾದರೂ ಬೇರೆಯೂವು ದಾದರೊಂದು ವಿಭಾಗದಲ್ಲಿ ಉಪಯೋಗಿಸಿಕೊಳ್ಳ ಬೇಕೆಂದು ನೆಹರೂರವರ ಅಭಿಪ್ರಾಯ. ಇದು ಎಲ್ಲರೂ ಮೆಚ್ಚುವಂತಹ ಮಾತು. —ಶ್ರೀ ವಿ.ವಿ. ಶೆಟ್ಟಿ.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು.

ರಿಜಿಸ್ಟರ್ಡ್ ಆಫೀಸು: ವಿಜಯಾ ಬ್ಯಾಂಕ್ ಬಿಲ್ಡಿಂಗ್, ಲೈಟ್‌ಹೌಸ್ ಹಿಲ್‌ರೋಡು, ಮಂಗಳೂರು-3 ದ. ಕ.

—: ಏಲಂ ನೋಟೀಸು :—

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲಗಳನ್ನು ಕ್ಲುಪ್ತ ಕಾಲದಲ್ಲಿ ಮರುಪಾವತಿ ಮಾಡುವರೇ ತಪ್ಪಿರುವುದರಿಂದಲೂ, ಆ ಬಗ್ಗೆ ಸದ್ರಿಯವರಿಗೆ ಬೇಂಕಿನಿಂದ ಕ್ರಮ ಪ್ರಕಾರವಾದ ರಿಜಿಸ್ಟ್ರಿ ನೋಟೀಸುಗಳನ್ನು ಕೊಟ್ಟಿದ್ದರೂ ಸದ್ರಿ ಲೋನುಗಳ ಬಾಬ್ತು ಅಸ್ಸಲು ಬಡ್ಡಿ ಮೊಬಲಗನ್ನು ಸಲ್ಯಾಸದೆ ಬಾಕಿ ನೂಡಿಕೊಂಡಿರುವುದರಿಂದಲೂ, ಆ ಪೈಕಿ ಕೆಲವು ರಿಜಿಸ್ಟ್ರಿ ನೋಟೀಸುಗಳು ಅವುಗಳ ವಿಳಾಸದಾರರು ಹಾಲಿ ತಮ್ಮ ವಾಸಸ್ಥಾನದಲ್ಲಿ ಇಲ್ಲವೆಂಬ ಕಾರಣದಿಂದ ಜಾರಿಬೂಗದೆ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟ ನಗಗಳನ್ನು ತಾರೀಕು 22—12—1962ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಸರಿಯೂಗಿ ವ ಬೇಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬೇಂಕಿನ ವತಿಯಿಂದ ಬಹಿರಂಗವಾಗಿ ಏಲಂ ನೂಡಲಾದೀತು ಎಂಬುದನ್ನು ಈ ಮೂಲಕ ತಿಳಿಸೂಣಾಗುತ್ತದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 30-9-62ರ ವರೆಗೆ ಅಸ್ಸಲು ಬಡ್ಡಿ ಮೊಬಲಗು
327/60	ಜಿ. ಎಮ್. ಇಸ್ಮಾಯಿಲ್, ಮಹಮ್ಮದ್ ಆಯೂ ಸಾಹೇಬರ ಮಗ, ಮಡಿಕಲ್, ಉಪ್ಪುಂದ ಗ್ರಾಮ ಪೋಸ್ಟ್‌ಉಪ್ಪುಂದ	59=46
427/60	ಸುಬ್ಬ ಪೂಜಾರಿ, ಮುತ್ತ ಪೂಜಾರಿಯ ಅಳಿಯ, ಕಾಸಿನಮನೆ, ಉಳ್ಳೂರು ಗ್ರಾಮ ಪೋಸ್ಟ್ ಕಿರಿಮಂಜೇಶ್ವರ	102=82
509/60	ಮಂಜ, ನಾಗ ಮೂಗ್ಯಯ ಮಗ, ಕೊಲ್ಲೂರು ಗ್ರಾಮ, ಪೋಸ್ಟ್ ಕೊಲ್ಲೂರು	56=60
567/60	ನಾವುಂದ ಗಣಪ ಬಿಲ್ಲವ, ಗೋಪಿ ಗೋವಿಂದನ ಅಳಿಯ, ನಾವುಂದ ಗ್ರಾಮ, ಪೋಸ್ಟ್ ನಾವುಂದ	54=37
651/60	ದುರ್ಗ ಬಿಲ್ಲವ, ಮಾಚ ಬಿಲ್ಲವನ ಅಳಿಯ, ಬೆಳಗಲ್‌ಳಟ್ಟಿ, ಬೈಂದೂರು ಗ್ರಾಮ, ಪೋಸ್ಟ್ ಮುಯ್ಯಾಡಿ	18=26
758/60	ಕೃಷ್ಣಪ್ಪ ಶೆಟ್ಟಿ, ವೀರಣ್ಣ ಶೆಟ್ರ ಮಗ, ಜೆಟ್ಟಿಶೆಟ್ರ ಮನೆ, ಶೀರೂರು ಗ್ರಾಮ, ಪೋಸ್ಟ್ ಶೀರೂರು	39=71
765/60	ರಾಮ ಕಾರಂತ, ವೆಂಕಟ್ರಮಣ ಕಾರಂತರ ಮಗ, ಗೋಳಿಹೊಳೆ ಗ್ರಾಮ, ಪೋಸ್ಟ್ ಗೋಳಿಹೊಳೆ	15=66
842/60	ಮಂಜಯ್ಯ, ಸೋಮನ ಮಗ, ಬಾದ್ರಿಮನೆ, ಯಡ್ತರೆ ಗ್ರಾಮ, ಪೋಸ್ಟ್ ಬೈಂದೂರು	26=00
846/60	ಸಿ. ಪಿರಿಯಣ್ಣ ಶೆಟ್ಟಿ, ಲೇಂಡ್‌ಲೋರ್ಡ್, ಬೀಯೂರು, ಪೋಸ್ಟ್ ಮಯ್ಯಾಡಿ	209=95
42/61	ವೀರಯ್ಯ ಪೊಗೇರ, ಮಲ್ಲನ ಮಗ, ಕಳಿಹಿತ್ಲು ಪೋಸ್ಟ್ ಶೀರೂರು	78=81
52/61	ಕುಪ್ಪಯ್ಯ, ಹುತ್ತುನ ಮಗ, ಸಾಮಿನಕೊಪ್ಲು ಪಡುವರಿ ಗ್ರಾಮ, ಪೋಸ್ಟ್ ಪಡುವರಿ	69=51
69/61	ವೆಂಕಟ್ರಮಣ, ಫೋರೆಸ್ಟ್ ಗಾರ್ಡ್, ಶಂಕರನಾರಾಯಣ, ಪೋಸ್ಟ್ ಶಂಕರನಾರಾಯಣ	86=61
84/61	ಅಪ್ಪಯ್ಯನ ತಿಮ್ಮಪ್ಪ ಶೇರಿಗಾರ, ನಾಗಪ್ಪ ಶೇರಿಗಾರರ ಮಗ, ಪಡುವರಿ ಗ್ರಾಮ, ಪೋಸ್ಟ್ ಪಡುವರಿ	142=26
113/61	ಹೆಗ್ಗೇರಿ ಅಣ್ಣಪ್ಪ ಶೆಟ್ಟಿ, ವೆಂಕಪ್ಪ ಶೆಟ್ರ ಅಳಿಯ ತಗ್ಗರ್ಸೆ ಗ್ರಾಮ, ಪೋಸ್ಟ್ ಮಯ್ಯಾಡಿ	135=46
117/61	ಬಿ. ಪುರುಷೋತ್ತಮ ಜ್ಯೋತಿ, ಕುಪ್ಪ ಜ್ಯೋತಿಯರ ಮಗ, ಬಾಡ, ಪೋಸ್ಟ್ ಬೈಂದೂರು	164=16
174/61	ಮರ್ಲಿ, ದುರ್ಗಿ ಮಗಳು, ತೊಂಡೆಹಿತ್ಲು, ಪಡುವರಿಗ್ರಾಮ, ಪೋಸ್ಟ್ ಪಡುವರಿ	19=76
179/61	ಬಿ. ಪುರುಷೋತ್ತಮ ಜ್ಯೋತಿ, ಕುಪ್ಪ ಜ್ಯೋತಿಯರ ಮಗ, ಬಾಡ, ಪೋಸ್ಟ್ ಬೈಂದೂರು.	656=21
187/61	ಅಪ್ಪಯ್ಯನ ತಿಮ್ಮಪ್ಪ ಶೇರಿಗಾರ, ನಾಗಪ್ಪ ಶೇರಿಗಾರರ, ಮಗ, ಪಡುವರಿಗ್ರಾಮ, ಪೋಸ್ಟ್ ಪಡುವರಿ	105=01
198/61	ದೇವಪ್ಪ ಶೇರಿಗಾರ, ಬಡ್ರಯನ ವೆಂಕಟ್ರಮಣ ಶೇರಿಗಾರರ ಮಗ, ಬಾಡ, ಪೋಸ್ಟ್ ಬೈಂದೂರು,	80=81
207/61	ಪಳನಿಸಾಮಿ, ಶರ್ಪಸಾಮಿಯ ಮಗ, ಬಿಜೂರು ಗ್ರಾಮದಲ್ಲಿರುವವರು ಪೋಸ್ಟ್ ಬಿಜೂರು	30=21

Office of
THE VIJAYA BANK LTD.,
BYNDOOR.
Date: 8—12—1962.

K. Bhojaraja Hegde,
Agent.

ಚೀಣಾದ ನಿಜಸ್ಥಿತಿ

ಕೆಂಪು ಚೀಣಾದ ಜನಸಾಮಾನ್ಯರು ಮತ್ತು ಜನನಾಯಕರು

— ಚಾಣಕ್ಯ —

ಪ್ರಧಾನಿ ನೆಹರೂರವರು ಇತ್ತೀಚಿನ ತಮ್ಮ ಭಾಷಣಗಳಲ್ಲಿ ಚೀಣಾದ ಜನ ಸಾಮಾನ್ಯರು ಮತ್ತು ಈಗಿರುವ ಜನನಾ ಯಕರು ಇಬ್ಬರನ್ನೂ ಒಂದೇ ದೃಷ್ಟಿಯಿಂ ದ ನೋಡುವುದು ಉಚಿತವಾಗಲಾರದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ ರು. ಚೀಣೀ ನಾಯಕರು ತಮ್ಮ ವಿಚಾರ ಧೋರಣೆಯಲ್ಲಿ ಸಂಕೂರ್ಣವಾಗಿ ಸಾ ಮ್ರಾಜ್ಯವಾದಿಗಳಾಗಿದ್ದಾರೆ. ಇದರ ಬಗ್ಗೆ ಆವರಿಗೆ ಸಂಕೋಚವೆಂಬುದೇ ಇಲ್ಲ.

ಒಂದು ದೃಷ್ಟಿಯಿಂದ ನೋಡಿದರೆ ಚೀ ಣಿ ಜನತೆಯ ಮೇಲೆ ಅವರು ಬಲವಂತ ವಾಗಿ ಹೊರಿಸುತ್ತಿರುವ ಸಾಮ್ರಾಜ್ಯ ಸ್ವ ರೂಪವನ್ನೇ ನಾಡಿನ ಆಚೆಗೂ ವಿಸ್ತರಿಸು ವುದು ಅವರ ಉದ್ದೇಶವಾಗಿದೆ. ಜನಕೋ ಟಿಯ ಮೇಲೆ ಒಂದು ಸಣ್ಣ ಗುಂಪಿನ ಸ ರ್ವಾಧಿಕಾರವನ್ನು ಅವ್ಯಾಹತವಾಗಿ ನಡೆ ಸಿಕೊಂಡು ಹೋಗುವುದರ ಜೊತೆಗೆ ಅವ ರ ಉದ್ದೇಶ ಈ ಜನಕೋಟಿಯನ್ನೇ ತ ಮ್ಮ ಅಧಿಕಾರಾರೋಹಣಕ್ಕೆ ಸಾ ಧನವ ನ್ನಾಗಿ ಬಳಸಿಕೊಳ್ಳುವುದೂ ಅವರ ಉದ್ದೇಶ.

ಜನತೆಯ ಮತ್ತು ನಾಯಕರ ಮಧ್ಯೆ ಇರುವ ಸಂಬಂಧದ ಸತ್ಯ ಸ್ಥಿತಿ ಹೀಗಿದೆ.

ನಾಯಕರಾದವರು ಸರಳ ಜೀವನ ನ ಡೆಸಬೇಕು. ಉನ್ನತ ಧ್ಯೇಯಗಳ ಚಿಂತ ನೆಯಲ್ಲೇ ನಿರತರಾಗಿರಬೇಕು ಎಂದು ಚೀ ಣಾ ಅನೇಕ ಬಾರಿ ಬುರುಡೆ ಹೊಡೆದಿದೆ. ನಾಯಕನೆನಿಸಿಕೊಂಡವನು ಉನ್ನತ ಪ ದವಿಯಲ್ಲಿರುವ ಅಧಿಕಾರಿಯೇ ಆಗಬಹು ದು ಅಥವಾ ಪಕ್ಷದ ಒಬ್ಬ ಸಾಮಾನ್ಯ ಸ ದಸ್ಯನೇ ಆಗಬಹುದು ಅಥವಾ ತರುಣ ಕ ಮ್ಯೂನಿಸ್ಟ್ ಸಂಘಟ ಕಾರ್ಯಕರ್ತನೇ ಆಗಿರಬಹುದು. ಕಮ್ಯೂನಿಸ್ಟ್ ವಿಚಾರಗ ಳನ್ನು ಮೈಗೂಡಿಸಿಕೊಂಡು ಅವುಗಳಿಗ ನ್ವಯಿಸಿದ ಕ ಪಲ ಯಾಂತ್ರಿಕ ಮನೋ ಭಾವ ಬೆಳೆಸಿಕೊಂಡಿರುವ ರಾಗೂ ಕ ಮ್ಯೂನಿಸ್ಟ್ ಅಂಧಶ್ರದ್ಧೆಗೊಳಗಾಗಿರುವ ಈ ಕೆಲವು ಚೀಣಿ ಪ್ರಭೃತಿಗಳು ಚೀಣಾ ದ 65 ಕೋಟಿ ಜನರ ಅಗುಹೋಗುಗಳ ನ್ನು ನಿರ್ಧರಿಸುತ್ತಾರೆ. ನಾಯಕರೆನಿಸಿ ಕೊಂಡ ಈ ಜನ ನಿಜಕ್ಕೂ ಸರಳ ಜೀವ ನ ನಡೆಸುತ್ತಿದ್ದಾರೆಯೇ ಎಂಬುದನ್ನು ಪ ರಿಶೀಲಿಸಿದಾಗ ಅವರು ಹೇಳಿಕೊಳ್ಳುವುದ ಕ್ಕೂ ಮಾಡುವುದಕ್ಕೂ ಇರುವ ವೈತ್ಯಾಸ ತಿಳಿಯುತ್ತದೆ.

ಪೆನ್‌ಯಾಂಗಿನ ತುಂಗ್ ಪಿಯಿಹಾ ವೊ (ಈಶಾನ್ಯ ದಿನಪತ್ರಿಕೆ) ೧೯೫೭ರ ಡಿ ಸೆಂಬರ್ ೧೮ಕ್ಕೆ ಹಿಂದೆ ಬರೆದ ಲೇಖನ ದಲ್ಲಿ ಈ ರೀತಿ ತಿಳಿಸಲಾಗಿತ್ತು: "ನಮ್ಮ ನಾಯಕ ವರ್ಗಕ್ಕೆ ಸೇರಿದವರು ಅಧಿಕಾರ ಶಾಹಿ ವರ್ಗದ ವಿಚಾರಗಳಿಗೆ ಬಲಿಯಾಗಿ ದ್ದಾರೆ ಹೊರಗಿನ ಸ್ವರೂಪಕ್ಕೆ ಅವರು ತುಂಬಾ ಬೆಲೆ ಕೊಡುತ್ತಾರೆ. ಅನೇಕರ ನ್ನು ಅವ್ವಾ ಬ್ರಿಟಿಷ್ ಕಾರಿನಲ್ಲಿ ಕುಳಿತು ಕೊಳ್ಳದೆ ಕಚೇರಿಗೆ ಹೋಗುವುದಾದರೂ ಹೇಗೆ ಎಂಬ ಪಟ್ಟಕ್ಕೆ ಬಂದಿದೆ ಅವರ ವಿ ಚಾರ ವೈಖರಿ. ಒಂದು ಸಂತೋಷ ಕೂ ಟ ಏರ್ಪಡಿದ್ದಿದ್ದರೆ ಸಭೆ ಯಶಸ್ವಿಯಾಗು ವುದಾದರೂ ಹೇಗೆ ಎಂಬ ಆತಂಕಕ್ಕೆ ಅ ವರು ಒಳಪಡುತ್ತಾರೆ."

ಕ್ಯಾಂಟನ್ನಿನ ನಾನ್‌ಫಾಂಗ್ ಜ್ರಿಪಾ ಪೊ (ದಕ್ಷಿಣದ ದಿನಪತ್ರಿಕೆ) ೧೯೫೭ರ ಜೂನ್ ೧೪ರಂದು ಹೀಗೆ ಬರೆಯಿತು: "ನಮ್ಮ ಹಿಂದೆ ನಾಯಕರೊಬ್ಬರು ಒ ಮ್ಮೆ ಪಾಶ್ಚಾತ್ಯ ವೂಡರಿಯ ಕುರ್ಚಿ ನೋ ಡುಗಳನ್ನು ಮೂಸಿ ತಮ್ಮ ಮನೆಗೆ ಕೊ ಳ್ಳುವ ನಿರ್ಧಾರ ಕೈಗೊಂಡರು. ನಾಲ್ಕುಜ ನರಿದ್ದ ಕುಟುಂಬದ ಸೇವೆಗೆ ಹಾಜರಿದ್ದ ನೌಕರರ ಸಂಖ್ಯೆ ೧೨ ಒಬ್ಬ ಬಾಣಲು ಕಾಯ್ದಿರುವವ ಇನ್ನೊಬ್ಬ ಅಡ್ಜೆಗಳಿಗಾಗಿ ಎದುರು ನೋಡುತ್ತಾ ನಿಂತಿರುವನು; ಇ ವರಷ್ಟೇ ಅಲ್ಲದೆ ಕಾಲುಗಾಲರು ಬೇರೆ ಪ್ರತಿ ದಿನ ಭಕ್ಷ್ಯ ಭೋಜ್ಯಗಳಿಗೇನೂ ಕೊರತೆ ಬರಬಾರದು. ದಿನಕ್ಕೆರಡು ಬಾ ರಿ ಊಟೋಪಚಾರ ನಡೆಯಬೇಕು; ಪ್ರ ತಿ ಸಮಯದಲ್ಲೂ ಹೊಸ ಹೊಸ ತಿಂಡಿಗ ಳೇ ಆಗಬೇಕು." ೧೯೫೭ರ ಸೆಪ್ಟೆಂಬರ್ ೩ರಂದು ಇದೇ ಪತ್ರಿಕೆ ಈ ವಿಚಾರವನ್ನು ಪ್ರಸ್ತಾಪಿಸಿ ವರ್ಗರಹಿತ ಸಮಾಜ ತತ್ವವನ್ನು ಬೋಧಿಸುವ ನಮ್ಮ ನಾಯಕ ವರ್ಗ ದಿನದಿನಕ್ಕೆ ಜನಸಾಮಾನ್ಯರಿಂದ ದೂರವಾಗುತ್ತಿದ್ದು ವರ್ಗ ನೈತಿಕ್ಯದ ಮನೋಭಾವ ಬೆಳೆಸಿಕೊಳ್ಳುತ್ತಿದೆ. ಪಾ ರ್ಟಿ ಸಭೆ ಸಡೆಯ ವಾಗ ನಾಯಕರಪ್ಪೇ ಆಲ್ಲರಬೇಕು. 'ಜವಾನರು ಮತ್ತು ಇತರರು' ಆಲ್ಲಿ ಪ್ರವೇಶಿಸಬಾರದು ಎಂದೂ ಅ ವರು ಹೇಳತೊಡಗಿದ್ದಾರೆ'

ಬಲಿ ಹಾಕಲು ಹೊಡಿದ ಉಪಾಯ

ಅಧಿಕಾರ ಸಂಗ್ರಹಣೆ ಕಾರ್ಯ ಹೀಗೆ ಮುಂದುವರಿಯಿತು. ನಾಯಕರೆನಿಸಿ ಕೊಂಡವರು ವಿಶೇಷ ಸೌಲಭ್ಯಗಳನ್ನು ಆ ಪೇಕ್ಷಿಸತೊಡಗಿದರು. "ರಾಷ್ಟ್ರೀಕ ಫೆಬ್ರುವರಿಯಲ್ಲಿ ಚೀಣಾದ ಮಹಾನಾಯಕ 'ನೂರು ಹೂವುಗಳು ಅರಳಲಿ" ಎಂಬ ಘೋಷ ಹಾಕಿದೆ ಸ್ವತಂತ್ರನಾಗಿ ಟೀಕೆ ಮಾ ಡಬಹುದು ಎಂಬ ಸೂಚನೆ ಹೀಗೆ ಬಂತು ಆದರೆ ಇದು ಭಿನ್ನಾಭಿನ್ನಾಯ ಹೊಂದಿರು ವವರನ್ನು ಪತ್ತೆ ಹಚ್ಚುವ ತಂತ್ರವಾಗಿ ತ್ತು. ಪಿಕಿಂಗಿನ ಪೀಪಲ್ಸ್‌ದೈಲಿ ಪತ್ರಿಕೆ ೧೯೫೭ರ ಜುಲೈ ೧೭ರಂದು ಇದರ ವಿಚಾರ ವನ್ನು ಪ್ರಸ್ತಾಪಿಸಿ "ಸಂಪ್ರದಾಯವಾದಿ ಗಳನ್ನು ಬಲೆಗೆ ಹಾಕಲು ತಕ್ಕುಉಪಾಯ' ಎಂದು ಹಿಗ್ಗಿತು. ಚೀಣಿ ಸರ್ಕಾರದ ಬ ಗ್ಗೆ ತಮ್ಮ ಮನಸ್ಸಿನ ಭಾವನೆಗಳನ್ನು ನಿ ರಾಂತಕವಾಗಿ ತೋಡಿಕೊಂಡಿದ್ದ ಸಹ ಸ್ರಾರು ಜನರು ಬಹು ಸುಲಭವಾಗಿ ಬಲೆ ಗೆ ಬಿದ್ದಿದ್ದರು. ಪೀಪಲ್ಸ್ ದೈಲಿ ಪತ್ರಿಕೆ ಕೂಡ ತನ್ನ ಪಾಲಿನ ಕರ್ತವ್ಯವನ್ನು ತುಂ ಬಾ ಜಾಣತನದಿಂದಲೇ ನಿರ್ವಹಿಸಿತು. ಸ್ವತಂತ್ರ ಅಭಿಪ್ರಾಯವಿರುವವರನ್ನು ಹು ರಿದುಂಬಿಸಿ ಅವರು ತಮ್ಮ ಅಭಿಪ್ರಾಯಗ ಳನ್ನು ಬರೆದುಕೊಡುವಂತೆ ಪ್ರೋತ್ಸಾಹ ನೀಡಿತು. ಹೀಗೆ ಬರೆದುಕೊಟ್ಟವರು ಮುಂದೆ ತಪ್ಪಿಸಿಕೊಳ್ಳಲು ಮಾರ್ಗವಾದ ರೂ ಎಲ್ಲಿತ್ತು? "ಯಾವ ಕೆಲಸ ಮಾಡಬೇ ಕಾದರೂ ಪ್ರಭುತ್ವದ ಮರ್ಜಿಗೆ ಕಾದೇ, ಅದರ ಇಂಗಿತಕ್ಕನುಗುಣವಾಗಿಯೇ ಮಾಡಬೇಕಾಗಿದೆ; ಇದರಿಂದಾಗಿ ನಮ್ಮ ನಾಡಿನಲ್ಲಿ ನಿಜವಾದ ಸ್ವಾತಂತ್ರ್ಯವೇ ಇ ಲ್ಲವಾಗಿದೆ" ಎಂದು ತಿಳಿಸಿದ್ದವರ ಹೇಳಿಕ ಗಳನ್ನೆಲ್ಲ ಪ್ರಕಟಿಸಿ ಪತ್ರಿಕೆ ಸರ್ಕಾರದ ಕೆ ಲಸವನ್ನೂ ಸುಲಭಗೊಳಿಸಿತು.

ಪಿಕಿಂಗಿನ ಕ್ಯಾಮಿಂಗ್‌ಜಿಪಾವೋ ಪ್ರ ಬುದ್ಧ ದಿನ ಪತ್ರಿಕೆ ಸರ್ಕಾರದ ನೀತಿಯ ಬಗ್ಗೆ ಕಟುವಾದ ಟೀಕೆಗಳನ್ನು ಪ್ರಕ ಟಿಸಿ, "ನಾಯಕ ವರ್ಗಕ್ಕೆ ಸೇರಿದವರು ಒಂದು ಸಾಮ್ರಾಜ್ಯವನ್ನೇ ಗಳಿಸಿರುವಂತೆ ವರ್ತಿಸುತ್ತಿದ್ದಾರೆ ಎಂದೂ ತಿಳಿಸಿದರು.

೧೯೫೭ರ ಚೀಣಿ ರಾಜ್ಯಾಂಗದ ಪ್ರಕಾ ರ ಸಂಪ್ರದಾಯವಾದಿಗಳನ್ನು ತುಳಿಯು ವ ಪೂರ್ಣಾಧಿಕಾರವನ್ನು ಸರ್ಕಾರ ಪಡೆದಿರುತ್ತದೆ "ಕ್ರಾಂತಿ ವಿರೋಧಿ ಹಾ ಗೂ ರಾಷ್ಟ್ರ ವಿರೋಧಿ ಕಾರ್ಯ ಚಟುವ ಟಿಕೆಗಳಲ್ಲಿ ತೊಡಗುವ ಎಲ್ಲ ದೇಶ ದ್ರೋ ಹಿಗಳನ್ನೂ ತುಳಿಯುವ" ಅಧಿಕಾರ ಇದು. ಈ ಅಧಿಕಾರದ ಪೂರ್ಣ ಪ್ರಯೋಜನ ಪಡೆದು ಎಲ್ಲ ವಿರೋಧಿಗಳನ್ನು ಹಿಡಿದು ಹಾಕುವ ಕಾರ್ಯವನ್ನು ಸರ್ಕಾರ ಮಾಡಿ ತು. ಪೀಪಲ್ಸ್ ದೈಲಿ ಪತ್ರಿಕೆಯ ಅಭಿಪ್ರಾ ಯದ ಪ್ರಕಾರ (೧೯೫೭ರ ಜೂನ್ ೨೫ರ ಸಂಚಿಕೆ) ಅಧಿಕಾರ ದುರುಪಯೋಗದ ಪ್ರತಿಯೊಂದು ಪ್ರಕರಣದ ಪುನರ್ವಿಮ ರ್ಶೆಯಾಗಬೇಕು ಎಂದು ಲೇಖಕರು ಅಭಿ ಪ್ರಾಯಪಟ್ಟರು. ಚುಂಗ್‌ಕುವೋಚಿಂಗ್ ನೀನ್‌ಪಾವೊ (ಚೀಣಿ ಯುವಕ ಪತ್ರಿಕೆ) ಸಂಪಾದಕರು ಪ್ರಭುತ್ವದ ದೃಷ್ಟಿಯಲ್ಲಿ ವ್ಯಕ್ತ ಪತ್ರಿಕೆಗಳು "ನೋಟೀಸ್ ಬೋ ರ್ಡ್‌ಗಳು ಮತ್ತು ಗ್ರಾಮೊಫೋನ್ ರಿಕಾ ರ್ಡ್‌ಗಳಂತೆ ಗಿದೆ ಎಂದು ಆಕ್ಷೇಪಿಸಿದರು.

ಆವರೆ ಪೀಪಲ್ಸ್ ಯೂನಿವರ್ಸಿಟಿಯ ಕಾಪೊಪೀಚಿಯವರು ೧೯೫೭ರ ಮೇ ೧೮ರ ಪೀಪಲ್ಸ್ ದೈಲಿಯಲ್ಲಿ ಬರೆಯು ತ್ತಾ ವ್ಯಕ್ತಪಡಿಸಿದ ಪ್ರತಿಭಟನೆ ನಿಜಕ್ಕೂ ಗಮನಾರ್ಹವಾದುದು. "ಕ್ರಾಂತಿ ವಿರೋ ಧಿಗಳೂ ಸೇರಿದ ೬೦ ಕೋಟಿ ಜನರ ಚೀ ಣಾ ಅಧಿಕಾರಸ್ಥ ಪಕ್ಷದ ಸ್ವತ್ತಲ್ಲ. ಪಾ ರ್ಟಿ ಸದಸ್ಯ ತಾನೇ ಇಡೀ ರಾಷ್ಟ್ರದ ಪ್ರ ತೀಕವೆಂದು ಭಾವಿಸಿದಂತಿದೆ. ಇದು ಅಸ ಹನೀಯವಾದುದು. ಬುದ್ಧಿ ಜೀವಿಗಳಲ್ಲಿ ಅಸಹಂಬಿಕೆಯನ್ನು ವ್ಯಕ್ತಪಡಿಸಿ ಬೇಡಿ. ನೀವು ಸರಿಯಾಗಿ ವರ್ತಿಸಿಕೊಳ್ಳದೆ ಹೋ ದರೆ ಜನ ನಿಮ್ಮ ಉಚ್ಚಾಟನೆ ಕಾರ್ಯ ಕೈಗೊಳ್ಳುತ್ತಾರೆ; ನಿಮ್ಮ ಗತಿ ಮುಗಿಸು ತ್ತಾರೆ. ನಿಮ್ಮ ಉಚ್ಚಾಟನೆ ದೇಶ ದ್ರೋ ಹವೆಂದು ತಿಳಿಯುವುದು ಬೇಡ; ಅಧಿಕಾ ರಸ್ಥ ಪ್ರಭೃತಿಗಳ ಜನತೆಗಾಗಿ ಕೆಲಸ ಮಾಡುತ್ತಿಲ್ಲವೆಂದಷ್ಟೇ ಇದರ ಅರ್ಥವಾ ಗುತ್ತದೆ. ಪಕ್ಷ ತಾಳಿದರೂ ಚೀನಿಯಾ ಳಾಗುವುದಿಲ್ಲ; ಇಷ್ಟು ತಿಳಿಯಿರಿ!"

೧೯೫೭ರ ಜೂನ್ ೬ರಂದು ಪೀಪಲ್ಸ್ ದೈಲಿ ಪತ್ರಿಕೆ ಪೀಪಲ್ಸ್ ಯೂನಿವರ್ಸಿಟಿ ಯ ಪ್ರೊಫೆಸರ್ ಚೇ ಚಾರವರ ಅಭಿ ಪ್ರಾಯವನ್ನೂ ಪ್ರಕಟಿಸಿತು "ಘರ್ಷಣೆ ಆರಂಭವಾದರೆ ಸೈನ್ಯಾಗಾರಗಳನ್ನೇ ಬಳಸಬೇಕಾಗಬಹುದು. ಆದರೆ ಒಂದು ಮಾತು ಈ ಸೈನ್ಯಾಗಾರಗಳನ್ನು ಸರ್ಕಾ ರದ ಮೇಲೆಯೇ ಜನ ಬಳಸಿದರೆ ಏನು ಮಾಡುತ್ತೀರಿ? ಎಂದು ಅವರು ಪ್ರಶ್ನಿಸಿ ದರು. ಹೀಗೆ ಕಟು ಟೀಕೆ ಮಾಡುವವರ ಗತಿ ಮುಗಿಸಿದರೆ ಅಧಿಕಾರ ಚಲಾವಣೆ ನಿರಾಂತಕವಾಗಿ ನಡೆಯಬಹುದೆಂದೇ ಸ ರ್ಕಾರ ಭಾವಿಸಿತು. ಇದನ್ನು ಬಯಲಿಗೆಳೆ ದ ಲೋಕೆಂಗ್—ರೋ ಅವರ ಅಭಿಪ್ರಾ ಯ ಟೈಂಟ್ ಸಿನ ತಾತ್ಕಾಂಗ್ ಪಾವೊ ಪತ್ರಿಕೆಯ ೧೯೫೭ರ ಏಪ್ರಿಲ್ ೧೬ರ ಸಂ ಚಿಕೆಯಲ್ಲಿ ಪ್ರಕಟವಾಯಿತು. ಜನ ಸಾ ಮಾನ್ಯರ ಸಂವಾದನೆ ಮಟ್ಟ ಎಷ್ಟು ಕಡಿ ಮೆ ಇದೆ ವ.ತ್ತು ಅದೇ ಅಧಿಕಾರ ಪಡೆಯುತ್ತಿರುವ ನಾಯಕವರ್ಗಕ್ಕೆ ಸೇರಿದವರ ಜೀವನಮಟ್ಟ ಎಷ್ಟು ಉನ್ನತವಿದೆ ಎಂಬುದರ ಚಿತ್ರವನ್ನು ಅವರು ಓದುಗರ ಮುಂದಿಟ್ಟಿದ್ದರು. "ಉನ್ನತ ಪದ ವಿಗಳಲ್ಲಿರುವ ಜನ ಇನ್ನೂ ಹೆಚ್ಚಿನ ಸಂಖ್ಯ ಳ ಕೇಳುತ್ತಿದ್ದು ವಿಶೇಷ ಸೌಲಭ್ಯಗಳನ್ನು ಆಪೇಕ್ಷಿಸುತ್ತಿರುವುದು ನಿಜಕ್ಕೂ ತುಂ ಬಾ ಆತಂಕಕಾರಿಯಾಗಿದೆ," ಎಂದು ಅವ ರು ತಿಳಿಸಿದರು.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾಣಿರಾರು ಠೇವಣಿದಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರ.ವರು. ಪ್ರತಿಯೊಬ್ಬ ಠೇವಣಿದಾತಿಗಾರರಿಗೆ ಇಲ್ಲಿ ನೈಯತ್ತಿಕ ಸೌಕರ್ಯಗಳು ದೊರತಕುವುದ ಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931. — ಮಂಗಳೂರು — 3
Phone No. 240.

ನವಯುಗ್‌ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಕವಲು ದಾರಿ—ಕೆಂಪು ದೀಪ

ಮುತ್ತೆ ತೊಗಲಕ್ ದರ್ಬಾರ್?

—ಸುದಾಸ.

ಚೀನಕ್ಕೂ ಒಂದು ನೀತಿಯೆಂಬುದಿದೆ. ಜಗತ್ತನ್ನೇ ವಿನಾಶದೆಡೆಗೆ ಒಯ್ಯಲಿಚ್ಛಿಸುವ, ಪೂರ್ಣ ವೈಶಿಷ್ಟ್ಯದ ಕುಹಕ ನೀತಿ. ಅದರ ಅನುಭವದ ಸವಿಯನ್ನು ಭಾರತ ಕಂಡಿತು. ವಿವರವತ್ತಾಗಿ ಜಗತ್ತು ತಿಳಿದುಕೊಂಡಿತು. ಆದರೆ ನಮ್ಮ ನೆರೆನಾಡು —ಭಾರತದ ಒಂದು ತುಣುಕು—ಪಾಕಿಸ್ತಾನ, ಆ ಅನುಭವವನ್ನು ಇನ್ನೂ ಪಡೆದಿಲ್ಲ.

ಆಂತೆಯೇ—

—ಪಾಕಿಸ್ತಾನದಿಂದ ಚೀನೀ ಪಾಕಿಸ್ತಾನಿ ಭಾಯಿ ಭಾಯಿ, ಎಂಬ ರಾಗ ಕೇಳತೊಡಗಿದೆ.

ಚೀನದ ಪಂಚಶೀಲ? ಜಗತ್ತು ಅರಿತುಕೊಂಡಿರುವ ಚೀನದ ಪಂಚಶೀಲ ಇಲ್ಲಿದೆ!

೧: ನಿಶ್ವಾಸಕ್ಕೆ ಪ್ರತಿಯಾಗಿ ವಂಚನೆ.

೨: ಜಗತ್ತನ್ನು ಕೆಂಪುಮಯ ಮಾಡುವ ಕಲ್ಪನೆ.

೩: ವ್ಯಕ್ತಿ ಸ್ವಾತಂತ್ರ್ಯವನ್ನು ಅದುಮಿ ಹಿಡಿಯುವ ಸುಗುಣ.

೪: ಜಗತ್ತಿನ ಶಾಂತಿಯನ್ನೇ ಬುಡ ಮೇಲು ಮಾಡುವ ಅಹರ್ನಿಶ ಪ್ರಯತ್ನ.

೫: ಮೇಲಿನ ನಾಲ್ಕು ಶೀಲಗಳನ್ನೊಳಗೊಂಡಿರುವ ಪಂಚಮಶೀಲ, ಶೀಲವಲ್ಲ; ಅದು ಕಾಹಿಲೆ; ಅರಸಿನ ರೋಗ! ಜಗತ್ತು ಚೀನಕ್ಕೆ ತಲೆ ಬಾಗಿಸಿದೆ ಎಂಬಂತೆ ಎಣಿಸಿಕೊಳ್ಳುವ— ಔಷಧಿಯೇ ಇಲ್ಲದ ಖಾಯಿಲೆ. ಈ ರೋಗಕ್ಕೆ ಔಷಧಿಯಿದ್ದರೆ, ಅದು ವಿನಾಶಗೊಳ್ಳುವದೇ!

ಈ ಪರಿಯ ಸೊಬಗಿನಿಂದೊಡಗೂಡಿರುವ ಚೀನದ ಪಂಚಶೀಲವನ್ನು, ಪಾಕಿಸ್ತಾನವು ಸ್ವಾಗತಿಸಿದೆ!

ಭಾರತದ ಗತ ವೈಭವದಲ್ಲಿ ಇತಿಹಾಸಕಾರರು, ಮಹಮ್ಮದ್-ಬಿನ್-ತುಗಲಕನಿಗೆ ಸ್ಪರ್ತ್ಯೇಕ ಸ್ಥಾನ ಕೊಟ್ಟಿರುತ್ತಾರೆ. ಯಾರೂ ಮಾಡಿದ್ದನ್ನು, ಯಾರೂ ಮಾಡಿರದ್ದನ್ನು ಅವನು ಮಾಡಿ ಪುಣ್ಯ ಕಟ್ಟಿಕೊಂಡ. ಅವನಿಂದಾಗಿ ಒಳಿತಾದುದೆಷ್ಟೋ ಏನೋ; ಆದರೆ ಕೆಡುಕಂತೂ ಬಹಳಷ್ಟಾಯಿತು. ಆತ ಕಂಡ ಸುಂದರ ಕಲ್ಪನೆ (!) ಯ ಫಲ: ಪ್ರಜೆಗಳು ಮನೆಮಠಗಳನ್ನು ಕಳೆದುಕೊಂಡರು; ಉಪವಾಸದಿಂದ ನರಳಿದರು. ಅನ್ನ ನೀರಿಲ್ಲದೆ ಸತ್ತವರು ಸತ್ತರು. ಎದುಕಿದ್ದವರು ಸತ್ತವರ ಪುಣ್ಯಶೇಷವನ್ನು ಅನುಭವಿಸಬೇಕಾಯಿತು!

ಪಾಕಿಸ್ತಾನವೇನಾದರೂ ಆಂತಹ—ಅದನ್ನೂ ವಿಂಗಿಸುವ, ಇತಿಹಾಸದ ಸೃಷ್ಟಿಗೆ ಎಡೆ ಮಾಡಿಕೊಡುತ್ತಿದೆಯೆ?

ಆರ್ಯರನ್ನು, ಮೊಗಲರನ್ನು, ಕ್ರೈಸ್ತರನ್ನು ಭಾರತ ಸ್ವಾಗತಿಸಿದೆ. ಅವರ ಉತ್ತಮ ಗುಣಗಳನ್ನು ತನ್ನೊಡನೆ ಕೂಡಿಸಿಕೊಂಡಿದೆ ತನ್ನ ಸೈನಿಕರನ್ನು ಹಿಮಧಾಳಿಯಿಂದ ರಕ್ಷಿಸಲು, ಅವರಿಗೆ ಗುಹೆಯಲ್ಲಿ ಎಡೆ ಮಾಡಿಕೊಟ್ಟು, ತಾನು ಹೊರಗೆ ಕೊರೆಯುವ ರಕ್ತವನ್ನು ಹೆಪ್ಪುಗಟ್ಟಿಸುವ ಹಿಮದಲ್ಲಿ ನಿಂತ ಬಾಬರ— ಹಿಂದು ಮುಸ್ಲಿಮರು ಒಂದಾಗಿ ಬಾಳಬೇಕೆಂಬ ಹಂಬಲ ತೊಟ್ಟ ಅಕ್ಬರ ಮೊದಲಾದ ಮೊಗಲ ವಂಶಜರ ಆದರ್ಶಕ್ಕೆ ನಾವು ಮನಸೋತಿದ್ದೇವೆ. ಮನ ಸೋತಿದ್ದೇನೆ ಮಾತ್ರವಲ್ಲ, ಅವರ ವ್ಯಕ್ತಿತ್ವದ ಕುರಿತು ಕೊಂಡಾಡುವಲ್ಲಿ, ನಾವೆಂದೂ, ಸಂಕೋಚಪಟ್ಟಿಲ್ಲ.

ಸಂಕೋಚಪಟ್ಟಿಲ್ಲ ನಿಜ. ಪಾಕಿಸ್ತಾನದ ಇಂದಿನ ನಿಲುವೆಯನ್ನು ಕಂಡು, ಇದ ಕ್ಕೆಂದು ಕೊನೆ? ಎಂದು ಕೇಳುವಲ್ಲಿಯೂ ನಾವು ಸಂಕೋಚಗಡುತ್ತಿಲ್ಲ.

ಗಡಿ ವಿವಾದದ ಪ್ರಶ್ನೆ ಎತ್ತಿಕೊಂಡು 'ಕೆಂಪುಮಯ'ದ ಬಯಕೆ ತೊಟ್ಟು ನಿಂತ ಚೀನದೊಡನೆ ಬಂಧುತ್ವ ಸಂಬಂಧವನ್ನು ಬಯಸುತ್ತಿರುವ ಪಾಕಿಸ್ತಾನದ ಧೋರಣೆಯನ್ನು ಅರಿತು ಯಾವ ಭಾರತೀಯನು ತಾನೆ ಸಂತೋಷಪಟ್ಟಾನು?

ಪೃಥ್ವಿರಾಜ ಸಂಯುಕ್ತೆಯರದ್ದು ರಮ್ಯ ಕಥೆ. ಕೇಳಿ ನಾವು ಸಂತೋಷಪಟ್ಟದ್ದುಂಟು. ಹೆಮ್ಮೆ ತಾಳಿದ್ದುಂಟು. ಪೃಥ್ವಿರಾಜನಿಗೆದುರಾಗಿ ನಿಂತು ಹೋರಾಡುವ ಎದೆಗಾರಿಕೆಯಿರದೆ ಜಯಚಂದನ ಬಗೆಗೂ ನಮಗೆ ಕರುಣೆಯುಂಟಾಗಿತ್ತು! ಸಂಯುಕ್ತೆ ವಿಗ್ರಹಮೂರ್ತಿಯ ಕೊರಳಿಗೆ ಮಾಲೆ ಹಾಕಿದ ಆಕ್ರಮಣವನ್ನು ನೆನೆದು 'ಎಂತಹ ದೃಢ ವಿಶ್ವಾಸದ ಪ್ರೇಮ!' ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದೇವೆ.

ಕೊನೆಗೆ—

—ಮುಕ್ತಕಂಠದಿಂದ ಈ ರೀತಿ ಉದ್ಗರಿಸಿದ್ದೇವೆ: ಜಯಚಂದನೇ! ನೀನು ಪೃಥ್ವಿರಾಜ ಸಂಯುಕ್ತೆಯರಿಗಷ್ಟೇ ದ್ರೋಹ ಬಗೆದಿಲ್ಲ. ಭಾರತಕ್ಕೆ ದ್ರೋಹ ಬಗೆದ ದೇಶದ್ರೋಹಿ! ಭಾರತದ ಬಲಿಗೊಟ್ಟು ನೀನು ಕೆಟ್ಟೆ.

ಆ ಮಾತನ್ನೇ ಪಾಕಿಸ್ತಾನಕ್ಕಾಗಿ ಮತ್ತೆ ಪುನರಾವರ್ತಿಸುವ ಅಗತ್ಯವಿಲ್ಲ. ಯಾಕೆಂದರೆ:

ನಾವು—ಭಾರತದ ನಿವಾಸಿಗಳು ಭಾರತಕ್ಕಾಗಿ ಬಾಳಿ ಬದುಕುತ್ತೇವೆಂಬ ದೀಕ್ಷೆ ತೊಟ್ಟಿದ್ದೇವೆ. ಭಾರತಕ್ಕೆ ಕೇಡು ಬಗೆಯವರು ಯಾರೇ ಇರಲಿ, ಅವರನ್ನು ಮುರಿದಿಕ್ಕುವೆನೆಂಬ ಹಾಡು ಹಾಡಿದ್ದೇವೆ. ಈ ದೀಕ್ಷಾಭಂಗವನ್ನು ಯಾರು ತಾನೇ ಮಾಡಬಲ್ಲ?

"ಮಹಾತ್ಮನ ಕರೆ"

ಭಾರತ ದೇಶದ
ಧೀರ ಪ್ರಧಾನಿಗೆ
ದೀರ್ಘಾಯುವ ಕೊಡು ;;ಗಾಯತ್ರಿ"।
ದೇಶದೊಳೊದಗಿದ
ಚೈನದ ಭೀತಿಯ
ನೋಡಿಪ ಬಲ ಕೊಡು "ಸಾವಿತ್ರಿ" ॥೧॥

ರಣಕಣದಲಿ ಬಲು ।
ಸೆಣಸುವ ಸೈನ್ಯದೆ ।
ಗಣನೆಗೆ ಸಾಸಿರ ಸಂಖ್ಯೆಯಲಿ ॥
ಕೆಣಕಿ ಕಡಿದು ಬಲು ।
ಮಣಿಯಿಸು ತೋಡಿಸಿ ।
ಸೆಣಸಾ "ಝಾನ್ಸಿಯ ರಣ ರಾಣಿ" ॥೨॥

ಗೋರಿಲ್ಲಾ ರಣ ।
ದೇಳ್ಗೆಯ ನೆಮ್ಮಯ ।
ಧೀರ ಜವಾನರ ರೂಪದಲಿ ॥
ತೋರುತ ಶತ್ರುವ ।
ನೂರಿಂದೋಡಿಸು ।
ಶತ್ರು ಭಯಂಕರ ;;ಛತ್ರಪತಿ" ॥೩॥

ರಾಣಪ್ರತಾಪರು ।
ಹೊಯ್ಸಳ ತಾಳವ ।
ಹರಿಹರ ಪುಲಿಕೇಶಿ;;ಸುರೆಲ್ಲ ॥
ತಿಲಕ ಪಠೇಲರು ।
ಪಂತ ಸುಭಾಷರು ।
ವ;;ರೆಯುವರೆ? ನೇ;;ರ್ ನೆರೆದಿಹರು ॥೪॥

ಅಮ್ಮ ಭಾರತೆ ।
ನೆಮ್ಮದಿಯಿಂದಿರು ।
ವೀರವರೇಣ್ಯರು ನಿನ್ನವರು ॥
ನೆನ್ನೆಯ ಸಿರಿಮುಡಿ ।
ಗಿಕ್ಕಿದ ಕೈಯನು ।
ಕಡಿಯುವರು ಮೇಣ್ ಬಡಿಯುವರು॥೫॥

ಧಾನ್ಯದ ಬಹುಳತೆ ।
ಮಾನ್ಯರ ಬೆಂಬಲ ।
ರಾಣ್ಯವ ಪಡೆಯುವ ಶಕ್ತಿಗಳು ॥
ಜೈ-ಎನ್-ಲಾಯಿಯ ।
ಕ್ರೌರ್ಯ ಪಿಪಾಯಿಯು ।
ಕಟ್ಟುವವು ಬಡಿದಟ್ಟುವವು ॥೬॥

ಧನಕನಕಾದಿಯ ।
ಜನಬಲವೆಲ್ಲವ ।
ದೇಶದ ಶಾಂತಿಯ ರಕ್ಷಣೆಗೆ ॥
ದಾನ ಗೈಯು ತಫಿ ।
ಮಾನವ ನುಳಿಸಲು
ಮುಂದಾಗಿ ಜನ ವೊಂದಾಗಿ ॥೭॥

ಬಹುವಿಧ ತ್ಯಾಗದಿ ।
ಗಳಿಸಿದ ಭಾರತ ।
ದೊಲವಿನ ಸ್ವಾತಂತ್ರ್ಯವ ನೆಲ್ಲ ॥
ಉಳಿಸಲು ಬೆಳೆಸಲು ।
ಶತ್ರುವ ನಳಿಸಲು ।
ಒಲವಿಂ ಬಲಕೊಡಿ ನೆಹರುವಿಗೆ ॥೮॥

—ಟಿ. ವಿಟ್ಟಪ್ಪ ಶೆಣೈ, ಮಂಜೇಶ್ವರ

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಸರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

ಉಡುಪಿ ಕರ್ನಾಟಕ ಸಂಘದ ಮೂರು ಪ್ರಕಟಣೆಗಳು

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಅಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಬೆಳುವಳಿಗಳು, ಅವುಗಳ ಹಿಂದಿರುವ ತತ್ವಗಳು. ಅವುಗಳಿಗೆ ನೂತನವ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮೆಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಪಿತಾಳೆ, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್.ಎಲ್.ಬಿ.

ಶಿಜ್ಞರನ್ನು, ಅಜ್ಞಿಜ್ಞರನ್ನು, ವಿಜ್ಞಾನಿಗಳ ಅಭಿಪ್ರಾಯವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೀ ಒಂದು ರೂಪಾಯಿ.

ರೂ ೩=೨೫ನ್ನು ಮನಿಯೊರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಆಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

"ಗೊತ್ತಿಲ್ಲ ಕಣ್ಣೇ"

(ಎನೇ ಸುಟದಿಂದ)

ಲೆಯ ಮೂಂಗಲ್ಯವನ್ನು ಉಳಿಸಲಾಗಲಿಲ್ಲ ನಲ್ಲ. ಏನು ಮಾಡಲೀ (ಕೈ ಹಿಚಿಕಿಕೊಳ್ಳುತ್ತಾ) what shall I do?

ರಾಯರು— ರವಿ ರವಿ (ರವಿಯನ್ನು ಅಲ್ಲಾಡಿಸುವರು)

ರವಿ— ಯೂರು ನನ್ನ ಮುಟ್ಟುವರು.

ರಾಯರು— ನಿನ್ನ ಮೂವ ರವಿ.

ರವಿ— (ತೊದಲುತ್ತಾ) ಯೂ....ರು ಮೂ.....ಮೂವಯ್ಯನೇ! (ದುಃಖದಿಂದ) ಮೂವಯ್ಯ.

ರಾಯರು— ದುಃಖಿಸಬೇಡ ರವಿ.

ರತ್ನ— ಏನಾಯಿತು ಅಂದ್ರೇ.

ರವಿ— ಒಂದು ಹೆಣ್ಣಿನ ಜೀವಾನೇ ಹಾಳಾಯಿತು ಮೂವಯ್ಯ.

ರಾಯರು— ಯೂರದು ಹಳಾಗಿದ್ದ ರವಿ. ಅದೆಲ್ಲಾ ಭ್ರಮೆ.

ರವಿ— ಸುಳ್ಳು ಸುಳ್ಳು. ನೀನು ಹೇಳುತ್ತಿರುವುದೆಲ್ಲಾ ಸುಳ್ಳು ಮೂವಯ್ಯ. ನನ್ನ ಕಣ್ಣು ಎದುರಿಗೆ ಕಂಡದ್ದು ಸುಳ್ಳೇ. ನೀನೇ ಹೇಳು ಮೂವಯ್ಯ.

ರಾಯರು— ರವಿ ನೀನು ನೋಡಿದ್ದು ನಿನಿಮೂ ಅದುವಾಸ್ತವಾಗಿಯೂನಿಜವಲ್ಲ ಪ್ರಪಂಚದಲ್ಲಿ ಈ ರೀತಿಯಾಗಿ ನಡೆಯುತ್ತದೆ ಎಂದು ತೋರಿಸಿದ್ದಾರೆ.

ರವಿ— ಹಾಗಾದರೆ ಹಾಗಾದರೆ ನಿಜ ವಲ್ಲವೇನು ಮೂವಯ್ಯ.

ರತ್ನ— ಅಹುದುರೀ ಅದೆಲ್ಲಾ ಭ್ರಮೆ!

ರಾಯರು— ನಿಜವಾಗಲೂ ಅದು ಕಲ್ಪನಿಕಾ ರವಿ.

ರವಿ— ಹೂಂ! ಭ್ರಮೆ!! ಅದೆಲ್ಲ ಕಲ್ಪನಿಕಾ!!! ಎಂದಿಗೂ ನಾದ್ಯವಿಲ್ಲ ಮೂವಯ್ಯ ನಾದ್ಯವಿಲ್ಲ.

ರಾಯರು— ಕಲ್ಪನೆಯಲ್ಲಿ ಈ ರೀತಿಯಾಗಿ ಬಹಳವಾಗಿ ನಡೆಯುತ್ತಿವೆ ರವಿ. ಹೇಳುತ್ತೇನೆ ಕೇಳು ಅದು ನನ್ನ ಸ್ವಂತ ಅನುಭವ. ನಾನು ಒಮ್ಮೆ ಲಾಟರಿ ಟೀಟಿಯನ್ನು ತೆಗೆದುಕೊಂಡಿದ್ದೆ. ರಾತ್ರಿ ಮಲಗುವಾಗ ಲಾಟರಿ ವಿಷಯ ನೆನಪು ಬಂತು ಲಾಟರಿ ವಿಷಯವೇ ಮೆಲುಕು ಹಾಕುತ್ತಾ ಮಲಗಿದೆ. ಕನಸಿನಲ್ಲಿ ನನಗೆ ಪ್ರಥಮ ಬ್ಯೈಜು ಬಂದಂತೆಯೂ, ಆಗ ನಾನು ದೊಡ್ಡ ಬಂಗಲೆಯನ್ನೂ ಕೊಂಡು ಕೊಂಡಂತೆಯೂ, ಸುಂದರವಾದ ಕಾರನ್ನು ಕೊಂಡಂತೆಯೂ, ವ್ಯಾಪಾರದಲ್ಲಿ ಚನ್ನಾಗಿ ಲಾಭ ಬಂದಂತೆಯೂ, ಆಗ ನಾನು ಕಾರಿನಲ್ಲಿ ಹೋಗುತ್ತಿದ್ದಾಗ ಅಕ್ಸಿಡೆಂಟಾಗಿ ಸತ್ತುಹೋದಂತೆಯೂ ಕನಸಾಯಿತು. ಅಕ್ಸಿಡೆಂಟಾಗಿ ಸತ್ತುಹೋದಾಗ ನನಗೆ ಎಚ್ಚರವಾಯಿತು. ನಡೆದುದೊ, ಕನಸ್ಸೆಂದು ನಕ್ಕು ಸುಮ್ಮನಾದೆ. ನೋಡಿದೆಯಾ ರವಿ, ನಾನು ಕಲ್ಪನಿಕದಲ್ಲಿ ನಾನು ಸತ್ತುಹೋದೆಯಲ್ಲಾ. ನಾನು ಸತ್ತೆನೇ. ಇದೆಲ್ಲ ಬ್ರಮೆ ರವಿ. ಅದರಂತೆ ನಿನಿವೂದಲ್ಲಿ ಕಲ್ಪನಿಕವಾಗಿಯೇ ಹೆಚ್ಚಾಗಿ ತೆಗೆಯುತ್ತಾರೆ. 'ಉಲ್ಕೆ' ಕಾದಂಬರಿಯ ಲೇಖಕ ಕೊನೆಯಲ್ಲಿ ಅವರಿಬ್ಬರನ್ನೂ ಸಾಯಿಸಿರುತ್ತಾನೆ. ಅದೇ ರೀತಿಯಾಗಿ ನಿನಿವೂದಲ್ಲಿ ತೆಗೆದಿದ್ದಾರೆ. ಅವರು ಸತ್ತರೆ ನೀನೇಕೆ ಚಿಂತೆ ಮಾಡಬೇಕು.

ರವಿ— ನೀನು ಹೇಳುತ್ತಿರುವುದು ನಿಜವೇನು ಮೂವಯ್ಯ. ಆದರೆ...

ರತ್ನ— (ಗಾಬರಿಯಿಂದ) ಮತ್ತೇನ್ರೀ ಆದರೆ ಅಂತಿರಲ್ಲ.

ರವಿ—ಅವರಿಬ್ಬರನ್ನೂ ಸಾಯಿಸಿದನಲ್ಲ ದೆ ಓರ್ವ ಹೆಣ್ಣಿನ ಕುಂಕುಮವನ್ನೇ ಅಳಿಸಿದನಲ್ಲ.

ರಾಯರು— ಆ ರೀತಿಯಾಗಿ ಮಾಡಿದ್ದರಿಂದ್ಲೇ ತಾಯಿಕರುಳಿಗೆ ಕಳೆ ಬಂತು. ಇಲ್ಲದಿದ್ದರೆ ಅಮ್ಮ ಚಿನ್ನಾಗಿ ಕಾಣುತ್ತಿರಲಿಲ್ಲ.

ರವಿ—(ಸಂತೋಷ) ಹಾಗೇನು ಮೂವಯ್ಯ. ನೀನು ಹೇಳದೆ ಇದಿದ್ದರೆ ನಾನು ಹುಚ್ಚನೇ ಆಗುತ್ತಿದ್ದೆ.

ರಾಯರು—ನೀನು ನಿನೀಮೂ ನೋಡಿ ಅಷ್ಟು ದುಃಖಪಟ್ಟದ್ದೆಯಲ್ಲಾ. ಇನ್ನೂ ಪ್ರತ್ಯಕ್ಷವಾಗಿ ನೋಡಿದ್ದರೇ...

ರತ್ನ— ಏನ್ರೀ ಈಗಲಾದ್ರು ದಾರಿಗೆ ಬಂದ್ರಲ್ಲಾ.

ರವಿ ನನ್ನ ಜೀವನದಲ್ಲಿ ಏನೇನು ಅನುಭವಿಸಬೇಕೋ ಅದೆಲ್ಲ ಅನುಭವಿಸಿಯೇ ತೀರಬೇಕು ರತ್ನ.

ರಾಯರು— ಸರಸಗೆ ಜ್ವರ ಬಂದು ನಾಲ್ಕು ದಿನವಾಯ್ತು.

ರವಿ— ಏನೂ! ಸರಸಗೆ ಜ್ವರವೇ? ಔಷಧಿ ಕೊಡಲಿಲ್ಲವೇ ರತ್ನಾ.

ರತ್ನ— ನಿಮ್ಮ ಚಿಂತೆಯಲ್ಲಿ ತಂದು ಕೊಟ್ಟಲ್ಲಾ.

ರವಿ— ಅಯ್ಯೋ ಪುಚ್ಚಿ, ಔಷಧಿ ತಂದು ಕೊಡುತ್ತೀನಿ ನಿಲ್ಲು.

ರಾಯರು— ಆಫೀಸಿಗೆ ಹೋಗುವು ದಿಲ್ಲವೇ?

ರವಿ—ಓ! ಆಫೀಸ್ ಬೇರೆ ಇದೆಯೇ?

ರಾಯರು— ಇವತ್ತು ರಜಾ ತೆಗೆದು ಕೊಂಡುಬಿಡು.

ರವಿ— ಹಾಗೇ ಆಗಲೀ ಮೂವಯ್ಯ. ಆಫೀಸಿಗೆ ಹೋಗಿ ರಜಾ ಬರೆದುಕೊಟ್ಟು, ಬರುವಾಗ ಡಾಕ್ಟರ್‌ರನ್ನು ಕರೆದು ಕೊಂಡು ಬರುತ್ತೇನೆ (ಹೋಗಲು ಹೋಗುವನು)

ರತ್ನ— ಸ್ವಲ್ಪ ನಿಲ್ರೀ

ರವಿ— ಏನು ರತ್ನಾ

ರತ್ನಾ— ಮುಖ ತೊಳೆದುಕೊಂಡು ಕಾಫಿ ಕುಡಿದು ಹೋಗಿ.

ರವಿ— ಓ! ಹೌದಲ್ಲವೇ! ಬಚ್ಚಲು ಮನೆಗೆ ಹೋಗಬೇಕು ಕಾನೇ

ರತ್ನಾ— ಗೊತ್ತಿಲ್ಲ ಕಣ್ರೀ

(ರವಿ ನಗುತ್ತ ನಿರ್ಗಮಿಸಿದನಂತರ ತೆರೆ ಸರಿಯುವುದು)

ಸಂಪೂರ್ಣಂ

ಸೂಚನೆ:— ಈ ನಾಟಕವನ್ನು ಅಭಿನಯಿಸಲು ಇಚ್ಛೆ ಪುಳ್ಳವರು ಲೇಖಕರ ಅನುಮತಿಗಾಗಿ ಬರೆಯಿರಿ:—

ಪಿ. ಜಿ. ಪರಮೇಶ್ವರಪ್ಪ, S/o ಪಿ. ಗುರು ಶಾಂತಪ್ಪ ಅಂಡ್ ಸನ್ಸ್, ಜನರಲ್ ವ್ಯಾಪಾರಿಗಳು, ಸಂತೆಪೇಟೆ ಚಿತ್ರದುರ್ಗ, ಮೈಸೂರು ಸ್ಟೇಟ್.

ಜವಾನರೇ

ನಾಡಿನ ತುಟ್ಟ ತುದಿಗಳಲಿ
ದಟ್ಟ ದಟ್ಟ ಹಿಮದಲಿ
ಹೋರಾಡುವ ಜವಾನರೇ!
ನಾಡ ಸೀಮೆ ರಕ್ಷಕರೇ
ನಿಮಗೆಲ್ಲ ನಮ್ಮ ಕೃತಜ್ಞತೆ
ಜವಾನರೇ, ಕಲಿಗಳೇ ಕಲಿಗಳೇ
ನುಗ್ಗಿರಿ ನುಗ್ಗಿರಿ ಮುನ್ನಗ್ಗಿ
ಪಶ್ಚಾತ್ಕಳಾತುಕರನು
ಶತ್ರುಗಳನು ಬಗ್ಗುಬಡಿದು
ಹೊರ ಕಟ್ಟಿ ನಾಡನು ನೆಲವನು
ಪವಿತ್ರಗೊಳಿಸಿ ಕಲಿಗಳೇ
ನಿಮ್ಮ ಕೆಚ್ಚೆದೆಯ ಶೌರ್ಯ
ಜಗದಲೇ ಬಿಗಿಲು ವೀರರೇ।
ನಾಡಿನ ತುಟ್ಟ ತುದಿಗಳಲಿ
ದಟ್ಟ ದಟ್ಟ ಹಿಮದಲಿ
ಹೋರಾಡುವ ಜವಾನರೇ
ವೀರ ಜವಾನರೇ ಮುನ್ನುಗ್ಗಿ
ಅನಾಗರಿಕರನು ಹೊರಕಟ್ಟಿ
ಜಗದ ಇತಿಹಾಸದಲಿ
ನೂತನ ಅಧ್ಯಾಯವ ತೆರೆಯಿರಿ
ಐಕ್ಯಮಣದ ಮುಸುಕು ಕೆತ್ತೊಗೆದು
ವಿಜಯದ ವೈಜಂತಿಯ ಜಾರಿಸಿ
ನೀವೂ ನಲಿದು ನಕ್ಕು ನಲಿಸಿರಿ
ಜವಾನರೇ, ಕಲಿಗಳೇ
ನಾಡಿನ ತುಟ್ಟತುದಿಯಲಿ!

—ರಾವ್

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್. ಮಕ್ಕಳಿಗೆ, ಹೆಂಗಸರಿಗೆ, ಗರ್ಭಿಣಿಯರಿಗೆ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ನೂಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ — ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ— ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರುಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1–4–0 (1=25).

ವಿ. ಸೂ.—ಆರ್ಡರು ಪುಸ್ತಕದ ಸಲಿಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕಾಲೇಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಸೊಸ್ಯಲಿಸ್ಟ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 532/1962

ಮಲ್ಪೆಯ ಡಿಸೋಜ ಕೊಡಾ — ವಾದಿರು

ಮತ್ತು

ವೆಂಕಟನರಸಿಂಹಾಚಾರ್ಯ — ಪ್ರತಿವಾದಿ

ಇವರೊಳಗೆ

ಪ್ರಕಟಣೆ

ಸದ್ರಿ ವ್ಯಾಜ್ಯದ ವಾದಿಯರು ಉಡುಪಿತಾಲ್ಲೂ ಮೂಡುಬೆಟ್ಟು ಮತ್ತು ಕುರ್ಕಾಲು ಗ್ರಾಮಗಳ ಪೈಕಿ— ಸದ್ರಿ ಕುರ್ಕಾಲು ಗ್ರಾಮದ ಸಂ. ನಂ. 172/1ರಿಂದ 7ರ ವರೆಗಿನ ಸ್ಥಳಗಳ ತೆಂಕು ಮತ್ತು ತೆಂಕು ಪಡು ವಕ್ಕಾರದಲ್ಲಿ ವಾಸ್ತವಿಸಿ ಬರುವ ಗ್ರಾಮಸ್ಥರಿಗೆ ಸರಿವಾಗಿ ವಾಸ ಸ್ಥಳ ಸದ್ರಿ ಸ. ನಂ. 172/1B ಸೈಕಿ ಮೂಡು ಬದಿ ಆರದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹಾದು ಹೋಗುವ ದಾರಿ ಹಳ್ಳ ಕೇಳಿ ಮಾಡಿದ ಸದ್ರಿ ವ್ಯಾಜ್ಯವು ತಾ. 18–12–1962ಕ್ಕೆ ಇತ್ಯರ್ಥಗೊಳ್ಳಲಿದೆ. ಈ ಬಾದಿಗಳಲ್ಲಿ ಯಾರೆದ್ದಾದರೂ ಸಾಕ್ಷಿ ಇದ್ದರೆ ಆವರು ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟಿಗೆ ಮುಂದೆ ಹಾಜರಾಗಿ ಉಪಸ್ಥಿತಿಸಿ ಕೊಳ್ಳತಕ್ಕದ್ದು.

P.N. Krishnamoorthy Rao
B. A., L. L. B. Advocate.
Udipi, S. K. Dated 1-12-1962.

REGD. No. B. G. 176
LICENCE No. 31
Licensed to Post without Prepayment

ಷಟ್‌ರಾಷ್ಟ್ರಗಳ ಕೊಲಂಬೊ ಸಮ್ಮೇಳನ

(ನಿನ್ನೆ ಮುಂದುವರಿದ ಭಾಗ)

ಮತ್ತು ಒಂದು ಆಶಾಪೂರ್ಣ ಮೈಲು ಗಲ್ಲೂ ಆಗಿದೆ.

ಚೀನಾದ ನಿರಾಕ್ಷೆ

ಅಫ್ರೋ-ಏಷ್ಯಾ ರಾಷ್ಟ್ರಗಳು ಭಾರತದತ್ತ ಒಲಿಯುತ್ತಿವೆಯಲ್ಲಾ ಎಂದು ಚೈನಾಕ್ಕೆ ಈಗೀಗ ಬಹಳ ನಿರಾಶೆಯೂಗುತ್ತ ಬಂದಿದೆ. ಕೊಲೊಂಬೋ ಸಮ್ಮೇಲನಕ್ಕೆ ಚೀನಾವು ಬಹಳ ಪ್ರಾಮುಖ್ಯತೆಯನ್ನಿತ್ತು ಅದರಲ್ಲಿ ಎಲ್ಲಾ ತಟಸ್ಥ ರಾಷ್ಟ್ರಗಳು ಭಾಗವಹಿಸುವಂತೆ ಕೇಳಿಕೊಂಡಿತ್ತು. ತನ್ನ ದೇಶದ ಉಪವಿದೇಶ ಮಂತ್ರಿಯನ್ನೂ ಒಂದು ವಾರ ಸಿಂಹಳ ದೇಶದಲ್ಲಿರಿಸಿ ತನ್ನ ಕಾರ್ಯವನ್ನು ಸಾಧಿಸಲು ಕುಟಿಲ ಯತ್ನ ಮಾಡಿತು. ಆದರೆ ಚಾಣಾಕ್ಯ ನೀತಿ ಯಾವ ರಾಷ್ಟ್ರಗಳಿಗೂ ಪ್ರಿಯವಾಗಲಿಲ್ಲ. ಕೊಲೊಂಬೋ ಸಮ್ಮೇಲನದ ಫಲಶ್ರುತಿ ಕೇಳಬರತೊಡಗಿದೆ. ಆದರೆ ಚೀನಾದ ಸರಕಾರಿ ವರ್ತಮಾನಗಳಿಂದ ಸಾಕಷ್ಟು ನಿರಾಶೆ ಉಂಟಾದಂತಿದೆ ಅಮುದರಿಂದ ಚೀನಾಕ್ಕೆ ಸ್ವಲ್ಪ ಆಲೋಚನೆ ಮಾಡುವ ಪ್ರಸಂಗ ಬಂದುಬಿಟ್ಟಿದೆ.

ಇಂಡೋನೇಶಿಯೂದ ವರ್ತನೆ

ಪೇಕಿಂಗ್‌ನ ಪರಮ ಮಿತ್ರರೆಂಗ ನಿಸಿಕೊಂಡ ಡಾ| ಸುಕರ್ನೋ ರವರು ಈ ಒಮ್ಮೆಂದೊಮ್ಮೆಗೆಯೇ ಪರಿವರ್ತನೆಯೂಗಿದ್ದಾರೆ. ಅವರು ಟೋಕಿಯೋದಿಂದ ಸಿಂಗಾಪುರಕ್ಕೆ ತೆರಳುತ್ತಿದ್ದಾಗ, ಹಾಂಗ್‌ಕಾಂಗ್‌ನಲ್ಲಿ ಅವರಿಗಾಗಿ ಕಾಯುತ್ತಿದ್ದ ಮಿಂ ಹುವಾಂಗ್‌ಚೆಂಗ್‌ರಿಂದ ಚೀನೀ ದೃಷ್ಟಿಕೋನವನ್ನು ತಿಳಿದುಕೊಳ್ಳುವ ಮನಸ್ಸು ಮಾಡದೆ ನೇರವಾಗಿ ಮುಂದೆ ಸಾಗಿದರು. ಇದರಿಂದ ಚೀನಾಕ್ಕೆ ಈಗ ಬಹು ಪೇಚಾಟವಾದಂತಿದೆ. ತನ್ನಪರವು ಮಿತ್ರನು ಈ ರೀತಿ ನ್ಯಾಯದತ್ತ ಒಲಿದು ತಮ್ಮ ಕೈಬಿಟ್ಟಾನೆಂಬಭಾವನೆ ಆದಕ್ಕಿರಲಿಲ್ಲ

ಶ್ರೀಮತಿ ಲಾಯಿ ಸಿಂಹಳಕ್ಕೆ

ಕುಟಿಲ ನೀತಿ ಪ್ರವೀಣವಾದ ಚೀನಾ ಈಗ ತನ್ನ ಪ್ರಭಾವವನ್ನು ಯಾವ ರೂಪದಿಂದಲಾದರೂ ಮಾಡಲು ಸಿದ್ಧವಿದೆ. ಸ್ವರ್ಗೀಯ ಚೌ ಎನ್ ಲಾಯಿಯವರ ಪತ್ನಿಯರೇ ಚೀನಾವನ್ನು ಪ್ರತಿನಿಧೀಕರಿಸಿದರು. ಆದರೆ ಶ್ರೀಮತಿ ಚೌ ಎನ್ ಲಾಯಿ ಬರಲಿ. ಮಾವೋ ಬರಲಿ, ಯಾರೂ ಅವರೆಡೆಗೆ ಒಲಿದು ಹೋಗಲಾರರೆಂದು ಧೈರ್ಯವಾಗಿ ಕೇಳಬಹುದು.

ಸಮ್ಮೇಲನದವ್ಯಾಪ್ತಿ—ಉದ್ದೇಶ

ಜಗತ್ತಿಗೇ ಗಂಡಾಂತರಕಾರಿಯೂದ ಭಾರತ ... ಚೀನಾ ಗಡಿ ಯುದ್ಧವನ್ನು ಶಾಂತ ರೀತಿಯಿಂದ ಪರಿಹರಿಸುವ ವಿಧಾನವನ್ನು ಕಂಡು ಹುಡುಕಿ ಒಂದು ನಿರ್ಧಾರಕ್ಕೆ ಬರುವುದೇ ಈ ಸಮ್ಮೇಲದ ಪ್ರಧಾನ ಉದ್ದೇಶ. ಆದರೆ ಈ ಸಮ್ಮೇಲನದಲ್ಲಿ ಈಜಿಪ್ಟ್ ಮತ್ತು ಇಂಡೋನೇಶಿಯೂಗಳು ಚೀನಾದಿಂದ ತಿರಸ್ಕರಿಸಲ್ಪಟ್ಟ ಮೂರು ಸೂಚನೆಗಳ ಬಗ್ಗೆ ವಿಮರ್ಶಿಸುವುವು. ಈ ಸಮ್ಮೇಲನವು ನಿಸ್ಪಕ್ಷಪಾತದಿಂದ ವಿಚಾರ ವಿಮರ್ಶಮಾಡಿ ಶಾಂತಿಪೂರ್ಣ ಪರಿಹಾರವನ್ನು ಉಭಯ ರಾಷ್ಟ್ರಗಳಿಗೂ ಸಮ್ಮತವಾಗುವಂತೆ, ಆದರೆ ನ್ಯಾಯ—ಯಥಾರ್ಥಗಳನ್ನು ಬಿಡದೆ ನೂಡುವುದು.

— ಶ್ರೀ ರಾಮತನಯ

ಕಾರ್ಪೊರೇಶನ್‌ನ ತೃತೀಯ ವೇಲ್ಯುವೇಶನ್ ಫಲಿತಾಂಶ

ಲೈಫ್ ಇನ್ ಪೂರನ್ಸ್ ಕಾರ್ಪೊರೇಷನ್‌ನ ಡಿಸೆಂಬರ್ 31, 1961ರ ನರಿಗಿನ ಸಂಬಯೂಬಿಲಿಟೀಸ್ ಮತ್ತು ಎಸೆಟ್ಸ್' ಬಗ್ಗೆ ಮಾಡಿರುವ ತೃತೀಯ ವೇಲ್ಯುವೇಶನ್ ಫಲವಾಗಿ ದೊರಕಿರುವ ಲಾಭಗಳಲ್ಲಿ ರೂ. 32.73 ಕೋಟಿಗಳನ್ನು ಲಾಭದಲ್ಲಿ ಭಾಗವಹಿಸಲು ಹಕ್ಕಿರುವ ಪಾಲಿಸಿಗಳಿಗೆ ಹಂಚಿ ಕೊಡಲಾಗುವುದೆಂದು ಮತ್ತು ಸರಕಾರಕ್ಕೆ ಆದರ ಪಾಲು ರೂ. 1 72 ಕೋಟಿ ಕೊಡಲಾಗುವುದೆಂದು ಕಾರ್ಪೊರೇಷನ್ ಪ್ರಕಟಿಸಿರುತ್ತದೆ.

ಕಾರ್ಪೊರೇಷನ್ ನೂರಾರು ಮೂಡಿರುವ ಮತ್ತು ಲಾಭದಲ್ಲಿ ಭಾಗವಹಿಸಲು ಹಕ್ಕಿರುವ ಪಾಲಿಸಿಗಳಿಗೆ ಬೋನಸ್ ದರಗಳು:—ಹೋಲ್ ಲೈಫ್ ಎಶುರೆನ್ಸಸ್- ರೂ. 16.00 ಪ್ರತಿ ಸಾವಿರದ ಮೇಲೆ ವರ್ಷಕ್ಕೆ ಎಂಡೋಮೆಂಟ್ ಎಶುರೆನ್ಸಸ್ ರೂ. 12.80 ಪ್ರತಿ ಸಾವಿರದ ಮೇಲೆ ವರ್ಷಕ್ಕೆ.

ಲಾಭದಲ್ಲಿ ಭಾಗವಹಿಸಲು ಹಕ್ಕಿರುವ ಮುಂಚಿನ ವಿಮಾ ಕಂಪೆನಿಗಳ ಪಾಲಿಸಿಗಳಿಗೆ ಬೋನಸ್‌ಗಳನ್ನು ಸಮಗಟ್ಟಾಗಿ (ಡಿಫರೆನ್ಸಿಯಲ್ ಬೋನಸ್‌ಗಳಿಗಾಗಿ ಪಾಲಿಸಿಗಳನ್ನು ವಿಂಗಡಿಸಿರುವ ಆಧಾರದ ಮೇಲೆ) 1961 ರ ಕಾಯಿದೆ ಪ್ರಕಾರ ಪ್ರಕಟಿಸಲಾಗಿದೆ.

ಮೇಲಿನ ಬೋನಸ್ ದರಗಳು ಮತ್ತು ಮುಂಚಿನ ವೇಲ್ಯುವೇಶನ್ ಫಲವಾಗಿ ಪ್ರಕಟಿಸಲಾಗಿರುವ ಬೋನಸ್ ದರಗಳು ಒಂದೇ ಆಗಿರುತ್ತವೆ.

ಜಾರಿಯಲ್ಲಿರುವ ವ್ಯವಹಾರ

ವೇಲ್ಯುವೇಶನ್ ದಿನದಂದು ಜಾರಿಯಲ್ಲಿರುವ 85.81 ಲಕ್ಷ ಪಾಲಿಸಿಗಳ ಏವೂ ಮೊಬಲಗು ರೂ. 2738 ಕೋಟಿಗಳಾಗಿರುತ್ತದೆ. ವತ್ತು ರೂ. 109.50 ವರ್ಷಕ್ಕೆ ಕೊಡಬೇಕಾದ ಲೈಫ್ ಎನ್ಯುಟಿ ಪಾಲಿಸಿಗಳ ಸಂಖ್ಯೆ 10,297 ಆಗಿರುತ್ತದೆ.

ವೇಲ್ಯುವೇಶನ್‌ಗಾಗಿ ಆಧಾರ

ಈ ವೇಲ್ಯುವೇಶನ್‌ನನ್ನು ಮುಂಚಿನ ವೆಲ್ಯುವೇಶನ್‌ನ ಆಧಾರದ ಮೇಲೆ ತಯಾರಿಸಲಾಗಿದೆ.

ಎಲ್ಲಾ ತರಗತಿಯ ಎಶುರೆನ್ಸ್‌ಗಳನ್ನು (ಕೆಲವನ್ನು ಹೊರತು) (ವೇಲ್ಯುವೇಶನ್‌ಗಾಗಿ 'ಮೊಡಿಫೈಡ್ ಬಿಯಂಟಲ್' (1925-35) ಅಲ್ಟಿಮೇಟ್ ಮೊರ್ಟಾಲಿಟಿ ಟೇಬಲ್' ವತ್ತು ಲೈಫ್ ಎನ್ಯುಟೀಸ್ ವೇಲ್ಯುವೇಶನ್‌ಗಾಗಿ 'ಬ್ರಿಟಿಶ್ ಆಫೀಸ್ a (m) ಮತ್ತು a (f) ಲೈಫ್ ಎನ್ಯುಟಿ ಟೇಬಲ್ಸ್, ಅಲ್ಟಿಮೇಟ್ ಎಕ್ಸ್‌ಪೀರಿಯನ್ಸ್" ಇವುಗಳನ್ನು ಉಪಯೋಗಿಸಲಾಗಿವೆ.

ಲಯೂಬಿಲಿಟೀಸ್‌ಗಳನ್ನು 2-7/8% ಬಡ್ಡಿ ದರದಲ್ಲಿ ನಿರ್ಧರಿಸಲಾಗಿದೆ.

ಲಾಭ ಸಹಿತ ಪಾಲಿಸಿಗಳ ಮುಂದಿನ ಖರ್ಚುಗಳಿಗಾಗಿ ಮತ್ತು ಲಾಭಗಳಿಗಾಗಿ ಮತ್ತು ಲಾಭರಹಿತ ಪಾಲಿಸಿಗಳ ಮುಂದಿನ ಖರ್ಚುಗಳಿಗಾಗಿ, ಆಫೀಸ್ ಪ್ರೀಮಿಯಮ್‌ಗಳ 20% (ಲಾಭ ಸಹಿತ ಪಾಲಿಸಿಗಳಿಗೆ) ಮತ್ತು 15% (ಲಾಭ ರಹಿತ ಪಾಲಿಸಿಗಳಿಗೆ) ಪ್ರಕಾರ ವ್ಯವಸ್ಥೆಯನ್ನು ಮಾಡಲಾಗಿದೆ.

ಕಾರ್ಪೊರೇಷನ್ ಮೂಡಿರುವ ನಿಕ್ಷೇಪಗಳಿಂದ ಎರಡು ವರ್ಷಗಳ ಅವಧಿಯಲ್ಲಿ ಅಧಿಕ ಆದಾಯ, ಅಂದರೆ 4.14%, ಬಂದುದರಿಂದಾಗಿ (ಇದು ಇದಕ್ಕಿಂತ ಮುಂಚಿನ ಎರಡು ವರ್ಷಗಳ ಅವಧಿಯಲ್ಲಿ 3.81% ಆಗಿತ್ತು) ವೇಲುವೇಶನ್‌ನಲ್ಲಿ ಸ್ವಲ್ಪ ಹೆಚ್ಚಿಗೆ ಬಡ್ಡಿ ದರವನ್ನು ಉಪಯೋಗಿಸಿದಲ್ಲಿ ತಪ್ಪಾಗುತ್ತಿರಲಿಲ್ಲ. ಆದರೆ ಈಗಿನ ಚೀನಾ-ಭಾರತಗಳ ಗಡಿಯುದ್ಧ ದೀರ್ಘಕಾಲ ನಡೆಯುವ ಸಂಭವವಿರುವುದರಿಂದ ರಾಷ್ಟ್ರದ ಆರ್ಥಿಕ ಸ್ಥಿತಿಯ ಹಿತಚಿಂತನೆಯನ್ನು ಮಾಡಿ, ಈ ವೇಲ್ಯುವೇಶನ್‌ನ ಬೋನಸ್ ದರಗಳನ್ನು ಹೆಚ್ಚಿಸಲಾಗಿರುವುದಿಲ್ಲ.

ಪೊರ್ಟಾಲಿಟಿ ಕೋಧನೆ:

ಈ ವೇಲ್ಯುವೇಶನ್‌ನ ಒಂದು ವಿಶೇಷ ಲಕ್ಷಣವೇನೆಂದರೆ ನಿಜವಾದ ಪೊರ್ಟಾಲಿಟಿ ಅನುಭವಕ್ಕೆ ಮತ್ತು ವೇಲ್ಯುವೇಶನ್‌ನಲ್ಲಿ ಅಧಾರವಾಗಿ ತೆಗೆದುಕೊಂಡ ಪೊರ್ಟಾಲಿಟಿಗೆ ಮಾರ್ಜಿನ್ ನಿರ್ಣಯಿಸಲು, 1961ರಲ್ಲಿ ಮುಖ್ಯ I. H. O. ಯುನಿಟ್‌ಗಳ ಮತ್ತು ಆರಿಸಿರುವ ಡಿವಿಜನ್‌ಗಳ ನಿಜವಾದ ಅನುಭವವನ್ನು ಬೇರೆ ಬೇರೆಯಾಗಿ ಶೋಧನೆ ಮಾಡಲಾಗಿರುತ್ತದೆ. ಇದರ ಫಲಿತಾಂಶವನ್ನು ಎಕ್ಚುವರೀಸ್‌ಗಳ ವರದಿಯಲ್ಲಿ ಸೇರಿಸಲಾಗಿದೆ.

ಈ ವಿಭಜನೆಯ ಫಲಿತಾಂಶ ಸ್ಪಷ್ಟವಾಗಿ ಸೂಚಿಸುತ್ತದೆ, ಏನೆಂದರೆ, ಎಲ್. ಐ. ಸಿ. ಯು. ಪ್ರೀಮಿಯಮ್ ದರಗಳಿಗಾಗಿ ಉಪಯೋಗಿಸಿರುವ ಪೊರ್ಟಾಲಿಟಿ ಆಧಾರವನ್ನು ಮತ್ತು ಈ ವೇಲ್ಯುವೇಶನ್ ಪೊರ್ಟಾಲಿಟಿ ಆಧಾರವನ್ನು ಹೋಲಿಸಿದಲ್ಲಿ 1961ರಲ್ಲಿ ಕಂಡು ಬಂದಿರುವ ನಿಜವಾದ ಪೊರ್ಟಾಲಿಟಿ ಅನುಭವ ಬಹಳ ಅನುಕೂಲವಾಗಿರುತ್ತದೆ.

ಉತ್ಪಾದನೆಯ ವಿಷಯಗಳಿಗಲ್ಲದೆ
ಅನ್ಯಥಾ ಸಾಲಮಾಡದಿರೋಣ.
ಮದುವೆ ಉಪನಯನಾದಿ
ಸಾಮಾಜಿಕ ಸಮಾರಂಭಗಳ
ವೆಚ್ಚವನ್ನು ನಿಲ್ಲಿಸೋಣ.
ಸಬಲ ಮತ್ತು ಶಕ್ತಿಯುತ
ರಾಷ್ಟ್ರವನ್ನು ಕಟ್ಟುವ
ಹೊಸ ಅಭ್ಯಾಸಗಳನ್ನು
ಬೆಳೆಸುವ;
ಉಳಿಸುವ
ರಾಷ್ಟ್ರರಕ್ಷಣೆಗಾಗಿ
ಅರ್ಪಿಸುವ

ಸಿಂಡಿಕೇಟ್ ಬ್ಯಾಂಕ್

• ಶಾಂತಿ ಸಮಯದಂತೆ ಸಮರ ಕಾಲದಲ್ಲಿಯೂ ರಾಷ್ಟ್ರಸೇವೆಯ ಧ್ಯೇಯದಲ್ಲಿ •

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಶ್ರೀ ಪಿ. ಎಸ್. ಹೆಬ್ಬಾರ ('ಸಿರಿಪತಿ') ಅವರ ನವೀನ ಜನಪದ ಗೀತಾಸಂಕಲನ

'ಕೋಕಿಲವಾಣಿ'

(ಸ್ಪೆಸ್ಪಿಷಾಲ್ ವಿ.ಎಂ. ಇನಾಂದಾರರ ಮುನ್ನುಡಿ)

ದ. ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದ್ದ ಕೆಲವೊಂದು ಹಾಡುಗಳನ್ನು ಉದ್ಧರಣಗಳೊಂದಿಗೆ ಕೊಡಲಾಗಿದೆ

ಬೆಲೆ: ರೂ ೧—೦೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ:

ಪಿ. ಎಸ್. ಹೆಬ್ಬಾರ, ಎಂ.ಜಿ ಎಂ. ಕಾಲೇಜು
ಕುಂಜಿಬೆಟ್ಟು, ಉಡುಪಿ

Edited Printed & Published by K. H. Shetty, at the Navayuga Press, Udipi, S. India.

NTRIBUTE
UR MITE
OUR
ATIONAL
EFENCE
ND

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 15

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 20—12—1962 ಗುರುವಾರ

20ನ ಪೈಸೆ
ವಾ. ಚಂದಾ ರೂ. 6_75
ಸಂಪುಟ 42 ಸಂಚಿಕೆ 15

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿರಿ

ಅಧಃಪತನದ ಹೇತು

ಪಾಕಿಸ್ತಾನದ ಸವತಿ ಮತ್ಸರ

ಪಾಕಿಸ್ತಾನವು ಸ್ವಾತಂತ್ರ್ಯ ಸಿಕ್ಕಿದಂದಿನಿಂದಲೇ ಭಾರತವನ್ನು ವಿರೋಧಿಸುತ್ತ ಬಂದಿದೆ. ಭಾರತದ ಶತ್ರುಗಳನ್ನೆ ತನ್ನ ಮಿತ್ರರನ್ನಾಗಿ ಪರಿಗಣಿಸುತ್ತದೆ. ಅದು ನ್ಯಾಯಾನ್ಯಾಯಗಳನ್ನು ವಿಮರ್ಶಿಸುವ ದಕ್ಕೇ ಹೋಗುವುದಿಲ್ಲ. ಇಲ್ಲವಾದರೆ ಭಾರತದ ಮೇಲೆ ದ್ವೇಷ ಕಟ್ಟಿಕೊಳ್ಳಲು ಅದಕ್ಕೆ ಕಾರಣವೇನೂ ಇಲ್ಲ. ಪ್ರತಿಯೊಂದು ವಿಚಾರದಲ್ಲೂ ಭಾರತದ ಮೇಲೆ ಸಂಶಯ. ಈ ಸಂಶಯವೇ ಅದಕ್ಕೆ ಅಜೀರ್ಣಕಾರಿ ವಿಷದಂತೆ ಆಗಿದೆ. ಇದನ್ನು ನಂಗಲಿಕ್ಯೂ—ಉಗುಳಲಿಕ್ಕೂ ಆಸ್ಪದವೆನ್ನವಂತಾಗಿದೆ. ಭಾರತದ ಧೋರಣೆಯು ಬಗ್ಗೆ ಸರಿಯಾದ ಅಧ್ಯಯನ ಅರಿವು ಮಾಡಿಕೊಳ್ಳದೆ, ಏನು ಹೇಳಿದರೂ 'ಅದು ನಮ್ಮ ಕೆಡುಕಿಗೇ' ಹೇಳಿದ್ದಾದೆ. ಅವರು ನಮಗೆ ಅನ್ಯಾಯವನ್ನೇ ಮಾಡುತ್ತಿದ್ದಾರೆ' ಎಂಬ ಕಂಟು ನ್ಯಾಯಗಳನ್ನು ಮೇಲೆತ್ತಿ ಬಾಯಿ ಬಡಿದು ಕೊಳ್ಳುತ್ತದೆ ತಪ್ಪುಗಳನ್ನು ಹುಡುಕುವರಿಗೆ ಪ್ರತಿಯೊಂದು ತಪ್ಪಾಗಿಯೇ ತೋರುತ್ತದೆ. ಅಂತೆಯೇ ಭಾರತ ಮಾಡಿದುದೆಲ್ಲ ತಪ್ಪೆಂದೇ ಭಾವಿಸುತ್ತಿರುವ ಪಾಕಿಸ್ತಾನಕ್ಕೆ ನ್ಯಾಯವಾದಸರಿಯಾದ ದಾರಿ ಬಹಳ ಕಷ್ಟ. ತನ್ನ ಸ್ವಂತಕಾಲಮೇಲೆ ನಿಲ್ಲಲಾರದ ಪಾಕಿಸ್ತಾನ ತನ್ನ ಒರಟು ವಾಚಾಳಿತನದಲ್ಲಿಜಗತ್ತಿನ ಯಾವದೇ ಮಹಾ ರಾಷ್ಟ್ರಕ್ಕೆ ಕಡಿಮೆಯಿಲ್ಲ ಸ್ವಾತಂತ್ರ್ಯ ಸಿಕ್ಕಿದ ಕೂಡಲೇ ಅದು ಅಮೇರಿಕದೊಂದಿಗೆ ಸೈನಿಕ ಒಪ್ಪಂದ ಮಾಡಿಕೊಂಡು ಅದರ ಕೈ ಗೊಂಬೆಯಾಯಿತು. ಭಾರತದ ಮೇಲೆ ಬಾಯಿ ತುಂಬಾ ಆರೋಪ—ಅಪಲಾಪ ಹೆಬ್ಬಿಸಿ ಅಮೇರಿಕರನ್ನರನ್ನು ತನ್ನ ಬಲೆಗೆ ಬೀಳಿಸುವಂತೆ ಹವಣಿಸಿತು. 'ತನ್ನ ಕುದುರೆಗೇ ಮೂರು ಕಾಲು' ಎಂದು ವಾದಿಸಿತು. ಆದರೆ ಅಮೇರಿಕನ್ನರು ಇದರ ಬಲೆಗೆ ಪೂರ್ಣ ಸಿಗದುದರಿಂದ ಪಾಕಿಸ್ತಾನಕ್ಕೆ ಭಾರತದ ಮೇಲೆ ಹೊಟ್ಟೆ ನೋವು ಈಗ ಸ್ವಲ್ಪ ಜೋರೇ ಆಗುವಂತಾಯಿತು.

ಇದಕ್ಕೆ ಹಿನ್ನೆಲೆಯೇನು ಎಂಬುದನ್ನು ವಿಚಾರಿಸುವುದು ಅಗತ್ಯವಿಲ್ಲ ಯಾಕೆಂದರೆ ದೋಷಗಳನ್ನು ಹುಡುಕುವವರಿಗೆ ಜಗತ್ತೇ ದೋಷಮಯವಾಗಿ ಕಂಡರೂ ತಪ್ಪಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಹಿಂದೂ—ಮುಸ್ಲಿಂ ವಿರೋಧಿ ದಂಗೆಗಳು ನಾನಾ ಕಷ್ಟ ಆಗಿವೆ ಸ್ವತಃ ಮಹಾತ್ಮಾಜೀಯವರು ಜೀವನ ಪರ್ಯಂತರ ಹಿಂದೂ ಮುಸ್ಲಿಂ ಐಕ್ಯತೆಗಾಗಿ ಹೋರಾಡಿ ಕೊನೆಗೆ ತಮ್ಮ ಅಮೂಲ್ಯ ಪ್ರಾಣವನ್ನೇ ಅರ್ಪಿಸಿದರೂ ಸಮಸ್ಯೆ ಬಗೆಹರಿಯಲಿಲ್ಲ. ಇನ್ನು ದಾಯಾದಿ ದ್ವೇಷ—ವತ್ಸರಗಳಿರುವಾಗ ಭಾರತದ ವಿಭಜನೆಯಾಯಿತು ಅವಿರೋಧಿದಗೇ ದಾಯಾದಿ ದ್ವೇಷದ ಅಗ್ನಿ ಮತ್ತಷ್ಟು ಜ್ವಲಿಸಿತು. ಈ ವಿಭಜನೆಯಾಗುವಾಗ 'ರೋಗಿ ಬಯಸಿದ್ದೂ ಹಾಲು ವೈದ್ಯಕೊಟ್ಟದ್ದೂ ಹಾಲು' ಎನ್ನುವಂತೆ ಕೆಲವೊಂದು ವಿವಾದಗ್ರಸ್ತ ವಿಚಾರಗಳುಂಟಾದುವು. ಮತ್ತೆ ಪಾಕಿಸ್ತಾನದ ಪೌರುಷ ಕೇಳಬೇಕೆ? ಒಂದೇ ಸವನೆ ಅದು ಭಾರತದ ಮೇಲೆ ಉರಿಕಾರತೊಡಗಿತು. ತನ್ನ ದೇಶದ ಸ್ಥಿತಿಯೇನು? ಭಾರತ ದೇಶ ನಮಗೇನಾಗಬೇಕು? ಎಂಬ ವಿಚಾರವಿಮರ್ಶೆ ಮಾಡದೆ ತನ್ನ ವಿವೇಕ ದೂರ ದೃಷ್ಟಿಯಿಂದ ಪ್ರತಿಯೊಂದು ವಿಚಾರದಲ್ಲಿ ಭಾರತಕ್ಕೆ ಅಡ್ಡಕಾಲು ಇಡತೊಡಗಿತು

ಸ್ವಾತಂತ್ರ್ಯ ಸಿಕ್ಕಿದೊಡನೆಯೇ ಒಂದೇ ಸವನೆ ಹಿಂದುಗಳನ್ನು ತನ್ನ ದೇಶದಿಂದ ಹೊರಗೆ ತಳ್ಳಿ ತನ್ನ ರಿರವ ಕೃತ್ಯದ ಪ್ರದರ್ಶನ ಮಾಡಿತು. ತಾನು ಯಾಕೆ ಹೀಗೆ ಮಾಡುತ್ತಿದ್ದೇನೆ ಎಂಬುದರ ಕಿರಿತು ಅದು ಯೋಚನೆ ಮಾಡಿಲ್ಲ ನಿರಾಶ್ರಿತರಾಗಿ ಬಂದ ಭಾರತೀಯರಿಗೆ ನಾವು ಆಶ್ರಯ ಕೊಟ್ಟೆವೆನ್ನುವಾಗ ಅವುಗಡಿಯಲ್ಲಿ ಗಲಾಟೆ ಪ್ರಾರಂಭ ಮಾಡಿತು. ವ್ಯರ್ಥವಾಗಿ ಗುಂಡು ಹಾರಿಸಿ ಉದಟಿಳನೆಬ್ಬಿಸಿತು. ಭಾರತದ ತಾಳ್ಮೆ ಅದರ ಸೇದೆಯಿಂ ಅಗ್ನಿಗೆ ಆಜ್ಯವಾಯಿತು. ಭಾರತದ ಎಚ್ಚರಿಕೆ ಆದರೆ ಅಹಂಕಾರ ಎಂಬ ಪರ್ವಕ್ಕೆ ಹಾಲೆರೆದಂತಾಯಿತು. ಗಡಿ ಸಮಸ್ಯೆ ಬಂದು ಶಾಂತತೆಗೆ ಬರುತ್ತದೆನ್ನುವಾಗ ಅದು ಸಿಂಧೂ ನದಿ ನೀರಿನ ಕಾಲುವೆ ನೀರಿಗೆಂದು ಒಕ್ಕಳ ಕಾದಾಡಿತು. ಭಾರತದ ಹಕ್ಕಿನ ರಾವಿ ಬಿಯ್ಲೇಜ್ ನದಿಗಳನ್ನು ತನ್ನದೆಂದು ಹೇಳಲು ಸಕ್ರಮಿಸಿತು. ನೆಹರೂರವರು ಸದ್ಭಾವನ ತಾಳಿ ಮಾತುಕತೆ ನಡೆಸಿ ಈ ವಿವಾದವನ್ನು ಬಗೆಹರಿಸಿದರೆನ್ನುವಾಗ ಮತ್ತೆ ಕಾಶ್ಮೀರ ಸಮಸ್ಯೆಯ ಮೇಲೆ ಕಣ್ಣು ಕೆಂಪಗೆ ಕಿರಿಕಿಸಿ ಕೊಡುತ್ತಾ ಇದೆ.

ಭಾರತದ ಪವಿತ್ರವಾದ ಕೀರ್ತಿಯನ್ನು ಪಾಕಿಸ್ತಾನಕ್ಕೆ ನೋಡಿಕೊಂಡು ಕಳಿತು ಕೊಳ್ಳಲಾಗುತ್ತಿದಿಲ್ಲ ಅದರ ಮೇಲೆ ಏನಾದರೂ ಕಲಂಕ ಹಚ್ಚಬೇಕೆ ದು ಅದರ ಆಸೆ. ಈ ದುರಾಸೆಯೇ ಅಧಃಪತನಕ್ಕೆ ಕಾರಣವಾಗದಿರಲಾರದು.. ಮಾನವನ ದ ಜಿನ್ನಾರಿಂದ ತೊಡಗಿ ಅಯೂಬ್ ಖಾನ್‌ರ ತನಕದ ಪ್ರತಿಯೊಬ್ಬ ಉಚ್ಚಾಧಿಕಾರಿಯೂ ಭಾರತವನ್ನು ಟೀಕೆ ಸುವುದು ತಮ್ಮ ಮೂಲಭೂತ ಹಕ್ಕು ಎಂದು ತಿಳಿಗುಕೆಂಡು ಬಂದಂತೆ ಕಾಣುತ್ತಿದೆ. ಸ್ವಾತಂತ್ರ್ಯ ಸಿಕ್ಕಿದ ಬಳಿಕದ ಭಾರತ ಪಾಕಿಸ್ತಾನದ ಇತಿಹಾಸವನ್ನು ಅವಲೋಕಿಸಿದರೆ ನೆರೆಕರೆಯ ರಾಷ್ಟ್ರಗಳಾಗಿ ಇಷ್ಟೊಂದು ಪರಸ್ಪರ ಘರ್ಷಣೆಯಲ್ಲಿವುದನ್ನು ಬೇರೆಲ್ಲಿಯೂ ಕಾಣಲಾರೆವು. ಬಾಯಿಯಲ್ಲಿ ಪಾಕಿಸ್ತಾನ ಸಂಭಾವಿತನಂತೆ ಭಾರತದೊಡನೆ ಮಿತ್ರತ್ವ ಬೆಳೆಸಲು ಸದಾ ಉತ್ಸುಕನಾಗಿದ್ದೇನೆಂದು ಹೇಳಿದರೂ ಕಾರ್ಯದಲ್ಲಿ ಮಾತ್ರ ತದ್ವಿರುದ್ಧವಾಗಿದೆ.

ಚೀನಾದ ಅಸುರೀ ಆಕ್ರಮಣದ ಸಂದರ್ಭಕಾಲದಲ್ಲಿ ಆ ಕಮ್ಯುನಿಸ್ಟ್ ರಾಷ್ಟ್ರದೊಂದಿಗೆ ಒಪ್ಪಿ ಬೆಳೆಲು ಅದು ಮುಂದೆ ಹೋಗಿದುದೆನ್ನುವಾಗ ಅದು ಮೂರ್ಖತೆಗೆ ಬೇರೆ ಉಪಮಾನವೇ ಬೇಕಾಗಿಲ್ಲ. ಚೀನಾ ಭಾರತದ ಮೇಲೆ ಮಾಡಿರುವ ನಗ್ನ ಆಕ್ರಮಣವನ್ನು ಅದು ಕಣ್ಣೆತ್ತಿದು ನೋಡಿದ್ದರೂ, ಆಯ ಚೀನಾ ಆಕ್ರಮಣ ಮಾಡಿದುವನ್ನು ಬಾಯಿ ಬಿಟ್ಟು ಹೇಳಿಲ್ಲ. ಚಿಕ್ಕ ಗಡಿ ಸಮಸ್ಯೆಯೆಂಬ ಕ್ಷೀಣ ಸ್ವರವಿನ ಹೇಳತು ಅದರ ಆಸ್ಥಾನ ಮಾತ್ರ ಮಾಡಿ ಸುಮ್ಮಗೆ ಕೂತಲ್ಲಿಲ್ಲ ಜಗತ್ತಿನ ಸ್ವಾತಂತ್ರ್ಯಪ್ರಿಯವಾದ ಯಾ ಪ್ರೊಂದ. ರಾಷ್ಟ್ರವೂ ಚೀನಾದ ಆಕ್ರಮಣವನ್ನು ಸಮರ್ಥಿಸಲಾರವು. ಆದರೆ ನಮ್ಮ ಭ್ರಾತೃ ರಾಷ್ಟ್ರ ಪಾಕಿಸ್ತಾನ ಇನ್ನೇ ತನಗೆ ತಕ್ಕ ಸಮಯ ಎಂದು ಹೇಳಿ ಬೆಳೆಯ ಲೋಟೆಯಲ್ಲಿ ಪಾಕಿ ದಪ್ಪವಾದ ಹಾಲು ಕುಡಿಯಿತು. ಭಾರತಕ್ಕೆ ಬುದ್ಧಿ ಕಲಿಸಲು, ತನ್ನ ಸೇಡು ತೀರಿಸಲು ಇಂಥ ಸುವರ್ಣ ಸಮಯ ಇಲ್ಲನೆಂದು ನಿಶ್ಚಯಿಸಿ ಚೀನೀಯರ ಬಲೆಗೆ ತಾನಾಗಿ ಹೋಗಿ ನಾವು ನೀವು ಮಿತ್ರರು ಎಂದು ಹೇಳಿತು. ಆದರೊಡನೆ ಅನಾಕ್ರಮಣ ಒಪ್ಪಂದ ಮಾಡಿಕೊಂಡಿತು, ಇಷ್ಟ ಮಾಡಿದರೂ ಅದರ ಹೊಟ್ಟೆನೋವು ಕಡಿಮೆಯಾಗಲಿಲ್ಲ.

ಭಾರತದ ಸ್ವಾತಂತ್ರ್ಯ ರಕ್ಷಣೆಗೆಂದು ಬ್ರಿಟನ್ ಅಮೇರಿಕಗಳು ಶಸ್ತ್ರ ಸಹಾಯ ಮಾಡುವಾಗಲಂತೂ ಅದರ ಬೊಬ್ಬೆ, ಕಿರಿಚಾಟ ಹೇಳ ತೀರದು. ಅಮೇರಿಕಾವನ್ನು ಪ್ರತ್ಯಕ್ಷವಾಗಿ ಕಠೋರವಾಗಿ ಟೀಕೆ ಮಾಡಿತು. ಭಾರತವು ಈ ಶಸ್ತ್ರಾಸ್ತ್ರಗಳಿಂದ ಪಾಕಿಸ್ತಾನದ ಮೇಲೆ ಯುದ್ಧ ಮಾಡುತ್ತದೆಂದು ಸಾರಿತು. ಅಮೇರಿಕವು ಈ ರೀತಿ ಭಾರತಕ್ಕೆ ಸಹಾಯ ಮಾಡುವುದು ಸರಿಯಲ್ಲವೆಂದು ಸಾರಿತು. ಅಮೇರಿಕಾ ಹೀಗೆ ವಿಶ್ವದ್ರೋಹ ಮಾಡಿದರೆ ತಾನು ರಷ್ಯಾದತ್ತ ಮೊರೆಯಿಡುವುದೆಂದೂ ಖಚಿತಪಡಿಸಿತು. ಪಾಕ್ ಸರಕಾರ, ಪಾಕ್ ಪತ್ರಿಕೆಗಳೆಲ್ಲ ಅಮೇರಿಕಾ-ಭಾರತಗಳನ್ನು ನಿಂದಿಸಿ ನೆಹರೂ ಕೆನಡಿಯವರ ಭಾವಚಿತ್ರಗಳನ್ನು ಸುಟ್ಟುಹಾಕುವಂತಹ ಹುಚ್ಚಾತಾಳಿಗಳೂ ಆದುವು. ಪಾಕಿಸ್ತಾನಕ್ಕೆ ಇನ್ನೂ ತೃಪ್ತಿಯಾಗದೆ ಕಾಶ್ಮೀರ ಸಮಸ್ಯೆಯ ನೆಪ ಹಿಡಿದು ಭಾರತವನ್ನು ಧಿಕ್ಕರಿಸಲು ಪ್ರಾರಂಭಿಸಿತು.

ಕಾಶ್ಮೀರ ಸಮಸ್ಯೆಯನ್ನು ಪರಬ್ರಹ್ಮವನ್ನಾಗಿ ಮಾಡಿಕೊಂಡು ಬಂದ ಪಾಕಿಸ್ತಾನಕ್ಕೆ ಈಗ ಏನು ಮಾಡುವುದೆಂದು ಕಾಣುತ್ತಿಲ್ಲ. ಆದರೆ ದ.ರಷ್ಯಾ ಪ್ರಧಾನಿ ಹಾರ್ರಿಮನ್ನರು ಮತ್ತು ಡಂಕನ್ ಸ್ಯಾಂಡೀಸ್‌ರು ಬಂದು ಅದಕ್ಕೆ ಎಚ್ಚರವಿತ್ತರು. ತಾನು ಅಮೇರಿಕದೊಂದಿಗೇನು ಮಾಡುತ್ತಿದ್ದೇನೆಂದು ಅವಕ್ಕೆ ಆಗಲೇ ಗೊತ್ತಾಗಿ ಕೂಡಲೇ ಸ್ವಲ್ಪ ಚಪ್ಪೆಯಾಯಿತು. 'ಕಾಶ್ಮೀರ ಸಮಸ್ಯೆ ಈಗಲೇ ಪರಿಹಾರವಾಗಬೇಕು' ಎಂದು ಹಠಹಿಡಿಯಿತು. ಅದಕ್ಕೆ ಮಾತುಕತೆ ಸದ್ಯವೇ ನಡೆಯಿತು ಆದರೆ ನಿರ್ಧಾರವಾಯಿತು. ಮಾತುಕತೆತೊಡಗಿದರೂ ಕೂತಲೇ ಸಮಸ್ಯೆ ಪರಿಹಾರವಾಗುವುದು ಸಾಧ್ಯವಿಲ್ಲವೆಂದು ಅವಕ್ಕೂ ತಿಳಿಯದ ವಿಷಯವಲ್ಲ.

(ಉಳಿದ ಪುಟ ನೋಡಿರಿ)

ಭದ್ರತೆ
ಬಾಳಿಕೆಗಾಗಿ
ಖೀರಾ

ಇದೀಗ ರಾಷ್ಟ್ರ ರಕ್ಷಣೆ, ಭದ್ರತೆಗಾಗಿ ಹೋರಾಡುವ ಕಾಲವಲ್ಲವೆ?
ನಿಮ್ಮ ಮನೆಯ ಸುರಕ್ಷಿತತೆ, ಭದ್ರತೆಗಳಿಗಾಗಿ ಖೀರಾ ಉಕ್ಕಿನ ಫರ್ನಿಚರುಗಳನ್ನು
ಆರಿಸುವುದು ಉಚಿತವಲ್ಲವೆ?
ಮನೆ, ಮಠ, ಆಫೀಸು, ಆಸ್ಪತ್ರೆ, ಶಾಲೆ ಕಾಲೇಜುಗಳಿಗೆ ಅತ್ಯಾವಶ್ಯಕವಾದ
ಯಾವತ್ತೂ ಉಕ್ಕಿನ ಫರ್ನಿಚರುಗಳಿಗೆ ವಿಚಾರಿಸಿರಿ ಯಾ ಸಂದರ್ಶಿಸಿರಿ!

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು— 1.

ಗೇಹ ರಾಜ್ಯದಲ್ಲಿ

ಕೆಂಪಿನವರ ಮುಗಿಯದ ಕಥೆ

"ಅಲ್ಲ, ನಿನಗೆ ಆವೆಷ್ಟು ಬಾರಿ ಹೇಳ ಬೇಕೊಂತ, ಮನೆಗೆ ಬೇಗ ಬಂದು ಬಿಡಿ; ರಾತ್ರಿ ಮಾಡಿಕೊಂಡು ಬರ ಬೇಡಿ ಅಂತ?"

"ಏನೇ ಅದು, ಭಾರಿ ರಾತ್ರಿಯಾಗಿ ರೋದೀಗ? ಗಂಟೆ ಎಂಟು ಹೊಡೆಯು ತ್ತಲೂ ಗೇಡಿಯೋ ಹೌಸಿನಿಂದ ಹೊರ ಬಿದ್ದೆ; ತತ್‌ಕ್ಷಣ ಉಸಿರು ಕಟ್ಟಿಕೊಂಡೇ ಧಾವಿಸಿ ಬಂದಿದ್ದೇನೆ."

"ಹೌದೌದು, ಪಾಪ, ಓಡಿಯೋಡಿ ಬಂದು ಏರುಬ್ಬಸ ಎಳೆಯುತ್ತಾ ಇದೆ.

"ನೋಡು, ಹೆಚ್ಚುಗಿಚ್ಚು ಮಾತಾ ಡ್ಬೇಡ. ತಲೆಯಿಡಿ ಬೆಚ್ಚಗಿದೆ ಇನ್ನು ಏನಾದರೂ ಬೇಯಿಸಿದ್ದಿದ್ರೆ ಒಂದು ಮುಷ್ಟಿ ಹಾಕು. ತಿಂದಿಟ್ಟು ಹಾಯಾಗಿ ....."

'ಏನು ಮತ್ತೆ ತಲೆ ಬೆಚ್ಚಗಾಗದೆ? ಸಾಯಂ ಕೃಷ್ಣ ಭವನದ ಕಾಫಿ ಗಂಂ ಡಿಗ್ಯಿಷ್ಟು ಕುಡಿಯಬೇಕಿದ್ದಿರಬಹು ದು; ಆದನ್ನು ಬಾಯಿಗೆ ಸುರಿದು ಕೊಳ್ಳುವ ಬದಲು ನೆತ್ತಿಗೇ ಸುರಿದು ಕೊಂಡು ಬಿಟ್ಟಿರಾ?"

"ನೋಡು, ಪುನಃ ಸುರುವಾಯ್ತು ನಿನ್ನ ಪುರಾಣ."

'ತಲೆ ಬೆಚ್ಚಗಿರುವಾಗ, ನಾವು ಏನು ಅಂದ್ರಾ ಅದು ಪುರಾಣವೇ ಆಗತ್ತದೆ. ಸ್ವಲ್ಪ ತಣ್ಣಗೆ ಮಾಡಿಕೊಳ್ಳಿ ಬಚ್ಚಲ ಗುಡಾಣದಲ್ಲಿ ತಂಬಿಗೆ ತಣ್ಣೀರು ಇದೆ."

'ಅಲ್ಲಾ, ನಿನಗೆ ಇಂದು ಏನಾಗಿ ದೇಂತ?'

"ಆಗಿರೋದ ನನಗಲ್ಲ, ನಿನಗೆ. ಎಲ್ಲಿ ಯಾವ ಕಾಂಟೀನಿನಲ್ಲೋ ಹೊಟ್ಟ ಲ್ಲೊ ಹಳಸಿದ ತಿಂಡಿ ತಿಂದು ತಿಂದು ಪಾಡಿರಿನ ಕಾಫಿ ಕುಡಿದು ಕುಡಿದು ನೆತ್ತಿಗೆ ಸಿತ್ತ ಏರಿರೋದು ನಿವಗೆ ತಾನೆ? ಅಲ್ಲ ವಾದ್ರೆ, ಮನೇಬಂದ ತತ್‌ಕ್ಷಣವೇ ತಲೆ ಬೆಚ್ಚಗೆ ಆಗಬೇಕಾದ್ರೆ....."

"ಇಲ್ಲಿ ಕೇಳು; ಕೈಕಾಲು ಬೆಡ್ಡೋ ತೊಳ್ಕು ಬಂದಿದ್ದೇನೆ. ಏನಾದರೂ ಮಾ ಡಿದ್ದರೆ ಬಳಿಕು. ಹೊಟ್ಟೆ ಹಸಿಯುತ್ತೆ."

"ಖಾಪ, ಹಸಿಯುತ್ತೆ ಅಂತೆ ಹೊಟ್ಟೆ. ನಿನಗೆ ಮಾತ್ರ ಹೊಟ್ಟೆ ಹಸಿವು ಇರೋ ದೂಂತ ಕಾಣುತ್ತೆ. ಅಲ್ಲ, ಒಂದು ದಿನ ತುಸು ತಡವಾಯ್ತೂಂದ್ರೆ ಏನು ಜೀವ ಹಾರಿ ಹೋಗುತ್ತೆಯೆ? ಇಲ್ಲಿ ಮನೆಯೊ ಳಗೆ ಹಾಯಾಗಿರೋ ನೀನೇ ಹಸಿವು-ಹ ಸಿವು ಎಂದು ಕೂಗಾಡ್ತಾ ರೇಗಾಡ್ತಾ ಇದ್ರೆ ಆಲ್ಲಿ ನೀಫಾದ ನಮ್ಮ ಸೈನಿಕರ ಪಾಡೇನೂಂತ?'

"ಅಂ, ಎಲ್ಲಿಯವರು?"

"ನೀನೇ ಮೊನ್ನೆ ಅಂದಿದ್ರಲ್ಲ, ನೇಫಾ ದಲ್ಲಿ ಲಡಖದಲ್ಲಿ ನಮಗಾಗಿ ಹೋರಾಡು ತ್ತಿರುವ ಸೈನಿಕರಿಗೆ ಸರಿಯಾದ ಹೊತ್ತು ಗೊತ್ತಿಗೆ ಅನ್ನವಿಲ್ಲ, ತಿಂಡಿಯಿಲ್ಲ, ನೀರು ಇಲ್ಲ ಅಂತ? ಅವರು ನಿಮ್ಮ ಹಾಗೆ ಹೊಟ್ಟೆ ಬಾಕರಾದ್ರೆ ನಮ್ಮ ಗತಿಯೇನಾದೀತು ಅಂತ?"

"ಓಹೋ, ಅವರೆ? ಸೈನಿಕರು! ಅವರಿಗೇನು? ಅವರ ಜೀವನವೇ ಅಂತಹುದು; ನಮ್ಮ ಜೀವನವೇ ಇಂತಹುದು.'

"ಬಹಳ ಒಳ್ಳೆಯವರು ನೀವು. ಮೊನ್ನೆ ಓದಿದ್ದು ಶಾಸ್ತ್ರ, ಇಂದು ಹಾಕುವುದು ಗಾಳ."

"ಅಲ್ಲ ಯಾಕೆ ಹೀಗೆಲ್ಲಾ ವಾತಾಡ್ತಿ ಯಂತ? ಏನು ಇಂದು ಹೂರಾದ್ರೂ ಬಳೆ ಉಂಗುರ ಹಾರವಾಂತ ಕೇಳ್ಕೊಂಡು ಮನೆಗೆ ಬರ್ಲಿಲ್ಲ ತಾನೆ?'

"ಯಾಕೆ ಬಂದಾರು? ನನ್ನ ಮನೆ ಬಂಗಾರ ಊರಿಗೆಲ್ಲಾ ಗೊತ್ತಿರೋವಾಗ ಬರುವ ಅಗತ್ಯವಾದರೂ ಏನು? ಇದ್ದ ಒಂದು ತಂಡನ್ನೂ ಮೊನ್ನೆ ದಾನ ಮಾಡಿ ಯಾಗಿತ್ತಲ್ಲ? ಅದಿರ್ಲಿ. ಈಗ ರೇಡಿಯೊ ಹೌಸಿಗೆ ಹೋಗದ್ದೆ ಅಂದ್ರಲ್ಲ? ಏನಂತೆ ರೇಡಿಯೋ ನ್ಯೂಸು?'

"ಆದೇನು ಬೊಗಳುತ್ತೆ ಬಿಡು.'

"ಏನು? ಬೊಗಳುವುದೆ? ಮೊನ್ನೆ ಅದ ನ್ನ ಆಷ್ಟೆಲ್ಲಾ ಹೊಗಳಿದವರು ಇಂದದ ನ್ನು ನಾಯಿಗೆ ಸಮ ಮಾಡಿ ಬಿಟ್ರಲ್ಲಾ? ಅಬ್ಬಬ್ಬ, ಗಂಡಸರ ಮನಸ್ಸು ಕಠಿನವೆನ್ನು ವುದು ಇಷ್ಟಕ್ಕೇನೇ. "

"ಇಲ್ಲ, ಯಜಮಾನ್ರಿ, ಇಲ್ಲ. ಆದು ಬೊಗಳದ್ದಲ್ಲ ಹಾಡಿದ್ದು. ಆಯಿತಲ್ಲ? ಇನ್ನಾದರೂ. ....."

"ಏನು ಹಾಡಿತೂಂತ ಹೇಳಬಾರದೆ'?

"ನೋಡು, ಮೊದಲು ನಾಯಿಗೆ ಸ ಮವೇ ಅಂತ ಗದರಿಸಿದಿ. ಈಗ ಏನು ಹಾಡಿತೂಂತ ಹೇಳಬೇಕೆಂದಿ. ಮತ್ತೆ ಇನ್ನು ಏನೇನು ಹೇಳ್ತೀಯೋ, ದೇವರೇ ಬಲ್ಲ."

"ನಿನ್ನ ದಮ್ಮಯ್ಯಾನ್ರಿ. ಏನಾಯಿ ತಂತೆ' ಚೀನೀಯರು ತಮ್ಮ ಸೇನೆಯನ್ನು ಹಿಂದೆ ಒಯ್ದರೋ ಹೇಗೆ?"

"ಒಯ್ಯತ್ತಾ ಇದ್ದಾರಂತೆ."

"ಆಯ್ಯಬ್ಬ. ಆದರೂ ಆಯಿತಲ್ಲ! ಇನ್ನಾದರೂ "ನಿನ್ಮ ಕಾಡಿಕೆಯೆಲ್ಲಿ?" ಅಂತ ಯಾರೂ ಕೇಳಲಿಕ್ಕಿಲ್ಲ ತಾನೆ?"

"ಏ, ಒಯ್ಯುತ್ತಾ ಇದ್ದಾರೆ ಎಂದ ಮಾತ್ರಕ್ಕೆ ಒಯ್ದಂತಾಯಿತೆ?"

"ಅಂ, ಮತ್ತೆ? ಇನ್ನು ಹಿಂದೆ ಹೋ ಗುವುದಿಲ್ಲವೆ?"

"ಹೋದಾರು ಆಥವಾ ಹೋಗದೆ ಯೂ ಉಳಿದಾರು ಆ ಕೆಂಪು ಮೂಗಿನ ವರನ್ನು ನಂಬುವುದು ಸಾಧ್ಯವೆ?'

"ಹಾಗೂ ಮಾಡಿಯಾರು ಅಂತೀರಾ?'

"ಹೋಗ್ತೇವೆ ಎಂದ ಮಾತ್ರಕ್ಕೆ ಹೋ ಗುವವರು ಅವರಾದರೆ, ಬರಬೇಕಿತ್ತಾದ ರೂ ಯಾಕೆ?'

"ಅದು ಹೌದು. ಅಂದ್ರೆ, ಅವರು ಹೋಗುವುದಿಲ್ಲವೆನ್ನಿ.'

"ಹಾಗೂ ಹೇಳುವುದು ಸಾಧ್ಯವಿಲ್ಲ.'

"ಮತ್ತೆ?"

"ತಾವು ಆಕ್ರಮಿಸಿದ ಪ್ರದೇಶದ ಉ ತ್ತರ ಭಾಗದಿಂದ ಹಿಂದೆ ಸರಿಯುತ್ತಿರು ವಂತೆ ನಾಟಕ ಮಾಡುತಿದ್ದಾರೆ.'

"ಒಂದು ವೇಳೆ ಅವರು ಹಿಂದೆ ಹೋಗದೆ ಇದ್ದರೆ, ನಮ್ಮ ಭೂಮಿ ಅವರ ದಾಗುವದಲ್ಲ?"

"ಸರಿ, ಸರಿ ಅಷ್ಟಾದರೂ ನಿನ್ನೆ ಬಡ್ಡು ಮಂಡೆಗೆ ಹೊಳೆತಲ್ಲ."

"ನಾಕು ಬಿಡೀಂದ್ರೆ ನಿನಗೆ ನನ್ನನ್ನು ಬಯ್ದಷ್ಟೂ ಕಡಿಮೆ."

"ನೋಡು, ನಾನು ನಿನಗೆ ಬಯ್ಯುದೆ ಮತ್ತಾರನ್ನು ಬಯ್ಯಲಿ?'

"ನಾನಾದ್ರಿಂದ ಸುಮ್ಮನಿದ್ದೆ. ಬೇರೆ ಯಾರಾದಂತಾಗುತಿದ್ರೆ ಎದ್ದುತಿದ್ದರು ಕಪಾಲಕ್ಕೆ."

"ತಡಿ, ತಡಿ. ಕಪಾಲಕ್ಕೆ ಎಸ್ಸೋ ಸಾಹಸ ಈಗ, ಇಲ್ಲಿ ಬೀಡ ಚೀನೀಯರು ಹಿಂದೆ ಹೋಗದಿದ್ರೆ, ಕಪಾಲವೋಕ್ಷ ಮಾಡಿ ಹಿಂದೆ ಓಡಿಸ್ತೀವಿಂತ ನಮ್ಮ ನೆಹರು ಹೇಳಿದ್ದಾರೆ ಅದಕ್ಕಾಗಿ....."

"ಏನು ಜನ ಒಟ್ಟು ಮಾಡುತ್ತಿದ್ದಾರೆಯೆ ?"

"ಜನ, ಧನ, ವನಬಲ್ಲವನ್ನೂ ಕೂಡಿ ಸುತಿದ್ದಾರೆ. ವಾಶ್ಚಾತ್ಯ ಬಣಗಳಿಂದ ಸ ಹಾಯ ಕೇಳಿದಂತೆಯೇ ರಶ್ಯದಿಂದಲೂ ಆವರು ಸಹಾಯ ಕೇಳಿದ್ದಾರೆ."

"ರಶ್ಯದಿಂದ್ಲೇ? ಅದೂ ಕೆಂಪಲ್ವೇ?"

"ಕೆಂಪು?"

"ಹೌದು ಕೆಂಪು ಬಾವುಟದ್ದ... ಮ್ಯುನಿಸ್ಟ್ರು."

"ಹೌದು. ಆದರೂ....."

"ಆದಕ್ಕೇ ಹೇಳುವುದು ಗಂಡಸರಿಗೆ ಬುದ್ಧಿ ಇಲ್ಲ ಅಂತ. ವತ್ತೆ ಹೆಂಗಸ್ರು ತಮಾಷೆ ಮಾಡ್ತಾರೆ ಬುದ್ಧಿ ನೊಣಕಾಲು ಕೆಳಗೆ ಅಂತ"

"ಆಲ್ವೆ ಮತ್ತೆ? ನೆಹರುವನ್ನೂ ಬಿಟ್ಟಿ ಬಯ್ದು ನೀನು ಇನ್ನು ನನ್ನನ್ನು ಏನೇನು ಹೇಳ್ತೀಯೋ!"

"ಹೆಳೋದೇನು! ಮಾಡಿದ್ದನ್ನ ಹೇ ಳುವುದು."

"ಬಿಲ್ಲು, ನೆಹರು ಯಾಕೆ ರಶ್ಯಕ್ಕೆ ಸಹಾ ಯ ಕೇಳಿ ಕಾಗದ ಬರೆದರೂ ಂ ಗೊತ್ತೆ?"

"ಯಾಕೆ?'

"ಅದಕ್ಕೇ ಹೇಳುವುದು ಸ್ತ್ರೀ ಬುದ್ಧಿ ಪ್ರಳಯಾಂತಕ ಎಂದು'

"ಹೌದು ಗಂಡಸ್ರು ಮಾಡಿಟ್ಟ ಬ್ಲೂ ಕ ಖಂಡಿಗಟ್ಟಲೆ ಇದ್ದೇ ಇದೆ'

"ಖಂಡಿ ಅಲ್ವೇ ಈಗ ಕ್ವಿಂಟಲ್ ಆ ಗಿದೆ.'

"ಕಿಂಟಲೋ ಪಿಂಟಲೆಂ? ಗಂಟಲ್ಲಾ ತೂ ಇವೆಯಲ್ಲಾ ಸದ್ಯ."

"ಕೇಳಿಲ್ಲಿ. ರಶ್ಯ ತನ್ನ ನೀತಿಯೇನಾಂ ತ ಇನ್ನೂ ಹೇಳಿಲ್ಲ,,

"ಹೇಳೋದೇನು ಬಂತು? ಅಣ್ಣ ತ ಮ್ಮನನ್ನು ಬಿಟ್ಟು ಹಾಕ್ತಾನೆಯೆ?'

"ನೋಡ, ಆವೆಲ್ಲಾ ರಾಜಕಾರಣದ ಕಾಲದಲ್ಲಾಯ್ತು. ಈಗ ಅಣ್ಣ—ತಮ್ಮ ತಾನು ಮೇಲು ತಾನು ಮೇಲು ಎಂಬ ನಡೆಯುತ್ತದೆ ಯುದ್ಧ. ಇದಕ್ಕಾಗಿಯೆ ರಶ್ಯದ ಮನಸ್ಸಿನಲ್ಲಿ ಏನಿದೆಯೆಂಬು ಸು ಯಾಗಿ ತಿಳಿದುಕೊಳ್ಳುವುದಕ್ಕೇ ಈ ನಾಟಕ.,,

"ಹ್ಞಾಂ, ಅದೂ ಹೌದು ಒಂದು ವೇಳೆ ಅವರು ಕೊಡುವುದಿಲ್ಲ ಎಂದು ಹೇಳಿದರೆ?,,

"ಆಗ ಅವರು ಚೀನದ ಹಿಂದೆ ಇದ್ದಾ ರಂತ ಖಾತ್ರಿಯಾಯ್ತು.,,

"ಕೊಟ್ಟರೆ? ,,

"ಅದೇ ಕಷ್ಟದ ವಿಷಯ. ,,

"ಇದೇಕೆ ಹಾಗಂತೀರಂ? ಸಹಾಯ.

(ಗಂನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಳ್ಳೆ ವ್ಯಾದಿ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ರಬಡ್ಡಿಯ ಮೂಲಕ ಸುರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1940. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಪುತ್ತೂರು ಡಿ. ಮುನ್ಸೀಫ್ ಕೋರ್ಟ್ ನಲ್ಲಿ

R. L. P. 348/62. O. S. 87/..

ಕೃಷ್ಣ ಶರ್ಮ — ಅರ್ಜಿದಾರ

ಮೂಡಬ ಶಬರಾಯ ಸಹಾ — ಎದ್ರಿರು

1ನೇ ಎದ್ರಿ: — ಮೂಡಬ ಶಬರಾಯ ವೆಂಕಟ್ರಮಣ ಶಬರಾಯರ ಮಗ—ಪತ್ರಿ ಗಾ ವಾಡ ಕೃಷಿಕರು

1ನೇ ಎದ್ರಿಗೆ ಕೋರ್ಟು ಹ್ಯುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ —

ಪ್ರಿಲಿಮಿನರಿ ಡಿಕ್ರಿಗೆ ಜನವರ್ಯಾರಿಯಲ್ಲಿ ಸ್ತ್ರೀರಸ್ತು ಮೂರಾಟದಿಂದ ಡಿಕ್ರಿ ಹಣ ವಸೂ ಲು ಬಗ್ಗೆ ಮಾಡಿದ ಮೇರಿನ ಅಮಲ್ದಾರಿಯ ನ್ನು ತಾ 21-12-62ಕ್ಕೆ ನಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಕೋರ್ಟು ಮುಂದೆ ಹಾಜರಾಗಿ ಉದಪಡಿ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಯುಕ್ತ ಶಂಡಂತೆ ತೀರ್ಮಾನಿಸಲಾದೀತು.

Sd/- **M. Sadashiva** Rao
Vakil for Petitioner.

ತಾ. 10—12—62.

ಅಧಿತಿ ಸೇವೆಯಲ್ಲಿ ಹಳಗಿದ

ಗಾಂಧೀಜೀಶಿಷ್ಯ ಜಮನಾಲಾಲ್

ಅತಿಥಿದೇವೋ ಭವ", ಎಂದು ಹೇಳಿ ಅತಿಥಿಯನ್ನು ದೇವರಂತೆ ಸತ್ಕರಿಸುವುದು ಭಾರತೀಯ ಸಂಸ್ಕೃತಿಯ ಪರಂಪರಾಗತ ಗಮನಾರ್ಹ ವೈಶಿಷ್ಟ್ಯವಾಗಿದೆ. ಮನೆಗೆ ಬಂದವರನ್ನು ದೇವರೆಂದು ತಿಳಿದು ಶಕ್ತಿ ಮೀರಿ ಉಪಚರಿಸಬೇಕೆಂದು ಧರ್ಮಶಾಸ್ತ್ರಗಳು ಹೇಳಿತ್ತವೆ. ಭಾರತದ ಧನ್ಯ ಇತಿಹಾಸವನ್ನು ಅವಲೋಕಿಸಿದರೆ ಇದಕ್ಕೆ ಅಸಂಖ್ಯ ಉದಾಹರಣೆಗಳು ದೊರಕುತ್ತವೆ. ಇದರಿಂದಲೇ ಭಾರತೀಯರು 'ಪಿತೃತ್ವಾರಸ್ಯರು' ಎಂದು ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಆದರೆ ಆಧುನಿಕ ಕಾಲದಲ್ಲಿ ಅತಿಥಿ ಸತ್ಕಾರವೆಂದರೆ ಬರೀ ಬಾಹ್ಯಾಡಂಬರವಾಗಿ ಬಿಟ್ಟಿದೆ. ಈ ಕಳಂಕವನ್ನು ತೊಳೆದು ಅತಿಥಿಯನ್ನು ದೇವರಂತೆ ಸತ್ಕರಿಸಿ "ಆಧುನಿಕ ಕಾಲದ ಮಹಾ ಅತಿಥಿಸೇವಿ ಎಂದು ಕೀರ್ತಿಶೇಷರಾದವರೊಬ್ಬರಿದ್ದರೆ ಅದು ಜಮನಾಲಾಲ್ ಬಜಾಜ್ ಎಂದು ನಿಸ್ಸಂದೇಹವಾಗಿ ಹೇಳಬಹುದು. ಮಹಾ-ಧನಿಕರಾಗಿ, ಅಗ್ರಗಣ್ಯ ವ್ಯಾಪಾರಸ್ಥರಾಗಿ, ತನ್ನ ಸಮಸ್ತ ಸಂಪತ್ತನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಮತ್ತು ಅತಿಥಿ ಸತ್ಕಾರಕ್ಕೆ ಧಾರೆಯೆರೆದ ಇವರು ನಿಜಕ್ಕೂ ಪ್ರಶಂಸಾರ್ಹರಾಗಿದ್ದಾರೆ. ಭಾರತದಲ್ಲಿ ಇವರಂಥ ಅತಿಥಿಸೇವಿ ಇನ್ನೊಬ್ಬರಿಲ್ಲ. ಅತಿಥಿಗಳ ಸಂಪೂರ್ಣ ಹೊರೆ ಹೊತ್ತು ತನ್ನ ಸಮಸ್ತ ಕುಟುಂಬವನ್ನೇ ಅವರ ಸೇವೆಗೆ ವಿನಿಯೋಗಿಸಿ ಸ್ವತಃ ಬಡವರಂತೆ ಜೀವಿಸಿದ ಇವರ ಜೀವನ ನಿತ್ಯಸ್ತುತ್ಯವಾಗಿದೆ.

೧೯೨೦ರಲ್ಲಿ ಗಾಂಧೀಜಿಯವರು ಭಾರತದ ನಿಸ್ವಾತಂತ್ರ್ಯ ಸಂಗ್ರಾಮದ ರಂಗ ಮಂಟಪವನ್ನು ಪ್ರವೇಶಿಸಿದರು ದೇಶ ಸೇವೆಗೆ ಸಮರ್ಥ ಜನತೆಗೇ ಆಹ್ವಾನವಿತ್ತರು. ಆಗ ರಾಜಸ್ಥಾನದ ಒಬ್ಬ ಪ್ರತಿಷ್ಠಿತ ಮತ್ತು ಭಾರತ ಎಲ್ಲಾ ವ್ಯಾಪಾರಿ ಮನೆಗಳಲ್ಲಿ ಮಹಾ ವ್ಯಾಪಾರಿಯೆಂದು ಹೆಸರು ಪಡೆದ ಬ್ರಿಟಿಷರ ಮೇಲೂ ಪ್ರಭಾವ ಬೀರಿದ್ದ ಒಬ್ಬ ಸರಳ ಸಾತ್ವಿಕ ಧನಿಕ ವ್ಯಕ್ತಿ ರಾವ್ ಬಹದ್ದೂರ್ ಜಮನಾಲಾಲ್ ಬಜಾಜರು ಗಾಂಧೀಜಿಯವರಕರೆಗೆಮೂಕಕಂಠಿಗಿಒಗ್ಗುತ್ತ ತವರ ಸಬರ್ಮತಿಆಶ್ರಮಕ್ಕೆಬಂದುನೆಲೆಯೂರಿಯೇ ಬಿಟ್ಟರು ಗಾಂಧೀಜಿಯವರೊಡನೆ ತಮ್ಮನ್ನು ಅವರ ಏದನೆಯ ಪುತ್ರನೆನ್ನಾಗಿ ಪರಿಗ್ರಹಿಸುವಂತೆ ಪ್ರಾರ್ಥಿಸಿಕೊಂಡರು. ಗಾಂಧೀಜಿಯವರು ಈ ವಿನಂತಿಯನ್ನು ಮಂದಸ್ಮಿತರಾಗಿಯೇ ಸ್ವೀಕರಿಸಿದರು. ಮುಂದೆ ಮಹಾತ್ಮರ ರಚನಾತ್ಮಕ ಮತ್ತು ರಾಜನೈತಿಕ ಕಾರ್ಯಕಲಾಪಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅವರಿಗೋಸ್ಕರ ತಮ್ಮ ಸಮಸ್ತ ಸಂಪತ್ತನ್ನು ಅರ್ಪಿಸಿಯೇ ಕೈಪ್ಪು ಪಡೆದರು. ಗಾಂಧೀಜಿಯವರ ಪೈತೃಕ ಪಥ ಪ್ರದರ್ಶನದಲ್ಲಿ ನಡೆದರು.

ಜಮನಾಲಾಲ್ ಬಜಾಜರ ಧರ್ಮಪತ್ನಿ ಶ್ರೀಮತಿ ಜಾನಕಮ್ಮನವರು ಗಾಂಧೀಜಿಯವರ ಸಬರ್ಮತಿ ಆಶ್ರಮಕ್ಕೆ ಬಂದು ಸೇರಿಸಿದರು. ಆಗ ಅವರ ಜ್ಯೇಷ್ಠ ಪುತ್ರ ಕಮಲ ನಾರಾಯಣನ ವಯಸ್ಸು ೭ ವರ್ಷವಾಗಿತ್ತು. ಜಾನಕೀ ಬಾಯಿಯವರ ಪತಿ ಲಕ್ಷಾಧೀಶರಾಗಿ ದೇಶದ ಶ್ರೀಮಂತರಲ್ಲೇ ಅಗ್ರ ಪಂಕ್ತಿಗೆ ಸೇರಿದವರು. ಹೀಗಿರುವಾಗ ಜಾನಕೀ ಬಾಯಿಯವರು ಸುಖ ಕಂಸತ್ತಿನ ಉಕ್ಕುಗಳ ಶಿಖರದಲ್ಲಿ ಮೆರೆಯುವುದು ಸಹಜವೇ ಆಸ್ತು. ಅವರು ಗಾಂಧೀಜಿಯವರ ಆಶ್ರಮದಲ್ಲಿ ಎಲ್ಲಾ ವಿಶೇಷ ಅನುಕೂಲ ಬಟ್ಟೆಗಳನ್ನೂ ಇತರ ವಸ್ತುಗಳನ್ನೂ ತ್ಯಜಿಸಬೇಕೆಂದು ಪತಿದೇವರ ಬಯಕೆಯಾಗಿತ್ತು. ಪತಿವ್ರತಾರಮಣಿಯಾದ ಜಾನಕಮ್ಮನವರು ತಮ್ಮ ಬೆಲೆಬಾಳುವ ವಸ್ತ್ರಗಳನ್ನೆಲ್ಲಾ ರಾಶಿ ಹಾಕಿ ಸುಟ್ಟುಬಿಟ್ಟರು. ಕೆಲವರು ಅದನ್ನು ಕಂಡು ತಮಗೆ ಜೀಕೆಂದು ಕೇಳಿದಾಗ ಇವರು ಕೊಟ್ಟ ಉತ್ತರ ನೋಡಿ-"ಯಾವ ವಸ್ತುಗಳು ಅಪವಿತ್ರವೋ ಅವನ್ನು ನಿಮಗೆ ಕೊಟ್ಟರೆ ಆದಿಂದೇನು ಪ್ರಯೋಜನ? ಈ ವಸ್ತುಗಳನ್ನು ಧರಿಸುವುದು ಪಾಪಕಾರ್ಯ' ಹೀಗೆ ಶುಭ್ರವೇ ಸಮಯದಲ್ಲಿ ಜಮನಾಲಾಲರ ಕುಟುಂಬ ಗಾಂಧೀಜಿಯವರ ಕುಟುಂಬದೊಂದಿಗೆ ಮಿಲೀನಗೊಂಡಿತು. ಗಾಂಧೀಜಿಯವರೂ ತಾವು ಯಾವ ಹೊಸ ವಸ್ತುವಿನ ಪ್ರಯೋಗ ಮಾಡುತ್ತಿದ್ದರೂ ಅದರ ಮೊದಲ ಪ್ರಯೋಗವನ್ನು ಈ ಕುಟುಂಬದ ಮೇಲೆ ಮಾಡುವುದರಲ್ಲಿ ಹಿಂದಿರಿಯುತ್ತಿರಲಿಲ್ಲ.

ಗಾಂಧೀಜಿಯವರು ಮತ್ತು ವಿನೋಬಾಜಿಯವರೇ ಜಮನಾಲಾಲರ ಇಬ್ಬರು ಪುತ್ರರಾದ ಕಮಲನಯನ ಮತ್ತು ರಾಮಕೃಷ್ಣರ ಬಾಲನಿಕೇತನಯನ್ನು ಮಾಡಿದ್ದರು ಕಮಲನಯನರು ವಿನೋಬಾರ ಪವನಾರಿನ ಆಶ್ರಮದಲ್ಲಿಯೇ ಇದ್ದು ಶಿಕ್ಷಣ ಪಡೆದರು.

ಗಾಂಧೀಜಿಯವರ ಪ್ರತಿಯೊಂದು ಚಳವಳಿಯಲ್ಲಿ ಈ ಪರಿವಾರ ಭಾಗವಹಿಸಿ ಅದರ ಸಫಲತೆಯಲ್ಲಿ ತನ್ನ ಪಾಲಿನವನ್ನು ಪ್ರದರ್ಶಿಸುತ್ತಿತ್ತು. ೧೯೩೦ರ ಉಪ್ಪಿನ ಸತ್ಯಾಗ್ರಹದಲ್ಲಿ ಜಮನಾಲಾಲರೇ ಎಲ್ಲರನ್ನೂ ಸಂಘಟಿಸಿ ಸತ್ಯಾಗ್ರಹದ ಸಿದ್ಧತೆ ಮಾಡಿದ್ದರು. ಈ ಸತ್ಯಾಗ್ರಹದ ಪರಿಣಾಮವಾಗಿ ಜಮನಾಲಾಲರೂ, ಅವರ ಮಿತ್ರರೂ, ಪತ್ನಿಯೂ, ಸಹೋದರಿಯೂ ಕೇಂದ್ರಬಾಯಿ ಹೋದ್ದಾರರವರೂ, ತಿಣ್ಣನ ಮಗನಾದ ಗುಲಾಬ್ ಚಂದರೂ, ಲಾಠೀ ಪೆಟ್ಟುಗಳನ್ನು ತಿಂದ ನಂತರ ಕಾರಾಗೃಹವಾಸದ ಶಿಕ್ಷೆಯನ್ನು ಸಾಕಷ್ಟು ನೆಮ್ಮದ್ದಾರೆ ಹೀಗೆ ಮೂಕರಾಗಿ ರಾಷ್ಟ್ರೀಯ ಚಳವಳಿಕ್ಕೆ ಮುನ್ನುಗ್ಗಿ ಭಾರತಾಂಬೆಯನ್ನು ದಾಸ್ಯ ಶೃಂಖಲೆಯಿಂದ ಮುಕ್ತಗೊಳಿಸಲು ಯತ್ನಿಸಿದವರು ಬಹು ವಿರಳ.

ಜಮನಾಲಾಲ್ ಬಜಾಜರು ತಮ್ಮ ಹುಟ್ಟಿನಿಂದ ರಾಜಸ್ಥಾನದ ಮೇಲೆ ಅಪಾರ ಮಮತೆಯಿಟ್ಟಿದ್ದರು ಅದರ ಉದ್ಧಾರಕ್ಕೋಸ್ಕರ ತುಂಬಾ ಶ್ರಮಿಸಿದ್ದರು. ಅಲ್ಲಿ ಶಾಲೆಗಳನ್ನು ಗಾಂಧಿ ಆಶ್ರಮವನ್ನೂ ಹರಿಜನ ಸಂಘವನ್ನು ಸ್ಥಾಪಿಸಿದ್ದರು ತಾವು ಬೆಳೆದು ವಿನಿಯೋಗಿಸಿದ ಊಹಾದ ಕಾರ್ಯ ಅಭಿವೃದ್ಧಿಗೂ ಇವರು ಕಾರಣೀಭೂತರಾಗಿದ್ದರು.

ಹೀಗೆ ಗಾಂಧೀಜಿಯವರ ಎಲ್ಲಾ ಕಾರ್ಯಗಳಿಗೂ ಬೆನ್ನೆಲುಬಾಗಿರುವ ಜಮನಾಲಾಲ್ ಬಜಾಜರ ಕೀರ್ತಿ ಸುತ್ತಲೂ ಹಬ್ಬಿತು. ಮುಂದೆ ೧೯೨೦ರಿಂದ ೧೯೪೭ರ ವರೆಗೆ ತನ್ನ ಜೀವನವನ್ನೇ ಅಲಕ್ಷಿಸಿ ಧನಿಕನಾಗಿದ್ದರೂ ಬಡವನಂತೆ ಜೀವಿಸಿದರು. ೧೯೪೭ರಲ್ಲಿ ಅವರು ಅಸ್ವಸ್ಥಕ್ಕೀಡಾದರು. ಈ ಸಂದರ್ಭದಲ್ಲಿ ಅವರು ವರ್ಧಾದಲ್ಲಿದ್ದು ಗೋ ಸೇವೆಯಲ್ಲೇ ತನ್ನ ಮಹಾನ್ ಕಾರ್ಯವನ್ನಾಗಿ ಮಾಡಿಕೊಂಡರು. 'ವರ್ಧಾ'ದಲ್ಲಿ ಒಂದು ಗೋ ಸಂಘವನ್ನು ಸ್ಥಾಪಿಸಿ ತಾವಿದರ ಅಧ್ಯಕ್ಷರಾದರು. ಮುಂದೆ ಅವರ ಇಚ್ಛೆಕಾರ್ಯವನ್ನು ಭಾರತೀಯರಿಗೆ ಹೆಚ್ಚು ಸಮಯವೇನೂ ವಿಭಾಗಿಸಲಿಲ್ಲ. ಇಂತಹ ಜಮನಾಲಾಲ್ ಬಜಾಜರು ರಾಜನೈತಿಕ, ಸಾಹಿತ್ಯಿಕ, ಮತ್ತು ರಚನಾತ್ಮಕಸುಧಾರಣೆಗಳಲ್ಲಿ ವೈಮನಸ್ಯ ಮಾಡಿದು ಕೀರ್ತಿವೆತ್ತರು. ಇವರ ಭೌತಿಕ ಶರೀರವು ೧೯೪೭ನೇ ಫೆಬ್ರುವರಿಗಾಗಲಿ ಈ ಭೌತಿಕ ಪ್ರಪಂಚದಿಂದ ಅಗಲಿ ಶಿವಪದವಾಸಿಯಾಗಿ ಗಾಂಧೀಜಿಯವೇ ಮೊದಲಾದವರು ಮಮ್ಮಲ ಮರುಗಿ ಮಕ್ಕಳಂತೆ ಅತ್ತುಬಿಟ್ಟಿದ್ದರು.

ಪತಿಯ ಮರಣಾನಂತರ ಜಾನಕೀಬಾಯಿಯವರು ಗೋ ಸಂಘದ ಅಧ್ಯಕ್ಷೆಯಾಗಿ ವಿವಿಧ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿರುವುದಲ್ಲದೆ ತಮ್ಮ ಜೀವನದ ಉತ್ತರಾರ್ಧವನ್ನು ಸವೆಯಿಸುತ್ತಿದ್ದಾರೆ. ಅವರ ಜ್ಯೇಷ್ಠ ಪುತ್ರರು ತಂದೆಗೆ ತಕ್ಕ ಪುತ್ರರಾಗಿದ್ದಾರೆ. ತಂದೆಗಿಂತಲೂ ಮೂಕ ಸೇವೆಕರು ತಂದೆಯವರು ಗಾಂಧೀಜಿಯವರ ವಿಚಾರವಿಂದಗಳಿಗೆ ನಾಲ್ಕು ಲಕ್ಷ ರೂ. ಗಳ ಒಂದು ಟ್ರಸ್ಟನ್ನು ಸರ್ವೀಸಿ ಪುನೀತರಾಗಿದ್ದಾರೆ. ಕಮಲನಯನರು ಅದಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಸೇರಿಸಿ ದೇಶದ ಒಡಜನತೆಗೆ ಮಹದುಪಕಾರ ಮಾಡಿದ್ದಾರೆ.ಕಾಂಗ್ರೆಸ್ಸನ್ನು ಸೇರಿ ಅದರ ಪ್ರಭಾವೀ ಮುಖಂಡರೆಂದು ಜನಾನುರಾಗಗಳಿಸಿದ್ದಾರೆ.

ಜಮನಾಲಾಲರನ್ನೂ ಇನ್ನೆಲ್ಲಿಸ್ಮಿಂಕ ಊ ಹೆಚ್ಚಾಗಿ ನೆನಪಿಡುವಂತೆ ಮಾಡಿದುದು ಅವರ ಅತಿಥಿ ಸೇವೆ ಅವರು ಅತ್ಯಾಧಿಕ್ಯವಾದುದರಿಂದ ಸದಾ ವಿದುಷಿಗಳ, ಗುಣಿಗಳ, ಪಂತರ ಶೋಧನೆಮಾಡುತ್ತಿದ್ದರು. ಮಹಾತ್ಮಾಗಾಂಧೀಜಿಯವರನ್ನು ವರ್ಧಾಕ್ಕೆ ಶಕಪ್ರಯತ್ನ ಮಾಡಿ ಕರೆದು ತಂದವರು ಇವರೇ. ಗಾಂಧೀಜಿಯವರು ವರ್ಧಾದಲ್ಲಿ ಇದ್ದದುದರಿಂದ ದೇಶದ ಪ್ರತಿಷ್ಠಿತ ವ್ಯಕ್ತಿಗಳ ಸಮಾಗಮ ಅಲ್ಲಾಗುತ್ತಿತ್ತು. ಆದುದರಿಂದ ಗಾಂಧೀಜಿಯವರ ಸಮಸ್ತ ಕಾರ್ಯ ಕಲಾಪಗಳ ಕೇಂದ್ರವಾದುದರಿಂದ ಅತ್ಯ ಬರುವ ಜನರ ಸಂಖ್ಯೆ ಅಪರಿಮಿತವಾಯಿತು. ಕಾಂಗ್ರೆಸ್ಸಿನ ಸಭೆಗಳೂ ಅಲ್ಲೇ ಆಗುತ್ತಿದ್ದುವು ಈ ಎಲ್ಲಾ ಕಾರಣಗಳಿಂದ ವರ್ಧಾದಲ್ಲಿ ಅತಿಥಿಗಳೊಂದು ದೊಡ್ಡ ಗುಂಪು ಇರುತ್ತಿತ್ತು. ಅತಿಥಿ ಸತ್ಕಾರದ ಈ ಮಹಾ ಹೊರೆಯನ್ನು ಜಮುನಾಲಾಲರು ಸಂತೋಷದಿಂದೆ ಹೊರುತ್ತಿದ್ದರು. ಅತಿಥಿ ಸತ್ಕಾರಕ್ಕೋಸ್ಕರ ವರ್ಧಾದಿಂದ ಸ್ವಲ್ಪ ದೂರ (ಸುಮಾರು ಮೂರು ಮೈಲು ದ 'ಬಜಾಜ್' ವಾಡಿಯಲ್ಲಿ ಒಂದು ದೊಡ್ಡ ಅತಿಥಿ ಗೃಹವನ್ನು ಕಟ್ಟಿಸಿದರು ಇಲ್ಲಿ ಅತಿಥಿಗಳೂಟ, ವಸತಿ, ವಿಹಾರ, ಅಧ್ಯಯನ-ಮನನೋರಾಜನೆಗಳಿಗೆ ಬೇಕಾದ ಸಮಸ್ತ ವಸ್ತುಗಳೂ ಇರುವಂಥಾಗಿದ್ದುವು ಈ ಅತಿಥಿ ಗೃಹದಲ್ಲಿ ಒಂದು ದೊಡ್ಡ ಜಾತ್ರೆ ಸದಾ ನೆರೆಯುತ್ತಿದ್ದುದನ್ನು ಕಂಡು ಜಮುನಾಲಾಲರ ಸಂತೋಷ ಇನ್ನಷ್ಟು ಹೆಚ್ಚುತ್ತಿತ್ತು. ತಮ್ಮ ಅತಿಥಿ ಗೃಹದ ಪಿರ್ಯ ವರ್ಷಕ್ಕೆ

(೧೦ನೇ ಪುಟ ನೋಡಿರಿ)

ಒಂದೇ ಕಲ್ಲಿನಿಂದ ಎರಡು ಹಣ್ಣುಗಳು!

ರಾಷ್ಟ್ರದ ರಕ್ಷಣೆಗೂ ಜೀವನದ ಭದ್ರತೆಗೂ ಉಳಿತಾಯವು ಅತ್ಯವಶ್ಯ.

ಉಳಿತಾಯ ಮಾಡಿರಿ!
ಒಂದು ಸೇವಿಂಗ್ಸ್ ಖಾತೆ ತೆರೆಯಿರಿ

ಕೊಪ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

In the Court of the District Munsif of Coondapoor.

R. E. P. 16/62 O. S. 580/56.

Between

Srinivas Aithala — Petitioner.

vs.

Ananthayya Shanbhogue (died) and 9 others — Respts.

To

The 10th Respondant

Babu Shanbhogue, S/o Ananthayya Shanbhogue, "Narasimha Prasad". Ville Parle, Bombay 24.

Please take notice that the above petitioner has filed this execution petition for the execution by the respondants of a deed of re-conveyance of the properties set-out in the above decree in his favour and that a draft of the said deed has been produced in the said execution. The petitioner also prays for delivery of documents relating to the said properties and also for costs of F. D. proceedings and of this execution petition. The matter is posted to 21—12—1962 on which date you may put in your appearance and file objections, if any.

A. V. N. Hebbar, B.A.,B.L.,
Pleader for petitioner.

Coondapoor, Date: 12—12 62.

ಅಭಿಮಾನಪೂರ್ವಕವಾಗಿ

ನಾವು ಆಡುವ ಭಾಷೆ

ಹಿಂದೆ ಕನ್ನಡ ಭಾಷೆಯು ಸಂಸ್ಕೃತ ಮಯವಾಗಿದ್ದಿತ್ತು ಎಂದು ನಾವು ಪುರಾತನ ಕನ್ನಡ ಗ್ರಂಥಗಳಿಂದ ತಿಳಿಯಬಹುದು. ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಶಬ್ದಗಳ ಉಪಯೋಗ ಧಾರಾಳ ಆಗುತ್ತಿತ್ತು. ಆದರೆ ಸುಮಾರು ಸಾವಿರದ ಇನ್ನೂರಐವತ್ತೈದರಲ್ಲಿ ಆಂಡಯ್ಯನು ಸಂಸ್ಕೃತ ಶಬ್ದಗಳನ್ನು ಸೇರಿಸದೆ ಅಚ್ಚಗನ್ನಡದಲ್ಲೇ ಕಬ್ಬವನ್ನು ರಚಿಸಲು ಪ್ರಯತ್ನಿಸಿ ಅದರಂತೆ "ಕಬ್ಬಿಗರ ಕಾವ"ವನ್ನು ರಚಿಸಿದನು. ಆದುದರಿಂದ ಬಹುಶಃ ಆಗಿನ ಮೈಸೂರು ಕನ್ನಡದ ಮೇಲೆ ಜನರಿಗೆ ಒಂದು ವಿಧದ ಮೇಲ್ಮಟ್ಟದ ಗೌರವ ಉಂಟಾಗಿರಬೇಕು; ಸಂಸ್ಕೃತ ಶಬ್ದಗಳ ನೆರವಿಲ್ಲದೆ ಕನ್ನಡ ಕಾವ್ಯಗಳನ್ನು ರಚಿಸಲು ಉತ್ಸಾಹ ಉಂಟಾಗಿರಬೇಕು

ಆದಂತಿರಲಿ, ಇಂದು ಕೂಡಾ ಕನ್ನಡ ಭಾಷೆಯಲ್ಲಿ; ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಶಬ್ದಗಳ ಬಳಕೆ ಧಾರಾಳವಾಗುತ್ತಿದೆ, ಅದನ್ನು ತಡೆಯಲು ಸಾಧ್ಯವೂ ಇಲ್ಲ. ಆದರೆ ಮೊದಲಿಗಿಂತ ಕಡಮೆ ಆಗಿದೆ ಎನ್ನುವುದು ನಿರ್ವಿವಾದವೇ ಸರಿ

ಆದರೆ ಇಂದು ಕನ್ನಡ ಭಾಷೆಯಲ್ಲಿ, ಸಾಹಿತ್ಯದಲ್ಲಿ ಇಂಗ್ಲೀಷ್ ಶಬ್ದಗಳ ಉಪಯೋಗ ತುಂಬಾ ತುಂಬಿ ಹೋಗಿದೆ. ಈ ಅಭ್ಯಾಸ ಈಗಿನ ಕಾಲದ ಯುವಕರ ಅಥವಾ ವೃದ್ಧಾಪ್ಯಕ್ಕೆ ಕಾಲಿಟ್ಟವರಲ್ಲಿ ಮಾತ್ರ ಎಂದು ಹೇಳಬಹುದು, ಆದರೆ ಸಾಮಾನ್ಯವಾಗಿ ಇಂದು ಪ್ರತಿಯೋರ್ವನೂ ಮಾತನಾಡುವಾಗ, ಬರೆಯುವಾಗ ಇಂಗ್ಲೀಷನ್ನೇ ಹೆಚ್ಚು ಹೆಚ್ಚು ಉಪಯೋಗಿಸಲು ಯತ್ನಿಸುತ್ತಾನೆ; ಇದು ತನಗೆ ಗೌರವ ತರುವ ವಿಷಯ ಎಂದು ತಿಳಿದಿದ್ದಾನೆ. ಹೀಗೆ ಸಂಭಾಷಿಸುವಾಗ ಶಬ್ದದ ಉಚ್ಚಾರ ಹೇಗೆ ಹೇಗೋ ಆಗುತ್ತಿದೆ. (ಗ್ರಾಮೀಣ ಜನತೆಯಲ್ಲಿ) ಉದಾಹರಣೆಗೆ ಕೋಂಟ್ರೋಲ್ (ಒಡಂಬಡಿಕೆ) ಎನ್ನುವುದನ್ನೇ 'ಕಂಟ್ರಾಟು' ಎಂದು ಹೇಳುತ್ತಾರೆ! ಈ ರೀತಿ ಇಂಗ್ಲೀಷ್ ಭಾಷೆಯ ಕುಲಗೆಡಿಸಿ ಮಾತನಾಡುತ್ತಿದ್ದರೂ ಕೆಲವರಿಗೆ ಅದೊಂದು ದೊಡ್ಡ ಹೆಮ್ಮೆ. ಎಷ್ಟೇ ಕನ್ನಡ ಭಾಷಾ ನಿಪುಣರಾಗಿದ್ದರೂ ಕೆಲವರು ಆದಷ್ಟು ಇಂಗ್ಲೀಷನ್ನು ಮಿಶ್ರಣ ಮಾಡಿಯೇ ಮಾತನಾಡುತ್ತಾರೆ. ಸಂಪೂರ್ಣ ಇಂಗ್ಲೀಷೂ ಅಲ್ಲ—ಕನ್ನಡವೂ ಅಲ್ಲ. ಎರಡರ ಒಂದು ನವ ಮಿಶ್ರಣಗೊಳಿಸಲ್ಪಟ್ಟ ಹೊಸ ಭಾಷೆಯಾಗುತ್ತದೆ! ಮೂಲ ಭಾಷೆ ಯಾದ ಕನ್ನಡದಲ್ಲಿ ಇಂಗ್ಲೀಷ್ ಶಬ್ದಗಳನ್ನೇ (ಯಾಕೆ? ವಾಕ್ಯಗಳನ್ನೇ) ಉಪಯೋಗ ಮಾಡುವುದು ಪ್ರತಿಯೊಬ್ಬನಿಗೂ ಗೌರವ ತರುವಂತಹ ವಿಷಯ ಎಂದು ತಿಳಿಯುವವರೂ ತುಂಬಾ ಮಂದಿ ಇದ್ದಾರೆ.

ಇನ್ನು ಕೆಲವರು ಹೀಗೆ ನವ ಮಿಶ್ರಿತ ಭಾಷೆಯಲ್ಲೇ ಮಾತನಾಡುವುದು ಈಗಿನ ಮೋಡರ್ನ ಮತ್ತು ಹೀಗೆ ಮಾತನಾಡುವುದರಲ್ಲೇ ತಮ್ಮ ಮಾರ್ಡನ್ ಅಂತಸ್ತು ಅಡಗಿದೆ ಎಂದು ತಿಳಿಯುವವರೂ ಇಲ್ಲದಿಲ್ಲ.

ಒಂದು ದಿನ (ನಾನು ಮತ್ತು ನನ್ನ ಓರ್ವ ಗೆಳೆಯ) ನಾವಿಬ್ಬರೂ ನಡೆಯುತ್ತಾ ಇದ್ದಾಗ ನನ್ನ ಗೆಳೆಯನಿಗೆ ಅವನ ಮಿತ್ರನ ಭೇಟಿಯಾಗಿ ಇಬ್ಬರೂ ಸ್ವಲ್ಪ ಕಾಲ ಮಾತನಾಡಿದರು. ನನ್ನ ಮಿತ್ರ ಈ ನವ ಮಿಶ್ರಿತ ಭಾಷೆಯಲ್ಲಿಯೇ ಮಾತನಾಡಿದಾದ ಅತ ಈ ರೀತಿ ಹೇಳಿದ—

"ಕನ್ನಡ languageನಲ್ಲಿ English wordsನ್ನು ತುಂಬಾ use ಮಾಡಿನ್ನೆ ನಾವೊನ್ಯರಿಗೆ ಅದನ್ನು ಅರ್ಥ ಮಾಡಿಕೊಳ್ಳುವುದು ತುಂಬಾ difficult ಆದ್ರಿಂದ ನಾವು ಕನ್ನಡದಲ್ಲಿ conversation ಮಾಡುವಾಗ ಇಂಗ್ಲೀಷ್ wordsನ್ನು use ಮಾಡುವುದನ್ನು ಬಿಟ್ಟು ಅದಷ್ಟು ಕನ್ನಡ ಶಬ್ದಗಳನ್ನೇ use ಮಾಡ್ಬೇಕು"

ಇದೊಂದು ಘಟನೆಯಾದರೆ ಇನ್ನೊಂದೂ ಸಾರ್ವಕಾಲಿಕವಾಗಿದೆ. ಇಂಗ್ಲೀಷ್ ನಲ್ಲಿ ಕೆಲವು ಶಬ್ದಗಳಿಗೆ ಅರ್ಥ ಸಾಮಾನ್ಯವಾಗಿ ಒಂದೇ ಆದರೂ ಉಪಯೋಗದಲ್ಲಿ ವ್ಯತ್ಯಾಸವುಂಟು ಒಂದು ವಿಮಾನ ಏಂದಿಗಿಂತ ತಗ್ಗಿನಲ್ಲಿ ಹೋಗುತ್ತಿದ್ದು ಅದರ ಸದ್ದು ಸಂಯೋಗಿ ಕೇಳಿಸುತ್ತಿತ್ತು. ಆಗ ನನ್ನ ಪರಿಚಯದವನೊಬ್ಬ (ಬಹಳ ಹೆಮ್ಮೆಯಿಂದ) ಈ ರೀತಿ ಹೇಳಿದ—"ನೋಡು ಮಹಾತಾಯಿ, ಈ ವಿಮಾನದ word ಎಷ್ಟು ಸರಿಯಾಗಿ ಕೇಳಿಸುತ್ತದೆ?"

ಅಮೆರಿಕೆಯ ಬಯೊ ಕೆಮಿಸ್ಟ್ ಎನ್ಯೊಟ್ ಚಾಪಲ್‌ಯವರು ಸಸ್ಯಗಳ ಬಗ್ಗೆ ವಿಶೇಷ ಸಂಶೋಧನೆಯಲ್ಲಿ ಮಗ್ನರಾಗಿದ್ದಾರೆ.

ಆತ sound ಎನ್ನುವುದರ ಬದಲು wordನ್ನು ಉಪಯೋಗಿಸಿದೆ Sound ಎಂದರೂ 'ಶಬ್ದ' ಎಂಬರ್ಥವಿದೆ Word ಎಂಬ ದರ ಅರ್ಥವೂ 'ಶಬ್ದ'ವೆಂದೇ ಆಗಿದೆ ಆದರೆ ಉಪಯೋಗದಲ್ಲಿ ಇದರ ಅರ್ಥಗಳಿಗೆ ತುಂಬಾ ವ್ಯತ್ಯಾಸವಿದೆ.

ಕನ್ನಡ ಸಾಹಿತ್ಯದ ಮೇಲೂ ಇಂಗ್ಲೀಷ್ ತುಂಬಾ ಪ್ರಭಾವವನ್ನು ಬೀರಿದೆ ಎನ್ನುವುದು ಸರ್ವ ವಿದಿತವಾದದ್ದಾಗಿದೆ.

ಕೆಲವರ ಹೆಸರು ಬರೆಯುವಾಗಲೂ ಕನ್ನಡಾಕ್ಷರಗಳೊಡನೆ ಇಂಗ್ಲೀಷ್ ಅಕ್ಷರಗಳನ್ನು ಉಪಯೋಗಿಸುತ್ತಾರೆ. ಉದಾಹರಣೆಗಾಗಿ ಒಳ್ಳೆ ವಿದ್ವಾಂಸರಾದ ಪ್ರಸಿದ್ಧ ಭಾಷಾ ಸಾಹಿತಿಗಳಾದ ಒಳ್ಳಾರಿ ಭೀಮರಾಯರ ತಮ್ಮ ಸಾಹಿತ್ಯನಾಮ ಬೀCHI ಇನ್ನೊಬ್ಬರು ಕನ್ನಡದ ಸಾಮಾನ್ಯ ಹರಿಕಥಾ ಭಟ್ಟರು ತಮ್ಮ ಕಾವ್ಯನಾಮವಾದ "ವಿಚಿತ್ರ" ಎಂಬುದನ್ನು "ವಿCHIತ್ರ" ಎಂದೂ ಹಾಕುತ್ತಾರೆ ಹಾಗೆಯೇ ಇನ್ನಿತರ ಮಹನೀಯರುಗಳೂ ಕೂಡಾ ಇದೇ ರೀತಿ ಕನ್ನಡದ ಮೇಲೆ ಮಾತ್ರ ಪಕ್ಷಪಾತ ಮಾಡದೆ (ಸಮತಾವಾದದ ದೃಷ್ಟಿಯಿಂದಲೋ ಏಕವಾ ಬಾಲ್ಯೈಕ್ಯತೆಗಾಗಿಯೋ ತನ್ನ ಸಮ ದೃಷ್ಟಿಯನ್ನು ಬೀರುತ್ತಾರೆ

ಹೆಸರನ್ನು ಬರೆಯುವಾಗ ಮನೆಯ ಹೆಸರನ್ನು ಆದಿವಾ ವಾಸವಾಗಿರುವ ಸ್ಥಳದ ಹೆಸರನ್ನು ಆರಂಭದಲ್ಲಿ ಆದಿವಾ ಕಡೆ ಬರೆಯುವುದು ರೂಢಿಯಲ್ಲಿದೆ. ಕೆಲವರು ತಮ್ಮ ಹೆಸರಿನೊಂದಿಗೆ ತಂದೆಯ ತಾಯಿಯ ಹೆಸರುಗಳನ್ನು ಸೇರಿಸುತ್ತಾರೆ ಹೀಗೆ ಸೇರಿಸುವಾಗ ಹೆಸರನ್ನು ಇಂಗ್ಲೀಷಿನಲ್ಲಿ ಬರೆಯುವುದಿದ್ದರೆ ಅದರ ಮಧ್ಯಭಾಗದ ಅಕ್ಷರವನ್ನೇ ಸೇರಿಸುತ್ತಾರೆ.

ನಾವು ಈ ರೀತಿ ನವ ಮಿಶ್ರಿತ ಭಾಷೆಯನ್ನೇ ಉಪಯೋಗಿಸುತ್ತಿದ್ದರೂ ಕನ್ನಡವನ್ನು ಕಡೆಗಣಿಸಿ ಮಾತನಾಡಬಾರದು ಅಥವಾ ಬರೆಯಬಾರದು ಹಾಗೂ ಕನ್ನಡಕ್ಕೆ ಪ್ರಥಮ ಪ್ರಾಶಸ್ತ್ಯ, ಗೌರವ, ವಿಶ್ವಾಸವನ್ನಿಟ್ಟು ಅನಂತರವೇ ಇಂಗ್ಲೀಷ್ ಅಥವಾ ಇನ್ನ ಯಾವುದೇ ಭಾಷೆಗಳಿಗೆ ಸ್ಥಾನವನ್ನೀಯಬೇಕು

—ಶ್ರೀ ಸುಬ್ರಹ್ಮಣ್ಯ ಭಟ್ಟ,
ಯೇತಡ್ಕ

ಶ್ರೀ ಪಿ. ಎಸ್. ಹೆಬ್ಬಾರ (ಸಿರಿಪತಿ)
ಅವರ ನವೀನ ಜನಪದ ಗೀತಾಸಂಕಲ

'ಕೋಕಿಲವಾಣಿ'

(ಪ್ರಿನ್ಸಿಪಾಲ್ ನಿ ಎಂ. ಇನಾಂದಾರರ ಮುನ್ನುಡಿ)

ದ. ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದ್ದ ಕೆಲವೊಂದು ಹಾಡುಗಳನ್ನು ಉದ್ಧರಣೆಗಳೊಂದಿಗೆ ಕೊಡಲಾಗಿದೆ

ಬೆಲೆ: ರೂ ೧—೦೦

ಪ್ರತಿಗಳು ನಿವ್ಯಾರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ

ಪಿ. ಎಸ್ ಹೆಬ್ಬಾರ, ಎಂ ಜಿ ಎಂ ಕಾಲೇಜು
ಕುಂಜಿಬೆಟ್ಟು, ಉಡುಪಿ,

ವಿಖ್ಯಾತ ಗ್ರಂಥ ಕರ್ತರಾದ

ಶ್ರೀ ಎ. ಎಸ್. ಪಂಚಾಪಕೇಶ ಅಯ್ಯರ್

ಎಂ ಎ, ಐ ಸಿ. ಯಸ್, ಬಾರ್-ಎಟ್-ಲಾ, ಎಫ್ ಆರ್. ಎಸ್ ಎಲ್.

ಇವರು ಇಂಗ್ಲೀಷಿನಲ್ಲಿ ಬರೆದ—

TALES OF IND

ಕಥಾವಳಿಯ ಕನ್ನಡ ಅನುವಾದ

ಭಾರತೀಯ ಕಥೆಗಳು

ಚಿಕ್ಕ ಚೊಕ್ಕ ೧೫೨ ಕಥೆಗಳು ಬೆಲೆ ರೂ 1—12—0

ಅನುವಾದಕರು: ವಿ| ಕೊರಡ್ಕಲ್ ಶ್ರೀನಿವಾಸ ರಾವ್,

ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

ರಾಜನೀತಿಯಲ್ಲಿ

ತಾಟಸ್ಥ್ಯ ಧೋರಣೆ ಅಪಾಯಕರವೆ?

ಪ್ರಾಚೀನ ಕಾಲದಿಂದ ಆರ್ವಾಚೀನ ಕಾಲದ ವರೆಗಿನ ಇತಿಹಾಸದ ಅಧ್ಯಯನ ಮಾಡಿದರೆ, ಭಾರತದ ಸ್ವಾತಂತ್ರ್ಯ ಪ್ರಿಯತೆಯ ಸ್ಪಷ್ಟ ಚಿತ್ರಣ ನಮ್ಮ ಮನಸ್ಸಿನ ಮುಂದೆ ನಿಲ್ಲುತ್ತದೆ. ಪರಕೀಯರ ಅಧೀನದಲ್ಲಿರುವಾಗ ಭಾರತಕ್ಕೆ ತನ್ನದೇ ಆದ ಅಂತಾರಾಷ್ಟ್ರೀಯ ನೀತಿಯಿರಲಿಲ್ಲ. ಬ್ರಿಟಿಷರ ನೀತಿ—ನಮ್ಮ ಪರಕಾರದ ನೀತಿಯಾಗಿತ್ತು. ಇಗ್ಲೆಂಡಿನ ಶತ್ರುಗಳು ಭಾರತದ ಶತ್ರುಗಳು—ಇಂಗ್ಲೆಂಡಿನ ಮಿತ್ರರು ಭಾರತದ ಮಿತ್ರರುಗಳಾಗಿದ್ದರು. ೧೯೪೦ ರಲ್ಲೇ ಭಾರತವು ಜನಾಂಗ ಸಂಘದ ಸದಸ್ಯತ್ವವನ್ನು ಪಡೆದಿದ್ದರೂ, ತನ್ನದಾದ ಒಂದು ಸ್ವತಂತ್ರ ನೀತಿಯನ್ನು ಅದು ಪಾಲಿಸುವಂತಿಲ್ಲ. ಅದು ಬ್ರಿಟಿಷ್ಟರ ಒಂದು ಕೈಗೊಂಬೆ ಆಗಿತ್ತು. ಆದರೇನು, ನಮ್ಮ ಜನತೆಯಲ್ಲಿ ಒಂದು ಸ್ವತಂತ್ರ ವಿದೇಶ ನೀತಿಯಿರಲಿಲ್ಲವೇ? ಇತ್ತು. ಭಾರತವು ಪೂರ್ವ ಕಾಲದಿಂದಲೂ ತನ್ನ ಸ್ವಾತಂತ್ರ್ಯ ಪಾಲನೆಗೋಸ್ಕರ ಸಂಗ್ರಾಮ ಮಾಡುತ್ತ ಬಂದಿದೆ. ಆದರೆ ಸಾಮ್ರಾಜ್ಯವಾದ, ಪರಾಧೀನತೆ, ರಾಜನೈತಿಕ ಮತ್ತು ಆರ್ಥಿಕ ಶೋಷಣೆಯಿಂದ ಅದು ಬಹಳಷ್ಟು ಕಂಗೆಟ್ಟಿತ್ತು. ಆದರೂ ಸ್ವಾತಂತ್ರ್ಯಕ್ಕೋಸ್ಕರ ಹೋರಾಡುತ್ತಿರುವ ರಾಷ್ಟ್ರಗಳಿಗೆ ಅದು ಸದಾ ತನ್ನ ಅಂತಃಕರಣಪೂರ್ವಕವಾದ ಸಹಾನುಭೂತಿಯನ್ನು ತೋರಿಸಿದೆ. ಆದರೆ ಸಕ್ರಿಯವಾಗಿ ಅದು ಏನನ್ನೂ ಮಾಡುವಂತಿರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲೇ ಭಾರತವು ಸಮಾನತೆ, ಸ್ವಾತಂತ್ರತೆ ಮತ್ತೂ ಆರ್ಥಿಕ ಸಮಾನತೆಗಳ ಬಗ್ಗೆ ತನ್ನ ನೀತಿಯನ್ನು ಸಾರಿ ಮುಕ್ತಿಯ ಮಾರ್ಗವನ್ನು ತೋರಿಸಿರುವುದರಿಂದ ಏಶಿಯಾ ಖಂಡದ ಅಭಿವೃದ್ಧಿ ಸಭೆಯಲ್ಲಿ ಗೌರವಾರ್ಹ ಸ್ಥಾನಗಳಿಸಿತ್ತು. ೧೯೪೭ರಲ್ಲಿ ಸ್ವತಂತ್ರವಾದ ನಂತರ ಭಾರತದ ಹೃದಯದಲ್ಲಿ ಪರಾಧೀನತೆ ಶೋಷಣೆ, ಬಲ, ತ್ಯಾಗಗಳಿಲ್ಲದ ವಿಶ್ವಸಾಮ್ರಾಜ್ಯ ಸ್ಥಾಪನೆಯ ಭಾವನೆ ಜೀವಂತವಾಗಿತ್ತು. ಈ ಭಾವೋನ್ಮಾದದಿಂದಲೇ ಅದು ಅಂತಾರಾಷ್ಟ್ರೀಯ ರಂಗಮಂಟಪವನ್ನು ಪ್ರವೇಶಿಸಿತು. ಮತ್ತು ವಿಶ್ವದ ಮುಂದೆ ತನ್ನ ವಿದೇಶ ನೀತಿಯನ್ನು ಇಟ್ಟಿತು.

ನಮ್ಮ ವಿದೇಶ ನೀತಿ

ನಮ್ಮ ದೇಶದ ಅಂತಾರಾಷ್ಟ್ರೀಯ ನೀತಿಯನ್ನು ಮುಖ್ಯವಾಗಿ ನಾಲ್ಕು ತತ್ವಗಳಲ್ಲಿ ಹೇಳಬಹುದು:—

೧) ಯುದ್ಧವನ್ನು ನಿಸ್ತೇಜಗೊಳಿಸಿ ವಿಶ್ವಶಾಂತಿಯನ್ನು ಸ್ಥಾಪಿಸುವುದು.

೨) ಜಗತ್ತಿನ ಯಾವದೇ ಬಣಕ್ಕೆ ಸೇರದೆ, ಅದರಿಂದ ದೂರವಿದ್ದು ಪ್ರತಿಯೊಂದು ಸಮಸ್ಯೆಯನ್ನೂ ನಿಷ್ಪಕ್ಷಪಾತ ದೃಷ್ಟಿಯಿಂದ ವಿಮರ್ಶಿಸುವುದು.

೩) ಸಾಮ್ರಾಜ್ಯವಾದವನ್ನು ವಿರೋಧಿಸಿ ಸ್ವಾತಂತ್ರ್ಯ ಸಂಗ್ರಾಮವನ್ನು ಸಮರ್ಥಿಸುವುದು.

೪) ಅನಿವಾರ್ಯ ಸಂದರ್ಭ ಬಂದಾಗ ಆತ್ಮರಕ್ಷಣೆಗೋಸ್ಕರ ಅಥವಾ ಪೀಡಿತ ಪ್ರದೇಶದ ರಕ್ಷಣೆಗೋಸ್ಕರ ಯುದ್ಧ ಮಾಡುವುದು.

ಯುದ್ಧೋತ್ತರವಾದ ಈ ವಿದೇಶ ನೀತಿಯನ್ನು ಯಾರೂ ವಿರೋಧಿಸಲಾರರು. ಪ್ರಾರಂಭದಲ್ಲಿ ಕೆಲವು ಹಿತವಾದೀ ರಾಜನೀತಿಜ್ಞರ ನಿಚ್ಚಳ ಟೀಕೆಗಳಾದರೂ ಅದು ಸ್ಪಯೋಚನವಾಗಲಿಲ್ಲ. ಜಗತ್ತಿನ ಯಾವುದೇ ಬಣಕ್ಕೆ ಸೇರದೆ ಭಾರತವನ್ನು ತನ್ನ ಸ್ವಂತ ನೀತಿ—ಧೋರಣೆಗಳ ಮೇಲೆ ನಿಲ್ಲುವಂತೆ ಮಾಡಿ ಅದರ ಗೌರವ ಘನತೆಗಳನ್ನೂ ಪ್ರಧಾನಿ ನೆಹರು ವರ್ಧಿಸಿದರು.

ತಟಸ್ಥ ನೀತಿಯ ಪ್ರಭವ

ರಾಜನೀತಿಯು ನೈಜಜ್ಞಾನವನ್ನು ಭಾರತವು ಒಬ್ಬ ಹೊಸ ಬಟಗಾರನಂತೆ ಸ್ವೀಕರಿಸಿದರೂ ಅದರ ನೀತಿ—ಧೋರಣೆಗಳು ಸರಿಸಕ್ಕ ಮತ್ತು ಸ್ಪಷ್ಟವಾಗಿದ್ದುವು ಅದು ತನ್ನ ನೀತಿಯನ್ನು ಕಾರ್ಯರೂಪಕ್ಕೆ ತಂದು ಜನತಾನುರಾಗವನ್ನು ಆರಳಿಸಿತು. ಡಚ್ಚರ ಆಕ್ರಮಣ ಎಂದಾಗ ಭಾರತವು ಇಂಡೋನೇಶ್ಯವನ್ನು ಸಶಕ್ತಗೊಳಿಸಿತು. ಆಫ್ರೀಕಾದ ದೇಶಗಳು ಸ್ವಾತಂತ್ರ್ಯಕ್ಕಾಗಿ ಹೋರಾಡಿದಾಗ ಅವನ್ನು ಸಮರ್ಥಿಸುವುದರಲ್ಲಿ ಪ್ರಮುಖಪಾತ್ರ ನೆಹ್ರುದೇ. ಮುಂದೆ ಕೊರಿಯಾದ ಗೃಹಯುದ್ಧವು ವಿಶ್ವಯುದ್ಧ ರೂಪವನ್ನು ತಳೆದಾಗ ಭಾರತದ ತಟಸ್ಥ ನೀತಿ ಅದನ್ನು ತಡೆಯುವುದರಲ್ಲಿ ಪ್ರಧಾನ ಪಾತ್ರ ವಹಿಸಿತು ಇದರಿಂದ ಭಾರತದ ಗೌರವ ಹೆಚ್ಚಿತು ಚೀನದಲ್ಲಿ ಕಮ್ಯುನಿಸ್ಟ್ ಸರಕಾರ ಸ್ಥಾಪಿತವಾದಾಗ ಅಮೇರಿಕಕ್ಕೆ ಜೋರು ತಲೆ ನೋವಾಯಿತು. ಇನ್ನೆರಡು ಬಣಕ್ಕೆ ಸೇರದೆ ಅಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡದೆ ಎಂದು, ನೆಹರೂ ಸಾರಿ ಇದನ್ನು ಯುಕ್ತ ರಾಷ್ಟ್ರಸಂಘಕ್ಕೂ ಅನ್ವಯ ಮಾಡಿ ಯಾವ ಬಣಕ್ಕೂ ಸೇರದೆ ಇರುವ ಭಾರತದ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಇದರಿಂದ ಚೀನಾ ಭಾರತದ ಮಿತ್ರರಾಷ್ಟ್ರವಾದರೂ, ಅದಕ್ಕೆ ತನ್ನ ಸಾಮ್ರಾಜ್ಯವಾದದ ನೀತಿಯನ್ನು ತ್ಯಜಿಸಬೇಕಾಗಿ ಒತ್ತಡ ಇದರಿಂದ ಕೊರಿಯಾದಲ್ಲಿ ಸಮರ ವಿರಾಮ ಸ್ಥಾಪಿತವಾಯಿತು. ಹೀಗೆ ಭಾರತದ ಪ್ರತಿಜ್ಞೆ—ಘನತೆಗಳು ಸುತ್ತಲ್ಲು ಹೆಚ್ಚಿದುವು

ಪಂಚಶೀಲ

ಸಂಸ್ಕೃತದ ಈ ಶಬ್ದವು ಸ್ವಲ್ಪವೇ ಭಾರತದ ನಿಷ್ಪಕ್ಷವಾದ ಶಾಂತಿನೀತಿಯನ್ನು 'ಪಂಚಶೀಲ' ಎಂಬ ಹೊಸನಾಮಧೇಯದಿಂದ ಜಗತ್ತಿನ ಮುಂದಿಟ್ಟಿತು. ನಮ್ಮ ಪ್ರಧಾನಿಯವರು ಇದರ ವ್ಯಾಪಕ ಪ್ರಚಾರ ಮಾಡಿದರೂ ಬಾಂಡುಂಗ್, ಕೊಲೊಂಬೋ ಪರಿಷತ್ತುಗಳಲ್ಲಿ ಭಾರತದ ತಟಸ್ಥ ಧೋರಣೆಗೆ—ಪಂಚಶೀಲಕ್ಕೆ ಅಭೂತಪೂರ್ವ ಆದರ ಪ್ರಾಪ್ತವಾಯಿತು. ಪಂಚಶೀಲದ ಜನಕ ಭಾರತನೆನ್ನಿಸಿತು, ೨೦೦೦ ವರ್ಷಗಳ ಹಿಂದೆ ಬುದ್ಧ ಮುಕ್ತಿಗೆ ಮಾರ್ಗವೆಂದು ಇವೇ ಪಂಚಶೀಲಗಳನ್ನು ಉಪದೇಶಿದ್ದನು. ಜಗತ್ತಿನ ಯಾವುದೇ ಬಣಕ್ಕೆ ಯಾವುದೇ ರಾಷ್ಟ್ರವು ಸೇರಬಾರದೆಂದು ಇವ ಹೇರು ಸಾರಿದರು. ಈ ಪಂಚಶೀಲಗಳೆಂದರೆ:—

೧)- ಪ್ರಾದೇಶಿಕ ಅಖಂಡತೆ—ಪ್ರಭುತ್ವಗಳನ್ನು ಸನ್ಮಾನಿಸುವುದು.

೨). ಆಕ್ರಮಣ ಮಾಡದಿರುವುದು.

೩)- ಇನ್ನೊಬ್ಬರ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದು.

೪) ಸಮಾನತೆ.

೫). ಶಾಂತಿಪೂರ್ಣ ಸಹ ಅಸ್ತಿತ್ವ.

ಲೋಕಪ್ರಿಯತೆ

ಯುದ್ಧಭಯದಿಂದ ಕೂಡಿದ ಜಗತ್ತು ಈ ಸೂತ್ರವನ್ನು ಕೂಡಲೇ ಸ್ವೀಕರಿಸಿತು. ಚೀನಾವೂ ಪ್ರಧಾನಿಯೂ ಇದಕ್ಕೆ ಸಹಿ ಹಾಕಿದರು. ರಷ್ಯದ ಪ್ರಧಾನಿ ಇದನ್ನು ಸ್ವೀಕರಿಸಿದರು ಮುಂದೆ ಬರ್ಮಾ, ಸಿಲೋನ್, ಯುಗೋಸ್ಲಾವಿಯಾ, ಈಜಿಪ್ಟ್, ಮಲಯಾ ಮೊದಲಾದವೆಲ್ಲಾ ರಾಷ್ಟ್ರಗಳೂ ಇವನ್ನು ಸ್ವೀಕರಿಸಿದುವು ಹೇಗೆ ಪಂಚಶೀಲವು ಭಾರತದ ತಟಸ್ಥ ಧೋರಣೆಯನ್ನು ಜಗತ್ತಿಗೆ ಸಾರಿ ಮಹಾನ್ ಕೀರ್ತಿಯನ್ನು ತಂದುಕೊಟ್ಟಿತು.

ಈ ಸಂದಿಗ್ಧ ಪರಿಸ್ಥಿತಿ

ಆದರೆ ಚೈನಾದ ಆಕಸ್ಮಿಕ ಆಕ್ರಮಣದ ಈ ಸಂಧಿಕಾಲದಲ್ಲಿ ನಮ್ಮ ಸತ್ವ ಪರೀಕ್ಷೆಯಾಗುತ್ತಿದೆ. ನಮ್ಮ ದೇಶದ ಮೇಲೆ ಆಕ್ರಮಣವಾಗಿರುವಾಗ ನಮ್ಮಿಂದಿರುವುದೇ? ಆ ನಮ್ಮ ಸ್ವಾತಂತ್ರ್ಯವನ್ನು ಕಬಳಿಸಬಂದ ಆ ಚೀನೀ ಆಕ್ರಮಣಗಾರರನ್ನು ಹೊರದಬ್ಬುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಪಂಚಶೀಲ ಶಾಂತಿ ಮಂತ್ರಗಳಿಗೆ ಜನಕನೆನ್ನಿಸಿಕೊಂಡ ಭಾರತ ಈಗ ಏನು ಮಾಡುತ್ತದೆಂದು ನೋಡುವ ಕುತೂಹಲ ಜಗತ್ತಿಗಿದೆ. ತಾಟಸ್ಥ್ಯಧೋರಣೆಯನ್ನು ಬಿಡುವ ಸಲಹೆಯಿತ್ತವರೂ ಇದ್ದಾರೆ. ತಾಟಸ್ಥ್ಯ ನೀತಿಯನ್ನು ಬಿಡುವುದರ ಅರ್ಥ ಜಗತ್ತಿನ ಯಾವುದಾದರೊಂದು ಬಣಕ್ಕೆ ಸೇರುವುದು. ಇದರಿಂದ ನಾವು ಇನ್ನೊಂದು ಬಣದ ವಿರೋಧವನ್ನು ಬೇಕಬೇಕೆಂದೇ ಮೈಮೇಲೆ ಜಾಕೆಕೊಳ್ಳಬೇಕಾಗುತ್ತದೆ. ಇದರಿಂದ ಸಮಸ್ಯೆ ಮತ್ತಷ್ಟು ಉಲ್ಬಣಿಸುತ್ತದೆಯೇ ಹೊರತು ಪರಿಹಾರವಾಗುವುದಿಲ್ಲ.

ಜಗತ್ತಿನ ದೃಷ್ಟಿ

ಇಂದು ವಿಶ್ವದ ದೃಷ್ಟಿ ಭಾರತದ ಮೇಲಿದೆ. ಭಾರತದ ಸತ್ವಪರೀಕ್ಷೆ ಮಾಡುವ ಈ ಚೀನೀಯರ ಪಾಶವೀ ಆಕ್ರಮಣದ ಸಂದಿಗ್ಧ ಕಾಲದಲ್ಲಿ ಭಾರತ ಯುದ್ಧ ಮಾಡುವುದೋ ಇಲ್ಲವೋ? ತಾಟಸ್ಥ್ಯಧೋರಣೆ ತ್ಯಜಿಸುವುದೋ ಇಲ್ಲವೋ? ಎಂಬುದೇ ಅವುಗಳ ಕುತೂಹಲದ ಕಾರಣ. ಭಾರತವು ತನ್ನ ನೀತಿಯಲ್ಲಿ ಬದಲಾವಣೆ ಮಾಡುವುದಿಲ್ಲ. ಆದರೆ ತನ್ನ ಆತ್ಮರಕ್ಷಣೆಗೆ ದೇಶ ರಕ್ಷಣೆಗೆ ಏನೆಲ್ಲ ಮಾಡಬೇಕಾಗುವುದೋ ಅದನ್ನೆಲ್ಲ ಖಂಡಿತವಾಗಿಯೂ ಮಾಡುವುದು ಇದರ ಅರ್ಥ ತಾಟಸ್ಥ್ಯ

(ಅದೇ ಪುಟ ನೋಡಿರಿ)



ಹನಿ ಕೂಡಿ ಹಳ್ಳ—
ಉದಾರವಾಗಿ ವಂತಿಗೆ ನೀಡಿ
ವಿನಂತಿ

"ಬ್ಯಾಂಕ್ ಆಕೌಂಟ್ ಇರುವ ಎಲ್ಲಾ ಗಿರಾಕಿಗಳೂ, ಸಂಸ್ಥೆಗಳೂ, ಕೀಗಳಾಂತ್ಯದಲ್ಲಿ ತಮ್ಮ ಆಕೌಂಟಿನಲ್ಲಿ ಉಳಿದಿರುವ ಚಿಲ್ಲರೆ ನಯೇ ಪೈಸೆಗಳನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ನೀಡುವಂತೆ ತಂತಮ್ಮ ಬ್ಯಾಂಕರುಗಳಿಗೆ ಅಧಿಕಾರವೀಯಬೇಕೆಂದು ನನ್ನ ವಿನಂತಿ.
ಈ ವಂತಿಗೆಗಳು ಅಲ್ಪವಾದರೂ, ದೊಡ್ಡ ಮೊತ್ತವಾಗಬಲ್ಲವು.
ನಮ್ಮ ಕೆಚ್ಚೆದೆಯ ಸೈನಿಕರಿಗಾಗಿ ಈ ಸೌಹಾರ್ದ ತೋರಿಸಲು ಸರ್ವರೂ ಸಿದ್ಧರೆಂದು ನಾನು ನಂಬಿದ್ದೇನೆ."

ಎಸ್. ನಿಜಲಿಂಗಪ್ಪ
ಮೈಸೂರಿನ ಮುಖ್ಯಮಂತ್ರಿ

ಇಂತಹ ವಂತಿಗೆ ಕೊಡಲು ಅಧಿಕಾರ ಪತ್ರವೀಯುವಂತೆ ಕೆನರಾ ಬ್ಯಾಂಕ್ ತನ್ನ ಎಲ್ಲಾ ಗ್ರಾಹಕರನ್ನು ವಿನಂತಿಸುತ್ತದೆ.
ಅಧಿಕಾರ ಪತ್ರಗಳು ನಮ್ಮ ಎಲ್ಲಾ ಶಾಖೆಗಳಲ್ಲಿ ದೊರೆಯುವುವು

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ: 1906)
— ರಾಷ್ಟ್ರದ ಸೇವೆಯಲ್ಲಿ —

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ನೆರುಷ	ಉಡುಪಿ	ವಾರ
೪೨	೨೦-೧೨-೧೯೬೨	೧೫

ಪಾಕ್ ಮನೆಮುರುಕತನ

ಭಾರತವು ಕೆಂಪು ಚೀನಾದ ಆಕ್ರಮಣವನ್ನು ಎದುರಿಸಬೇಕಾಗಿ ಬಂದಿರುವ ಸಂದರ್ಭದಲ್ಲೇ ಪಾಕಿಸ್ತಾನವು ಭಾರತದ ಸ್ವರಕ್ಷಾ ನೀತಿಯನ್ನು ಬಹಿರಂಗವಾಗಿ, ಖಂಡತುಂಡವಾಗಿ ಟೀಕಿಸುತಿದ್ದುದನ್ನು ಯಾರೂ ಮರೆತಿಲ್ಲ. ಭಾರತ ಉಪಖಂಡಕ್ಕೆ ಚೀನೀಯರಿಂದ ಭೀತಿಯಿದೆಯೆಂಬುದನ್ನು ಅಧ್ಯಕ್ಷ ಅಯೂಬ ಖಾನರಿಗೆ ಅಮೆರಿಕೆಯ ಹೆರಿಮನ್ ಮತ್ತು ಬ್ರಿಟನ್ನಿನ ಸ್ಯಾಂಡಿಸರು ತಿಳಿಸಿ ಹೇಳಬೇಕಾಯಿತು. ಇದಕ್ಕಾಗಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ತೀರ್ಮಾನವಾಗದೆ ಉಳಿದಿರುವ ಕೆಲವೊಂದು 'ವಿಚಾರ'ಗಳನ್ನು ಮಾತುಕತೆಗಳ ನೂಲಕವೇ ಪರಿಹರಿಸಲು ಮಾರ್ಗ ತೆರೆಯುವುದು ಅವಶ್ಯವೆಂದು ಮನಗಂಡು ಉಭಯ ರಾಷ್ಟ್ರಗಳ ನಾಯಕರೂ ಈ ಬಗ್ಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿದುದು ಜನಜನಿತವಿದೆ. ಅಯೂಬ ಖಾನರ ಉತ್ಸಾಹದ ಕಾರಣದಿಂದ ಇದೇ ತಿಂಗಳಿಗೆ ರಾವಲಪಿಂಡಿಯಲ್ಲಿ ಪ್ರತಿನಿಧಿಗಳು ಒಟ್ಟುಸೇರಲಿರುವರು. ಇದೊಂದು ಶುಭ ಚಿಹ್ನೆಯೆಂದು ಎಲ್ಲೆಡೆಯ ಸ್ವಾಗತ ಉದಕ್ಕೆ ಲಭಿಸಿದೆ.

ಜಗತ್ತು ಅರಿತುಕೊಂಡಿರುವಂತೆ ಕಾಶ್ಮೀರದ ಸಮಸ್ಯೆಯೊಂದೇ ಭಾರತ—ಪಾಕ್ ಭಿನ್ನಾಭಿಪ್ರಾಯಕ್ಕೆ ಪ್ರಧಾನ ಹೇತುವಾಗಿದೆ. ಇದು ಬಗೆಹರಿಯದ ವಿನಃ ಭಾರತದೊಡನೆ ಮಿತ್ರತ್ವವಿಲ್ಲವೆಂಬುದನ್ನು ಪಾಕ್ ಅಧಿಕಾರಿಗಳು ಬಹು ಹಿಂದೆಯೇ ಉದ್ಘರಿಸಿದ್ದರು; ಇಂದಿಗೂ ಅದೇ ಮಂತ್ರವನ್ನು ಪುನರುಚ್ಚರಿಸುತ್ತಿದ್ದಾರೆ. ಪಾಕಿಸ್ತಾನದ ಅಳಿವು ಉಳಿವಿನ ಪ್ರಶ್ನೆಯಿದು ಎಂದು ಅವರು ಅತಿಶಯವಾಗಿ ವರ್ಣಿಸುತಾರೆ. ಇದಕ್ಕೆ ಪೂರಕವಾಗಿ ಇನ್ನಿತರ ಚಿತ್ರ ವಿಚಿತ್ರ ಆರ್ಥಿಕ ಹಾಗೂ ರಾಜಕೀಯ ಪ್ರಶ್ನೆಗಳೂ ಎಂದೆ ಬಂದಿದ್ದು ಉಭಯ ದೇಶಗಳ ಆವಶ್ಯ ಉಳಿದಿರಬೇಕಾದ ಸಮಭಾವ ಸಂಬಂಧಕ್ಕೆ ವಿಷ ಸುರಿದಂತಾಗಿದೆ ಕಾಶ್ಮೀರದ ವಿಷಯದಲ್ಲಿ ಪಾಕಿಸ್ತಾನಕ್ಕೆ ಕೆಲವೊಂದು ಪಾಶ್ಚಾತ್ಯ ರಾಷ್ಟ್ರಗಳೂ ಬೆಂಬಲ ನೀಡುತ್ತಿವೆಯೆಂಬುದಕ್ಕೆ ಯುಕ್ತ ರಾಷ್ಟ್ರ ಸಂಘದ ಕಾರ್ಯಕಲಾಪಗಳೇ ಸಾಕ್ಷಿಯೆನಿಂತಿವೆ. ಈ ವರೆಗೆ ಪಾಕಿಸ್ತಾನವು ಕಾಶ್ಮೀರದಲ್ಲಿ ಹದಿನೈದು ವರ್ಷಗಳಿಗೆ ಹಿಂದೆ ಸ್ವೀಕರಿಸಲಾದ ಯು ಎನ್ ಒ ನಿರ್ಣಯಗಳಂತೆ ಸ್ವತಂತ್ರ ಜನಾಭಿಪ್ರಾಯಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು ಆದು ಯಾವುದರೊಡನೆ ವಿಲೀನಗೊಳ್ಳಬೇಕೆಂಬುದನ್ನು ನಿರ್ಧರಿಸಬೇಕೆಂದು ಹಠ ಹಿಡಿದು ವಾದಿಸುತಿತ್ತು. ಇದಕ್ಕೆ ಭಾರತದ ವಾದವು ಅರ್ಥಪೂರ್ಣವಾಗಿಯೇ ಇತ್ತು. ಯು ಎನ್ ಓದ ಗೊತ್ತುವಳಿಯಲ್ಲಿ ಕಾಶ್ಮೀರವನ್ನು ಪಾಕ್ ಸೈನ್ಯವು ಸಂಪೂರ್ಣ ತೆರವು ಮಾಡಬೇಕೆಂದೂ ಆ ಬಳಿಕ ಮತ ಗಣನೆ ನಡೆಯಬೇಕೆಂದೂ ಹೇಳಲಾಗಿತ್ತು. ಮೊದಲನೆಯ ಅಂಶವನ್ನು ಇಂದಿಗೂ ಪಾಕಿಸ್ತಾನ ಪಾಲಿಸದಿದ್ದರೂ ಎರಡನೆಯ ಅಂಶವನ್ನು ಮಾತ್ರ ಪಟ್ಟು ಹಿಡಿಯುವುದರಲ್ಲಿ ಅರ್ಥವಿಲ್ಲ. ಇಂದಿಗೆ ಬಹು ಹಿಂದಿನದಾದ ಈ ಗೊತ್ತುವಳಿಯನ್ನು ಈಗ ಕಾರ್ಯಾಚರಣೆಗಿಳಿಸುವುದು ಭಾರತಕ್ಕೆ ಮಾನ್ಯವಿಲ್ಲ. ಈಗ್ಗೆ ಕಾಶ್ಮೀರದ ಪರಿಸ್ಥಿತಿಯು ಭಾರತದ ಮಾರ್ಗದರ್ಶನದಲ್ಲಿ ಆಲ್ಲಿನ ಜನತೆಯ ಉತ್ಸಾಹದಿಂದ ತಿರುವು ಮುರುವಾಗಿದೆ. ಕಾಶ್ಮೀರಿಗಳು ಸ್ವತಂತ್ರ ಸಂವಿಧಾನವೊಂದನ್ನು ರಚಿಸಿ, ಭಾರತದೊಡನೆ ಆದರ ಸೇರ್ಪಡೆಯನ್ನು ಸಮರ್ಥಿಸಿಕೊಂಡಿದ್ದಾರೆ. ಇದು ಜನಮತವೇ ತಾನೆ? ಹಾಗಿರುವಾಗ, ಕಾಶ್ಮೀರದ ಭವಿಷ್ಯ ಹೇಗಿರಬೇಕೆಂಬುದನ್ನು ನಿರ್ಧರಿಸುವ ಅಧಿಕಾರ ಪಾಕಿಸ್ತಾನಕ್ಕೆ ಇತ್ತವರು ಯಾರು?

ಆದರೆ, ಇಂದು ಪಾಕಿಸ್ತಾನದ ಪಲ್ಲವಿಯಲ್ಲಿ ತುಳು ಪರಿವರ್ತನೆಯೊದಂತೆ ಭಾಸವಾಗುತ್ತದೆ. ಇದುವರೆಗೆ ಜನಮತ ಗಣನೆಯೇ ಸಮಸ್ಯೆ ಪರಿಹಾರಕ್ಕೆ ತಾರಕ ವೆಂದು ಅದೊಂದಕ್ಕೇ ಪಟ್ಟು ಹಿಡಿದು ಬಂದಿದ್ದರೂ ಈಗ ಈ ತನ್ನ ಮೂಲ ನೀತಿಯನ್ನು ಅದು ಬಿಟ್ಟುಗೊಡುವುದಕ್ಕೆ ಮುಂದೆ ಬರುವ ಲಕ್ಷಣಗಳು ಗೋಚರಿಸುತ್ತಿವೆ ಪಾಕ್-ಅಮೆರಿಕ ಪಾಲನವನ್ನು ಭಾರತವು ಎಂದಿಗೂ ಒಪ್ಪುವುದಿಲ್ಲ ಮತ್ತು ತನ್ನ ಕಾಶ್ಮೀರ ನೀತಿಯು ಮೂಲಭೂತ ತತ್ವಗಳ ಹಿನ್ನೆಲೆಯಲ್ಲಿ ಮಾತ್ರ ಈ ವಿಚಾರದ ಸಂಧಾನ ಪ್ರಯತ್ನಕ್ಕೆ ತಾನು ಸಿದ್ಧವೆಂದು ಅದು ಘೋಷಿಸಿರುವುದರಿಂದ, ಪಾಕಿಸ್ತಾನ ತನ್ನ ಹೋಳಿಗೆಯುನ್ನು ಕೆಂಪಿತ್ತಾದರೂ ತುಪ್ಪಕ್ಕೆ ಬೀಳುವಂತೆಸಗುವ ಸಾಹಸ ಮಾಡುವಂತಿದೆ. ಇಂದು ಅಯೂಬ ಖಾನರು ತಮ್ಮ ಜನ್ಮಸಿದ್ಧವೆನಿಸಿದ ಮತ ಗಣನೆಯ ವಾದವನ್ನ ಬಿಟ್ಟುಕೊಟ್ಟು ಇದಕ್ಕೆ ಪ್ರತಿಯಾಗಿ ಇತರ ಸೂಚನೆಗಳನ್ನು ಮುಂದಿಡುವ ಹೆಂಚಿಕೆಯಲ್ಲಿದ್ದಾರೆ. ಕಾಶ್ಮೀರದಲ್ಲಿ ಹಿಂದೂಗಳು ಹೆಚ್ಚಿರುವ ಪ್ರದೇಶವನ್ನು ಭಾರತಕ್ಕೂ ಮುಸ್ಲಿಮರು ಅಧಿಕ ಸಂಖ್ಯಾಕರಿರುವ ಪ್ರದೇಶವನ್ನು ಪಾಕಿಸ್ತಾನಕ್ಕೂ ಸೇರಿಸಿ ಕಾಶ್ಮೀರ ಕಣಿವೆಯನ್ನು ಸ್ವತಂತ್ರ ಪ್ರದೇಶವಾಗಿ ಇರಿಸುವ ವಿಭಜನೆಯ ಸೂತ್ರ ಇವುಗಳಲ್ಲಿ ಒಂದು. ಈ ಅಸ್ವಾಭಾವಿಕ ಸೂಚನೆಯನ್ನು ಬಿಟ್ಟುರೆ ಅದು ಮಾಡುವುದೆಂದು ನಂಬಲಾದ ಇನ್ನೆರಡು ಸಲಹೆಗಳೂ ಅವಾಸ್ತವಿಕತೆಯ ತಳಹದಿಯಿಂದಲೇ ಎದ್ದು ಬಂದಂತಹವು. ಕಾಶ್ಮೀರವನ್ನು ಒಂದು ಸ್ವತಂತ್ರ ರಾಷ್ಟ್ರವೆಂದು ಮನ್ನಿಸುವುದು ಅಥವಾ ಸಂರಕ್ಷಣೆ ಮತ್ತು ವಿದೇಶ ನೀತಿಗಳನ್ನು ಭಾರತ-ಪಾಕಿಸ್ತಾನಗಳ ಸಂಯುಕ್ತ ನಿಯಂತ್ರಣಕ್ಕೊಳಪಡಿಸಿ ಆದನ್ನು ಪ್ರತ್ಯೇಕ ಘಟಕವೆಂದು ಮನ್ನಿಸುವುದು ಸೂಕ್ತ ಪರಿಹಾರವೆಂದು ಹೇಳುವಂತಿಲ್ಲ. ಇದನ್ನು ಭಾರತವು ಒಪ್ಪಿಕೊಂಡಿತೆಂದರೆ, ಆದರ ಕಾಶ್ಮೀರ ನೀತಿಯು ತಲೆಕೆಳಗಾಗುವುದು ಮಾತ್ರವಲ್ಲ ಅದು ಸ್ವಯಂ ಕಾಶ್ಮೀರಿಗಳ ಅಭಿಪ್ರಾಯಕ್ಕೂ ವಿರೋಧವಾದುದು; ಅವರ ಭವಿಷ್ಯಕ್ಕೆ ಕುಠಾರಪ್ರಾಯವಾದುದು. ಕಾಶ್ಮೀರದ ಜನತೆಯು ತಾನುಸಂವಿಧಾನದಲ್ಲಿ ತನ್ನ ಭಾರತದೊಂದಿಗೆ ವಿಲೀನಗೊಂಡುದನ್ನು ಸಮರ್ಥಿಸಿದೆ ಮತ್ತು ಭಾರತದ ಮಾರ್ಗದರ್ಶನದಲ್ಲಿ ಪ್ರಜಾಪ್ರಭುತ್ವ ನೀತಿಯಂತೆ ನಡೆದು ಸಾರ್ವತ್ರಿಕ ಚುನಾವಣೆಗಳನ್ನೂ ಸಂವಿಧಾನಿಕ ಸಂಸ್ಥೆಗಳನ್ನೂ ನ್ಯಾಯಸರಿಪಾಲನೆಯನ್ನೂ ನಡೆಸಿತ್ತಿದೆ. ಭಾರತದ ಇತರ ರಾಜ್ಯಗಳಂತೆಯೇ ಕಾಶ್ಮೀರವೂ ಒಂದು ಎಂಬುದನ್ನಿದು ಸಾರಿ ಹೇಳುತ್ತಿದೆ. ಹಾಗಿರುವಾಗ, ಭಾರತವು ತನ್ನ ಮೂಲ ತತ್ವಗಳನ್ನು ಬಿಟ್ಟುಗೊಟ್ಟು ಕಾಶ್ಮೀರದ ಜನಾಭಿಪ್ರಾಯವನ್ನು ಕಡೆಗಣಿಸಿ ಪಾಕಿಸ್ತಾನದ ದುರಭಿಲಾಷೆಯೆದುರು ತಲೆ ತಗ್ಗಿಸುವುದು ಸರ್ವಥಾ ಆಗದ ಮಾತು. ಅದುದರಿಂದ ಸತ್ಯ ಸ್ಥಿತಿಗೆ ಪ್ರತಿರೋಧವಾಗದಂತೆ ವಾಸ್ತವಿಕತೆಯನ್ನು ತಿಪ್ಪೆಗೆಸೆಯದಂತೆ ಕಾಶ್ಮೀರಿಗಳ ಅಂತರಾಳದ ಸದಾಶಯಕ್ಕೆ ಬಿಸಿ ನೀರು ಹೊಯ್ಯದಂತೆ ತನ್ನ ಕಾಶ್ಮೀರ ನೀತಿಯನ್ನು ಭಾರತವು ಮುಂದೆಯೂ ಅನುಸರಿಸುವುದು. ಪಾಕಿಸ್ತಾನದ ಅಧಿಕಾರಿಗಳು ವ್ಯರ್ಥ ನಕ್ಷತ್ರಾರಿಯಲ್ಲೇ ಪರಿಭ್ರಮಿಸದೆ ವಸ್ತುಸ್ಥಿತಿಯನ್ನು ಮನಗಂಡು, ಸದಸತ್ವಿವೇಕಯುತರಾಗಿ ಮುನ್ನಡ್ಡಿ ತನದಿಂದ ವರ್ತಿಸುವುದು ಇಂದು ಎನ್ನಕ್ಕಿಂತ ಅತ್ಯವಶ್ಯವಿದೆ.

ಪ್ರಥಮ ಸೋಪಾನ

ನಮ್ಮ ವಿಶ್ವಾಸವನ್ನು ಘೋಷಿಸಿದ ಚೀನೀಯರು ಕಾಮೆಂಗ್ ಡಿವಿಜನ್ನಿನಲ್ಲಿರುವ ಬೊಮ್ಡಿಲಾದಿಂದ ಹಿಂದೆ ಸರಿಯರೆಂದೂ ಅಲ್ಲಿ ನೇಫಾದ ನಾಗರಿಕರ ಅಧಿಕಾರಿಗಳು ತೆರಳಿ ಕೆಟ್ಟು ಹೋದ ನಾಗರಿಕ ಆಡಳಿತವನ್ನು ಮರಳಿ ಸ್ಥಾಪಿಸುತ್ತಿರುವರೆಂದೂ ವರದಿಗಳು ಬಂದಿವೆ ಇದೇ ರೀತಿಯುತ್ತ ಚೀನೀಯರು ನೇಫಾದ ಒಂದೊಂದೇ ಸ್ಥಾನದಿಂದ ಮರಳಿ ಹೋದಂತೆ ಆ ಪ್ರದೇಶಗಳಲ್ಲಿ ಭಾರತೀಯ ಅಧಿಕಾರಿಗಳು ಮುಂದೆಯೂ ನಾಗರಿಕ ಆಡಳಿತವನ್ನು ಸ್ಥಾಪಿಸುವರು ಎಂದೂ ತಿಳಿದು ಬಂದಿದೆ. ಕೆಲವು ದಿನಗಳಿಗೆ ಮೊದಲು ಗೃಹಮಂತ್ರಿ ಲಾಲ ಬಹದೂರ ಶಾಸ್ತ್ರಿಗಳು ಇದೇ ರೀತಿಯ ಹೇಳಿಕೆಯನ್ನು ಇತ್ತಿದ್ದರು. ಈಗ ಅದು ಕಾರ್ಯಾಚರಣೆಗಿಳಿಯುತ್ತಿದೆಯೆನ್ನಬಹುದು. ಚೀನೀ ಸೇನೆಯು ಅನ್ಯಾಯವಾಗಿ ಆಕ್ರಮಿಸಿದ ನಮ್ಮ ಪ್ರದೇಶದಲ್ಲಿ ನಮ್ಮ ಆಡಳಿತೆಯನ್ನು ಪುನರುಜ್ಜೀವನಗೊಳಿಸುವುದು ನಮ್ಮ ಕರ್ತವ್ಯ. ಇದನ್ನು ಭಾರತ ಸರಕಾರ ಧೈರ್ಯದಿಂದ ಸಾಧಿಸಲು ಮುಂದಾಗಿದೆ ಇದು ನಮ್ಮ ಸೇನಾ ರಕ್ಷಣಾ ಸೈನ್ಯೆಯ ಸಂಕೇತವೆನ್ನಬಹುದು. ಆದರೆ, ಶಸ್ತ್ರಾಗಾರದ ಚೀನೀಯರಿಂದ ಇದನ್ನು ಸಹಿಸಲಾದೀತೆ? ಎಂಬುದೊಂದು ಪ್ರಶ್ನೆ. ಅವರು ೧೯೫೯ರ ನವಂಬರ ೭ರಂದು ಇದ್ದಿನ್ನೆನ್ನುವ ವಾಸ್ತವಿಕ ನಿಯಂತ್ರಣ ರೇಖೆಯಿಂದ ಹೊರನಡೆಯುವವರು, ಭಾರತವೆನ್ನುವ ರಾಜ್ಯಾಂಗ ರಕ್ಷಪ್ತಂಬರ್ ೮ರ ಶೀಮೆಯನ್ನು ಅನ್ಯಾಯವೆಂದು ಹೇಳುವವರು ಈಗ ಸುಮ್ಮನಿರುವಂತೆ ಕಂಡುಬಂದರೂ ಇದೇ ಪರಿಸ್ಥಿತಿಯು ಮುಂದುವರಿಯುವುದೆಂದು ಹೇಳುವಂತಿಲ್ಲ. ಅವರು ಭಾರತೀಯ ಆಡಳಿತೆಯನ್ನು ಕೆಡಿಸಲು ಮತ್ತು ಭೂಮಿಯನ್ನು ನುಂಗಲು ಮತ್ತೊಮ್ಮೆ ಆಕ್ರಮಣ ಮಾಡುವುದಿಲ್ಲವೆಂದು ಹೇಳುವಂತಿಲ್ಲ. ಆದಕ್ಕೆಂದೇ ರಕ್ಷಣಾ-ದಳದ ಒಂದು ತುಕುಡಿಯೂ ಬೊಂಡಿಲಾಕ್ಕೆ ನಾಗರಿಕ ಅಧಿಕಾರಿಗಳೊಡನೆ ತೆರಳಿದೆ. ಬೊಮ್ಡಿಲಾದ ಆಡಳಿತದ ಪುನರ್ ಜ್ಜೀವನವನ್ನೆ ಳೆಯೆದುಕೊಂಡ ನೇಪಾವನ್ನು ಮುಂಳಿ ಪಡೆಯುವ ನೊದಲ ಹೆಜ್ಜೆ ಸ್ವದೇಶ ಸಮಗ್ರತೆಗಾಗಿ ಸರ್ವಸ್ವವನ್ನೂ ಮುಡುಪಿಟ್ಟ ಭಾರತೀಯರು ಚೀನೀಯರಿಂದ ಆಕ್ರಮಿಸಿಕೊಪ್ರದೇಶವನ್ನು ಮರಳಿಪಡೆಯುವುದು ಮಾತ್ರವಲ್ಲ, ಮುಂದೆ ಅವರು ತಲೆಯೆತ್ತಿ ನೋಡದಂತೆ ಮಾಡುವಲ್ಲಿ ಯಶಸ್ವಿಯಾಗುತ್ತಾರೆ. ಇದು ಶತಶತಲಕ್ಷ್ಯರದಂತೆ ನಿತ್ಯ ಸತ್ಯ.

— ——

ಪ್ರಥಮ ಚಿಕಿತ್ಸಾ ತರಗತಿಗಳು—

ಸಾರ್ವಜನಿಕ ತುರ್ತು ಪರಿಸ್ಥಿತಿಯ ಕಾರಣದಿಂದಾಗಿ ಉಡುಪಿಯ ಸರಕಾರಿ ಆಸ್ಪತ್ರೆಯಲ್ಲಿ ಸರಕಾರಿ ನೌಕರರಿಗೆ ಮತ್ತು ಸಾರ್ವಜನಿಕರಿಗೆ, ಪ್ರಥಮ ಚಿಕಿತ್ಸಾ ತರಗತಿಗಳನ್ನು ನಡೆಸುವ ಬಗ್ಗೆ ಜಾರಿವಿದೆ ತರಗತಿಗೆ ಸೇರಲಿಚ್ಛಿಸುವವರು ತಮ್ಮ ಹೆಸರು ವಿಳಾಸಗಳನ್ನು ಆಸ್ಪತ್ರೆಯ ಆಳ್ಳಿಸಿನಲ್ಲಿ, ಕೆಲಸದ ಸಮಯದಲ್ಲಿ ತಾ ೨೦.೧೨.೬೨ರೊಳಗೆ ತಿಳಿಸಬಹುದು ತರಗತಿಗಳನ್ನು ಪ್ರಾರಂಭಿಸುವ ಕುರಿತು ಮತ್ತು ಆಗತ್ಯವಾದ ಇತರ ಮಾಹಿತಿಗಳನ್ನು ನಿರ್ಧರಿಸಿದೊಡನೆ ಅವರಿಗೆ ತಿಳಿಸಲಾಗುವುದು ಎಂದು ಉಡುಪಿ ಸರಕಾರಿ ಆಸ್ಪತ್ರೆಯ ಸರ್ಜನರು ತಿಳಿಸುತ್ತಾರೆ.

THE KARNATAKA BANK LIMITED, UDIPI.
Registered Office: Dongarakery, MANGALORE-3

AUCTION SALE OF ELECTRICAL GOODS

The following items of Electrical Goods pledged to the Bank will be sold by auction at 3 P. M. on 27th December, 1962 or on any other subsequent date which may be convenient to the Bank in the office premises of the Bank at Tenkpet, Udipi, where inspection of the goods will be allowed between 10 A.M. and 2 P.M. to intending bidders. For conditions of sale, please refer to the undersigned. Notices have been separately issued to the pledgers.

PARTICULARS OF THE GOODS

Serial No.	Loan No.	Description of the goods.
1.	5/61	Eighteen Reels of Electric Cables.
2.	6/61	Four "RCA 15268" Units
3.	7/61	One "Gulmarg" Air-cooler- Model "V"
4.	4/62	Seven 'Omega' TableFans-16"Oscillating

Udipi
13—12—1962

K. B. Rama Rao
Agent.

ಅಲ್ಲಲ್ಲಿಯ ಸುದ್ದಿಸಾರ

ಭುವನೇಂದ್ರ-ಸಿಂಡಿಕೇಟ್ ಟೂರ್ನಮೆಂಟುಗಳು—ನರ್ಸಂಪ್ರತಿ ದಶಂಬರ ತಿಂಗಳಲ್ಲಿ ನಡೆಸಲ್ಪಡುವ ಭುವನೇಂದ್ರ ಸಿಂಡಿಕೇಟ್ ಟೂರ್ನಮೆಂಟುಗಳು ಈ ವರ್ಷ ರಾಷ್ಟ್ರೀಯ ತುರ್ತು ಪರಿಸ್ಥಿತಿಯ ದೆಸೆಯಿಂದಾಗಿ ಮುಂದುವರಿಸಲ್ಪಟ್ಟವೆಯೆಂದು ಟೂರ್ನಮೆಂಟಿನ ಅಧ್ಯಕ್ಷ ಶ್ರೀ ಕೆ. ಟಿ. ಪೈ ಗಳು ತಿಳಿಸುತ್ತಾರೆ

ಮಲೆನಾಡು ಪ್ರದೇಶದಲ್ಲಿ ಕೋಕೊ ಬೆಳೆಗೆ ಉಜ್ವಲ ಭವಿಷ್ಯ—ಕೆಲವು ವರುಷಗಳ ಹಿಂದೆ ದ. ಕ.ದಲ್ಲಿ ನೆಡಲ್ಪಟ್ಟ ಮರಗಳು ಫಲಕೊಡಲಾರಂಭಿಸಿದುದರಿಂದ ಕೋಕೊ ಬೆಳೆಯು ದ. ಕ. ಮತ್ತು ಉ. ಕ. ದ ಎರಡು ಸಾವಿರ ಅಡಿಗಳ ಎತ್ತರದ ಮಲೆನಾಡು ಪ್ರದೇಶಕ್ಕೆ ಯೋಗ್ಯವಾದ ಕೃಷಿಯೆಂದು ತೋರುತ್ತದೆ. ಸಿದ್ಧ ಖನಿಕದಲ್ಲಿಲ್ಲಿ ಉಪಯೋಗಿಸುವ ಹೆಚ್ಚಿನಂಶ ಕೋಕೊವು ಘನ ಮತ್ತು ನೈಟ್ರೇಯಿಂದಿಂದ ಅನುವಾಗುವುದಾಗಿರುತ್ತದೆ ಸಾತೇ ಬಿಸ್ಕುಟುಗಳು, ಮತ್ತು ಕಾರ್ಡ್‌ಬರೀಸ್, ಎಂಬಿವು ಕಂಪೆನಿಗಳು ಮುಖ್ಯವಾಗಿ ಕೋಕೊ ಉತ್ಪತ್ತಿಗಳನ್ನು ಉತ್ಪಾದಿಸುವುಗಳಾಗಿವೆ. ಮತ್ತು ಅವು ಭಾರತದಲ್ಲಿ ತಯಾರಾದ ಎಸ್ಟೇ ಪರಿಮಾಣದ ಕೋಕೊವನ್ನು ಖರೀದಿಸಲು ಸಿದ್ಧವಾಗಿರುವವು. ಆದರೆ, ದುರಾದೃಷ್ಟದಿಂದ ಅದರ ಸ್ಥಳೀಯ ಉತ್ಪಾದನೆ ಬಹಳ ಕಡಿಮೆಯಿದೆ. ಉಜ್ವಲ ಭವಿಷ್ಯವಿರುವುದರಿಂದ ವಿಶೇಷ ಪರಿಮಾಣದಲ್ಲಿ ಕೋ ಕೋ ಬೆಳೆಸುವುದು ಲಾಭದಾಯಕವಾಗುವುದು ಮೈಸೂರು ಸರಕಾರವು ಕೊಕೊ ಬೆಳೆಸುವುದನ್ನು ವಿಸ್ತರಿಸುವ ಕಾರ್ಯಕ್ರಮ ಕೈಕೊಂಡಿದೆ. ಪ್ರಥಮ ಕಾರ್ಯಾವಾದ ಬೀಜಾಂಕುರವೆತ್ತುವುದನ್ನು ಮೂಡುಗೆರೆಯ ಏಲಕ್ಕಿ ಸಂಶೋಧನಾ ಕೇಂದ್ರದಲ್ಲಿ, ಅಲ್ಲಿಯ ವಿಶಿಷ್ಟ ಅಧಿಕಾರಿ ಶ್ರೀ ಎಸ್. ಆರ್. ಗಂಗೊಳ್ಳಿಯವರ ನೇತೃತ್ವದಲ್ಲಿ ಕೈಗೊಳ್ಳಲಾಗಿದೆ. ದ. ಕ. ಮತ್ತು ಉ. ಕ.ದ ಯಾವುದೇ ಭಾಗದಲ್ಲಿ ದೊರೆಯಬಹುದಾದ ಯಾವುದೇ ಕೋಕೊ ಬೀಜಗಳನ್ನು ಆಕರ್ಷಕ ದರದಲ್ಲಿ ಖರೀದಿಸಲಾಗುವುದು. ಶಿಂಬೆಯಿರುವ ಕೋಕೊ ಮರಗಳಿರುವವರು ಸೈಲಿಲ್ ಆಫೀಸರ್, ಏಲಕ್ಕಿ ಸಂಶೋಧನಾ ಕೇಂದ್ರ, ಮೂಡುಗೆರೆ ಪೋಸ್ಟ್, ಚಿಕ್ಕಮಗಳೂರು ಜಿಲ್ಲೆ, ಅಥವಾ ಕೇಶೋ ಡೆವಲಪ್‌ಮೆಂಟ್ ಆಫೀಸರ್, ಮಂಗಳೂರು-2 ಇವರೊಡನೆ ಸಂಪರ್ಕ ಬೆಳೆಸಬಹುದು.

ವಾರ್ಷಿಕೋತ್ಸವ—ಕಟಪಾಡಿಯ ಮಹತೋಭರ ಶ್ರೀ ವಿಶ್ವಕರ್ಮೇಶ್ವರ ದೇವಸ್ಥಾನದಲ್ಲಿ ನವಂಬರ 19ರಲ್ಲಿ ಶ್ರೀ ಆನಂದ ಗುರೂಜಿ ಜಗದ್ಗುರು ಶ್ರೀ ನಾಗಭೂಷಣೇಂದ್ರ ತೀರ್ಥ ಸ್ವಾಮಿಗಳವರ ಆರಾಧನೆ, ದೀಪೋತ್ಸವ, ದಶಂಬರ ತಾ. 5ರಿಂದ 7ರ ತನಕ ಸ್ರೀಕಾಮ್ಯ ವರ್ಧಂತ್ಯುತ್ಸವ ಜರಗಿತು. ದಶಂಬರ 5ರಲ್ಲಿ ಸಂಜೆ ಕೈಂಬಿತ್ತೂರು ಜಿಲ್ಲಾ ಕಾರ್ಮಿಕ ಅಧಿಕಾರಿ ಶ್ರೀ ವೈ. ಮಂಜುನಾಥ ನಾರವರ ಅಧ್ಯಕ್ಷತೆಯಲ್ಲಿ ದೇವಳದ ವಾರ್ಷಿಕ ಮಹಾಸಭೆಯು ಸಮಾವೇಶಗೊಂಡಿತು. ಮೆನೇಜರ್ ಶ್ರೀ ಕೆ. ಮಾಧವಾಚಾರ್ಯರು ಗತ ವರ್ಷದ ವರದಿ, ಲೆಕ್ಕಪತ್ರಗಳನ್ನೊಪ್ಪಿಸಿದರು. ಆಡಳಿತೆ ಬಗ್ಗೆ ಶ್ರೀಗಳಾದ ಪಿ. ಜಿ. ಬಾಲಾಚಾರ್ಯರ್ (ಕ್ರೈ. ಕೆನರಾ ಜ್ಯುವೆಲ್ಲರ್ಸ್, ಮಂಗಳೂರು), ಪಿ. ಭದ್ರಯ್ಯಾಚಾರ್ಯರು ಮತ್ತು ಎಸ್. ನಾರಾಯಣಾಚಾರ್ಯರು 1, 2, 3ನೇ ಪೊಕ್ಕೇಸರರಾಗಿ ಮರು ಚುನಾಯಿತರಾದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ದೇವಳದ ಸರ್ವತೋಮುಖ ಅಭಿವೃದ್ಧಿಗೋಸ್ಕರ ಮನೆಮೊಂದೆರೆ ವಾರ್ಷಿಕ ಶಿಸ್ತಿನ ಜೊತೆಗೆ ಭೂಕ ವ್ಯಂದದವರಲ್ಲಿ ಸಂಪಾದನೆ ಪಡಿಯವನರೆಲ್ಲರೂ ವರ್ಷಕ್ಕೆ ರೂ. ಒಂದರಂತೆ ಧರ್ಮಾರ್ಥ ಆರ್ಸಿಕತಕ್ಕದೆಂದು ಮೂಡಿದ ಸಲಹೆ ಸರ್ವಾನುಮತದಿಂದಮೆಂಜೂರಾಯಿತು. ರಾಷ್ಟ್ರರಕ್ಷಣಾರ್ಥವಾಗಿ ಶ್ರೀ ಕ್ಷೇತ್ರದ ಸ್ಥಿರನಿಧಿಯಲ್ಲಿ ವಿಶೇಷ ಪ್ರಾರ್ಥನೆಯನ್ನೂ ಮಾಡಲಾಯಿತು.

ಕುಂದಾಪುರಕ್ಕೆ ಉಡುಪಿಯವರ ವೈದ್ಯಕೀಯ ಸೌಲಭ್ಯ—ಕುಂದಾಪುರದ ನಿತಿತ ಟೂಕೇಸಿನಲ್ಲಿ ತಾ. 9ರಂದು ಉಡುಪಿಯ ಸಿಂಡಿಕೇಟ್ ಬ್ಯಾಂಕಿನ ಹಾಗೂ ಮಣಿಪಾಲದ ತಜ್ಞ ಡಾಕ್ಟರುಗಳ ಸಹಕಾರದಿಂದ ಸಂಘಟಿಸಲ್ಪಟ್ಟ "ವೈದ್ಯಕೀಯ ಸೌಲಭ್ಯ ವಿಸ್ತರಣಾ ಯೋಜನೆ"ಯೊಂದನ್ನು ಡಾ| ಟಿ. ಮಾಧವ ಪೈಗಳು, ಡಾ| ವೆಂಕಟ್ರಮಣಯ್ಯನವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿ ವೈದ್ಯಕೀಯ ಅವಶ್ಯಕತೆಗಳನ್ನು ವಿವರಿಸಿದರಲ್ಲದೆ ಉಡುಪಿಯ ಕಸ್ತೂರ್ ಬಾ ಜನರಲ್ ಆಸ್ಪತ್ರೆಯು ವಿಶೇಷ ತಜ್ಞ ಡಾಕ್ಟರುಗಳು ಭಾನುವಾರದ ತಮ್ಮ ಬಿಡುವಿನಲ್ಲಿ ಸಂಚಾರ ಕೈಗೊಂಡು ಅವಶ್ಯಕತೆಯುಳ್ಳವರಿಗೆ ಎಲ್ಲಾ ಸಹಾಯಗಳನ್ನು ಒದಗಿಸಲು ಸಿದ್ಧರಾಗಿರುವರೆಂದು ತಿಳಿಸಿ ತಜ್ಞ ಡಾಕ್ಟರುಗಳ ಪರಿಚಯ ಮಾಡಿಕೊಟ್ಟರು. ಕುಂದಾಪುರದ ಅಡ್ವೊಕೇಟ್ ಶ್ರೀ ಕೆ. ರಘುನಾಥ ಶೆಣೈಯವರು ಸಿಂಡಿಕೇಟಿನ ಜನತಾ ಸೇವೆಗಳನ್ನು ಶ್ಲಾಘಿಸಿ ಬಳಕೆಯನ್ನು ಕೋರಿದ ನಂತರ ಡಾಕ್ಟರುಗಳ ಪರವಾಗಿ ಡಾ|ಥಾಮಸ್‌ರವರು ಉತ್ತರಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಯೋಜನೆಗೆ ಯಶಸ್ಸುಕೋರಿ ಸ್ಥಳೀಯ ಡಾಕ್ಟರುಗಳ ಪರವಾಗಿ ಸಂಪೂರ್ಣ ಸಹಕಾರದ ಭರವಸೆ ಇತ್ತರು. ಶ್ರೀ ಎಚ್. ಎ. ಕಾಮತ್‌ರವರು ಕುಂದಾಪುರದ ಜನತೆಯಿತ್ತ ಸಹಾಯಕ್ಕೆ ಆಭಾರ ತಿಳಿಸಿದರು.

ಉಡುಪಿ ರಾಷ್ಟ್ರೀಯ ರಕ್ಷಣಾ ಸಮಿತಿ ಯ ಸಾಪ್ತಾಹಿಕ ಸಭೆಯು ತಾ 16 ರಂದು ಜನತಾ ಭವನದಲ್ಲಿ ಎಡ್ವೊಕೇಟ್ ಶ್ರೀ ಪಿ. ಶಿವಾಜಿ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ತಪಸ್ವಿಲ್ದಾರ್ ಮತ್ತು ಸಮಿತಿಯ ಕಾರ್ಯದರ್ಶಿ ಶ್ರೀ ಅಬ್ದುಲ್ಲಾ ಕಾಸಿಂ ಆಕರ್ಷರು ಈ ವರೆಗಿನ ನಿಧಿ ಸಂಗ್ರಹದ ವಿವರಗಳನ್ನಿತ್ತು ಸುಮಾರು 55 ಸಾವಿರ ರೂಪ್ಯ ಮತ್ತು ಬಂಗಾರ ಸಂಗ್ರಹವಾಗಿದೆ ಎಂದೂ ಉಡುಪಿ ತಾಲೂಕಿಗೆ 7 ಲಕ್ಷ ರೂಪ್ಯಗಳ ನುರಿ ಡಾಕರಿವರೆಂದೂ ಹೇಳಿದರು. ಆನಂತರ ನಿಧಿ ಸಂಗ್ರಹದ ಕುರಿತು ವಿಚಾರ ವಿನಿಮಯ, ಕಾರ್ಯಕ್ರಮಗಳ ಚರ್ಚೆಯಾಗಿ ಅಧ್ಯಕ್ಷರ ಭಾಷಣದೊಂದಿಗೆ ಸಭೆಯಂತ್ಯವಾಯಿತು.

ರಕ್ಷಣಾ ನಿಧಿ ಪ್ರಚಾರ ಸಭೆಯು ಉಡುಪಿ ರಾ. ರ. ಸಮಿತಿಯ ವತಿಯಿಂದ ತಾ. 17 ಸಂಜೆ ಉಡುಪಿಯ ರಥಬೀದಿಯಲ್ಲಿ ನಗರ ಸಭಾಪತಿ ಶ್ರೀ ಪಿ. ಆರ್. ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಜೆ. ಆಪ್ಟೆಯವರು ಸ್ವಾಗತಿಸಿ ಸಂಗ್ರಹದ ವಿವರಗಳನ್ನಿತ್ತು ಜನತಾ ಸಹಕಾರ ಕೋರಿದರು. ಶ್ರೀಗಳಾದ ಎಸ್. ಡಿ. ಸಾಮ್ರಾಜ್ಯ, ಎಂ. ಎಲ್. ಎ, ಪಿ. ಶಿವಾಜಿ ಸೆಟ್ಟಿ, ಪದ್ಮನಾಭ ಸೆಟ್ಟಿಗಾರ ಇವರು ಕಾಲೋಚಿತ ಭಾಷಣ ಮಾಡಿದರು. ಅಧ್ಯಕ್ಷರು ರಾಷ್ಟ್ರದ ಆಪತ್ತಿನ ಪರಿಸ್ಥಿತಿಯಲ್ಲಿ ಸರ್ವರೂ ತ್ಯಾಗ ಬುದ್ಧಿಯಿಂದ ಕೊಡುಗೆಗಳನ್ನೀಯ ಬೇಕೆಂದರು. ಅಂತ್ಯದಲ್ಲಿ ಪಿ. ಶೀನ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ರಕ್ಷಣಾ ನಿಧಿಗೆ—ಕುರುಕಾಲು ಶ್ರೀ ಗಣಪತಿ ಎಲಿಮೆಂಟರಿ ಶಾಲಾ ವತಿಯಿಂದ ರಾಷ್ಟ್ರೀಯ ರಕ್ಷಣಾ ನಿಧಿಗೆ ರೂ. 55ನ್ನು ಕಳುಹಿಸಿರುತ್ತಾರೆ.

ವಿಜಯ ಬೇಂಕಿನ ಕೊಡುಗೆ—ರಾಷ್ಟ್ರೀಯ ರಕ್ಷಣಾ ನಿಧಿಗೆ ಈ ವರ್ಷ ರೂ. 1000/-ನ್ನು ದೇಣಿಗೆ ಕೊಡಬೇಕೆಂದೂ ರಕ್ಷಣಾ ಬಾಂಡಿನಲ್ಲಿ ರೂ. 1,00,000ನ್ನು ನಿನಿಯೋಗಿಸಬೇಕೆಂದೂ ವಿಜಯಬೇಂಕಿನ ಆಡಳಿತ ಮಂಡಳಿಯವರು ನಿರ್ಧರಿಸಿರುವರು.

ಪುನರ್ನಿವೇಶನ

ಕ್ಷಯರೋಗಿಗೆ ದೀರ್ಘಾವಧಿಯ ಚಿಕಿತ್ಸೆ ಮತ್ತು ಚಿಕಿತ್ಸಾನಂತರದ ಪೋಷಣೆ ಅಗತ್ಯ. ಚಿಕಿತ್ಸೆಯು ಅತಿ ವೆಚ್ಚದ್ದು. ಅದೇ ರೀತಿ ಅನಂತರದ ಪೋಷಣೆಯು ಕೂಡಾ. ಹೆಚ್ಚಿನ ರೋಗಿಗಳು ಬಡವರಾಗಿದ್ದು ಚಿಕಿತ್ಸೆಯು ಇಲ್ಲವೆ ಅನಂತರದ ಪೋಷಣೆಯ ವೆಚ್ಚವನ್ನು ವಹಿಸಲು ಅಸಮರ್ಥರಾಗಿದ್ದಾರೆ. ಸರಕಾರವು ಧರ್ಮಾರ್ಥವಾಗಿ ಹಲವರಿಗೆ ಚಿಕಿತ್ಸೆ ಕೊಡಬಹುದು; ಆದರೆ ಅನಂತರದ ಪೋಷಣೆಯ ಜವಾಬ್ದಾರಿಯು ಅಧಿಕಾರೇತರ ಸಂಸ್ಥೆಗಳದ್ದಾಗಬೇಕು. ಕಾಲಹರಣವಾದರೆ, ಅನಂತರದ ಪೋಷಣೆಯೂ ಅಸಾಧ್ಯ. ಆದುದರಿಂದ ಕ್ಷಯರೋಗಿಗಳು ಸಂಪೂರ್ಣ ಚಿಕಿತ್ಸೆ ಪಡೆದ ನಂತರ ಅವರು ಸಂಪಾದನೆ ಮಾಡುವಂತೆ ಅವರಿಗೆ ಕೆಲವು ವೃತ್ತಿಗಳನ್ನು ಕಲಿಸಬೇಕಾಗಿದೆ. ಇದಕ್ಕಾಗಿ, ಪುನರ್ನಿವೇಶನ ಕೇಂದ್ರಗಳು ಸಂಸ್ಥಾಪಿಸಲ್ಪಡಬೇಕು. ನಿಮ್ಮ ಕೊಡುಗೆಯು ರೋಗಿಯ ಮುಂದಿನ ಪೋಷಣೆಯ ಜಾಗ್ರತೆ ಮತ್ತು ಪುನರ್ನಿವೇಶನದ ಸಹಾಯಕ್ಕಾಗಿ ಉಪಯೋಗಿಸಲ್ಪಡುವುದು.



ಟಿ. ಬಿ. ಮುದ್ರೆಗಳನ್ನು ಅಧಿಕ ಸಂಖ್ಯೆಯಲ್ಲಿ ಖರೀದಿಸಿರಿ
ಮತ್ತು ನಿಮ್ಮ ಟಿ.ಬಿ. ಸಮಿತಿಗಳಿಗೆ ನೆರವಾಗಿರಿ.

ಒಂದು ಟಿ.ಬಿ. ಮುದ್ರೆಯ ಬೆಲೆ ಬರೇ ಹತ್ತು ನಯೇಪೈಸೆ.

ದಕ್ಷಿಣ ಕನ್ನಡ ಜಿಲ್ಲಾ ಟಿ. ಬಿ. ಸಮಿತಿ, ಸರಕಾರಿ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು, ಮತ್ತು
ಅದರ ಬೇರೆ ಬೇರೆ ವಿಭಜನ್ಸಿಗಳಲ್ಲಿ ಮುದ್ರೆಗಳು ಸಾರಾಟಕ್ಕೆ ದೊರೆಯುತ್ತವೆ.

ಕ್ಷಯರೋಗ ಮುದ್ರೆ ಮಾರಾಟದ ಹದಿಮೂರನೆ ಚಳವಳಿ!

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ನಡೆಸಲ್ಪಡುವಂಥಾದ್ದು)

Space kindly donated by:

Indo-Burma Petroleum Co. Ltd., Calcutta.

ತಾಟಸ್ಥ್ಯ ಧೋರಣೆ ಅಪಾಯಕರವೆ?

(ಜನೇ ಮುಟದಿಂದ)

ಧೋರಣೆಯನ್ನು ತ್ಯಜಿಸುವುದು ಎಂದು ಭಾವಿಸುವುದು ತಪ್ಪು. ಆಪತ್ಕಾರ್ಯ ಸಂದರ್ಭ ಬಂದಾಗ ಯುದ್ಧ ಮಾಡಬಹುದೆಂದು ನಮ್ಮ ವಿದೇಶ ನೀತಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಇಂದು ಜಗತ್ತು ಭಾರತವನ್ನು ವಕ್ರವಾಗಿ ನೋಡುತ್ತಿದೆ ಅದು ಭಾರತದ ಈಗಿನ ದುರ್ಧರ ಸನ್ನಿವೇಶವನ್ನು ಅರಿತು ಕೊಂಡಿಲ್ಲ. ತಾಟಸ್ಥ್ಯ ಧೋರಣೆ ಭಾರತದ್ದಾದರೆ ಅದೇಕೆ ಅಮೇರಿಕದಿಂದ ಶಸ್ತ್ರಾಸ್ತ್ರ ಸಹಾಯವಪಡೆಯಿತು? ಎಂದು ಘೋಷಾಂತಹ ಕೆಲವು ರಾಷ್ಟ್ರಗಳ ವಾದವಿದೆ. ಸ್ವಾತಂತ್ರ್ಯ ಪ್ರಿಯರಾದ ಭಾರತೀಯರು ಇಂಥ ಮೊಂಡು ವಾದಕ್ಕೆ ಎಂದೂ ಬಗ್ಗಲಾರರು.

ಅಮೇರಿಕಾ ರಷ್ಯಾ

ನಮ್ಮ ದೇಶದ ತಾಟಸ್ಥ್ಯ ನೀತಿಗೆ ಅಮೇರಿಕಾ ರಷ್ಯಗಳೆರಡೂ ವಿರೂಪ ದಿಂದ ಮೂನ್ಯತೆಯಿತ್ತವು. ಬ್ರಿಟನ್-ಅಮೆರಿಕೆಯು ಶಸ್ತ್ರಾಸ್ತ್ರಗಳನ್ನು ತರಿಸಿದ ಈ ಕಾಲದಲ್ಲಿ ರಶ್ಯದ ಚಾಣಕ್ಯರಾದ ಕ್ರುಶ್ಚೇವರಿಗೆ ಜೋರು ತಲೆ ನಿಡಿಯಿತು. ಭಾರತ ಶಸ್ತ್ರಾಸ್ತ್ರಗಳನ್ನು ತರಿಸಿ ತನ್ನ ಪ್ರಜಾಸ್ವಭುತ್ವವನ್ನು—ತಟಸ್ಥ ಧೋರಣೆಯನ್ನು ಕೈ ಬಿಡುತ್ತಿದೆ ಎಂದು ಹೇಳಿಕೆಯನ್ನಿತ್ತರು. ಭಾರತ ಅಮೇರಿಕ ಬ್ರಿಟನ್ನುಗಳಿಂದ ಸಹಾಯ ಪಡೆದಿದ್ದರೂ ಆಡು ಯಾವ ರಾಜಕೀಯ ಶರ್ತಗಳಿಗೂ ಕಟ್ಟು ಬೀಳಲಿಲ್ಲ ಎಂಬುದನ್ನು ಕ್ರುಶ್ಚೇವರು ಈಗ ತಿಳಿದುಕೊಳ್ಳಬೇಕಾಗಿದೆ.

ತಟಸ್ಥ ರಾಷ್ಟ್ರಗಳೂ ಭಾರತವೂ

ಭಾರತದ ತಟಸ್ಥ ನೀತಿಯಿಂದ ಬಹುವಾಗಿ ಲಾಭ ಪಡೆದ ರಾಷ್ಟ್ರಗಳೆಂದರೆ ಭಾರತದಂತೆ ಜಗತ್ತಿನ ಇತರ ಸ್ವಾತಂತ್ರ್ಯ ಪ್ರಿಯ ರಾಷ್ಟ್ರಗಳು. ಜಗತ್ತಿನ ತಾಯ್ದ ಭೀತಿಯ ಈ ಸಂದಿಗ್ಧ ಕಾಲದಲ್ಲಿ ಈ ರಾಷ್ಟ್ರಗಳಿಗೆ ಏನು ಮಾಡಬೇಕೆಂದೇ ತೋರದಾಗ ಪಂಚಶೀಲವನ್ನು ಮುಂದೆ ತಂದ ಭಾರತವನ್ನೂ ತಮ್ಮ ರಕ್ಷಕನೆಂದೇ ಭಾವಿಸಿದವು. ಇದರಿಂದ ಆ ವುಗಳೂ ಈ ಅಮೇರಿಕಾ-ರಷ್ಯಗಳ ಬಣಗಳಿಂದ ದೂರವಿದ್ದು ಸ್ವತಂತ್ರವಾಗಿ ತಮ್ಮ ಕಾಲಮೇಲೆ ನಿಲ್ಲುವಂತಾಗಿದೆ. ಇದರಿಂದ ಭಾರತಕ್ಕೆ 'ಶಾಂತಿಪ್ರಿಯ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಕ' ಎಂಬ ಮುಖಂಡತ್ವ, ಕೀರ್ತಿತಾನಾಗಿಬಂದು ಜಗತ್ತು ಮುಂದೆ ಭಾರತದ ಅಭಿಪ್ರಾಯ ಸಲಹೆಗಳನ್ನೆಂದಿಗೂ ಕಡೆಗಣಿಸದಂತಾಯಿತು. ಇದರಿಂದಲೇ ವಿಶ್ವದ ಪ್ರತಿಯೊಂದು ಸಮಸ್ಯೆಗೂ ಎಲ್ಲಾ ರಾಷ್ಟ್ರಗಳೂ ಭಾರತದ ಪ್ರತಿಕ್ರಿಯೆಯನ್ನು ಬಹು ಕುತೂಹಲದಿಂದ ಇದಿರು ನೋಡುತ್ತಿವೆ. ಚೀನಾ—ಭಾರತದ ಇಂದಿನ ಪರಿಸ್ಥಿತಿಗೆ ಸಿಂಹಳದ ಕೊಲೊಂಬೋ ಸಮ್ಮೇಳನ ಸಫಲವಾಗದಿದ್ದರೂ, ಆದರೆ ಸಹಾನುಭೂತಿ—ಒಲವು ಭಾರತದ ಕಡೆಗಿದೆ ಎಂಬುದು ಸ್ಪಷ್ಟವಾಗಿದೆ.

ಇದು ಗಡಿ ಸಮಸ್ಯೆಯಲ್ಲ!

ಭಾರತ—ಚೀನಾಗಳದ್ದು ಗಡಿ ಸಮಸ್ಯೆಯಲ್ಲದೆ ಬೇರೇನಲ್ಲ ಎಂದು ರಷ್ಯಾ—ಘಾನಾ, ಮುಂತಾದ ಜಗತ್ತಿನ ಹೆಚ್ಚಿನ ರಾಷ್ಟ್ರಗಳೂ, ಬರ್ಮಾದ ರಸ್ಸೆಲ್ಲರಂತಹ ಶಾಂತಿವಾದಿಗಳೂ ತಪ್ಪು ತಿಳಿದು ಕೊಂಡಿದ್ದಾರೆ. ಭಾರತದ ೧೪,೫೦೦ ಚದರ ಮೈಲು ವಿಸ್ತೀರ್ಣದ ಶೂಳ್ಯವನ್ನು ಕಬಳಿಸಿ ಕೊಂಡ ಚೀನಾದ ದೌರ್ಜನ್ಯಕ್ಕೆ ಮೇರೆಯೇ ಇಲ್ಲ. ಘಾನಾದ ಎನ್ ಕ್ರುಮಾರವರೂ ಈಗ ಸಂಧಾನ ಮಾಡಬೇಕೆಂದು ಸಾರುತಿದ್ದಾರೆ. ಬರ್ಟೆಂಡ್ ರಸ್ಸೆಲ್ಲರು 'ಚೀನಾದ ಸೂಚನೆಗಳನ್ನೊಪ್ಪಿ ಮಾತುಕತೆಗೆ ಭಾರತ ಒಪ್ಪಬೇಕು ಇಲ್ಲದಿದ್ದರೆ ಮುಖಾ ಯುದ್ಧವಾದೀತು ಎಂದು ಭವಿಷ್ಯವಾಣಿ ಮಾಡಿದ್ದಾರೆ. ಆ ಶಾಂತಿ ಪ್ರಿಯ ಧುರೀಣರ ಅಭಿಪ್ರಾಯಕ್ಕೆ ಭಾರತವು ತನ್ನ ಆತ್ಮ ಗೌರವ—ಪ್ರತಿಷ್ಠೆಯ ಮತ್ತು ಭೂಪತಿಗಳನ್ನು ಕಳೆದುಕೊಂಡು ತಲೆ ದೂಗದು. ಆಕ್ರಮಣ ಮಾಡಿದ ಸ್ಥಳದಿಂದ ಚೀನೀಯರು ಹಿಂದೆ ಸರಿಯದೆ ಮಾತುಕತೆ ಮಾಡುವುದೆಂದರೆ ಆದು ನಾವೇ ನಮ್ಮ ಸ್ಥಳವನ್ನು ಚೀನೀಯರ ಕೈಗೆ ಕೊಡಲು ಮಾಡುವ ಒಂದು ತಂತ್ರ. ಈ ಅಸುರೀ ಆಕ್ರಮಣದಿಂದ ಭಾರತದ ಜಾಳಯೂ ತೀತ ಧೋರಣೆಯ ಮೇಲೆ ಬಲವಾದ ಆಘಾತವಾಗಿದೆ. ಇದು ಭಾರತದ ಮೇಲೆ ಮಾತ್ರವಷ್ಟಿದೆ ಜಗತ್ತಿನ ಎಲ್ಲಾ ತಟಸ್ಥ ರಾಷ್ಟ್ರಗಳ ಮೇಲಾದ ಆಘಾತ-ಪೆಟ್ಟು.

ತಾಟಸ್ಥ್ಯವೇ ತಾರಕ

ಉಪರ್ಯುಕ್ತ ಕದನದಿಂದ ಭಾರತದ ಘನತೆಗೆ—ಸ್ವಾತಂತ್ರ್ಯ ರಕ್ಷಣೆಗೆ ಮತ್ತು ಜಗತ್ತಿನೊಡನೆ ಶಾಶ್ವತ ಬಾಂಧವ್ಯಕ್ಕೆ ನಮ್ಮ ತಾಟಸ್ಥ್ಯವೇ ತಾರಕ ಮಂತ್ರವೆಂಬುದು ವಿದಿತವಾಗುತ್ತದೆ. ಯುದ್ಧದ ಕಾರ್ಮೋಡಗಳು ಹಬ್ಬುತ್ತಿರುವ ಈ ಜಗತ್ತಿನ ನಭೋಂಗಣದಲ್ಲಿಂದು, ಈ ಧೋರಣೆಯನ್ನು ಕೈಬಿಟ್ಟರೆ ಜಗತ್ತಿನ ಶಾಂತಿ ಭಾರತದ ಭದ್ರತೆ ಬಿಪ್ಪನಾಗಿ ಪರಿಸ್ಥಿತಿ ಪ್ರಕೋಪಕ್ಕೇರುವುದು ಭಾರತಕ್ಕೆ ತಾಟಸ್ಥ್ಯ ಧೋರಣೆಯಿಂದಲೇ ಜಗತ್ತಿನ ಬಹು ರಾಷ್ಟ್ರಗಳಿಂದ ಪೂರ್ಣ ಬೆಂಬಲ ದೊರೆತಿದೆ, ಸಹಾನುಭೂತಿ ಲಭಿಸಿದೆ. ಇತ್ತೀಚೆಗೆ ಕ್ರುಶ್ಚೇವರು "ಚೀನಾವು ತಾನೇನು ಮಾಡುತ್ತಿದ್ದೇನೆ ತನ್ನ ಸ್ಥಿತಿ ಏನು?" ಎಂಬುದನ್ನು ನೋಡಲು ತಿಳಿದುಕೊಳ್ಳಬೇಕೆಂದು ಎಚ್ಚರಿಸಿದುದರಿಂದ ಭಾರತದ ಬಗೆಗೆ ಅಂತರಂಗದಲ್ಲಿ ಸಹಾನುಭೂತಿ ಅನುಕಂಪಗಳಿವೆ ಎಂಬುದು ನಿರ್ವಿವಾದ. ಭಾರತಕ್ಕೆ ಮಿಗ್ ವಿಮಾನಗಳನ್ನು ಕಳುಹಿಸುವ, ಕಾರ್ಖಾನೆಗಳನ್ನು ಸ್ಥಾಪಿಸುವ ಮತ್ತು ಇನ್ನೇ ಪಂಚವಾರ್ಷಿಕ ಯೋಜನೆಗೆ ಸಹಾಯ ನೂಡುವ ವಿಚಾರಗಳಿಗೆ ಪೂರ್ಣ ಒಪ್ಪಿರುವಾಗ ನಾವು ರಷ್ಯವನ್ನು ಟೀಕಿಸುವುದು ಸರಿಯಾಗಲಾರದು. ಇವರಿಗೂ ಬಂದು ಒದಗಿದ ಈ ಸಂಕಟ ಪರಿಸ್ಥಿತಿಯನ್ನು ನಾವು ಮನಗಾಣಬೇಕು. ಇದರಿಂದ ಭಾರತ ತನ್ನ ಶತ್ರುವನ್ನು ತನ್ನ ಪಂಚಶೀಲಗಳಿಂದ ಮಿತ್ರನನ್ನಾಗಿ ಮಾಡಿ ಕೊಂಡಿದೆ. ಇಂದಿನ ಈ ಯುದ್ಧದ ಸಂಧಿ ಕಾಲದಲ್ಲಿ ನಾವು ತಾಟಸ್ಥ್ಯಧೋರಣೆ ಬಿಟ್ಟು ಅಮೇರಿಕಾದ ಬಣದೊಂದಿಗೆ ಸೇರಿದರೆ ಒಡನೆ ರಷ್ಯಾ ಚೀನಾಕ್ಕೆ ಪೂರ್ಣ ಸಹಾಯ ನೂಡಿ, ಅದರ ಪಕ್ಷ ಸೇರುವುದರಲ್ಲಿ ಸಂಶಯವೇ ಇಲ್ಲ. ನಮ್ಮ ತಟಸ್ಥ ಧೋರಣೆಯಿಂದಲೇ ಇಂದು ರಶ್ಯ ತನ್ನ ಬಂಧುವಾದ ಚೀನಾಕ್ಕೆ ಬಹಿರಂಗವಾಗಿ ಸಹಾಯ ಮಾಡಬೆ ಆದಕ್ಕೆ ಬುದ್ಧಿ ಹೇಳುತ್ತಾ ಬರುತ್ತಿದೆ. ಇದರಿಂದ ನಮ್ಮ ತಟಸ್ಥ ಧೋರಣೆಯಿಂದ ನಾವೆಂತಹ ಸ್ಥಾನವನ್ನು ಪಡೆದಿದ್ದೇವೆಂಬುದರ ಅರಿವಾಗದಿರಲಾರದು. ಹಿಂದೆ ಲೋರ್ಡ್ ವೆಲ್ಲೆಸ್ಲಿಯ ಕಾಲದಲ್ಲಿ "ಸೈನ್ಯ ಸಹಾಯ ಮೈತ್ರಿ" ಎಂಬ ಒಂದು ಪದ್ಧತಿಯಿತ್ತು. ಇದರಿಂದ ಬ್ರಿಟಿಷರು ಭಾರತದ ಎಲ್ಲಾ ರಾಜರನ್ನು ಬಗಲಿಗೆ ಹಾಕಿಕೊಂಡಂತೆ ನಾವು ತಟಸ್ಥ ಧೋರಣೆಯನ್ನು ತ್ಯಜಿಸಿದರೆ ಜಗತ್ತಿನ ಇತರ ರಾಷ್ಟ್ರಗಳಿಗೂ ಭಯವಾಗಿ, ಪರಿಸ್ಥಿತಿ ಭೀಕರವಾಗದಿರಲಾರದು. ಆದುದರಿಂದ ಯಾವೊಬ್ಬ ಬುದ್ಧಿವಂತ ಪ್ರಜೆಯೂ, ತಾಟಸ್ಥ್ಯ ಧೋರಣೆಯನ್ನು ತ್ರಿಕರಣಪೂರ್ವಕವಾಗಿ ಸಮರ್ಥಿಸದೆ ಇರಲಾರನು.

ಭಾರತೀಯರೇ ಎದ್ದೇಳಿರಿ

ಭಾರತೀಯರೇ. "ಉತ್ತಿಷ್ಠತ, ಜಾಗ್ರತ, ಪ್ರಾಪ್ಯವರಾನ್ನಿಬೋಧತ" ಎಂಬ ವಿವೇಕಾನಂದರ ವಾಣಿಯಿಂದ ಉಲ್ಲಸಿತರಾಗಿರಿ! ಎಚ್ಚರಗೊಳ್ಳಿರಿ! ಇಂದೇನಾಗಿದೆ? ನಮ್ಮ ಮನೆಗೆ ಧಾಳಿಯಾಗಿದೆ! ಏನಿದು! ನಮ್ಮ ಮನೆಯ ಮೇಲೆ—ನಮ್ಮ ತಾಯ ಮೇಲೆ ಆ ಕೆಂಪು ಚೀನಾದ ಆ ಅಧಮ್ಯನಿಸ್ಸರ ಆ ಅಸುರಿಗಳ ದುರಾಕ್ರಮಣ! ಯುದ್ಧ!! ಏನಿದು? ಶತಮಾನದಿಂದ ಪಾರಂತಂತ್ರ್ಯದಿಂದ ನರಳಿ—ಒದ್ದಾಡಿ—ಬೇಸತ್ತುಕೊನೆಗೆ ಸಹಸ್ರಾರು ಹುತಾತ್ಮರ ಬಲಿದಾನದ ಫಲವಾಗಿ ದೊರೆತ ಈ ಸ್ವಾತಂತ್ರ್ಯವನ್ನು ಕಬಳಿಸ ಬಂದ ಆ ಚೀನಾ ರಕ್ಕಸರನ್ನು ಓಡಿ ಬಡಿಯಲು ನಾನೆಲ್ಲ ನಮ್ಮ ಸರ್ವಸ್ವವನ್ನು ಒಟ್ಟುಗೂಡಿಸಿ ತ್ರಿಕರಣ ಪೂರ್ವಕವಾಗಿ ಈ ರಾಷ್ಟ್ರೀಯ ಸಂಧಿ ಕಾಲದಲ್ಲಿ ನಮ್ಮ ಸ್ವಾತಂತ್ರ್ಯ, ಭದ್ರತೆ-ಧರ್ಮ ಸಂಸ್ಕೃತಿಗಳ ರಕ್ಷಣೆಗೋಸ್ಕರ ತನು,ಮನ,ಧನಗಳಿಂದ ಸೇವೆ ಮಾಡಲು ಬದ್ಧ ಕಂಕಣರಾಗಬೇಕು. ನಮ್ಮ ತಾಟಸ್ಥ್ಯ-ಪಂಚಶೀಲಗಳಲ್ಲಿ ಭೀಮ ಬಲ ಉಂಟೆಂಬುದನ್ನು ಜಗತ್ತಿಗೆ ತೋರಿಸಿ ಕೊಡಬೇಕು

ಶ್ರೀ ಬಿ.ನಾರಾಯಣ ಜೋಗಿಸ್ವಾಮಿಯ

ಕುಂದಾಪುರದ ಮುನ್ಸೀಫ್ ಕೋರ್ಟಿನಲ್ಲಿ

O. S. 46/1960 R. E. P. 471/1962

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್—ವಾದಿ.

ಮತ್ತು

ನಾರಾಯಣ ಹೆಗ್ಡೆ ಕೂಡಾ-ಪ್ರತಿವಾದಿರು.

ಪ್ರತಿವಾದಿರು—

1. Narayana Hegde S/o A. Venkatayya Hegde,

2. Rajive Heggadthi Wife of 1st Defendant

Both residing at new Gopal Ashram Building House Parel Bombay-12

ಇವರಿಗೆ

ವಾದಿ ಬೇಡಿಕೆನವರು ಮೇಲ್ಕಂಡ ವಿಕ್ರಿ ಪ್ರಕಾರ ಪ್ರತಿವಾದಿರ ಹಕ್ಕಿನ ಸ್ವಿರಾಸ್ತಿಗಳನ್ನು ಸೂರಾಟಕ್ಕೆ ಅಪೇಕ್ಷಿಸಿ ಮೇಲ್ಕಂಡ ಅಮ್ಲಜಾರಿ ಮಾಡಿ ಯೇಲಂ ಯಿಸ್ತಿ ಹಾರುದಾಕ್ಷ್ಮಿ ಮಾಡಿರುವುದರಿಂದ ಸದ್ರಿ ಯೇಲಂ ಇಸ್ತಿ ಹ್ಯಾರಿನ ಶರ್ತ ನಿರ್ಣಯದ ಬಗ್ಗೆ ತಾ. 9.1.1963ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ಸದ್ರಿ ದಿವ್ಸಕೋರ್ಟು ಮುಂದೆ ಹಾಜ್ರುಆಗಿಜ್ಞಾ ಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಜ್ರು ತಿರ್ವೈ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗಿಯದೆ.

K. Raghunath Shenoy
Advocate for Plff.

ಕುಂದಾಪುರ, 10-12-1962.

1963ನೇ ಜನವರಿಯಿಂದ

ನಗುವ-ನಂದ

31ನೇ ಸಂಪುಟಾರಂಭ

ಆಕರ್ಷಣೀಯ ಮುಖಪುಟ, ಹಾಸ್ಯ ಲೇಖನಗಳು, ಕತೆಗಳು,
ಅನಕವಾಡುಗಳು, ಚುಟುಕಗಳು, ವ್ಯಂಗ್ಯ ಚಿತ್ರಗಳೊಂದೊಡಗೂಡಿ
ಪ್ರತಿ ತಿಂಗಳೂ ಪ್ರಕಟವಾಗುವುದು.

ಜನವರಿ ಸಂಚಿಕೆಯಿಂದ ಶ್ರೀ 'ಅಷ್ಟಾವಕ್ರ'ರವರ ಹಾಸ್ಯಕಥಾವಳಿ 'ವಿನೋದದಲ್ಲಿ ವಿದಾರ್ಥಿ' ಪ್ರಕಟವಾಗುವುದು.

ಬಿಡಿ ಸಂಚಿಕೆಯ ಬೆಲೆಯಾಗಲಿ, ವಾರ್ಷಿಕ ಚಂದಾ ದರವಾಗಲಿ ಜಾಸ್ತಿಯಾಗಿಲ್ಲ.

ಬಿಡಿ ಸಂಚಿಕೆ: ಕೇವಲ 16 ನ. ಪೈ.

ವಾರ್ಷಿಕ ಚಂದಾ: ದೀಪಾವಳಿ ಸಂಚಿಕೆಯೂ ಸೇರಿ ರೂ. 2-50 ಮಾತ್ರ.

(ಅಂಚೆ ಹಾಸಲು ಉಚಿತ) ಎಲ್ಲಾ ಕಡೆಗಳಲ್ಲೂ ದೊರೆಯುತ್ತಿವೆ. ಮೈಸೂರು ಪ್ರಾಂತ್ಯದ ಪಿದ್ಯಾ ಸಂಸ್ಥೆಗಳಿಗೂ ಮಂಜೂರಾಗಿದೆ. ಯಾವ ತಿಂಗಳಿಂದ ಬೇಕಾದರೂ ಚಂದಾದಾರರಾಗಬಹುದು.

T.B.C. 336/32-33 dated 15th June 1933.

ವಿವರಗಳಿಗೆ: **ನಗುವ-ನಂದ : : ಬೆಂಗಳೂರು-೧೧.**

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಏತಾಳ, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನೊಳಗೊಂಡ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

ಗಡಿ ಪ್ರದೇಶ ತಿರುಗಿ ಬಂದ

ಸಂದರ್ಶನ ಪತ್ರಿಕ ವರದಿ

ಯುದ್ಧವು ಆವರನ್ನು ಸೋಂಕಿಲ್ಲ ಯುದ್ಧದ ವಾರ್ತೆಯಿಂದಲೂ ಅವರು ಭಯಭೀತರಾಗಿಲ್ಲ ಅನತಿ ದೂರದಲ್ಲಿಯೇ ಬೆಟ್ಟಗಳ ಇಳಿಜಾರಲ್ಲಿ, ಬೆಟ್ಟಗಳ ಹಿಂದೆ ಶತ್ರುಗಳು ತೂರಿಬರುತ್ತಿರುವಾಗ ಅವರನ್ನು ಹೊಡೆದೋಡಿಸಲು, ಅಸ್ಸಾಮ್ ಗಡಿ ಪ್ರದೇಶಗಳ ಜನರಲ್ಲಿ ಈಗ ವ್ಯಕ್ತವಾಗುತ್ತಿರುವ ಧೈರ್ಯ, ಒಗ್ಗಟ್ಟು, ಮತ್ತು ದೃಢ ನಿರ್ಧಾರಗಳು ಅದಮ್ಯನೀಯವಾಗಿವೆ ಆ ಭೂಪ್ರದೇಶಗಳಿಗೆ ಭೇಟಿ ಕೊಟ್ಟು ಅಲ್ಲಿಂದ ಹಿಂತಿರುಗಿ ಬಂದ ವೀಕ್ಷಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ

ಅಸ್ಸಾಂ ರಾಜ್ಯದ ಗಡಿ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಜನರನ್ನೆಲ್ಲಾ ನಾನು ಕೆಲವು ದಿನಗಳ ಹಿಂದೆ ಭೇಟಿಯಾದೆ ಗಡಿ ಜಿಲ್ಲೆಗಳಲ್ಲಿನ ಚೇತಾಯಗಾರರು, ಕಾರ್ಖಾನೆದಾರರು, ಜಮೀನುದಾರರು ಜಮೀನುಗಳಲ್ಲಿದವರು, ಕುಟೀರಗಳು, ಕಟ್ಟಡಗಳ ನಿರ್ಮಾಪಕರು ಅಂಗಡಿಕಾರರು, ಶಾಲಾ ಶಿಕ್ಷಕರನ್ನು ಮೊದಲು ಮಾಡಿ ಎಲ್ಲರೂ, ಒಂದೇ ಕುಟುಂಬದಂತೆ ರಾಷ್ಟ್ರದ ಭೂತ ವರ್ತಮಾನ ಭವಿಷ್ಯತ್ತುಗಳನ್ನು ನಿಮ್ಮನ್ನು ಹಾಗೂ ನನ್ನನ್ನು ರಕ್ಷಿಸಲು ಟೊಂಕಕಟ್ಟಿ ನಿಂತಿದ್ದಾರೆ; ಎಂದೂ ಅವರು ತಿಳಿಸಿದ್ದಾರೆ.

ಅವರ ಅಭಿಪ್ರಾಯದ ಪ್ರಕಾರ, ಗಡಿ ಪ್ರದೇಶದ ಜಿಲ್ಲೆಗಳಲ್ಲಿ ದೈನಂದಿನ ಜೀವನವು ಎಂದಿನಂತೆಯೇ ಸರಾಗವಾಗಿ ಸಾಗಿದೆ. ಯುದ್ಧವು ಬಾಗಿಲಿಗೆ ಬಂದಿದೆ ಎಂದು ಜನರು ಭಯಗೊಂಡಿಲ್ಲ ಅವರು ಸ್ಥಿತಪ್ರಜ್ಞರಾಗಿದ್ದಾರೆ ಅಂಗಡಿಕಾರನು ನಿತ್ಯದಂತೆ ತನ್ನ ವ್ಯಾಪಾರದಲ್ಲಿ ತಲ್ಲೀನನಾಗಿದ್ದಾನೆ. ಭತ್ತದ ಗದ್ದೆಗಳ ಮೊಣಕಾಲು ಮಟ್ಟದ ನೀರಿನಲ್ಲಿ, ಬಾಗಿ ಹೊಲಗೆಲಸದಲ್ಲಿ ತೊಡಗಿದ ಕೆಲಸಗಾರರು ಅದೇ ದೃಶ್ಯ! ಶಾಲಾ ಬಾಲಕರು ಪ್ರತಿದಿನದಂತೆಯೇ ರಿಂಗ್ ಆಟವಾಡುತ್ತಾ ನಲಿಯುತ್ತಿದ್ದಾರೆ ಈ ಮೊದಲಿನ ಸಂಜೆ ಮುಂಜಾವುಗಳಲ್ಲಿ ಕೇಳಿಬರುತ್ತಿದ್ದ ಪೂಜಾರಿಯ ಮಂತ್ರ ಘೋಷ, ಮಂದಿರಗಳಲ್ಲಿನ ಗಂಟೆಯ ನಿನಾದ ಧ್ಯಾನಾಶಕ್ತರಾಗಿರುವ ಭಕ್ತವೃಂದ ಎಲ್ಲವೂ ಮೊದಲಿನಂತೆಯೇ ಇದೆ. ಎಳ್ಳಿನಿತೂ ಬದಲಾವಣೆಯಾಗಿಲ್ಲ

ದೃಢ ನಿರ್ಧಾರದ ಕೈಗಳು

ಒರಟಾದ ಸೌಜನ್ಯಮಯ, ತರುಣ, ವೃದ್ಧ, ಚಿಂತಾರಹಿತ—ಚಿಂತಾಕ್ರಾಂತವಾದ ಅನೇಕ ಮುಖಗಳು, ಇಂದು ಧೈರ್ಯ ದೃಢ ನಿರ್ಧಾರಗಳಿಂದ ಬೆಳಗುತ್ತಿವೆ ಕಸಬುರಿಗೆ, ನೇಗಿಲು ಟಾರ್ಚ್‌ಗಳನ್ನು ಹಿಡಿದ ಅವೇ ಕೈಗಳು, ಈಗ ರೈಫಲ್‌ಗಳನ್ನು, ಪ್ರಥಮ ಚಿಕಿತ್ಸಾ ಸಲಕರಣೆಗಳನ್ನು ಯುದ್ಧ ಸಾಮಗ್ರಿಗಳನ್ನು ಹಿಡಿದಿವೆ! ಇದುವರೆಗೂ ಸುರಕ್ಷಿತವಾದ ವಿಶಾಲವಾದ ಜೀವನ ಪಡೆಯುತ್ತ ಬಂದ ಜನರಲ್ಲಿ ಈ ವಿಶ್ವಾಸಾಗಲು ಕಾರಣವಿರಲೇಬೇಕು. ಮೊದಲು ಯುದ್ಧವೆಂದರೆ, ಅಂಜುತ್ತಿದ್ದ ಸರಳ ಸ್ವಭಾವದ ಸ್ತ್ರೀ ಪುರುಷರು ಈಗ ಶತ್ರುಗಳನ್ನೆದುರಿಸಲು ಸಿದ್ಧರಾಗಿದ್ದಾರೆ.

ತಮ್ಮ ಈ ಪರಿಸರದಲ್ಲಿ—ಒಂದು ಕಡೆ ಹಿಮಾಚ್ಛಾದಿತ ಪರ್ವತಗಳು, ಮತ್ತೊಂದು ಕಡೆ ಬ್ರಹ್ಮಪುತ್ರಾ ನದಿ ಹಾಗೂ ಜಮೀನುಗಳು, ಇದುವರೆಗೆ ಬಾಳಿ ಬದುಕಿದ ಸರಳ ಜೀವನ, ನಾವು ನಂಬಿದ ನೆರೆಹೊರೆ ಸಂಬಂಧಗಳು ಎಲ್ಲವೂ ಒಮ್ಮೆಲೆ ಕಳೆದು ಉಳುವಿನ ಕಣಲ ದಾರಿಯಲ್ಲಿವೆ ಎಂದು ಆವರು ತಿಳಿಸಿದರು.

ಬಂದ ವಿಪತ್ತನ್ನು ಧೀರತನದಿಂದ ಎದುರಿಸಲು ಯುದ್ಧಕಲೆಯನ್ನು ಅವರು ಅಧ್ಯಯನ ಮಾಡುತ್ತಿದ್ದಾರೆ. ಅವರು ಗ್ರಾಮ ಜಿಲ್ಲಾ ಮಟ್ಟಗಳಲ್ಲಿ ರಕ್ಷಣಾ ಪಡೆಗಳನ್ನು ಸಂಘಟಿಸುತ್ತಿದ್ದಾರೆ ರೈಫಲ್ ತರಬೇತಿ ಪಡೆಯುವುದಕ್ಕಾಗಿ ಪೋಲೀಸ್ ಕಚೇರಿಗಳ ಮುಂದೆ ಉತ್ಸಾಹದಿಂದ ಸಾಲು ಸಾಲಾಗಿ ನಿಂತ ಧೃಢಕಾಯರಾದ ವ್ಯಕ್ತಿಗಳನ್ನು ನಾನು ನೋಡಿದೆ. ವಯಸ್ಸಿಲ್ಲದವರು, ಕುಟುಂಬದ ಸದಸ್ಯರು ಪ್ರಧಾನ ಚಿಕಿತ್ಸೆ ಕ್ರಮವನ್ನು ಅಸಕ್ತಿಯಿಂದ ಅಧ್ಯಯನ ಮಾಡುತ್ತಿದ್ದಾರೆ ಬಿಡುವಿನ ವೇಳೆಯಲ್ಲಿ ಸೈನಿಕರಿಗಾಗಿ ಉಣ್ಣೆಯ ಅಂಗಿಗಳನ್ನೂ ಪುಲ್ಓವರ್‌ಗಳನ್ನೂ ಹೆಣೆಯುತ್ತಾರೆ ರಾಷ್ಟ್ರರಕ್ಷಣೆಗಾಗಿ ಪೋಲೀಸ್ ಪಡೆಗಳಲ್ಲಿ ಸೇರಲು ಬಾಲಕರು ಮಾರ್ಗಗಳಲ್ಲಿ ಸಂಗೆ ನಿಯಂತ್ರಣ ಮಾಡುತ್ತಿದ್ದಾರೆ.



ಕೆಲಿಫೋರ್ನಿಯಾದ ಕಾರ್ಖಾನೆಯೊಂದರಲ್ಲಿ ಶಾಂತ ಸಾಗರದ ಒಂದು ಮಿಲಿಯ ಗಿಲನ್ ನೀರನ್ನು ಸಿಹಿಯಾಗಿ ಪ್ರತಿದಿನ ಪರಿವರ್ತಿಸಲಾಗುತ್ತಿದೆ.

ಶತ್ರುಗಳು ಹೆಚ್ಚು ಸಂಖ್ಯೆಯಲ್ಲಿತ್ತು ಮೇಲೆ ಆಕ್ರಮಣ ಮಾಡಿದಾಗಲೂ ಸಾಕಷ್ಟು ಶಸ್ತ್ರಾಸ್ತ್ರಗಳಿಲ್ಲದಿದ್ದರೂ ಕೊನೆಯ ವರೆಗೂ ರಾಣ್ಯವನ್ನು ರಕ್ಷಿಸಿದ ನಮ್ಮ ಯೋಧರ ಸಾಹಸದ ಕಥೆಗಳು ಜನಪ್ರಿಯವಾಗಿವೆ. ಗಡಿ ಪ್ರದೇಶಗಳಲ್ಲಿನ ಜನರು, ಅನೇಕ ಸಲ ಗದ್ಗದಿತ ಕಂಠದಿಂದ ಶೂರರ ಸಾಹಸದ ಕೃತಿಗಳನ್ನು ವರ್ಣಿಸುತ್ತಾರೆ ಶಾಲೆಗಳ ಪಂಚಾಯಿತಿಗಳು ಇತರ ಸಭೆಗಳಲ್ಲಿ ಮದುವೆಯ ಸಮಾರಂಭದಲ್ಲಿ ಉತ್ಸಾಹದಿಂದ ಹಾಡುವಂತೆಯೇ; ಶೂರರಾದ ನಮ್ಮ ಯೋಧರ ಸಾಹಸದ ಕಥೆಗಳನ್ನು ಕವಿತೆ ಹಾಡುಗಳನ್ನು ಕಥೆಗಳನ್ನೂ ಆಬಾಲವೃದ್ಧರು ಉತ್ಸಾಹದಿಂದ ಹೇಳಲಾಗುತ್ತದೆ

ಬೆಲೆಗಳು ಸ್ಥಿರವಾಗಿವೆ

ನಾನು ಸಂದರ್ಶಿಸಿದ ಪ್ರದೇಶಗಳಲ್ಲಿ ಜೀವನಾವಶ್ಯಕ ವಸ್ತುಗಳ ಬೆಲೆಗಳು ಸ್ಥಿರವಾಗಿಯೇ ಉಳಿದಿವೆ. ಸರಕುಗಳ ಕೊರತೆಯುಂಟಾಗಿ ಎಲ್ಲಿಯೂ ಸಡಿಲಿಲ್ಲ. ಇನ್ನು ಅನೇಕ ಸ್ಥಳಗಳಲ್ಲಿ, ಕೇಂದ್ರ ನಾಗರಿಕ ಪರಿಷತ್ತಿನ ಸೂಚನೆಯಂತೆ ವಲೆನೆ ಗ್ರಾಹಕರ ಪೇಲ್ವಿಚಾರಣಾ ಸಮಿತಿಗಳನ್ನು ರಚಿಸಲಾ ಪ್ರಯತ್ನಗಳು ನಡೆದಿವೆ ಈ ಸಮಿತಿಗಳು ಬೆಲೆಗಳನ್ನು ಸ್ಥಿರೀಕರಿಸಲು, ಅಕಾರದ ವಿಸ್ತರಣ ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳುತ್ತವೆ ಇದೇ ರೀತಿ ಸ್ಥಳೀಯ ಸಂಸ್ಥೆಗಳು ತಮ್ಮ ಪ್ರದೇಶಗಳಲ್ಲಿನ ಜಮೀನುಗಳಲ್ಲಿ ಕಾರ್ಖಾನೆಗಳನ್ನು ಹೆಚ್ಚು ಉತ್ಪಾದನೆ ಮಾಡಲು ಮುಂದೆ ಬಂದಿವೆ ಜಮೀನುಗಳಲ್ಲಿ, ಕಾರ್ಖಾನೆಗಳಲ್ಲಿ ತಾವು ಉತ್ಪಾದಿಸುತ್ತಿರುವುದು ಯುದ್ಧದ ಶಸ್ತ್ರಾಸ್ತ್ರಗಳನ್ನೇ ಮುಖ್ಯವಾಗಿವೆ ಎಂಬುದನ್ನು ಅವರು ಚೆನ್ನಾಗಿ ಅರಿತುಕೊಂಡಿದ್ದಾರೆ

ತೇಜಪುರದಲ್ಲಿ ಶಾಂತತೆ

ನಾನು ತೇಜಪುರಕ್ಕೆ ಬಂದಾಗ, ತೇಜಪುರ ನಗರದ ಜೀವನ ಮೊದಲಿನ ಸ್ಥಿತಿಗೆ ಒರತೊಡಗಿತ್ತು ಹೊಸ ಡೆಪ್ಯುಟಿ ಕಮಿಷನರ್, ನೇವಾಕಗಳಾಡಿದ್ದರು ನ್ಯಾಯಾಲಯಗಳು ಕಾರ್ಯವನ್ನು ಪುನರಾರಂಭಿಸಿದ್ದವು. ಶಾಂತಿ ಸುವ್ಯವಸ್ಥೆಗಳು ತೊಡಗಿದೆ. ಪೇಪೆರ್‌ಗಳು ಮೊದಲಿನಂತೆ ಜನಪ್ರಿಯವಾಗಿದ್ದರೂ, ಮೊದಲಿನ ಪುಟಗಳಲ್ಲಿ ಕೇಳಿ ಬರುತ್ತಿತ್ತು. ನಗರವನ್ನು ತೊರೆದ ಪರಿಷತ್ತು ಬಹುಮಟ್ಟಿಗೆ ಎಲ್ಲರೂ ಮರಳಿ ಬಂದಿದ್ದಾರೆ. ಆಹಾರಧಾನ್ಯಗಳು ಅವರಿಗೆ ಅಕ್ಕಿ ಹಾಗೂ ಹಣವನ್ನು ಹಂಚುತ್ತಿದ್ದರು. ಹೊಸದಾಗಿ ಉದ್ಭವಿಸಿದ ಪರಿಸ್ಥಿತಿಯಿಂದ ಬೆರೆದೆ ತೇಜಪುರದಲ್ಲಿಯೇ ಉಳಿದ ಕೆಲವು ಟೀ ತೋಟಗಳ ಕೆಲಸಗಾರರು ಅನಾವಶ್ಯಕವಾಗಿ ಉಂಟಾದ ಭಯದ ಬಗೆಗೆ ಕಾಳಜಿವಹಿಸಿಕೊಳ್ಳಿದ್ದರು.

ತಮ್ಮ ಮನೆಗಳನ್ನು ಬಿಟ್ಟು ಎಂದೂ ತೆರಳುವುದೆಂಬ ಹೊಸ ದೃಢ ನಿರ್ಧಾರ ತೇಜಪುರ ನಾಗರಿಕರಲ್ಲಿ ತಾನೇ ತಾನಾಗಿ ಕಂಡು ಬರುತ್ತಿದೆ. ತಮ್ಮ ಸ್ಥಳದಲ್ಲಿಯೇ ಬಲವಾಗಿ ನೆಲೆಸುವ ನಿರ್ಧಾರದಿಂದಾಗಿ ಗಡಿ ಜಿಲ್ಲೆಗಳಲ್ಲಿನ ಎಲ್ಲ ಜನರು ಒಗ್ಗಟ್ಟಾಗಿದ್ದಾರೆ

ಸ್ವತಂತ್ರರಾದ ಜನ ಸ್ವತಂತ್ರ ಜೀವನ ವಿಧಾನ ಹೇಗಿರುವುದೆಂಬುದನ್ನು ಅರಿಯುವ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹಿರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ ಬೆಲೆ ರೂ. ಎರಡು

ನಿಮ್ಮಿಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು ಉತ್ತಮ ಪ್ರತಿ. ರೂ ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಲಕಾರಿ
ಬೆಲೆ ರೂ 1-4-0 (1=25)

ವಿ. ಸೂ —ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರತಿಗಳು— ಮುಂಗಳೂರಿನ ಶ್ರೀನಿವಾಸ್ ಬುಕ್‌ಸ್ಟಾಲ್, ಸ್ಟೂಡೆಂಟ್ ಬುಕ್ ಕೊ, ಕೆನರಾ ಕಾಲೇಜ್ ಬುಕ್ ಕೊ, ಇಂಡಿಯನ್ ಇಂಡಸ್ಟ್ರೀಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಸುದ್ದಿಯ ಹಿನ್ನೆಲೆ

ಚೀಣಾದ ಭೂಪಟ ಯುದ್ಧ

ಚೀಣಾವು ಹೂಡಿರುವ—ಮಿಲಿಟರಿ, ರಾಜತಂತ್ರ, ಶಾಂತಿ, ಪ್ರಚಾರ ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಆರಂಭಿಸಿರುವ ವಿವಿಧ ಬಗೆಯ ಆಪಚಾರಗಳು ಇಡೀ ವಿಶ್ವಕ್ಕೆ ಈಗ ಸುವೇದ್ಯವಾಗಿವೆ. ಆದರೆ, ಇನ್ನೂ ಒಂದು ಕೃತ್ಯವಿದೆ; ಅದು ಹೆಚ್ಚು ಪ್ರಚಾರಕ್ಕೆ ಬಿಕ್ಕಿಲ್ಲ. ಭಾರತದೊಂದಿಗೆ ವ್ಯವಹಾರ ನಡೆಸುತ್ತಿದ್ದಾಗ ಕಾಲಕಾಲಕ್ಕೆ ಭೂಪಟ ಸಂಬಂಧವಾದ ಅಪಚಾರವೇ ಅದು.

'ಭೂಪಟಗಳ ಯುದ್ಧ' ತಂತ್ರವನ್ನೂ ಚೀಣಾ ಬಹಳ ಎಚ್ಚರಿಕೆಯಿಂದ ನಿಯೋಜಿಸಿದೆ. ಚೀಣಾದ ಸೇನೆಯು ಬಂದೂಕಿನ ನೆರವಿನಿಂದ ಇತರ ದೇಶಗಳ್ಲರುವ ಜನತೆಯನ್ನು "ವಿಮೋಚನೆ" ಗೊಳಿಸುತ್ತಿದ್ದ ಕಾಲದಲ್ಲೇ ಚೀಣಾದ ಪ್ರಚಾರಕರು ಸುಳ್ಳಿನ ತೋರುಗಳನ್ನು ಹಾರಿಸುತ್ತಿದ್ದರು; ಅವರ ರಾಯಭಾರ ಪ್ರತಿನಿಧಿಗಳು ಮೈತ್ರಿ ಮತ್ತು ಸದ್ಭಾವನೆಯ ಸವಿಮಾತಿನ ಸುರಿಮಳೆಗರೆಯುತ್ತಿದ್ದರು; ಆವರ ನಡ್ನೆಡೆ ಗಾರರಾದರೋ, ಚೀಣಾವು ಇತರರಿಗೆ ಸೇರಿದ ಪ್ರದೇಶಗಳ ಮೇಲೆ ಹಕ್ಕುಗಳನ್ನು ಸಾಧಿಸುವುದಕ್ಕೆ ಬೆಂಬಲ ಕೊಡುವಂತಹ ಭೂಪಟಗಳನ್ನು ಸೃಷ್ಟಿಸುವುದರಲ್ಲಿ ತಲ್ಲೀನರಾಗಿದ್ದರು.

1954ರಲ್ಲಿ ಕೆಲವು ಚೀಣೀ ಭೂಪಟಗಳು ಬೆಳಕಿಗೆ ಬಂದುವು. ಅವುಗಳಲ್ಲಿ ಭಾರತಕ್ಕೆ ಸೇರಿದ ಕೆಲವು ಭೂಭಾಗಗಳು ಚೀಣಾಕ್ಕೆ ಸೇರಿರುವುದೆಂದು ತೋರಿಸಲಾಗಿತ್ತು. ಬಂದೂಕಿನ ಕುದುರೆಯನ್ನೆ ಆಧಾರವೆಂದು ತಡೆಗಟ್ಟಿದಂತಹ ಪರಿಸ್ಥಿತಿಯಲ್ಲಿ ಈ ಅಪಚಾರ ನಡೆಯುತ್ತಿದ್ದುದು ದುರದೃಷ್ಟಪ್ರಸಂಗ. ಅದು ಎರೆಗೂ ಈ ಭೂಪಟಗಳು ಚೀಣೀಯರಿಗಲ್ಲದೆ ಬೇರೆಯವರಿಗಾಗಿ ತಯಾರಾಗುತ್ತಿವೆಯೆಂಬುದು ಗೊತ್ತೇ ಆಗಲಿಲ್ಲ ಅತ್ತ ಹಳೆಯ ಚೀಣಿ ಭೂಪಟಗಳೆಂದೂ ಕಾಮಿಂಗ್-ಟಾಂಗ್ ಸರಕಾರವು ಅವನ್ನು ಸಿದ್ಧ ಪಡಿಸಿದೆ ಎಂದೂ ಚೀಣಾ ಜನತಾ ಸರಕಾರಕ್ಕೆ ಆ ಭೂಪಟಗಳನ್ನು ಪರಿಷ್ಕರಿಸಲು ಸಮಯವೇ ದೊರೆಯುತ್ತಿಲ್ಲವೆಂದೂ ಚೀಣಾ ವಿನಂತಿ ಕೊಡುತ್ತಲೇ ಬಂದಿತು. ಆನಂತರ, 1958ರಲ್ಲಿ ಚೀಣೀ ಸರಕಾರದ ಅಧಿಕೃತ ಪ್ರಕಟಣೆಯಾದ 'ಚೀಣಾ ಪಿಕ್ಟೋರಿಯಲ್'ನಲ್ಲಿ ಒಂದು ಭೂಪಟವು ಪ್ರಕಟವಾಯಿತು. ಈ ಭೂಪಟದಲ್ಲಿ ಭಾರತ—ಚೀಣಾದ ಗಡಿ ರೇಖೆಯು ಭಾರತೀಯ ಪ್ರದೇಶದ ಮಧ್ಯದಲ್ಲೇ ಹಾದು ಹೋಗಿ, ಭೂತಾನದ ಒಂದು ಭಾಗವನ್ನು ಚೀಣಾ ಪ್ರದೇಶವೆಂದು ತೋರಿಸಿತ್ತು. ಆಗ ಭಾರತದ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ್ ನೆಹರೂರವರು ಚೀಣಾದ ಪ್ರಧಾನ ಮಂತ್ರಿ ಮಿ. ಚೌ ಎನ್ ಲಾಯ್‌ರವರಿಗೆ 1958ರ ಡಿಸೆಂಬರ್ 14ರಂದು ಪತ್ರವೊಂದನ್ನು ಬರೆದು, ಅವರ ಗಮನವನ್ನು ಈ ಭೂಪಟದ ಕಡೆಗೆ ಸೆಳೆದರು. ಅದಕ್ಕೆ ಚೌರವರು ಉತ್ತರ ಬರೆದು, 1956ರಲ್ಲಿ ತಾವು ಭಾರತಕ್ಕೆ ಭೇಟಿಕೊಟ್ಟ ಸಮಯದಲ್ಲಿ ಈ ವಿಷಯವನ್ನು "ಇತ್ಯರ್ಥಕ್ಕಾಗಿ ಇನ್ನೂ ಹಣ್ಣಾಗಿಲ್ಲ"ವೆಂದು ಪ್ರಸ್ತಾಪಿಸಿಲಲ್ಲವೆಂದು ತಿಳಿಸಿರುವರು. ಭೂಪಟದ ಅಪಚಾರವು, ಮಿಲಿಟರಿ ಅಪಚಾರಕ್ಕೆ ಬೆಂಬಲ ಸ್ವರೂಪದ್ದಾಗಿತ್ತು; ಏಕೆಂದರೆ, ಆ ವೇಳೆಗಾಗಲೇ ಚೀಣಾವು ಭಾರತ—ಚೀಣಾ ಗಡಿ ಪ್ರದೇಶಗಳಲ್ಲಿ, ಅವು ವಾಸ್ತವವಾಗಿ ಭಾರತಕ್ಕೆ ಸೇರಿದ್ದರೂ ಭೂಪಟದ ಪ್ರಕಾರ ಚೀಣಾಕ್ಕೆ ಸೇರಿದವೆಂಬ ನೆಪದ ಮೇಲೆ, ಹಲವಾರು ಕಡೆ ಆಕ್ರಮಣ ಪ್ರದೇಶ ಮಾಡಿತ್ತು. ಭೂಪಟಗಳ ಯುದ್ಧದಲ್ಲಿ ನಕ್ಷೆಗಾರರು, ಚೀಣೀ ಸೇನೆಗೆ ಮದ್ದುಗುಂಡುಗಳನ್ನು ತಯಾರಿಸಿ ಕೊಟ್ಟಿದ್ದರು.

ಈ ರೀತಿ, ಪ್ರಕಟವಾದ ಭೂಪಟಗಳಲ್ಲಿ ಗಡಿ ರೇಖೆಗಳನ್ನೂ ತಪ್ಪುತಪ್ಪಾಗಿ ತೋರಿಸುವುದು ಚೀಣೀ ರಾಜ್ಯಾಡಳಿತ ವಿಸ್ತರಣ ದಾಹಗಳ ಕಾರ್ಯತಂತ್ರವೇ ಆಗಿದೆ. ಭೂಪಟಗಳ ಅಪಚಾರವನ್ನು ಕುರಿತು ಚೀಣಾ ಸರಕಾರವನ್ನು ಪ್ರಶ್ನಿಸಿದಾಗ, ಅವು ಹಳೆಯ ಭೂಪಟಗಳೆಂದು ಸಬೂಬು ಹೇಳಿ ಇತ್ಯರ್ಥಕ್ಕಾಗಿ ಪಕ್ವಗೊಂಡಾಗ' ಪರ್ಯಾಲೋಚಿಸಲಾಗುವುದೆಂದು ಆಶ್ವಾಸನೆಯಿತ್ತರು.

ಆದರೆ, ಚೀಣೀ ಸರಕಾರದವರು, 1914ರ ಮಾರ್ಚಿ 24ರಂದು ದೆಹಲಿಯಲ್ಲಿ ಬ್ರಿಟಿಷ್ ಮತ್ತು ಟಿಬೆಟ್ಟಿನ ರಾಯಭಾರ ಪ್ರತಿನಿಧಿಗಳು ಪರಸ್ಪರ ಅಂಗೀಕಾರ ಮುದ್ರೆಯೊತ್ತಿರುವ 'ಭೂಪಟ'ದ ನಕಲು ಛಾಯಾ ಚಿತ್ರವೆಂದು ಇತ್ತೀಚೆಗೆ ಪ್ರಕಟಿಸಿರುವುದು. ಬೇರೆ ಇನ್ನೊಂದು ವರ್ಗಕ್ಕೆ ಸೇರುತ್ತದೆ. ಮೆಕ್‌ಮಹೋನ್ ರೇಖೆಯು ಕಾನೂನು ಬದ್ಧವಲ್ಲವೆಂದೂ ಹೇಳಿ ಈ ಗಡಿಯನ್ನು ತಾವು ಪುರಸ್ಕರಿಸುವುದಿಲ್ಲವೆಂದು 1962ರ ಅಕ್ಟೋಬರ್ 24ರಂದು ಅವರು ಘೋಷಿಸಿದರು. ಅದೇ ದಿನ ಚೀಣೀ ಸರಕಾರದವರು ಕೊಟ್ಟಿರುವ ಹೇಳಿಕೆಯಲ್ಲಿ "ಉಭಯ ರಾಷ್ಟ್ರಗಳ ನಡುವಿನ ಗಡಿಯನ್ನು ಎಂದೂ ನಿರ್ಧಾರವಾಗಿರಲಿಲ್ಲವೆಂದು ಹೇಳಿದೆ. "ಮೆಕ್‌ಮಹೋನ್ ರೇಖೆಯನ್ನು ಬ್ರಿಟಿಷ್ ಸಾಮ್ರಾಜ್ಯವಾದಿಗಳು ನಮ್ಮ ಮೇಲೆ ಹೇರಿರುವಂತೆ" ಎಂದೂ ತಿಳಿಸಿದೆ. ಒಂದು ಕಡೆ, ಟಿಬೆಟ್ಟಿಗೆ ಅಂತಾರಾಷ್ಟ್ರೀಯ ಒಪ್ಪಂದಗಳನ್ನು ಮಾಡಿಕೊಳ್ಳಲು ಅಧಿಕಾರವೇ ಇಲ್ಲವೆಂದು ಚೀಣೀಯರು ವಾದಿಸಿದರೆ, ಮತ್ತೊಂದು ಕಡೆ, ಟಿಬೆಟ್ ಮತ್ತು ಬ್ರಿಟಿಷರ ನಡುವೆ ಆಗಿರುವ ಒಪ್ಪಂದದಂತೆ ರಚಿಸಿರುವ ಭೂಪಟವನ್ನು ತಾವು ಈಗ ಪ್ರಕಟಿಸುವುದಾಗಿ ಅವರು ಹೇಳಿರುವರು! ಒಂದು ಮಾತು ಒಂದು ನೀತಿ ಚೀಣೀಯರಿಗೆ ಜಾಯಮಾನಕ್ಕೆ ಬಂದ ಗುಣವಲ್ಲ.

ಭಾರತ ಸರ್ಕಾರದವರು ಪ್ರಕಟಿಸಿರುವ ಹೇಳಿಕೆಯ ಪ್ರಕಾರ ಈ ಭೂಪಟವನ್ನು ಥಾಗ್‌ಲಾ ಕಣಿವೆಯ ದಾಟಿ ಭಾರತ ಚೈನುಗುನ ವಿಶಿಟರ ಕ್ಷೇತ್ರಕ್ಕೆ ನಕ್ಷೆಯ ಬೆಂಬಲ ಪಡೆಯುವುದಕ್ಕೋಸ್ಕರ ಈ ಭೂಪಟವನ್ನು ಸೊರತಂದಿವ್ದರೆ, ಥಾಗ್‌ಲಾ ಕಣಿವೆಯು, ಮೆಕ್‌ಮಹೋನ್ ರೇಖೆಯಲ್ಲಿರುವ ಗಡಿ ಪ್ರದೇಶ.

ಈ ನಕ್ಷೆಯು ಪ್ರದೇಶದ ಪ್ರಾಕೃತಿಕ ಲಕ್ಷಣಗಳನ್ನು ಕರಾರುವಾಕ್ಕಾಗಿ ಸೂಚಿಸುವುದಿಲ್ಲವೆಂದೂ ತವಾಂಗ್, ಜಾಂಗ್, ಟ್ಸೋ, ತಾಷಿಯಂಗಾಂಗ್‌ಸಿ ರುಡಾಂಗ್ ಮುಂತಾದವುಗಳನ್ನೂ ಈ ನಕ್ಷೆಯಲ್ಲಿ ತಪ್ಪುತಪ್ಪಾಗಿ ಗುರುತಿಸಲಾಗಿದೆಯೆಂದೂ ಭಾರತ ಸರ್ಕಾರದ ಹೇಳಿಕೆ ತಿಳಿಸಿದೆ. ಚೀಣೀಯರಾದರೋ ತಮ್ಮ ಸೇನೆಯು ಸೃಷ್ಟಿಸಿರುವ ಪರಿಸ್ಥಿತಿಯ ವಾಸ್ತವತೆಗೆ ಯಾವುದು ಬೆಂಬಲ ನೀಡುವುದೋ ಅದೇ ಸರಿ ಎಂದು ವಾದಿಸುವರು.

ಚೀಣೀಯರು ಮುಂದೆ ತಂದಿರುವ ಕರಡು ನಕ್ಷೆಯಲ್ಲಿ ಸಹ, ಮೆಕ್‌ಮಹೋನ್ ರೇಖೆ ಎರಡೂ ಕಡೆಗಳಲ್ಲಿ ಎತ್ತರವಾದ ಕಣಿವೆಗಳಿರುವುದು; ಮೆಕ್‌ಮಹೋನ್ ರೇಖೆಯು ಮುಖ್ಯ ಜಲಕ್ಷೇತ್ರದಲ್ಲಿ ಹಾದು ಹೋಗುವುದನ್ನು ಸ್ಪಷ್ಟವಾಗಿ ತೋರಿಸುವುದು. ಆದೇ ಅಂತರ್ಗತ ಗಡಿ ಪ್ರದೇಶವನ್ನು ನಿರ್ಣಯಿಸುವಲ್ಲಿ ವಾಸ್ತವಿಕವಾಗಿ ಪ್ರಾಕೃತಿಕ ಅಂಶವೂ ಅಗಿರುವುದು.

—

ಗಾಂಧೀಜೀತಿಷ್ಯ ಜಮುನಾಲಾಲ್

(ಇನೇ ಸುದ್ದಿಂದ)

ರೂ ೫೫ ಸಾವಿರಕ್ಕಿಂತಲೂ ಹೆಚ್ಚಾಗು ತಿದ್ದರೂ ಹಣದ ಚಿಂತೆ ಅವರಿಗಿರಲಿಲ್ಲ.

ಅತಿಥಿಗಳ ಭೋಜನದ ಕುರಿತು ಇವರು ಕಾಂಬಾ ಆಸಕ್ತಿವುಳ್ಳವರಾಗಿದ್ದರು. ಸ್ವಚ್ಛತೆಗೆ ಪ್ರಮುಖ ಸ್ಥಾನ ಕೊಡಲಾಗುತ್ತಿತ್ತು. ಭೋಜನದಲ್ಲಿ ರುಚಿಗೆ, ಆರೋಗ್ಯಕ್ಕೆ ಅನುಕೂಲವಾದ ವಸ್ತುಗಳೇ ಉಪಯೋಗಿಸಲ್ಪಡುತ್ತಿದ್ದುವು. ಗ್ರಾಮೋದ್ಯೋಗದ ವಸ್ತುಗಳಿಗೆ ಪ್ರಥಮ ಸ್ಥಾನ ಪ್ರತಿಯೊಬ್ಬನಿಗೂ ಖಾಲು, ಮೊರಂ, ತುಪ್ಪ, ಎಣ್ಣೆ, ತರಕಾರಿ ಮತ್ತು ಸಾಕಷ್ಟು ಚಪಾತಿಗಳನ್ನು ಕೊಡಲಾಗುತ್ತಿತ್ತು. ಆಹಾರವು ಸಾತ್ವಿಕವಾಗಿತ್ತು. ಹೀಗೆ ಅತಿಥಿ ಗೃಹದ ಊಟ ಉಪಚಾರಗಳು ಜನರಿಗೆ ಅತ್ಯಂತ ತೃಪ್ತಿಯನ್ನೀಯುತ್ತಿದ್ದುವು.

ಅತಿಥಿ ಗೃಹದಲ್ಲಿ ಅತಿಥಿಯು ಶುಚಿಯ ಕುರಿತು ಅವಶ್ಯವಾಗಿ ಗಮನ ಕೊಡುತ್ತಿದ್ದನು. ಬೇರೆ ಬೇರೆ ವ್ಯಕ್ತಿಗಳ ರುಚಿಯನ್ನೂ ಅವರ ಆಹಾರದ ವಸ್ತುಗಳನ್ನೂ ತಿಳಿದು ಅದರಂತೆ ಭೋಜನ ತಯಾರಿಸುವ ಕಲೆ ಅತಿಥಿ ಗೃಹದ ಮುಖ್ಯ ವೈಶಿಷ್ಟ್ಯವಾಗಿತ್ತು. ಇಲ್ಲಿನ ಇನ್ನೊಂದು ವೈಶಿಷ್ಟ್ಯವೆಂದರೆ ಫೆನ ವ್ಯಕ್ತಿಗಳಾಗಲೀ ಸಾಮಾನ್ಯ ಬಡವರಾಗಲೀ, ಬ್ರಾಹ್ಮಣರಾಗಲಿ, ಹರಿಜನರಾಗಲೀ ಎಲ್ಲರೊಡನೆ ಒಂದೇ ರೀತಿ ವರ್ತಿಸಿ ಎಲ್ಲರನ್ನು ಒಂದೇ ಸಾಲಿನಲ್ಲಿ ಕುಳ್ಳಿರಿಸಿ ಭೋಜನ ಮಾಡಿಸುತ್ತಿದ್ದದ್ದು.

ಈಶ್ವರನು ಜಮುನಾ ಲಾಲರಿಗೆ ಅಪಾರ ಸಂಪತ್ತನ್ನು ಕೊಟ್ಟ ಹಾಗೂ ಉದಾರ ಮನೋಭಾವನ್ನೂ ಕೊಟ್ಟಿದ್ದಾನೆ. ಇವರಂಥ ಕೊಡುಗೈ ದಾನಿ, ಅತಿಥಿ ಸೇವಿ, ಪರೋಪಕಾರಿ ಹಾಗೂ ದೇಶಸೇವಿ ಸಿಗುವುದು ಬಹಳ ಅಪರೂಪ ಎಂದರೆ ಅತಿಶಯೋಕ್ತಿಯಾಗಲಾರದು.

—

ಧಾಳಿ!

ಧಾಳ! ಧಾಳ! ಧಾಳ!
ಎಲ್ಲೆಲ್ಲು ಇದೇ ಗಾಳ!
ನಂದಿಹುದೆ ನವಿಕಾಂತಿ? ಅಯ್ಯೋ ಧಾಳ!
ಕುಂದಿಹುದೆ ಜಲಶಾಂತಿ?ಅಮಮ ಧಾಳ!
ಸೂಸಲೊಲ್ಲವು ಕುಸುಮ ಕಂದ! ಧಾಳ!
ಬೀಸದೇ ತಂಗಾಳಿ? ಓ ಚೀನ ಧಾಳ!
ಚಿಂದಿರನ ಬೆಳಕಾಯ್ತೆ ಬಿಸಿ?ಎಂಥ ಗಾಳಿ?
ನಾಟ್ಯವೆಲ್ಲಿದೆ ನವಿಲ! ಧಾಳಿಯೇ ಧಾಳ!
ಮೊರೆಯುತಿದೆ ಪಡುಗಡಲು! ಸಾರಿ ಓ ಧಾಳ!
ಬಣ್ಣಗೆಟ್ಟಿತೇ ಬಾನು! ಎಲ್ಲೆಲ್ಲು ಧಾಳ!
ಆಯತೇ ಕೊಳಚೆ ತಿಳಿ ಗೊಳೆದ ನೀರು!
ಇದೇ ಧಾಳ!
ಬಾನಲ್ಲಿ ಅಡಗಿತೇ ಮಳೆಬಿಲ್ಲು! ಅಯ್ಯೋ ಧಾಳ!
ಧಾಳ! ಧಾಳ! ಧಾಳ!
ಎಲ್ಲೆಲ್ಲು ಇದೇ ಗಾಳ!
ತೆಳೆದು ಬಿಡು ರುದ್ರತಿವ ಉರಿಯಗಣ್ಣು!
ಕೈಲಾಸ ಬೆಟ್ಟದಿಂ ಚೀನಿಯರ ಕಡೆಗೆ!
ಉರಿದುಬಿಡು ಚೀನಿಯರ ಮೂಡು
ವರ್ಣ!
ಭುವಿಯಿಂದ ಮುಕ್ತಿಕೊಡು ದುಷ್ಟಗಾ
ಪಡೆಗೆ!
ಭಾರತೆಯೆ, ನೀನಾಗು ರುದ್ರಕಾಳಿ!
ರುದ್ರನಾಟ್ಯವ ಗೈ! ಓ ಭದ್ರಕಾಳಿ!
ಧಾಳ! ಧಾಳ! ಧಾಳ!
ಎಲ್ಲೆಲ್ಲು ಇದೇ ಗಾಳ!

—ಯು. ನಾರಾಯಣ ಸೇರಿಗಾರ,
ಉದ್ಯಾವರ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ಶೀಘ್ರವಾಗಿ ವೃದ್ಧಿ ಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931.
Phone No. 240. — ಮಂಗಳೂರು—3

ಸೂಚನೆ

"ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಬಿಳ್ಳಿದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ಸ.

ಕೆಂಪಿನವರ ಮುಗಿಯದ ಕಥೆ

(ಎನೇ ಪುಟದಿಂದ)

ಕೊಟ್ಟರೀ, ನಮಗೆ ತುಂಬಾ ಒಳ್ಳೆಯದಲ್ವೆ?,,

"ಹೌದು, ಅವರು ಇತ್ತ ನಮಗೂ ಕೊಟ್ಟಾರು; ಅತ್ತ ಅವರಿಗೂ ಇತ್ತಾರು.,,

"ಛೆ, ಛೆ.... ಹಾಗನ್ಬೇಡಿ. ನೀವೇ ಮೊನ್ನೆ ಹೇಳಿದ್ರಲ್ಲಾ ರಶ್ಯದ ಒತ್ತಾಯದಿಂದಲೇ ಚೀನಾ ಹಿಂದೆ ನಿಂತಿತು ಎಂದು. ,,

"ಹೌದು, ಅದೂ ಒಂದು ಕಾರಣವಿರಬೇಕು. ಅಷ್ಟೆ. .,

"ಅಂದರೆ ಈ ಕೆಂಪಿನವರನ್ನೆಲ್ಲಾ ನಂಬಬಾರದೂಂತ ಅಲ್ವೆ?

"ಹಾಗೇನೂ ಇಲ್ಲ. ನಾವೀಗ ಒಬ್ಬರನ್ನ ನಂಬಿ ಕೆಟ್ಟಿವಲ್ಲ?"

"ಸರಿ ದಾಸರು ಹಾಡಿದ್ದನ್ನೇ ನಂಬಿ ಕೆಟ್ಟೆವಲ್ಲಿ ಅಂತ?"

"ಹೌದು ಯಾರನ್ನು? ರಂಗಯ್ಯನನ್ನು. ಚೀನೀಯರನ್ನಲ್ಲ; ರಶ್ಯನರನ್ನಲ್ಲ."

"ಮತ್ತೆ ಯಾರೋ ಅವರು ನಮ್ಮೂರ ಕೆಂಪಿನವರ ಅಧ್ಯಕ್ಷನಂ'...."

"ಹ್ಞಾದು ಹೌವೆ ಡಾಂಗೆ...."

"ಅ'ರು ರಶ್ಯಕ್ಕೆ ಹೋದ್ರಂತಲ್ಲಾ; ಅವರನ್ನೂ ನಂಬಬಾರದೆ?"

"ಈಗಂತೂ ಹೋದರು, ಕೆಂಪು ಚೀನಾದ ಅನ್ಯಾಯವನ್ನು ಅವರಿಗೆ ತಿಳಿಸಲು. ಆದರೆ, ಅವರು ಮತ್ತೇನು ಮಾಡಿ ಬರುತ್ತಾರೊ, ನೋಡಬೇಕು."

"ಅಂತೂ ಈ ತಂಪಿನವರೆಲ್ಲಾ ಒಂದೇ ರೀತಿ ಅನ್ನಿ."

"ಕಮಿನೆಯಲ್ಲರಿಗೂ ಒಂದೇ ತರ ಅಲ್ವೆ?"

"ಓ, ಬಂದು ಇಷ್ಟು ಹೊತ್ತಾದರೂ ಬಳಸಲು ಮಜ್ಜಿಗೆ ಬಿಟ್ಟಿ. ಈ ಕೆಂಪಿನವರ ಕಥೆ ಕೇಳ್ತಾ ಇದ್ರೆ ಎಲ್ಲಾ ಮರ್ತೇ ಹೋಗ್ತದೆ.'

"ಅಷ್ಟೂ ಪಸಂದಾದ ಕಥೆಯೇ ಅದು?"

"ಅಲ್ವೇ ಮತ್ತೆ? ನಿಮ್ಮ ಬೇತಾಳನ ಕಥೆ ಇಪ್ಪತ್ತೈದರಲ್ಲೇ ಮುಗೀತು. ಭಾರತ ಹದಿನೆಂಟು ಪರ್ವಗಳು ಮಾತ್ರ.ಆದರೆ, ಕೆಂಪಿನವರ ಕಥೆ..."

"ಖಂಡಿತಕ್ಕೂ ಇನ್ನೊಂದು ಪ್ರಳಯ ಆಗೋವರೆಗೂ ಇದ್ದೇ ಇದೆ."

"ಹ್ಞೂಂ, ನನ್ಗೂ ಕುತೂಹಲಾಗುತ್ತೆ ಇನ್ನೊಂದು ದಿನ ಮಾತಾಡೋಣ ಈಗ ಬಳಸ್ತೀನಿ. ಚೀನಿಯವರು ಕೆಂಪಾಗಿ ಹಸಿಮೆಯಿಂದ ಹರಾಡ್ತಾರೆ. ಇನ್ನು ನೀವು ಹಸಿಮೆಯಿಂದ ಕೆಂಪಾಗಿ ಹಾರಾಡೋದು ಬೇಡ."

"ಅಂತೂ ಒಪ್ಪೊತ್ತು ಕೂಳು ಸಿಗ

ಕವಲು ದಾರಿ — ಕೆಂಪು ದೀಪ

ಹುಚ್ಚು — ಉರುಳು

— ಸುದಾಸ.

ಹತ್ತು ಮುಖಗಳ ಹುಚ್ಚು ಮನಸ್ಸಿನ ಕುರಿತು ಎಷ್ಟೋ ವರ್ಷಗಳ ಹಿಂದೆ, ಕಾರಂತರು, ಹುಚ್ಚು ಮನಸ್ಸಿನ ಹತ್ತು ಮುಖಗಳಲ್ಲಿ, ವಿವರಿಸಿದ್ದಾರೆ. ಆದು, ಅವರ ಹುಚ್ಚು ಮನಸ್ಸಿನ ಹತ್ತು ಮುಖಚಿತ್ರಗಳೆ. ಆದರೆ—ಹಲವರ ಮಂದಿಗೆ ಬದುಕನ್ನು ರೂಪಿಸುವ ದಾರಿ ತೋರಿಸಿದೆ, ಆ ಉಚ್ಚಾ ವಿಚಾರದ ಹುಚ್ಚು ಮನಸ್ಸು.

ಹಿರಿಯರು ಆಡಿಕೊಳ್ಳುತ್ತಾರೆ; ಮನಸ್ಸು ಕೋತಿಯು ಹಾಗೆ; ಅದನ್ನು ಹಿಡಿತದಲ್ಲಿಟ್ಟುಕೊಳ್ಳಲು ಯತ್ನಿಸು ಎಂದು.

ನೂರಾರು ಆಕರ್ಷಣೆಗಳಿಂದ ರೂಪುಗೊಳ್ಳುತ್ತಿರುವ ಜೀವನ ಒಂದು ಅಯಸ್ಕಾಂತ ಶಿಲೆ. ವ್ಯಕ್ತಿಯ ಉನ್ನತ ವಿಚಾರಗಳು, ಈ ಆಕರ್ಷಣೆಯೊಡನೆ ಘರ್ಷಿಸಿ, ಕರಗಿ ಹೋದಾಗ. ತನ್ನ ಭವಿಷ್ಯದ ಚಿಂತನೆಯಲ್ಲ, ಸಾರ್ವಜನಿಕ ಹಿತಚಿಂತನೆಯನ್ನು ವ್ಯಕ್ತಿ ಮರೆಯಬಹುದು. ಸ್ವಾಕ್ತಿ ಗುರಿಕಪ್ಪಿದಾಗ ಈ ಆಕರ್ಷಣೆ ನಿನಗಾಗಿ ನೀನೇನು ಮಾಡಬಲ್ಲೆ,? ಎಂದು ಆ ವ್ಯಕ್ತಿಯನ್ನು ಪ್ರಶ್ನಿಸಬಹುದು. ಇಂತಹ ಆಕರ್ಷಣೆಗೆ ಒಲಿಯೂದ ವ್ಯಕ್ತಿಗಳ ಸಂಖ್ಯೆಯೇ ಅಧಿಕ ಮಹಾ ಮಾನವನಂಗಿ ಕಾಣಿಸಿಕೊಳ್ಳಬಲ್ಲ ವ್ಯಕ್ತಿಯೇ ಜನ ಸಾಮಾನ್ಯನಾಗಿ ಬಾಳಿ ಬದುಕಿ, ಏನೊಂದನ್ನೂ ಆರಿತುಕೊಳ್ಳುವನಂತೆ ಜಗತ್ತಿನಿಂದ ಕಣ್ಮರೆಯಾಗುವದೇನೂ ವೈಚಿತ್ರ ವಿಷಯವಲ್ಲ. ಎಲ್ಲಾ ಮಹಾ ಮಾನವತೆಯತ್ತ ಸಾಗಿ ಬರುತ್ತಿದ್ದರೆ, ಎಲ್ಲರ ಭಾವನೆಗಳು ಕೇಂದ್ರೀಕರಿಸಲ್ಪಟ್ಟು, ಒಂದೇ ಗುರಿಯೆಡೆಗೆ ನಡೆಯುತ್ತಿದ್ದರೆ, ಅಸತ್ಯ, ಅನ್ಯಾಯಗಳು – ನರಕದೆಡೆಗೆ ಪಲಾಯನ ಮಾಡುತ್ತಿರಲಿಕ್ಕಿಲ್ಲ?

ನಿನಗೆ ವ್ಯಾವಹಾರಿಕ ಸುಖವೇ ಬೇಕಾಗಿದ್ದರೆ ಅದನ್ನು ನಾನು ಕೊಡಬಲ್ಲೆ ನಾನು ನಡೆಯುವ ದಾರಿಯಲ್ಲೇ ನೀನು ಅನುಸರಿಸಿ ಬರಲಿಚ್ಛಿಸಿದರೆ, ಇದಕ್ಕೂ ಅನುಕೂಲತೆ ಕಲ್ಪಿಸಿ ಕೊಡಬಲ್ಲೆ. ಯಾವದನ್ನು ನೀನು ಸ್ವೀಕರಿಸುವೆ,ಎಂದು, ರಾಮ ಕೃಷ್ಣ ಪರಮಹಂಸರು ಶಾರದಾದೇವಿಯವರೊಡನೆ ಕೇಳಿದಾಗ—

ನನ್ನ ದೇವರೆ! ನನ್ನ ಹಾಲಿಗೆ ಪ್ರಪಂಚಿಕ ಲಾಲಸೆಯನ್ನೇ ಕರಗಿಸಿರಿ ಎಂದು ಶಾರದಾ ದೇವಿಯವರು ಅನ್ನುತ್ತಿದ್ದರೆ...

ಕರ್ನಾಟಕವೆಂದರೆ ನಾನು. ನಾನೆಂದರೆ ಕರ್ನಾಟಕವಿಲ್ಲ;

ಸೇಲಿಸ ಮಾತನ್ನು ಆಡಿದ್ದುನಾನಲ್ಲ. ನಾನು ಹೀಗಾಡುತ್ತಿದ್ದರೆ ಎಂಡೆಡೆಡ ಕಾಂಬಳಿ ಹೊದ್ದುಮಲಗಿರುವ ಕನ್ನಡಿಗರೂ ಎದ್ದು ನಿಲ್ಲುತ್ತಿದ್ದ!

ಹಿಂದೆ ಹಾಗೆ ಆಡಿಕೊಂಡವರು—

ಹೆರನು ಪೂಜ್ಯ ಆಲೂರ
ವೆಂಕಟರಾಯರು

ಹಿಂದೆ ಗುಡಿಗಾದ್ದ ಆ ವೀರ ಶ್ರೀಯುಸುಡಿಗಳನ್ನು ಇವರು ಇಂದೂ ಗಂಭೀರವಾಗಿ ಗುಡುಗಬಲ್ಲರು, ನಾಳಿನ ಜನತೆಗಾಗಿ.

ನಾಳಿನ ಜನತೆಗಾಗಿಯೆ? ಯಾಕೆ ಇಂದಿನ ಜನತೆಗಾಗಿ ಅಲ್ಲ? ಮುಹೋನ್ನತ ಸಾಹಸದ ಹೊರೆಯನ್ನು ಹೊರುವ ಎದೆಗಾರಿಕೆ ಇಂದಿನ ಜನತೆಗಿಲ್ಲ, ಎಂತಲೇ, ಅವರು ನಾಳಿನ ಜನತೆಗಾಗಿ ಗಡುಗುಡಿಸಿರು.

ಅತುಲೈಶ್ವರ್ಯವನ್ನು ನೀನು ಬಯಸುವಿಯಾದರೆ ನಾನು ಆ ಸಾಧನಾಪಥದಲ್ಲೇ ನಡೆದೆ ಸಾಗಿದೆ. ದಾರಿದ್ರ್ಯದೀಕ್ಷೆ ತೊಟ್ಟು, ಕರ್ನಾಟಕತ್ವ ದರ್ಶನದ ತಪಶ್ಚರ್ಯೆ ಮಾಡಲು ಪ್ರೋತ್ಸಾಹಿಸುವೆ ಯಾದರೆ ಅದನ್ನೂ ಸಂತೋಷದಿಂದ ಸ್ವೀಕರಿಸುವೆ ನೀನು ಯಾವದನ್ನು ಬಯಸುವೆಯೋ ಅದಕ್ಕೆ ಹೊರತಾಗಿ ನಾನೇನನ್ನೂ ಮಾಡಲಾರೆ, ಎಂದು ಅವರು ತವ ಪತ್ನಿಯೊಡನೆ ಕೇಳಿದಾಗ, ಆ ತಾಯಿ ಮುಕ್ತ ಹೃದಯದಿಂದ ತನ್ನ ಸಮ್ಮತಿಯಿತ್ತರು. ಒಂದು ಬೇಳೆ ದಾರಿದ್ರ್ಯದೀಕ್ಷೆಗೆ ಅವರು ಅಶಕ್ತಿ ತೋರಿಸುತ್ತಿದ್ದರೆ...

ಸರೂಜ ಸೇನೆಯು ಆರಂಭವೆಲ್ಲೆ?

ಆಲೂರ ವೆಂಕಟರಾಯರು ಹೀಗೆ ಉತ್ತರಿಸುತ್ತಾರೆ:

ನವ ಚೆಲ್ಲಿಯು ಉಚಿತ ವಾಚನಾಲಯಗಳ ಕವಾಟುಗಳಿಗೆ ಅಂಟಿರುವ ಕಸದ ಧೂಳನ್ನು ಝಾಡಿಸುವ ಕೆಲಸವನ್ನು ಕೈಗೊಳ್ಳುವಲ್ಲಿಂದಲೇ—

—ಸರೂಜ ಸೇನೆಯು ಆರಂಭವಾಗುತ್ತದೆ.

ಅವರು ನಡೆಸಿದ, ನಡೆಯುತ್ತಿರುವ ಸಂಶೋಧನೆಗೆ ಇತಿಮಿತಿಯಿಲ್ಲ. ಹಳೆಯ ಕಾಲದ ಯಾವೆಲ್ಲ ಕುರುಹುಗಳು ಗತವೈಭವ ವಿಸ್ತರಣೆಯನ್ನು ಸೂಡಬಲ್ಲವೋ ಅಲ್ಲೆಲ್ಲಾ ಆವರ ಭಾವ ಪರವಶರಾಗುತ್ತಾರೆ. ಆಲ್ಲೆಲ್ಲಾ ಅವರು ಕನ್ನಡ ರಾಜ ರಾಜೇಶ್ವರಿಯನ್ನು ಕಾಣುತ್ತಾರೆ. ಅಲ್ಲೆಲ್ಲಾ ಅವರ ಮನಸ್ಸು ಅಂದಿನ ಮತ್ತು ಇಂದಿನ ಅಂತರವನ್ನ ಕೆದಕತೊಡಗುತ್ತದೆ.

ಇವ ಒಂದು ಬಗೆಯ ಹುಚ್ಚು ಎಂದಾಡಿಕೊಳ್ಳುವ ಪುಣ್ಯಾತ್ಮರೂ ಕನ್ನಡ ನಾಡಿನಲ್ಲಿ ಹೂರ ಪುಣ್ಯ ವಿಶೇಷದಿಂದಲೋ ಹುಟ್ಟಬಂದಿರುತ್ತಾರೆ. ಅಂತಹ ವ್ಯಕ್ತಿಗಳ ಸಂಖ್ಯೆ ಕನ್ನಡ ನಾಡಿನಲ್ಲೇ ಅಧಿಕವಾಗಿರಬೇಕೆ?

ಅಂತಹ ವ್ಯಕ್ತಿಗಳಲ್ಲಿ ಉನ್ನತ ವಿಚಾರಂದ ಅಭಿವ್ಯವಸಿದೆಯೆಂದಲ್ಲ ಆ ಗುಣ ಗೋಸ್ಕರವಾಗಿದ್ದೀತು. ಆವರ ಆಲಸ್ಯವನ್ನು ತೊಲಗಿಸಿ, ವಿಚಾರವನ್ನು ಕೆರಳಿಸಿ, ಉಚ್ಚ ವಿಚಾರಿಗಳ ಆದೇಶವೇನೆಂಬುದನ್ನು ತಿಳಿಯಪಡಿಸಿ, ಮನಸ್ಸು ಮುದಡಿಕೊಳ್ಳದಂತೆ ಅಂಕಿಸಿ, 'ನೀನು ಎತ್ತರಕ್ಕೆ ಬೆಳೆ' ಎಂದು ಆಜ್ಞಾಪಿಸುವ ಕೆಲಸವನ್ನು ಆವರ ಅಂತರ್ಯಾಮಿ ಮಾಡುತ್ತಿತ್ತು ಅಷ್ಟೆ.



ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50

ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ 3 50

ಚಂದಾ:

ವಾರ್ಷಿಕ ಚಂದಾ (ಅಂಚೆಸಹಿತ)
ಸೇರಿ) ರೂ 6 75

ಪ್ರತಿ ರೂ 0-13

ಜಾಹೀರಾತನ್ನಾಗಲೀ ಚಂದಾ ಹಣವನ್ನಾಗಲೀ ಸಂಬಂಧಪಟ್ಟ ವ್ಯಕ್ತಿಗೆ ಬೇರೆ ಬೇಂಕಿನ ಚೆಕ್ಕಿನಲ್ಲಿ ಅಥವಾ ಮನಿ ಆರ್ಡರ್ ಮೂಲಕ ಕಳುಹಿಸುವಾಗ ಅದಕ್ಕೆ ಹೆಚ್ಚುವರಿಯಾಗಿ ಕಮಿಷನ್ ಕಳುಹಿಸಬೇಕಾಗಿ ವಿನಂತಿ.

'ನವಯುಗ'ದ ಪತ್ರಿಕೆಗೆ ಜಮೆ ಆಗುವ ಸಾಕಾರ್ಯವಿರುವುದು.

REGD. No. B. G. 176
LICENCE No. 31
Licensed to Post without Prepayment

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ]

ಮೂಢ ನೂಸ— ಬರೆದವರು: ಡಾ। ಎಂ. ಆರ್. ರಾಜಾಂಧಾಮ ರಾವ್, ಎಂ ಬಿ, ಬಿ-ಎಸ್. ಪ್ರಕಾಶಕರು: ಪ್ರಭಿಭಾ ಗ್ರಂಥಮಾಲೆ, ಧಾರವಾಡ. ಪುಟಗಳು: ೨೮೭. ಬೆಲೆ: ರೂ. ೩—೦೦.

ಸಮಾಜದ ಋಣ, ಮನೆತನದ ಋಣ ಮತ್ತು ವಂಶ ಋಣಗಳಲ್ಲಿ ಯಾವುದು ಹೆಚ್ಚು ಎಂಬ ಪ್ರಶ್ನೆಗೆ ಬೇರೆಬೇರೆಯವರಿಂದ ನಾನಾ ರೀತಿಯ ಉತ್ತರ ನಿರೀಕ್ಷೆ ಸಬಹುದು. ಆದರೆ, ಈ ಋಣಶ್ರೇಯಗಳು ಮುಸ್ಸುಂಗೊಂಡೇ ಪ್ರತಿ ವ್ಯಕ್ತಿಯನ್ನು ಸುತ್ತುಗಟ್ಟಿವೆ. ಇವುಗಳಲ್ಲಿ ಒಂದು ಕಡಿಮೆ ವಾದರೂ ಮಾನವ ಪರಿಪೂರ್ಣವೆನಿಸಲಾರ ಎಂಬ ತತ್ತ್ವದ ಪ್ರತಿಪಾದನೆಯೊಡನೆ ಯೋಜನೆಗಳಿಂದ ಪ್ರಗತಿಪಥಗಾಮಿಯಾದ ಮಲೆನಾಡಿನ ಹಳ್ಳಿಯೊಂದರ ಹಿನ್ನೆಲೆಯಲ್ಲಿ ಬರೆಯಲ್ಪಟ್ಟಿದೆ ಈ ಕಾದಂಬರಿ. ಸಮಾಜಕ್ಕೆಂದು ಎಷ್ಟು ಹೊಡೆದಾಡಿದರೂ ಉಳಿದೆರಡು ಋಣಗಳನ್ನು ಹಾಗೆಯೇ ಉಳಿಸಿಕೊಂಡ ಕಥಾನಾಯಕ ರಂಗಣ್ಣ ಜೀವನ್ನೂ ತೀರಿಸುವ ದಿಟ್ಟತನದ ಹೆಜ್ಜೆಯನ್ನು ಇಟ್ಟು, ಪೂರ್ಣತೆಯನ್ನು ಪಡೆಯು, ಸುಧಾರಕನೆಂಬ ಹೆಸರನ್ನು ಉಳಿಸಿಕೊಳ್ಳುವುದೇ ಕಥೆಯ ವಸ್ತು. ವನೆತನದ ಋಣವನ್ನು ತೀರಿಸುವಲ್ಲಿಯೇ ಆಸಕ್ತನಾದ ಸುಂದರ, ಸ್ತ್ರೀ ಸಹವಾಸವೊಂದನ್ನೇ ತನ್ನ ಧ್ಯೇಯವಾಗಿಟ್ಟುಕೊಂಡ ಕಂರಿಯು ವರು ಉಳಿದ ಎರಡು ಮುಖಗಳು ಒಂದೊಮ್ಮೆ ತಿರಸ್ಕೃತೆಯಾಗಿ ನುತ್ತಾರನ್ನೋ ಕೈಹಿಡಿದು ಕ್ಷಯ ರೋಗ ಪೀಡಿತೆಯಾಗಿ ಮರಳಿ ತನ್ನ ಪ್ರೇಮಿಯನ್ನೇ ಸೇರಿದ ಜಾನಕಿಯೇ ಕಥಾ ನಾಯಕಿ, ಪತಿ ಸುಂದರನಿಂದ ತೃಪ್ತಿಹೊಂದದೆ ತನಗೆ ಮೈದುನನೆನಿಸಿದ ಕಂರಿಯಿಂದ ಸಂತೃಪ್ತಿ ಹೊಂದುವ ಪ್ರಮೀಳೆಯ ನಡತೆ ಸುಂದರನ ಬಗೆಗೆ ಅನಿಕರ ಹುಟ್ಟಿಸುತ್ತದೆ. ಜಾನಕಿಯು ಮಿತ್ರೆಯಾಗಿ, ಆಕೆಯು ಕಂರಿಯ ಕೈ ಹಿಡಿಯುವಲ್ಲಿ ಅಗ್ರಸರೆಯೆನಿಸಿದ, ಮುಂದೆ, ತನ್ನ ತಪ್ಪಿಗಾಗಿ ಪಶ್ಚಾತ್ತಾಪಪಟ್ಟು ಜಾನಕಿಯ ಕಷ್ಟ ವಿಮೋಚನೆಗಾಗಿ ಪ್ರಯತ್ನಿಸುತ್ತಿರುವಾಗ, ರಂಗಣ್ಣನ ಉದಾರ ನೀತಿಯಿಂದ ಕೃತಕೃತ್ಯೆಯೆನಿಸಿದ ರಮಾ ಮಯ ಸ್ತ್ರೀಯ ಸಹಜ ಹೃದಯತೆಯ ಪ್ರತೀಕದಂತಿದ್ದಾಳೆ.

ಇಲ್ಲಿ ಬರುವ ಮುಖ್ಯ ಪಾತ್ರಗಳು ಮೇಲಿನವು. ಅವುಗಳು ತಂತಮ್ಮ ಪಾತ್ರಗಳಿಗೆ ಉಚಿತವೆಂಬಂತೆ ಚಿತ್ರಿತವಾಗಿವೆ. ಜಾನಕಿಯದು ಮೊದ ಮೊದಲಿಗೆ ಎದ್ದೆಬರುವಂತೆ ಭಾಸವಾಗುವುದಿಲ್ಲವಾದರೂ ಮುಂದೆ ಕಥೆಯು ಜೀವಾಳವಾಗುತ್ತದೆ. ಮಾನಸಿಕ ಚಿಕಿತ್ಸೆಯೇ ಆಕೆಯ ಅಸಾಧಾರಣ ಕ್ಷಯರೋಗಕ್ಕೆ ತಾರಕವಾಗಿ ಪರಿಣಮಿಸಿದಾಗ ವಾಚಕರ ಹೃದಯ ಪ್ರಸನ್ನಗೊಳ್ಳುತ್ತದೆ. ಉಳಿದ ಪರಿಸರದ ಎಲ್ಲ ವ್ಯಕ್ತಿಗಳೂ ತಮ್ಮ ತಮ್ಮ ಸ್ಥಾನಮಾನಗಳಿಗೆ ಸರಿಯಾಗಿಯೇ ಕಾದಂಬರಿಯಲ್ಲಿ ಬಂದಿದ್ದಾರೆ. ಪೂಫೆನೊಸ್'ವು ವಧೂವರರ ಜೋಡಿ ಆರಿಸುವುದಕ್ಕೆ ವಸಂತಕಾಲ. ಮುಂದೆ ಜೋಡಿ ಕೂಡುವುದು ವಸಂತಕಾಲದಲ್ಲೇ ನಿಜ. ಪ್ರಾಪ್ತ ವಯಸ್ಕರಾದ ಯುವಕರು ಮತ್ತು ಯುವತಿಯರ ಮನೋಭಾವ, ಪ್ರವೃತ್ತಿ ಮತ್ತು ಪಲಿತಾಂಶಗಳ ಕುರಿತೂ ಕಾದಂಬರಿ ಸುದೀರ್ಘವಾಗಿ ವಿವೇಚಿಸುತ್ತದೆ. ಈ ದಿಸೆಯಲ್ಲಿ ಇದೊಂದು ನೂತನ ಕಾದಂಬರಿಯೆನಿಸುತ್ತದೆ.

ಕಾದಂಬರಿಯಲ್ಲಿ ಎದ್ದು ತೋರುವ ಇನ್ನೊಂದು ಲಕ್ಷಣವಿದೆ ಯೋಜನೆಗಳ ಪರಿಣಾಮವಾಗಿ ಹಳ್ಳಿಕೊಂಪೆಯಾಗಿದ್ದ ಒಂದು ಮಲೆನಾಡಿನ ಊರಿನ ಮೇಲೆ ಯಾವ ರೀತಿ ಸುಧಾರಣೆಯ ಗಾಳಿ ಬೀಸುತ್ತಿದೆಯೆಂಬುದನ್ನು ನಾವಿಲ್ಲಿ ಕಾಣಬಹುದು. ಮೊದಲು ಕಳೆಯ ಸಂಪ್ರದಾಯ.ಶರಣರ ತವರೂರು, ಮೊನ್ನೆಯ ಸುಧಾರಕ ರಂಗಣ್ಣನು ವಿಜೃಂಭಿದ ಹೊಂದಿದ ಜಾನಕಿಯನ್ನು ತಾನು ಮದುವೆಸಿಂದಾಗಲೂ (ಪ.ಡುಗೆಯರು ಹೈಸ್ಕೂಲಿಗೆ ಹೋಗುವುದನ್ನೂ ಅದು ಮೊದಲು ಪ್ರತಿಭಟಿಸಿತ್ತು) ಅವರು ವಿರೋಧಿಸದೆ ಇರುವಷ್ಟುಉದಾರತೆಯನ್ನು ತೋರಿಸುವಂತಾಯಿತು. ಇಂದಿನ ಭಾರತೀಯ ಹಳ್ಳಿಯ ಜನ ಜೀವನದ ಮೇಲೆ ಕ್ಷ-ಕಿರಣವರೆಚುವ ಇದು ಹೊಚ್ಚ ಹೊಸ ರೀತಿಯ ಕಾದಂಬರಿ; ಇಂತಹ ಕಾದಂಬರಿಗಳ ಸಂಖ್ಯೆ ಕನ್ನಡದಲ್ಲಿ ರಾಷ್ಟ್ರಪುನರಾಚನೆಯ ಈ ಘಟ್ಟಿ ಕಾಲದಲ್ಲಿ ಜನತೆ ಬಯಸುತ್ತದೆ. ಟೆಸ್ಟ್ ಟ್ಯೂಬು ಹಿಡಿಯುವ ಡಾಕ್ಟರರೇ ಲೆಕ್ಕಣಿಕೆಯನ್ನು ಹಿಡಿದು ಭಾರತ ದರ್ಶನಕ್ಕೆ ಸಿದ್ಧರಾದುದು ಕನ್ನಡಿಗರಿಗೊಂದು ಅಭಿಮಾನ. ಸರಳ ಭಾಷೆ ಸುಂದರ ಸಂಭಾಷಣೆ ಗಂಭೀರ ಪ್ರತಿಪಾದನೆಗಳಿಂದ ಕೂಡಿದ ಈ ನವೀನ ಮೂದರಿಯ ಕಾದಂಬರಿಯು ಅವಶ್ಯ ಸಂಗ್ರಹಿಸ ಬೇಕಾದುದು.

ಸಮರ ಸನ್ನಾಹ— ಶ್ರೀ ದಾಸೋದರ ಬಾಳಿಗ ಅವರು ಚೀನೀ ದುರಾಕ್ರಮಣ ವಿರೋಧ ದಿನಾಚರಣೆಯ ಅವಕಾಶದಲ್ಲಿ ಬರೆದ ಸವರ ಸನ್ನಾಹದ ಗೀತೆಗಳನ್ನು ಯುದ್ಧ ಮತ್ತು ಶಾಂತಿಯ ಕಾಲದಲ್ಲಿ ರಾಷ್ಟ್ರ ಸೇವಾನಿರತವಾದ ಸಿಂಡಿಕೇಟ್ ಬ್ಯಾಂಕಿನವರ ಸಹಾಯದಿಂದ ಸನಾನಿಧಿ ಸಾಹಿತ್ಯ ಮೂಲೆ, ರಥಬೀದಿ, ಮಂಗಳೂರು-೧ ಇವರು ಉಚಿತ ನೀಡಲು ಪ್ರಕಾಶಪಡಿಸಿದ್ದಾರೆ. ಇದರಲ್ಲಿ,ಮುನ್ನುಡಿಯಗೀತ, (ಕನ್ನಡ ಮತ್ತ ಇಂಗ್ಲಿಷ್)ಎಚ್ಚರಿಕೆ,ಜೈನದ ಕೈತನ ಮತ್ತು ಅಮರ ಶಕ್ತಿ ರಾಷ್ಟ್ರ ಭಕ್ತಿಯೆಂಬ ನಾಲ್ಕು ಗೀತೆಗಳು ಇವೆ ಚೀನೀಯರ ಕಪಟಬುದ್ಧಿಯಂತೆ ಎಸಗಿದ ನನ್ಮು ಪ್ರಗತಿ ಸಾಧನೆಗಳ ಮತ್ತು ಹಿಮಾಲಯದುದ್ದಗಲಿಗೂ ಉಚಿತ ಮತ್ತು ಆಕರ್ಷಕವಾದ ಹನ್ನೆರಲೆ ಚಿತ್ರಗಳು ಮೂರಿವೆ. ಇಲ್ಲಿನ ಗೀತೆಗಳಲ್ಲಿ ಕೊನೆಯ ಎರಡುಉತ್ಕೃಷ್ಟವಾಗಿವೆ ಮುನ್ನುಡಿಯಗೀತ ದ ಪ್ರತಿಪದವನ್ನು ಉಚ್ಚರಿಸುವಾಗಲೂ ಮುನ್ನುಡಿಯುವ ಕೆಚ್ಚು ಹುಟ್ಟುವಂತಿರ ಬೇಕು ಇದಕ್ಕಾಗಿ ಅಷ್ಟು ಲಯಬದ್ಧವಾಗಿಯೂ ಗಾಂಭೀರವಾಗಿಯೂ ಇದ್ದರೆ ಹೆಚ್ಚು ಉಪಯುಕ್ತವೆಂದು ಯಾರಾದರೂ ಕೇಳಿದರೆ, ಅದನ್ನು ತಪ್ಪೆನ್ನುವಂತಿಲ್ಲ.

—ಗೋರಾ.

ರಾಷ್ಟ್ರವನ್ನು ವೈರಿಗಳಿಂದ ಉಳಿಸಲು,
ಯುದ್ಧೋದ್ಯಮವನ್ನು ಪ್ರೋತ್ಸಾಹಿಸಲು,
ಕ್ರಮಬದ್ಧವಾಗಿ ಉಳಿಸೋಣ;
ಕಡ್ಡಾಯವಾಗಿ ಉಳಿಸೋಣ.

ooo ooo ooo

ತುಂಬು ದುಡಿಮೆಯಿಂದ
ತುಂಬ ಸಂಪಾದಿಸೋಣ.
ಧಾರಣೆಯ ಸಮತೋಲನವನ್ನುಳಿಸಿ,
ರಾಷ್ಟ್ರದ ಭವಿಷ್ಯವನ್ನು ಬೆಳಗಿಸಿ,
ವೆಚ್ಚವನ್ನು ನಿಯಂತ್ರಿಸಿ
ಹೆಚ್ಚು ಹೆಚ್ಚು ಉಳಿಸೋಣ.

ooo ooo ooo

ಸುಭದ್ರ ಸುಸಂಘಟಿತ
ಮತ್ತು ಸುದೃಢ-ನಿರ್ಧರಿತ
ರಾಷ್ಟ್ರವಾಗಿ ನಿಡಿದೆದ್ದು
ಕಳೆದ ಗಡಿನಾಡು—ಶಾಂತಿಗಳ
ಮರಳಿ ಪಡೆಯೋಣ.

ooo ooo ooo

ಉಳಿಸೋಣ, ಉಳಿಸೋಣ—
ಆಂತರಿಕ ಆರ್ಥಿಕ ಸ್ಥಿತಿಯ
ಸುದೃಢಗೊಳಿಸಿ
ಸತತವಾಗಿ ಉಳಿಸೋಣ.

ಸಿಂಡಿಕೇಟ್ ಬ್ಯಾಂಕ್

● ಶಾಂತಿಸಮಯದಂತೆ ಸಮರಕಾಲದಲ್ಲಿಯೂ
ರಾಷ್ಟ್ರಸೇವೆಯ ಧ್ಯೇಯದಲ್ಲಿ ●

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪಾಕಿಸ್ತಾನದ ಸವತಿ ಮತ್ಸರ

(೧ನೇ ಪುಟದಿಂದ)

ಹೀಗಿದ್ದರೂ ಅದು ಭಾರತಕ್ಕೆ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸುವುದು ಬೇಡವಾಗಿದೆಯೆಂದು ಡ್ಯಾಗರ್ ಸಾರುತ್ತಿದೆ.

ಪಾಕಿಸ್ತಾನಕ್ಕೆ ವಿವೇಕ— ದೂರದೃಷ್ಟಿಗಳು ಏನೂ ಇಲ್ಲವೆಂದು ಉಘಾಯ ವಿಲ್ಲ ವೆ ಹೇಳ ಬೇಕಾಗುತ್ತದೆ. ಅದು, ಸ್ವಲ್ಪ ಆಲೋಚನೆ ಮಾಡಿದರೆ ತನ್ನ ಕೆಲಸದ ಅರಿವಾಗದಿರಲಿಕ್ಕಿಲ್ಲ. ವಸ್ತು ಸ್ಥಿತಿಯನ್ನು ಅರಿಯಸಿಟ್ಟುಕೊಂಡು ಭಾರತದ್ವೇ ತಪ್ಪೆಂದು ಅದು ಜಗತ್ತಿಗೆ ಹೇಳ ತ್ತಿದೆಯೂದರೂ ಇಂದು ಅದಕ್ಕೆ ಬೆಲೆ ಸಿಗುವಂತಿಲ್ಲ. ಭಾರತ ಪಾಕಿಸ್ತಾನಗಳೆರಡಕ್ಕೂ ಚೀನಾ ಸಮಾನ ಶತ್ರುವೆಂಬುದು ಅಕ್ಷರಶಃ ಸತ್ಯ ವಾಗಿರುವಾಗ ಅದು ಚೀನಾವೂಡನೆ ಮಿತ್ರತ್ವ ಮಾಡಿ ಭಾರತದ ಮೇಲೆ ಸೇಡು ತೀರಿಸಲಿತ್ತಿರುವುದು ನಿಜಕ್ಕೂ ಅಸಹನೀಯ ವಿಚಾರ. ಭಾರತದ ಮೇಲೆ ದ್ವೇಷ ಸಾಧಿಸಬೇಕೆಂಬ ಅದರ ದುರಾಲೋಚನೆ ಪರಾಕಾಷ್ಠೆಯನ್ನುವಿೂರಿದೆ ಬಹುಶಃ ಈಗ ಭಾರತದ ನೆಲೆ ಅಭದ್ರವಾದ.ದರಿಂದ ಅದಕ್ಕಾದ ಆನಂದ ಸಂತೋಷ. ಜಗತ್ತಿನ ಬೇರಾವ ರಾಷ್ಟ್ರಕ್ಕೂ ಆಗಲಿಕ್ಕಿಲ್ಲ. ಇಂಥಪ ಕುತ್ಸಿತ ಮನೋವೃತ್ತಿಯ ಪಾಕಿಸ್ತಾನದ ಈ ಅಸುರೀ ವರ್ತನೆ ನಿಜಕ್ಕೂ ಸಹನಾತೀತವಾಗಿದೆ.

ಕುಂದಾಪುರ ಡಿ. ಮು. ಕೋರ್ಟ್‌ನಲ್ಲಿ

S. C, 160/1961 S. E P. 562/1962

ಭಂಡಾರಿ ಗೋಪಾಲ ಶ್ಯಾನುಭಾಗ್-ವಾದಿ.

ಕೆ. ಗೋಪಾಲಕೃಷ್ಣ ಭಗವ ಕೂಡಾ —ಪ್ರತಿವಾದಿರು.

ಪ್ರತಿವಾದಿ ಕೆ. ಗೋಪಾಲಕೃಷ್ಣ ಭಗವ ರಾಗವೇಂದ್ರ ಭಗವರ ಮಗ ಕುಂದಾಪುರ ಕಸಬಾ —ಇವರಿಗೆ

ನೀವ್ಯಂಡ ದಾನೆಯಲ್ಲಿ ಜಪ್ತಾದ ಸೊತ್ತುಗಳನ್ನು ದಿಲಿವರಿ ಕೊಡಿಸಬೇಕಾಗಿ ಅರ್ಜಿದಾರನು ನೀವ್ಯಂಡ ಅಮ್ಮಣ್ಣಾರಿ ದಾಕ್ಲು ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪಣೆಯಿದ್ದಲ್ಲಿ ತಾ. 21-12-62ನೇ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ನೀವ್ಯಂಡ ಕೋರ್ಟ್‌ನಲ್ಲಿ ಹಾಜ್ರು ಆಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮ ಉಜ್ರು ಸಿವ್ಯಾಯೇ ಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಮಗೆ ಈ ಮೂಲಕ ತಿಳಿಸಲಾಗುತ್ತದೆ.

K. Raghunath Shenoy
Advocate for Petitioner
Coondapoor, 10-12-1962.

Edited Printed & Published by K. H. Shetty, at the Navayuga Press, Udipi, S. India.

CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 16

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 27—12—1962 ಗುರುವಾರ

20ನೆ ಪೈಸೆ
ನಾ. ಚಂದಾ ರೂ. 6—75
ಸಂಪುಟ ೪೨ ಸಂಚಿಕೆ ೧೬

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಕಳಿಸಿರಿ

ಕುತೂಹಲ ಕೆರಳಿಸಿದ
ರಷ್ಯ - ಚೀನಾಗಳ ಸಂಬಂಧ

ಅಹಂಕಾರವು ಸದಾ ನಮ್ಮನ್ನು ವಿನಾಶನತ್ತ ಒಯ್ಯುತ್ತದೆ. ಜಗತ್ತಿನಲ್ಲಿ ತಾನೊಬ್ಬನೇ ಬಲಶಾಲಿ, ತನ್ನನ್ನು ಎದುರಿಸುವವರಾರು? ತನಗೆ ಸರಿಸಮಾನರಾದವರಾರಿದ್ದಾರೆ? ಎಂಬ ಕುತ್ಸಿತ ಮನೋವೃತ್ತಿಯಿಂದ ಜಂಭದ ಕೋಳಿಯಂತೆ ಇಂದು ಚೀನಾ ತನ್ನ ಅಸಹ್ಯ ವೃತ್ತಿಯನ್ನು ಪ್ರದರ್ಶಿಸುತ್ತಿದೆ. ಸ್ವತಃ ತನಗಿಂತ ಹಿರಿಯರಾದವರೂ ಬಲಶಾಲಿಗಳೂ ತನ್ನ ಮನೆಯಲ್ಲಿದ್ದಾರೆಂಬುದನ್ನು ಅದು ಮರೆತು ತನ್ನ ಅಹಂಕಾರದಿಂದ, ದರ್ಪದಿಂದ ಸ್ವೈರ ವೃತ್ತಿಯನ್ನು ಪ್ರಾರಂಭಿಸಿ ಜಗತ್ತನ್ನೆ ವಿನಾಶೋನ್ಮುಖವಾಗಿ ನೂಡಿ ಅದರ ನೇತೆ ಚಕ್ರಾಧಿಪತ್ಯವನ್ನು ಪೆರೆಯಿಸಲು ಗಾಳಿ ಗೋಪುರ ಕಟ್ಟಿದೆ. ತನ್ನೀ ಸುರಕಾಂಕ್ಷೆಯನ್ನು ಈಡೇರಿಸಲು ತನ್ನ ದೇಶ ಬಾಂಧವರ ಕಷ್ಟಗಳನ್ನು ಲೆಕ್ಕಿಸದೆ ಅವರನ್ನು ಹಸಿವಿನಲ್ಲಿ ಹೊರಳಾಡಿಸಿ, ನರಳಿಸಿ ಜಗತ್ತಿನ ಎಲ್ಲಾ ದೇಶಗಳ ಪ್ರಚಂಡ ವಿರೋಧ ಕಟ್ಟಿಕೊಳ್ಳುತ್ತಿರುವ ಅದರ ಈ ಅಹಂಕಾರವನ್ನು ಮುರಿಯುದಿದ್ದರೆ ಜಗತ್ತಿಗೇ ಕ್ಷೇಮವಿಲ್ಲ. ಯಾಕೆಂದರೆ ಅದು ಇಂದು ತನ್ನ ಹಿತವನ್ನು ಯಾರು ಬಯಸುತ್ತಿದ್ದರೋ ತನಗಾರು ಸಕಲ ವಿಧದಲ್ಲಿ ಸಹಾಯ ಮಾಡುತ್ತಿದ್ದರೋ, ತನ್ನನ್ನಾರು ಸನಿಹ ಬಂಧು ಎಂದು ಎತ್ತಿ ಆದರಿಸುತ್ತಿದ್ದರೋ ಅಂಥ ಆಸದೃಂಧು ರಷ್ಯಾವನ್ನೇ ಇಂದು ಪ್ರತ್ಯಕ್ಷ ಜಗತ್ತಿಗೇ ತಿಳಿಯುವಂತೆ ಟೀಕಿಸುತ್ತಿದೆ. ಅದಕ್ಕೆ ತನ್ನ ಸ್ವಾರ್ಥ ದೃಷ್ಟಿಯುಲ್ಲಿ ಯಾರೂ ಕಾಣುವುದಿಲ್ಲ. ಅದಕ್ಕೆ ಕಾಣುವುದು ಜಗತ್ತಿನ ಮೇಲೆ ತಾನೊಬ್ಬ ಮಹಾ ಸಾಮ್ರಾಜ್ಯಾಧಿಪತಿಯಾಗಬೇಕೆಂಬ ಬಯಕೆ ಮಾತ್ರ. ಇಂದು ಅದು ಭಾರತದ ಮೇಲೆ ನಗ್ನ ಆಕ್ರಮಣಮಾಡಿ ಘೋರ ಅನ್ಯಾಯ ನೂಡಿದೆ. ಇಂಥ ತನ್ನ ಬಂಧುವಿನ ತಪ್ಪನ್ನು ಸುಮ್ಮನಾಗಿ ಸಹಿಸಿಕೊಂಡಿದ್ದರೋ, ಚೀನಾಕ್ಕೆ ಮೂತ್ರ ಬುದ್ಧಿ ಬರಲಿಲ್ಲ ರಷ್ಯಾದ ಬುದ್ಧಿ ಮೂತುಗಳು ಆದರ ಅಹಂಕಾರ ಎಂಬ ಅಗ್ನಿಗೆ ಆಜ್ಯವಾಗಿ ಮತ್ತೆ ಮತ್ತೆ ಧಗ ಧಗ ಬುರಿಯಲು ಕಾರಣವಾಯಿತು. ಗಂಗಾ-ಸಿಂಧೂ ನದಿಗಳು ಒಂದೇ ಪರ್ವತದಲ್ಲಿ ಜನಿಸಿದರೂ ಒಂದು ಬಂಗಾಳಕೊಲ್ಲಿಯನ್ನು ಸೇರಿದರೆ ಇನ್ನೊಂದು ಅರಬ್ಬಿ ಸಮುದ್ರವನ್ನು ಸೇರುತ್ತದೆ. ಅಂತೆಯೇ ಕಮ್ಯುನಿಸ್ಟ್ ಎಂಬ ಒಂದೇ ತಾಯಿಯಿಂದ ಜನ್ಮ ತಳೆದರೂ ಇಂದು ಪ್ರತ್ಯಕ್ಷ ರಷ್ಯಾ—ಚೀನಾಗಳು ಗುಟ್ಟು ರಟ್ಟು ಗುಪಂತೆ. ಪರಸ್ಪರ ವೈಯಕ್ತಿಕ ದ್ವೇಷಕಟ್ಟಿಕೊಂಡು ಅದನ್ನಿಂದು ಜಗತ್ತಿಗೆ ಗೊತ್ತಾಗುವಂತೆ ಸಾಧಿಸಲು ಹವಣಿಸುತ್ತಿವೆ.

ಆಶ್ಚರ್ಯವಲ್ಲದೆ ಮತ್ತೇನು!

ಎಂಥ ಸಂದರ್ಭ ಬಂದರೂ ರಷ್ಯಾ-ಚೀನಾಗಳೊಳಗೆ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಅವುಗಳ ಧ್ಯೇಯ—ಧೋರಣೆ ಎಂದೂ ದ್ವಿಮುಖವಾಗಲಾರದು. ನಮ್ಮ ಸಂಬಂಧದ ಬಗ್ಗೆ ಎಂದೂ ಸಂಶಯ ಬರಲು ಸಾಧ್ಯವಿಲ್ಲ. ಚೀನಾ—ರಷ್ಯಗಳು ಒಟ್ಟುಗೂಡಿ ಜಗತ್ತಿಗೇ ಒಂದು ಉನ್ನತ ಸದ್ಧ ಪ್ರದರ್ಶನ ಮಾಡುವುವು" ಎಂದು ಕಳೆದ ವರ್ಷದ ಪ್ರಾರಂಭದಲ್ಲಿ ಪೇಕಿಂಗ್ ನಲ್ಲಾದ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಸಮ್ಮೇಳನದಲ್ಲಿಜ್ರಾ-ಎನ್-ಲಾಯ್‌ಶೋ ಷಿಸಿದ್ದರು. ಆದರೆ ಇಂದು! ಇಂದು ವಿಶ್ವ ಕ್ಕೇ ಈ ಎರಡು ದೇಶಗಳ ವಿರಸದಿಂದ ಒಮ್ಮಿಂದೊಮ್ಮೆಗೆ ಅಚ್ಚರಿಗೂಗಿದೆ. "ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ" ಎಂಬ ಗಾದೆಯಿದೆ. ಜಗತ್ತಿನ ಕಣ್ಣಿಗೆ ಕಾಣುವಂತೆ ಇಷ್ಟೊಂದು ಸ್ಪಷ್ಟ ವಿರೋಧವಾಗಿ ಇತ್ತ ಒಂದನ್ನೊಂದು ಟೀಕಿಸುತ್ತಿವೆಯೆನ್ನುವಾಗ ಯಾರಿಗಾದರೂ ಆಶ್ಚರ್ಯವಾಗದಿರದು! ಅದು ಕೂಡಾ ಇಂದು ಚೀನಾ ಭಾರತದ ಮೇಲೆ ನಸ್ಸೆ ಆಕ್ರಮಣ ಮಾಡಿರುವ ಈ ಸಂಧಿ ಕಾಲದಲ್ಲಿ ಅನೇಕ ದೇಶಗಳೊಳಗೆ ಇಷ್ಟೊಂದು ವಿರಸ ಬಯಲಾಗುವುದೆಂದರೆ ಆಶ್ಚರ್ಯವಲ್ಲದೆ ಮತ್ತೇನು?

ಜಗಳದ ಹಿನ್ನಲೆ

ಕಮ್ಯುನಿಸ್ಟ್‌ರಲ್ಲಿಯೂ ಹಲವಾರು ಗುಂಪುಗಳಿವೆ; ಪಂಗಡಗಳಿವೆ. ಅವುಗಳಲ್ಲಿ ಲೆನಿನ್ ವಾದಿಗಳು, ಸ್ಟಾಲಿನ್ ವಾದಿಗಳು ಎಂಬ ಎರಡು ಪ್ರಮುಖ ಪ್ರಬೇಧಗಳು ಇವೆ. ಇವೆರಡೂ ಬೌದ್ಧರ ಹೀನಯಾನ ಮತ್ತು ಮಹಾ ಯಾನ ಪಂಥಗಳಂತೆ ರಷ್ಯದಲ್ಲೇ ಎರಡರ ಉಗಮವಾದರೂ ಅದಿಂದು ಸುತ್ತಣ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಹಬ್ಬಿದೆ. ಜಗತ್ತಿನ ಪ್ರಮುಖ ಕಮ್ಯುನಿಸ್ಟ್ ರಾಷ್ಟ್ರಗಳೆಂದರೆ, ರಷ್ಯಾ, ಚೀನಾ, ಯುಗೋಸ್ಲಾವಿಯ ಮತ್ತು ಅಲ್ಬೇನಿಯಾಗಳು. ದುರದೃಷ್ಟವಶಾತ್ ಇಂದು ಒಂದು ಮತ್ತೊಂದನ್ನು ಕಡೆಗಣ್ಣಿನಿಂದಲೇ ನೋಡಿ ತಮ್ಮ 'ಸಾಮ್ರಾಜ್ಯದಾಹೆ' ಎಂಬ ಸ್ವೈರವೃತ್ತಿಗಂಟಿಕೊಂಡಿವೆ. ಸ್ಟಾಲಿನ್ ಮಹಾ ಸಾಮ್ರಾಜ್ಯಶಾಹಿ ಪುರುಷ,ಆದರೆ ಅವನ ಅನಂತರ ರಷ್ಯ ಅವನ ಘೋರಣೆ ಬಿಡಬೇಕಾಗಿ ಬಂದರೂ, ಚೀನಾ ಮಾತ್ರ ಅದಕ್ಕಂಟಿಕೊಂಡಿತು. ಚೀನಾದ ರಾಷ್ಟ್ರಪಿತರಾದ ಡಾ| ಸನ್‌ಯಾತ್ ಸೇನರು ಕಮ್ಯುನಿಸ್ಟ್ ತತ್ವವನ್ನು ಸ್ವೀಕರಿಸಿ, ರಷ್ಯಾದಿಂದ ಅಮಿತವಾದ ಸಹಾಯ ಪಡೆದು ಚೀನಾದಲ್ಲಿ ಭದ್ರ ಸರಕಾರ ಕಟ್ಟಿದರು. ಸದಾ ಚೀನ 'ಸಾಮ್ರಾಜ್ಯ ದಾಹೆ'ವನ್ನು ಟ್ಟುಕೊಂಡಿರಬಾರದೆಂದು ಸಾಯುವ ವರೆಗೆ ಸಾರಿ ಹೇಳಿದರೂ ಎಲ್ಲಾ ಕೋಣನ ಮುಂದೆ ಕಿನ್ನರಿ ಬಾರಿಸಿದಂತಾಯಿತು. ಕ್ರುಶ್ಚೇವರು ಸ್ಟಾಲಿನ್ನರನ್ನು ನಿಂದಿಸಿ ಅವರ ಶವಕ್ಕೇ ಮಹಾ ಅಪಮಾನ ಮಾಡಿದಂತೆ ಇಂದು ಚೀನಾ ಡಾ| ಸನ್‌ಯಾತ್ ಸೇನರ ತತ್ವವನ್ನು ಕಡೆಗಣಿಸಿ ಅಪಮಾನ ಮಾಡುತ್ತದೆಂದು ಕೇಳದೆ ಗತ್ಯಂತರವಿಲ್ಲ ರಷ್ಯಾ ಇಂದು ಲೆನಿನ್‌ವಾದಿ, ಮತ್ತು ಚೀನಾ ಸ್ಟಾಲಿನ್‌ವಾದಿಯಾಗಿದೆ. ಇದರಿಂದ ಕಳೆದ ೫ ವರ್ಷಗಳಿಂದಲೇ ಅವುಗಳೊಳಗೆ ತೀವ್ರವಾದ ಭಿನ್ನಾಭಿಪ್ರಾಯಗಳುಂಟಾಗಿವೆ. ಅವುಗಳು ಈ ವರೆಗೆ ಜಗತ್ತಿಗೆ ಒಂದಾಗಿ ತೋರುತ್ತಿರಲು ಕಾರಣವೆಂದರೆ ಅವೆರಡೂ ಕಮ್ಯುನಿಸ್ಟ್ ರಾಷ್ಟ್ರಗಳೆಂಬ ಒಂದೇ ಒಂದು ದೃಷ್ಟಿ. ಕ್ರುಶ್ಚೇವರು ರಷ್ಯಾದ ಸೂತ್ರಧಾರಿಯಾದಂದಿನಿಂದ ಚೀನಾ ರಷ್ಯಾದೊಡನೆ ಪ್ರತಿಯೊಂದು ವಿಚಾರದಲ್ಲೂ ಸ್ಪರ್ಧೆಗೆ ನಿಂತಿದೆ. ಮತ್ತು ರಷ್ಯಾ ಕ್ಕೆ ತಾನೇನೂ ಕಡಿಮೆಯಿಲ್ಲ ಎಂಬುದನ್ನೂ ಹೇಳುತ್ತಾ ಬಂದಿದೆ.

ನಾವೋರವರ ದರ್ಪ

ರಷ್ಯಾಕ್ಕಿಂತ ಚೀನಾ ಯಾವುದರಲ್ಲಿ ಕಡಿಮೆ? ನಾನು ಕ್ರುಶ್ಚೇವಂಗಿಂತ ಕಡಿಮೆಯೇ? ಎಂದು ಕೊಚ್ಚಿಕೊಂಡು ಚೀನಾವನ್ನೂ ರಷ್ಯಕ್ಕಿಂತಲೂ ಪ್ರಬಲಗೊಳಿಸಲು ಮುಂದಾದರು. ಮಾವೋ. ಅದಕ್ಕಾಗಿ ಅವರ ಮೊದಲ ಕಾರ್ಯವೆಂದರೆ ಸಾಮ್ರಾಜ್ಯ ವಿಸ್ತಾರ ಮಾಡುವುದು. ಆ ಮೇಲೆ ಆರ್ಥಿಕವಾಗಿ, ವೈಜ್ಞಾನಿಕವಾಗಿ ಮುಂದುವರಿಯುವುದು. ಅವರ ಆಕಾಂಕ್ಷೆ. ಅದಕ್ಕಾಗಿ ಅವರು ಟಿಬೇಟುಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಂಡರು. ಅಲ್ಲಿ ತಮ್ಮ ಧ್ವಜವೂರಿ ಮುಂದೆ ಭಾರತವನ್ನು ಪ್ರವೇಶಿಸಿದರೆನ್ನುವಾಗ ಅವರಿಗೆ ಎರಡು ಕಡೆಗಳಿಂದಲೂ ತಡೆಯಲಾರದ ಪೆಟ್ಟು ಬಿದ್ದಿದೆ. ಭಾರತ ಇಷ್ಟೊಂದು ಪ್ರಬಲವಾಗಿ ತಮ್ಮನ್ನೆದುರಿಸುವುದೆಂದು ಅವರು ಕನಸಿನಲ್ಲೂ ಎಣಿಸಿರಲಿಲ್ಲ ಮೆತ್ತು ಕ್ರುಶ್ಚೇವರು ತಮ್ಮನ್ನು ಬಹಿರಂಗವಾಗಿ ಟೀಕಿಸುವರೆಂದು ಮತ್ತು ಸಹಾಯ ಮಾಡುವುದರಲ್ಲಿ ಔದಾಸೀನ್ಯ ತೋರಿಸೀಯೊರೆಂದು ಬಗೆಯಲಿಲ್ಲ. ಈಗ ಕಾರ್ಯ ಮಿಂಚಿ ಹೋಗಿದೆಯೆಂಬ ಅರಿವು ಅವರಿಗಾಗ ತೊಡಗಿದೆ.

ಈಗ ಏನಾಯಿತು?

ಪರಸ್ಪರ ಸಂಬಂಧ ಬಹು ಸವ.ಯದ ಹಿಂದಿನಿಂದಲೇ ಕೊಳೆಯುತ್ತ ಬಂದಿದ್ದರೂ ಇಂದದು ಇಷ್ಟೊಂದು ವಿಪನೂವಸ್ಥೆಗೆ ಬರಲು ಕಾರಣ ಅಲ್ಬೇನಿಯೂದ ಧುರೀಣರ ಕುತ್ಸಿತ ವರ್ತನೆ. ಅಲ್ಬೇನಿಯೂ ಚೀನಾದ ರಕ್ಷಣೆಯಲ್ಲಿರುವ ರಾಷ್ಟ್ರವಾಗಿದ್ದರೂ ಪ್ರಾರಂಭದಿಂದಲೂ ರಷ್ಯಾವನ್ನು ನಿಂದಿಸುತ್ತಾ ಬಂದಿದೆ. ಸ್ಟಾಲಿನ್ ವಾದಿ ರಾಷ್ಟ್ರವಾದ ಅದು ಕ್ರುಶ್ಚೇವರು ಸ್ಟಾಲಿನ್‌ರ ಕಳೇವರಕ್ಕೆ ಅವಮಾನ ಮಾಡಿದುದನ್ನು ಸಹಿಸಲಾರದೆ ಕಠೋರವಾಗಿ ಟೀಕೆ ಮಾಡಿದೆ ಇಂದು ಅದು ಪುನಃ ರಷ್ಯಾದ ನೀತಿಯನ್ನು ಬಲವಾಗಿ ಟೀಕಿಸಿ ಅದು ಜಗತ್ತಿನ ಶಾಂತಿಗೆ ಅಪಾಯಕಾರಿಯಾಗಿದೆ ಎಂದು ಟೀಕಿಸಿದಾಗ ಕ್ರುಶ್ಚೇವರು ಅದನ್ನು ಖಂಡತುಂಡವಾದ ಮಾತುಗಳಿಂದ ವಿರೋಧಿಸಿದರು. ಇದೇ ಚೀನಾ—ರಷ್ಯಗಳ ಸಂಬಂಧವನ್ನು ಕೆಡಿಸಿ ಸಾರುವಂತೆ ಮಾಡಿತು.

ಪರಸ್ಪರ ಟೀಕೆಗಳು

ತನ್ನನ್ನು ಟೀಕೆಮಾಡುವುದನ್ನು ಕ್ರುಶ್ಚೇವರು ಸಹಿಸಲಾರದೆ ಕೋಪದಿಂದ ಕೆಡಿಕಿ

(ಉಳಿದ ಪುಟ ನೋಡಿರಿ)

ಖೀರಾ
ನೀವು ತಾಳಿಕೆ—ಬಾಳಿಕೆಯನ್ನು—ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಶವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ದೊಡ್ಡ ಕಪಾಟುಗಳು, ಮೆಚ್ಚಿನ ನೇಜು ಕುರ್ಚಿಗಳು, ದ್ವಿವಿಧ ಉಪಯೋಗದ ಮಂಚ+ಸೋಫಾಗಳು, ಸಂದರ್ಭೋಚಿತ ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ನಮನೆ ಮಾತಾಗಿರುವ ಸಂಸ್ಥೆ—ಶಾಸ್ತ್ರಿ & ಕೊ, ಹಂಪನಕಟ್ಟೆ ಮಂಗಳೂರು।
KIRA

ಉರಿಯುವ ಬತ್ತಿ

ಹೋದ ಹಾದಿ ಹಿಡಿದು.....

ಮಿಣ ಮಿಣ ದೀಪ ಉರಿಯುತ್ತಿತ್ತು. ದೊಡ್ಡ ಹಾಲಿನಲ್ಲಿ ನುಂಕು ಬೆಳಕು ತಾನೇ ಹರಿದು ಕುಣಿಯುತ್ತಿತ್ತು. ಮಂಕು ಬೆಳಕಿನಲ್ಲಿ ತನ್ನ ನೆರಳನ್ನು 'ನೀಲಾ' ನೋಡಿ ಚಟ್ಟಾರನೆ ಚೀರಿ ಬೆಚ್ಚಿದಳು. ಮತ್ತೊಮ್ಮೆ ಗಹಗಹಿಸಿ ನಕ್ಕಳು; ನಗು ಕೆಲಕಾಲ ಮುಖದ ಮೇಲೆ ಕುಣಿದಾಡಿ ಕಾಣೆಯಾಯಿತು. ಹಣತೆಯ ಹತ್ತಿರ ಕೂತಳು. ಆಕೆಯ ಮನದಲ್ಲಿ ದುಗುಡ ತುಂಬಿತ್ತು. 'ಅಶ್ರುಧಾರೆ' ತಾನಾಗಿ ಬಂತು. ಅಶ್ರುಧಾರೆ ಕೆನ್ನೆ ತೋಯಿಸಿ ಹನಿಗಳು ನೆಲದಲ್ಲಿ ಬಿದ್ದುವು. ಕಣ್ಣು ಮುಚ್ಚೆದ್ದಳು. ದೂರದಿಂದ ರಾಗರಾಗ ಗಳ ಆಲಿಗಳಂತೆ ಅವಳ ಬಾಳಿನ ದೃಶ್ಯ ಗಳು ಮನದಲ್ಲಿ ತಾನಾಗಿ ಬಂದು ನಿಂದು ಹೋಗುತ್ತಿದ್ದುವು. ಬಾಳ ಹಣತೆಯಲ್ಲಿ ತಾನು ಬತ್ತಿಯಾಗಿ ಎಣ್ಣೆ ಯಜಮಾನ ನಾಗಿ, ಜ್ವಾಜ್ವಲ್ಯಮಾನವಾಗಿ ಬಾಳ ಹಣತೆ ಉರಿಯುವುದೆಂಬ ಹಂಬಲ ಕನ ಸಾಗಿತ್ತು.

ತಿನ್ನಲು-ಉಣಲು ಕಡಿಮೆಯಿರಲಿಲ್ಲ. ಆದರೆ ಅವಳ ಸಂಬಂಧ ಅವನೊಂದಿಗೆ ಕಹಿ ಕಹಿಯೂಗಿತ್ತು.

ಮಗು ಎದ್ದು ಎಷ್ಟು ಕಿರಿಚಿದರೂ, ಎದ್ದು ಹಾಲು ಹಾಕಲಿಲ್ಲ- ನೀಲಾಳ, ಮಗು ಅತ್ತ ಕೂಗು ನೆರೆಹೊರೆಯವರಿಗೂ ಕೇಳಿ, ಸುಖನಿದ್ರೆಯಲ್ಲಿ ತೊಡಗಿದ್ದ ವರನ್ನು ಮಗುವಿನ ಕೂಗು ಚಾವಟಿಯಿಂದ ಬಿಗಿದು ಎಬ್ಬಿಸಿದಂತಾಯಿತು. ನೆರೆಯವರು ಬಾಗಿಲು ತಟ್ಟಿ ಕೂಗಿದರು ಮಾತಿಲ್ಲ.....

ತಾಲೂಕು ಕಛೇರಿ ಎರಡು ಗಂಟೆ ಹೊಡೆಯಿತು. ಹೊರಹೋಗಿದ್ದ ರಮೇಶ ಬಂದು ಬಾಗಿಲು ತಟ್ಟಿ-ತಟ್ಟಿ ಸುಸ್ತಾದ. ಮಗುವಿನ ಅಳು ನಿಂತಿತ್ತು ಎಲ್ಲೂ ನಿಶ್ಯಬ್ಧ! ಶರತ್ಕಾಲದ ಚಂದಿರನ ಬೆಳಕು ಬಲು ಸೊಗಸಾಗಿತ್ತು ಎಲ್ಲೆಲ್ಲೂ ನಿಶ್ಯಬ್ಧ, ಚಳಿ, ಸುಳಿಗಾಳಿ, ಬೀಸುತ್ತಿತ್ತು. ಮನೆಯ ಕಟ್ಟೆಯ ಮೇಲೆ ಮಲಗಿ ರಮೇಶ ನಿದ್ದೆಹೋದ. ಚಳಿಯನ್ನು ಸಹಿಸಿದ್ದರೂ ಬಾಗಿಲು ಬಡಿದು ಆಚ ಕೈನೋವು ತಾಳ ಲಾರದೆ ಹೋಗಿದ್ದ.

ಬೆಳ್ಳಿ ಮೂಡಿತು, 'ರಮೇಶ, ಇನ್ನೂ ಮಲಗಿದ್ದೀ. ನೀಲಾ ಬಾಗಿಲು ತೆರೆದು, ಸಾರಿಸಿ, ಗುಡಿಸಿ ರಂಗವಲ್ಲಿ ಹಾಕಲು ಎದ್ದು, ರಮೇಶ ಹೊರಗೆ ಮಲಗಿದ್ದನ್ನು ಕಂಡು ಆಂಜಿಕೆಯಿಂದ, ರಮೇಶನನ್ನು ದೈನ್ಯದಿಂದ ಒಳಗೆ ಕರೆದಳು. ರಮೇಶ ನೀಲಾಳ ಮೊತನ್ನು ಲಕ್ಷಿಸಲಿಲ್ಲ. ಬೆಳಗಾದ ಮೇಲೆ ಮೂರ್ತಿಯನ್ನು ಕಾಣಲು ಹೊರಟೇ ಹೋದ. ನೀಲಾ ತಂದ ಕಾಫಿ ಬೇಡವಾಯಿತು. ಅವಳ ಕೂಡೆ ಮೊತ ನಾಡಲು ಅವನಿಗೆ ಏನೋ ಒಂದು ಬಗೆಯ ಆಕ್ರೋಶವಿತ್ತು. 'ಮಗು 'ದಿನೇಶ' ನ ಕೈಲಿ ಆಪ್ಪ ಊಟಕ್ಕೆ ಬರುವುದಿಲ್ಲ ಸಂಜೆ ಬರುತ್ತದಾಗಿ ಹೇಳಿ, ನೀಲಾಳಿಗೆ ಮುಖವ ನ್ನು ತೋರದೇ ಹೊರಟೇಹೋದ....

ಕಾಫಿಯನ್ನು ಕೈಲಿ ಹಿಡಿದು ಬಾಗಿಲ ಲ್ಲೆ ರಮೇಶ ಕಣ್ಮರೆಯಾಗುವ ತನಕ ತನ್ನ ದೃಷ್ಟಿ ಬೀರಿದಳು, ನೀಲಾ. ಆದರೆ ಮುಂದೆ...ಅವ....ಕಾಣಲಿಲ್ಲ.

ದೊಡ್ಡ ಮನೆ ಜೆನ್ನ ಬಂದು 'ಅಮ್ಮಾ ವ್ರೆ ಜಮೀನುದಾರ್ರು, ಸಿರಿಗಪ್ಪೆಗೆ ಹೋಗವ್ರೆ, ಬರೋದು ನಾಲ್ಕು ದಿನವಾದರೂ ಆಗ ಬಹುದು. ಅಂತ ಹೇಳು ಎಂದು ತಿಳಿಸಿದ್ರು!" ಎಂದ.

"ಸರಿಯಪ್ಪ ಜಮೀನ್‌ದಾರ್ರಿಗೆ, ನಿನಗೆ ಬೇರೆ ಕೆಲಸವೇನೂ ಇಲ್ಲವೋ', ಎಂದು ಕೋಪದಿಂದ ನುಡಿದಾಗ ಚೆನ್ನನ ಮುಖಮುರಿದಂತಾಗಿ ಮರುಮಾತಾಡದೆ ಹೊರಟೇ ಹೋದ. ಮಧ್ಯಾಹ್ನವಾಗಿತ್ತು ಮಗು ದಿನೇಶ ಮಲಗಿದ್ದ. ನೀಲಾಳ ಮನ ಜಂಜಾಟಕ್ಕೆ ಸಿಲುಕಿತ್ತು. ಮನದಲ್ಲಿ ನಾನಾ ಪ್ರಶ್ನೆಗಳು ಹುಟ್ಟಿದವು. ಕಡಲ ತೆರೆಯಂತೆ ಮನದಲ್ಲೇ ಆ ಅಗ್ನಿ ಹೊತ್ತಿತ್ತು ತಸ್ಸಪ್ಪಕ್ಕೆ ತಾನು ... .

''ನಾನು ಸುಂದರವಾಗಿಲ್ಲವೆ" ?

"ನನಗಿಂತ ಯಾರು ಸುಂದರಿಯರೇ ಇಲ್ಲವೆಂದು ಊರಿಗೆ ಊರೇ, ನುಡಿಯುತ್ತಿತ್ತು. ನನಗಿಂತ ಸುಂದರವಾಗಿಲ್ಲವೆಂದು ಎಷ್ಟು ಜನರನ್ನು ತೆಗಳಿದ್ದೆ." ಎಷ್ಟು ಸಿರಿ ಗುಂಡುಗಳನ್ನೆ ಆ ಲ್ಲಗೆ ಳೆದು ತಿರಸ್ಕರಿಸಿದ್ದೆ."

"ನಾನು ಸುಂದರಿಯೆ ?"

"ಪಂಡಿತವಾಗಿಯೂ, ಕಲಿಯುಗದ ರತಿ ರಾಣಿ ನಾನೇ ? ಸುಮ ನನಗಿಂತ ಸುಂದರವಾಗಿದ್ದಾಳೆಯೇ?

ಪಂಡಿತ ವಾಗಿಯೂ ಇಲ್ಲ, ಇಲ್ಲ,ನಾ ವಿರಾರು ಬಾರಿ ಹೇಳುತ್ತೇನೆ. ನನ್ನಷ್ಟು ಸಿರಿವಂತರ ಮಗಳೇ ಇಲ್ಲ ?

"ವಜ್ರದೋಲೆ ದಾನ ಮಾಡಿದ ನಮ್ಮ ಪ್ಪ ನಿಗಿಂತ ಸಿರಿವಂತರೇ

"ಆದರೆ, ರಮೇಶ ಅಂದು ತಿಂಗಳ ಬೆಳಕಿನಲ್ಲಿ ತೋಟದ ಹತ್ತಿರ, ಆದೇ ಮಾವು ಹೂ ಬಿಟ್ಟು ಕೋಗಿಲೆ ಹಾಡುತ್ತಿದ್ದಾಗ, ಸುಮನೊಂದಿಗೆ ನಕ್ಕು ನಲಿಯುತ್ತಿದ್ದು, ಮನೆಯ ರತಿಯನ್ನು ಕನಸ್ಕಿಂತ ಕಡೆಯೂ ಗಿ ಕಂಡಿದ್ದು ಯಾವ ಧರ್ಮ" ಎಂದು ಬಿಕ್ಕಿ ಬಿಕ್ಕಿ ಅತ್ತಳು. ಹಾಗೆ ಗೋಡೆಗೆ ಒರಗಿ ಕೂತಳು.

"ಅಬ್ಬಾ ಇದೇನಿದು ದೆವ್ವ, ದೆವ್ವ" ಎಂದು ಕಿರುಚಿದಳು.

"ಇದು ಸುಮನ ತಾಯಿಯಾಗಿರಬಹುದು?"

"ಹೌದು ಸಿಡುಬಿನ ಕಲೆ, ಮುಖವಂತೂ ಅವಳ ಮುಖದಂತೇ ಕಾಣುತ್ತೆ."

"ಆದರೆ ಇವಳೇಕೆ ದೆವ್ವವಾದಳು."

"ಸುಮನ ತಾಯಿ 'ಸರಸು' ಪಿಶಾಚಿಯಾಗಿದ್ದಾಳೆ.

"ದೆವ್ವ, ದೆವ್ವ, ದೆವ್ವಾ!" ಎಂದು ಮತ್ತೊಮ್ಮೆ ಕಿರುಚಿದಳು.

"ಅಂದು ಅವಳವಾಸ್ಯೆಯ ರಾತ್ರಿ ನೋಹಿನಿಯೊಂದರ ಕೈಲಿ ಸಿಕ್ಕಿ ಹುಚ್ಚು ಹಿಡಿದು ಬಾವಿ ಪಾಲಾದಳಂತೆ."

"ಅಯ್ಯೋ ಅವರಿರುವ ಮನೆ ದೆವ್ವದ್ದಾ?"

"ಬಂತಲ್ಲಾ ದೆವ್ವ ದೆವ್ವಾ"

"ಹತ್ತಿರವೇ ಬಂತು."

"ಅಯ್ಯೋ ದಿನೇಶ ಎಲ್ಲಿದ್ದಿಯೋ?"

"ದೆವ್ವ ಬಂತಲ್ಲೋ!"

"ಇಲ್ಲ ತಾಯಿ, ನಿಮ್ಮ 'ಸುಮ'ಲೋಕ ಸುಂದರಿ".

"ಈ ಭೂಮಿ ತಾಯಿ ಹಿಡಿದು ಹೀತ್ತೇನೆ- ನಿಮ್ಮ ಸುಮ ಸುಂದರಿ"ಎಂದಳು ಮತ್ತೊಮ್ಮೆ!

"ದೂರ ಹೋಗು ದೆವ್ವ ದೆವ್ವಾ"

"ಹೋಗುವುದಿಲ್ಲವೇ, ಹೋಗಲಾರಿಯಾ"?

"ಅಯ್ಯೋ ನನ್ನ ಮಗುವನೆತ್ತಿಕೊಂಡಿತು."!

"ಯಾರು ಗತಿಯಿಲ್ಲವೇ? ಬನ್ನಿ, ಬನ್ನಿ ತಾಯಿ, ದೆವ್ವ"

"ಅಯ್ಯೋ ನನ್ನ ಚಿನ್ನನನ್ನು ಕರೆದೊಯ್ಯುತ್ತೆ, ಇರುವ ಗಂಡ ಬಾಳ ದೀಪದ ಎಣ್ಣೆಯಂತೆ"

"ಅಹಾ, ಅಹಾ, ಎಣ್ಣೆಯಂತೆ, ನಾನು ಬತ್ತಿಯಂತೆ"

"ಎಂಡು ಸೇರಿದ ಬೆಳಕು ಪರಂಗೆ ಮಾಯು, ಮುಂಕು"

"ಬಾಳು ಹಾಳ್ಚೇನೆ!"

"ಅಯ್ಯೋ ಅದು ವಿಷ—ವಿಷ"

"ಪಂಡಿತವಾಗಿಯೂ ಕಾಕೋಟಕ ವಿಷ?"

"ದೆವ್ವ ಗೂರ ಸರಿಯಿತಾ"

"ಅಂತೂ ದಿನೇಶ ದೆವ್ವಕ್ಕೆ ತುತ್ತಾದ" ಎಂದು ಕಿಟಾರನೆ ಕರುಚಿದಳು.

"ದಿನೇಶ, ದಿನೇಶ ಎನ್ನ ಮುದ್ದು"

"ಏ ಸುಮ ನೀನು ಮೋಸಗಾತಿ"

"ನನ್ನ ರಮೇಶ ಚೆಲುವಾಗಿಲ್ಲವೆ"

"ಅಯ್ಯೋ ಹಾಗೆಂದಕ್ಕೆ ದೆವ್ವ ಬಂತಲ್ಲಪ್ಪ",

"ಅಯ್ಯೋ ಬಂತೂ, ಇನ್ನು ನನಗೆ ಈ ಮನೆಯಲ್ಲಿ ಜಾಗವಲ್ಲಿ?",

"ಸುಮ ಈ ಮನೆಗೆ ಯಜಮಾನತಿನಿ ಬಾ",

"ಸುಮನೇ ಯಜಮಾನತಿ,

"ದೆವ್ವ ದೂರ ಸಾಗಲಿಲ್ಲ. ಸುಮನೂ ಬರುತ್ತಿದ್ದಾಳೆ,

"ಕೂಗಿದರೂ ಯಾರೂ ಬರುತ್ತಿಲ್ಲ ನಲ್ಲ,

"ದೊಡ್ಡ ತೊಟ್ಟಿಲ ಕಡಿದು ಮಗು ವನ್ನು ತೊಟ್ಟಿಲ ಸಹಿತ ಎತ್ತಿಕೊಂಡು ಓಯ್ತಿತು ಅಬ್ಬಾ",

"ನೀನು ನನ್ನ ತಿಂದರೂ ಸರಿಯೇ ನಾನು—ನಾನೇ ನೀಲಾ ಸುಂದರಿ, ಲೋಕದಲ್ಲೆ ಸುಂದರಿ, "ನೀಲಾ ರತಿ", "ರಮೇಶ ಕಾಮ", ಎಂದು ಅಬ್ಬರಿಸಿದಳು.

"ಹೌದೇ, ಹೌದೇ ಸರಸು,

"ಅಮೃತದಂತಾ ಜೀವನದಲ್ಲಿ ವಿಷವಿಟ್ಟವರು ತಾಯಿ-ಮಕ್ಕಳು ನೀನೇ"

"ಏ ಪಿಶಾಚಿ ಕೇಳಿತಾ! ನೀನೆ, ನೀನೇ!",

"ನಮ್ಮ ಬಾಳ ನೀಲ ಆಗಸಕ್ಕೆ ಮುಸುಕೋಡಿ ಬಳಿದು ನನ್ನ ರಮೇಶನ ಹೃದಯ ಕಾದಿಯಲು ಪ್ರಯತ್ನ ಮಾಡುತ್ತಿರುವವರು ನೀವಲ್ಲದೆ ಇನ್ನಾರು?"

"ಏನು ಹಾಗಂದಕ್ಕೆ ಪಂಜು ಹಿಡಿದು ಮನೆ ಹೊತ್ತಿಸಲು ಬರುತ್ತಿರುವೆಯೂ ಪಿಶಾಚಿ"

"ಅಯ್ಯೋ ಮನೆ ಹೊತ್ತಿಸುತ್ತೆ ಪಿಶಾಚಿ"

"ನಾನು ಇನ್ನು ಈ ಮನೆಯಲ್ಲಿರಲು ಸಾಧ್ಯನೇ ಇಲ್ಲ. ನನ್ನ ಮುದ್ದು ಅವನೊಂ

(೧೧ನೇ ಪುಟ ನೋಡಿರಿ)



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ಶೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶಿಷ್ಟಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಡಿ.ಡಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ಏನಾರ ಹೋಸಾಯಗಳಿಂದ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

ಗೋವೆಯ ಜಾನಪದ ಕಥೆ

ಕೇರಾ ಮೊರೆನೋ ತುಮಿಪಾತಲ್ ನಾಚರೇ

ರಾತ್ರಿಯ ಊಟ ಇನ್ನೂ ಸಿದ್ಧವಾಗಿರಲಿಲ್ಲ. ಅದನ್ನೇ ಎದುರು ನೋಡುತ್ತಿದ್ದ ಪುಟ್ಟ ಆವೂ ನೇರ ತನ್ನ ಅಜ್ಜಿ ಇದ್ದಲ್ಲಿಗೆ ಬಂದಳು ಆಕೆಗೆ ತಾಯಿಗಿಂತಲೂ ಅಜ್ಜಿಯೇ ಹೆಚ್ಚು ಬೇಕಾದವಳಾಗಿದ್ದಳು ಅಜ್ಜಿ ಅಂದರೆ ಆಕೆಗೆ ಅದೊಂದುಅತ್ಯನೂಲ್ಯಅಸ್ತಿತ್ವೇ ಆಗಿದ್ದಳು. ಆಕೆಯ ವಯಸ್ಸಾದರೋ ಕೇವಲ ನಾಲ್ಕು ವರ್ಷ ಅದಕ್ಕೆ ತಕ್ಕಂತೆ ಆಕೆ ಗುಂಡು ಗುಂಡಾಗಿದ್ದು ನೋಡಲು ಆಕರ್ಷಕವಾಗಿದ್ದಳು. ಆಕೆ ಅಡುಗೆ ಕೋಣೆಗೆ ಓಡಿ ಬಂದಳು. ಜೋರಾಗಿ ನೆಲಕ್ಕೆ ಒದೆಯುತ್ತ, ಮುಖ ಉಬ್ಬಿಸಿಕೊಂಡು ತಲೆಯನ್ನು ಅಜ್ಜಿಯ ತೊಡೆಗಳ ನಡುವೆ ಇಟ್ಟು ಮಲಗಿ ಕೂಂಡಳು. "ನಿನ್ನ ರಾತ್ರಿಯ ಅಡುಗೆಗಾಗಿ ನಾನು ಕಾದು ಕುಳಿತುಕೊಳ್ಳುವದಿಲ್ಲ. ಹೀಗೆ, ಈಗಲೇ, ಇಲ್ಲೇ ನಾನು ನಿದ್ದೆ ಹೋಗುತ್ತೇನೆ..."

ದೈನಂದಿನ ತನ್ನ ಸಂತೈಸುವ ಮಾತ್ಯಗಳೀಗ ಪ್ರಯೋಜನಕ್ಕೆ ಬರಲಾರವೆಂಬುದನ್ನು ಅಜ್ಜಿಯು ಅರಿತುಕೊಂಡಳು ಆಕೆ ಆವೂಗೆ ಏನೂ ಹೇಳದೆ ಅವಳಪ್ಪಕ್ಕೆನೇ ಕೇರಾ ಮೊರೆನೋ ತುಮಿ ಪಾತಲ್ ನಾಚರೇ, ಕೇರಾ ಮೊರೆ ನೋ. ರಾಗ ಎಳೆಯಲಾರಂಭಿಸಿದಳು.

ಒಡನೆ ಅಡುಗೆ ಕೋಣೆಯಲ್ಲಿ ಒಂದೇ ಸವನೆ ಹೆಜ್ಜೆಗಳ ಗಡಬಡ ಸಪ್ಪಳ ಕೇಳಿ ಬರಲಾರಂಭಿಸಿತು ಹೊರಗಡೆ ಅಡುತ್ತಿದ್ದ ಮಕ್ಕಳೆಲ್ಲರೂ ಅಡುಗೆ ಕೋಣೆಯುತ್ತ ಧಾವಿಸಿ ಬಂದರು ಅವರೆಲ್ಲರೂ ಅಜ್ಜಿಯನ್ನು ಕುತ್ತುಗಟ್ಟಿ ಅಜ್ಜಿ–ಅಜ್ಜೀ, ಅಪೇ ಹಾಡನ್ನು ಪೂರ್ತಿ ಹಾಡಿ, ಅದರ ಕಥೆಯನ್ನು ಹೇಳು" ಎಂದು ಬಡಬಡಿಸಹಟ ಹಿಡಿದರು. ಆವೂ ಕೂಡಾ ಮಡಿಲಿನಿಂದ ನೆಗೆದು ಬಂದು ಗುಂಪಿನೊಂದಿಗೆ ಒಂದಾದಳು. ಆಕೆಯ ನಿದ್ದೆ ಹಾರಿ ಹೋಯಿತು ಅಜ್ಜಿಯು ಆಂದು ಕೂಡಾ ಎಂದಿನಂತೆ ಆರಂಭಿದಲ್ಲಿ ಕಥೆ ಕೇಳಲು ನಿರಾಕರಿಸಿದಳು. ಅವರೆಲ್ಲರೂ ಹಟ ಹಿಡಿದು ಒಕ್ಕೊರಲಿನಿಂದ ಕೇಳಿಕೊಳ್ಳಲಾರಂಭಿಸಿದ ಗ, ನೆಗೆಯ ಕಟ್ಟೆಯನ್ನೊಡೆದು ಕಥೆ ಹೇಳಲು ಆರಂಭಿಸಿದಳು. ಆ ಕಥೆಯನ್ನು ಅವರು ಅನೇಕ ಸಲ ಅವಳ ಬಾಯಿಯಿಂದ ಬಂದಿರುವದನ್ನು ಆಲಿಸಿದ್ದರೂ ಅಂದದಕ್ಕೆ ವಿಶೇಷ ರುಚಿ ಇತ್ತು.

ಒಂದೊನ್ಮೆ ಒಂದು ಹುಲಿ ಇತ್ತು. ಅದಕ್ಕೆ ಬಹಳ ವಯಸ್ಸಾಗಿತ್ತು ಅದಕ್ಕೆ ಓಡಿ, ನೆಗೆದು ಆಹಾರ ಪಡೆಯಲೂ ಆಗುತ್ತಿರಲಿಲ್ಲ ಹಾಗಾಗಿ ಅದು ಬಹಳ ಕ್ಷೀಣವೂ ಆಗಿತ್ತು. ಒಂದು ದಿನ ಅದಕ್ಕೆ ಆತೀವ ಕಸಿವಿಸಿಯಾಗಿತ್ತು ಆಗಲೇ ಅಲ್ಲೊಂದು ನರಿ ಅದರ ಕಣ್ಣಿಗೆ ಬಿತ್ತು ಅದರ ನೀಲಗೆಯಲ್ಲಿ ನೀರೂರಿತು ಆದರೆ ನರಿಯು ಜಾಣ್ಮೆಯ ವಿಷಯದಲ್ಲಿ ಹುಲಿಗಿಂತ ಗೂತ್ತು. ಆದುದರಿಂದ ಅದು ನರಿಯನ್ನು ಕರೆದು "ಬಾರೋ ನರಿಯಣ್ಣ! ನಿನ್ನನ್ನಿದೀಗ ನೋಡಲು ನಾನು ಬಹಳ ಪುಣ್ಯವಂತನಾಗಿರಬೇಕು. ನಾನಿದೀಗ ವಾರಣಾಸಿಗೆ ತೀರ್ಥ ಯಾತ್ರೆ ಗಂದು ಹೊರಟಿರುವೆನು. ಈ ಕಾಡಿನಲ್ಲಿ ನೀನೊಬ್ಬನೇ ನನ್ನೊಂದಿಗೆ ತೀರ್ಥಯಾತ್ರೆಗೆ ತಕ್ಕಲು ಇಷ್ಟ ಪಡುವವನು, ನನ್ನೊಂದಿಗೆ ಬಾ ಇದು ಮಂಗಲಕರ ಮುಹೂರ್ತವಾಗಿದೆ. ಈ ಸಂಯೋಗವನ್ನು ನಾವು ಸ್ವರ್ಗ ಕಳೆದುಕೊಳ್ಳಬಾರದು" ಎಂದು ಹೇಳಿತು.

ಈ ಆಡಿಯ ಅರಸನೊಂದಿಗೆ ಕ್ಷೇತ್ರ ಯಾತ್ರೆಗೆ ಹೊರಡಲು ನನು ಭಾಗ್ಯಶಾಲಿಯೇ ಸರಿ! ಆದರೆ, ಸ್ವಾಮಿ, ನಾನೊಬ್ಬನೇ ಈ ಮಹಾ ಪ್ರಯೋಜನದ ಸದುಪಯೋಗವನ್ನು ಪಡೆದುಕೊಳ್ಳಲೇನು? ಈ ಸುಮಂಗಲ ಸಾಹಸದಲ್ಲಿ ಬಾಗವಹಿಸಿಕೊಳ್ಳಲು ನನ್ನ ನೇಹಿಗರನ್ನು ನಾನಿದೀಗ ಒಡನೆ ಬೇಗನೆ ಹೋಗಿ ಕರೆದು ಕೊಂಡು ಬರುತ್ತೇನೆ!" ನರಿ ನುಡಿಯಿತು. ಅಲ್ಲಿಂದ ಅವಸರ ಅವಸರವಾಗಿ ಹೋಗಿ ನರಿಯು ಒಂದೊಂದು ಗಿಳಿ, ನವಿಲು, ಆಮೆ ಹಾಗೂ ಕಪ್ಪು ಮುಖದ ಮಂಗನೊಂದಿಗೆ ಹಿಂತಿರುಗಿತು. ಯಾತ್ರಿಕರ ತಂಡವನ್ನು ಕಂಡ ವ್ಯಾಘ್ರವು ಅವರನ್ನು ಆನಂದದಿಂದ ಚೆನ್ನಾಗಿ ಹೊಗಳಿತು. ಸಮರ್ಥ ಕಳೆದು ಹೋಗುವ ಮುಂಚೆಯೇ ಹೊರಡಬೇಕೆಂದು ಅವರೆಲ್ಲರೂ ಒಡನೆ ಪ್ರಯಾಣ ಹೊರಟರು. ಉಪಾಯಗಾರ ನರಿ ಎಲ್ಲರಿಗಿಂತಲೂ ಹಿಂದೆ ನಿಂತಿತು. ಹೀಗೆ ಯಾತ್ರಿಕರು ಸ್ವಲ್ಪ ದೂರ ಹೋಗಿದ್ದರು. ಆಗ ಆ ಹುಸಿದ ಹುಲಿಯು "ನಾವೀಗೆಲ್ಲರೂ ಆಸೂಯಗೊಂಡಿರುವೆವು ಸಹೋದರರೇ, ಈ ವಿಶಾಲ ವೃಕ್ಷದ ಡಿಯಲ್ಲಿ ವಿಶ್ರಮಿಸಿಕೊಂಡು, ಕೆಲ ಶ್ಲೋಕಗಳನ್ನು ಪಠಿಸುವ" ಎಂದು ಹೇಳಿತು. ಎಲ್ಲರೂ ಆ ವೃಂದದ ನೆರಳಲ್ಲಿ ತಂಗಿದರು. ಹುಲಿಗಿಂತ ಬಹಳ ದೂರದಲ್ಲಿ ಕುಳಿತುಕೊಂಡಿದ್ದ ನರಿ ಹಾಡಲಾರಂಭಿಸಿತು. ಗಿಳಿ ಹಾಗೂ ನವಿಲು ಕುಣಿಯಲಾರಂಭಿಸಿದುತ್ತ, ಆಮೆ ತಲೆ ಅಲ್ಲಾಡಿಸಲಾರಂಭಿಸಿತು. ಮಂಗವು ಕೈಚಪ್ಪಾಳೆ (ತಾಳ) ಹೊಡೆಯಲಾರಂಭಿಸಿತು. ನರಿ ಎಲ್ಲ "ಕೇರಾ ಮೊರೆನೋ ತುಮಿ ಪಾತಲ್ ನಾಚರೇ " ಭಕ್ತಿಸಂತೆ ಹಾಡಲಾರಂಭಿಸಿತು. (ಓ! ಗಿಳಿ ನವಿಲುಗಳೇ ದೂರ ದೂರ ಕರದು ಕುಣಿಯಿರಿ- ಗೆಳೆಯರೇ, ಗಿಳಿ— ನವಿಲುಗಳಿಗಿ ಹಾರಲು ಗೊತ್ತು ಮೋಸಗಾರನಂತೆ ಮುಖವನ್ನಡಗಿಸಿಕೊಳ್ಳಲು ಆಮೆಗೆ ಗೂತ್ತು. ಆದರೆ, ಅಯ್ಯೋ! ಬಡ ಕಪ್ಪು ಮುಖದವಗೆ, ರೀ..ರೀ ರೀ..!)

ಮಂತ್ರದ ಕೊನೆಯಕ್ಷರ ಮುಗಿದೊಡನೆ ಹುಲಿಯು ಕಪಿಯ ಮೇಲೆ ಹಾರಿತು. ಗಿಳಿಯೂ ನವಿಲೂ ಹಾರಿ ಹೋದವು. ತನ್ನ ಭದ್ರ ಕೋಟೆಯೊಳಗೆ ಆಮೆಯು ಮುಖವನ್ನ ಮುಚ್ಚಿಕೊಂಡಿತು ಉಪಾಯಗಾರ ನರಿಗೆ ತಾನೆಲ್ಲಿ ಆತಿ ಕೊಂಡಿರಬೇಕೆಂಬುದು ಚೆನ್ನಾಗಿ ಗೊತ್ತು. ಅಕ್ಷರಶಃ ಹಲಿಯು ತೀರ್ಥಯಾತ್ರೆ ಮುಗಿಯಿತು

ಅಜ್ಜಿ ಈ ಕಥೆಯನ್ನು ಮರಿಮಕ್ಕಳಿಗೆ ವರ್ಣಿಸಿ ಹೇಳಿದಳು. ಕಥೆ ವಾಕ್ಯಾಯವಾಡೊಡನೆ ಸಂತೋಷದಿಂದ ಹರುಷಗೊಂಡು ನಗುತ್ತ ನಲಿಯು ಭಜನೆ ಬನ್ನು ಹಾಡುತ್ತ ಅವರೆಲ್ಲರೂ ಅಲ್ಲಿಂದೆದ್ದು ಆಡಲು ಹೋದರು. ಅವರೊಂದಿಗೆ ಪುಟ್ಟ ಆವೂ ಕೂಡಾ "ಕೇರಾ ಮೊರೆನೋ ತುಮಿ ಪಾತಲ್ ನಾಚರೇ!" ಎನ್ನುತ್ತ ಹೊರಟು ಹೋದಳು. ಅಜ್ಜಿಯ ಸುಕ್ಕುಗಟ್ಟಿದ್ದ ಮುಖದಲ್ಲಿ ನಗೆಯ ಹೆಂಗುಲಾಬಿ ಅರಳಿತು

—ಶಿವಕಿಂಕರ, ಮದ್ರಾಸ್.

ಹಣ ಕೂಡಿ ಹಳ್ಳ— ಉದಾರವಾಗಿ ವಂತಿಗೆ ನೀಡಿ

ವಿನಂತಿ



"ಬ್ಯಾಂಕ್ ಅಕೌಂಟ್ ಇರುವ ಎಲ್ಲಾ ಗಿರಾಕಿಗಳೂ, ಸಂಸ್ಥೆಗಳೂ, ತಿಂಗಳಾಂತ್ಯದಲ್ಲಿ ತಮ್ಮ ಅಕೌಂಟಿನಲ್ಲಿ ಉಳಿದಿರುವ ಚಿಲ್ಲರೆ ಸಯೇ ಪೈಸೆಗಳನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ನೀಡುವಂತೆ ತಂತಮ್ಮ ಬ್ಯಾಂಕರುಗಳಿಗೆ ಅಧಿಕಾರವೀಯಬೇಕೆಂದು ನಮ್ಮ ವಿನಂತಿ.
ಈ ವಂತಿಗೆಗಳು ಅಲ್ಪವಾದರೂ ದೊಡ್ಡ ಪೊತ್ರವಂಗಬಲ್ಲುವು.
ನಮ್ಮ ಕೆಚ್ಚೆದೆಯ ಸೈನಿಕರಿಗಾಗಿ ಈ ಸೌಹಾರ್ದ ತೋರಿಸಲು ಸರ್ವರೂ ಸಿದ್ಧರೆಂದು ನಾನು ನಂಬಿದ್ದೇನೆ"

ಎಸ್. ನಿಜಲಿಂಗಪ್ಪ
ಮೈಸೂರಿನ ಮುಖ್ಯಮಂತ್ರಿ

ಇಂತಹ ವಂತಿಗೆ ಕೊಡಲು ಅಧಿಕಾರ ಪತ್ರವೀಯುವಂತೆ ಕೆನರಾ ಬ್ಯಾಂಕ್ ತನ್ನ ಎಲ್ಲಾ ಗ್ರಾಹಕರನ್ನು ವಿನಂತಿಸುತ್ತದೆ.
ಅಧಿಕಾರ ಪತ್ರಗಳು ನಮ್ಮ ಎಲ್ಲಾ ಶಾಖೆಗಳಲ್ಲಿ ದೊರೆಯುವುವು.

ಕೆನರಾ ಬ್ಯಾಂಕ್ ಲಿಮಿಟೆಡ್

ಶ (ಸ್ಥಾಪನೆ: 1906)
— ರಾಷ್ಟ್ರದ ಸೇವೆಯಲ್ಲಿ —

ಶ್ರೀ ಪಿ. ಎಸ್. ಹೆಬ್ಬಾರ (ಸಿರಿಪತಿ' ಅವರ ನವೀನ ಜನಪದ ಗೀತಸಂಕಲ

'ಕೋಕಿಲವಾಣಿ'

(ಪ್ರಿನ್ಸಿಪಾಲ್ ವಿ ಎಂ ಇನಾಂದಾರರ ಮುನ್ನುಡಿ)

ದ ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿರ್ವ ಕೆಲವೊಂದು ಹಾಡುಗಳನ್ನು ಉದ್ಧರಣೆಗಳೊಂದಿಗೆ ಕೊಡಲಾಗಿದೆ

ಬೆಲೆ. ರೂ ೧—೦೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ.

ಪಿ. ಎಸ್. ಹೆಬ್ಬಾಗ, ಎಂ.ಜಿ.ಎಂ. ಕಾಲೇಜು ಉಡುಪಿ, ಕುಂಜಿಬೆಟ್ಟು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

R. E P 80/1962
In S. C. 10/1950

ಕಮಲ ಅಮ್ಮ — ವಾದಿ — ಅರ್ಜಿದಾರಳು

ಮತ್ತು

ಸುಬ್ರಂಮಣ್ಯ ಉಡುಪ—ಶಿಷ ಉದ್ಯರ ಮಗ—ಕುಂದಾಪುರ ತಾಲೂಕು ಬೀಜಾಡಿ ಗ್ರಾಮ—P O Koteshwar— ಎದ್ರಿ

ಅರ್ಜಿದಾರಳು ಎದ್ರಿಯ ಬಾಬ್ತು ಸ್ಥಿರ ಆಸ್ತಿ ಲ್ಯಾಲಾಮಿನಗೋಸ್ಕರ ಕೂಜ್ಯ ಪಡಿಸಿದ ಇತ್ಯರ್ಥಿನ ಶರತ್ತುಗಳನ್ನು ನಿರ್ಣಯಿಸಲಿಕ್ಕೆ ತಾರೀಕು 18 1–1963ಕ್ಕೆ ಅಮ್ಲಜಾರಿ ಇಟ್ಟುಕೊಂಡಿತ್ತಂತಲೂ ಆ ದಿನ ಹಗಲು 10 ಘಂಟೆಗೆ ಎದ್ರಿಯು ಕೋರ್ಟು ಮುಂದೆ ಹಾಜ್ರಾಗಿ ಆ ಕರಿತು ಆಕ್ಷೇಪ ಇದ್ದರೆ ಜಾಹೀರು ಮಾಡಿಕೊಳ್ಳತಕ್ಕದ್ದೆಂತಲೂ— ಹಾಗೆ ಹಾಜರಿ ಆಗಲಿಕ್ಕೆ ತಪ್ಪಿದ್ದೆ ಆತನ ಪರವಾಕ್ಷೇಪವಿಲ್ಲ ಮುಂದಿನ ಲ್ಯಾಲಾಮಿಗೆ ಹುಕುಮು ಆಗುವದೆಂತಲೂ ಸಹಾ ಈ ಮೂಲ್ಕ ಎದ್ರಿಗೆ ತಿಳಿಸೋಡಾಗುತ್ತದೆ.

G Sanjiva Rao,
Vakil for Peutioner.

ತಾರೀಕು 19—12—62.

ಸೂಚನೆ

"ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ ನ.

ಸಮುದಾಯಾಭಿವೃದ್ಧಿಗೆ

ಪಂಚಾಯಿತಿ ರಾಜ್ಯ ಮತ್ತು ಸಹಕಾರ



ಅಲಕೇಶ್ವರದ ತೈಲಕ್ಷೇತ್ರದಲ್ಲಿ ಪೈಪುಗಳು ಎಣ್ಣೆಯನ್ನು ಗುಡಾಣಗಳಲ್ಲಿ ತುಂಬುತ್ತಿವೆ.

ಗ್ರಾಹಕರ ಸಹಕಾರ ಸಂಸ್ಥೆಗಳಿಗೆ ಸಂಬಂಧಪಟ್ಟ ರಾಷ್ಟ್ರೀಯ ಸಲಹಾ ಮಂಡಲಿ

ಸುಭದ್ರವಾದ ರೀತಿಯಲ್ಲಿ ಗ್ರಾಹಕರ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸುವ ಸಮಗ್ರ ಕಾರ್ಯಕ್ರಮವೊಂದನ್ನು ತ್ವರಿತವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಭಾರತ ಸರ್ಕಾರದವರು ರಾಷ್ಟ್ರೀಯ ಸಲಹಾ ಮಂಡಲಿಯೊಂದನ್ನು ರಚಿಸಿದ್ದಾರೆ.

ಈ ಮಂಡಲಿಯಲ್ಲಿ 12 ಮಂದಿ ಸದಸ್ಯರಿರುವರು. ಸಾಮುದಾಯಿಕ ಅಭಿವೃದ್ಧಿ, ಪಂಚಾಯತಿ ರಾಜ್ಯ ಮತ್ತು ಸಹಕಾರ ಶಾಖೆ ಉಪಸಾರಿತ್ರಿಗಳಾದ ಶ್ರೀ. ಎಸ್. ಡಿ. ಮಿಶ್ರಾ ಅವರು ಮಂಡಲಿಯ ಅಧ್ಯಕ್ಷರಾಗಿರುವರು.

ರಾಷ್ಟ್ರಕ್ಕೊದಗಿರುವ ಆಪತ್ತಿನ ಪರಿಸ್ಥಿತಿಯಲ್ಲಿ ಗ್ರಾಹಕರಿಗೆ ಆದರಣೆಯೂ ಮುಖ್ಯವಾಗಿ ನಗರ ಪ್ರದೇಶಗಳಲ್ಲಿರುವ ಗ್ರಾಹಕರಿಗೆ ಅಗತ್ಯ ಸರಳು ಸಾವಾಗ್ರಿಗಳನ್ನು ಯಾವ ರೀತಿಯ ಪಕ್ಷಪಾತವೂ ಇಲ್ಲದೆ ನ್ಯಾಯವಾದ ಬೆಲೆಗಳಿಗೆ ಒದಗಿಸುವುದು ಅಗತ್ಯವಾಗಿ ಪರಿಣಮಿಸಿರುವದರಿಂದ ಈ ಸಂಬಂಧದಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ರೂಪಿಸಲು ರಾಷ್ಟ್ರೀಯ ಮಂಡಲಿಯನ್ನು ರಚಿಸಲಾಗಿದೆ. ಪ್ರಮುಖ ನಗರಗಳು ಮತ್ತು ಊರುಗಳಲ್ಲಿ ಗ್ರಾಹಕರ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಈ ಗುರಿಗಳನ್ನು ಸಾಧಿಸುವ ಉದ್ದೇಶವಿದೆ. ದೇಶದಲ್ಲಿ ಸಾರ್ವಜನಿಕರಿಗಾಗಿ ಅಸಂಖ್ಯಾತ ಗ್ರಾಹಕರ ಸ್ಟೋರ್‌ಗಳನ್ನು ಸ್ಥಾಪಿಸುವ ಕಾರ್ಯಯೋಜನೆಯೊಂದಕ್ಕೆ ಭಾರತ ಸರ್ಕಾರದವರು ಮಂಜೂರಾತಿ ನೀಡಿರುವ ನಿಷಯವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಖಾಸಗಿ ಮತ್ತು ಸರ್ಕಾರಿ ಉದ್ಯಮ ಕ್ಷೇತ್ರಗಳಲ್ಲಿ ಸಣ್ಣ ಗ್ರಾಹಕರ ಸ್ಟೋರ್‌ಗಳನ್ನು ಸ್ಥಾಪಿಸುವ ಸಂಬಂಧವಾದ ಕಾರ್ಯಯೋಜನೆಗಳಿಗೂ ಮಂಜೂರಾತಿ ನೀಡಲಾಗಿದೆ.

ಪ್ರಗತಿ ಸಾಧಿಸುವ ಸಹಕಾರಿ ಸಂಘಗಳ ನ್ಯಾಷನಲ್ ಡೈರೆಕ್ಟರಿ

ಸಹಕಾರಿ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಿದ ಸಹಕಾರಿ ಸಂಸ್ಥೆಗಳ ಬಗೆಗೆ ಮಾಹಿತಿ ಪೂರೈಸುವ ನ್ಯಾಷನಲ್ ಡೈರೆಕ್ಟರಿಯೊಂದನ್ನು ಕೇಂದ್ರ ಸರ್ಕಾರದ ಸಮುದಾಯ ಅಭಿವೃದ್ಧಿ, ಪಂಚಾಯತಿ ರಾಜ್ಯ ಮತ್ತು ಸಹಕಾರ ಮಂತ್ರಿ ಶಾಖೆಯು ಸಿದ್ಧಪಡಿಸಿದೆ.

ಸಹಕಾರಿ ಸಂಸ್ಥೆಗಳ ಮೂಲಕ ಸಾಲ ನೀಡುವ ವ್ಯವಸ್ಥೆ, ಮಾರಾಟ, ಹಂಚಿಕೆ ಮತ್ತು ಚಿಲ್ಲರೆ ವ್ಯಾಪಾರ ಕ್ಷೇತ್ರಗಳಲ್ಲಿ ಕೈಗೊಂಡಿರುವ ಕೆಲಸ ಕಾರ್ಯಗಳ ಆಧಾರದ ಮೇಲೆ ಸಹಕಾರಿ ಸಂಸ್ಥೆಗಳ ಪ್ರಗತಿಯನ್ನು ನಿರ್ಧರಿಸಲಾಗುವುದು.

ಡೈರೆಕ್ಟರಿಯಲ್ಲಿ ಸ್ಥಾನ ಪಡೆಯುವ ಬಗ್ಗೆ ಸಹಕಾರಿ ಸಂಘಗಳ ನಡುವೆ ಹಿತಕರವಾದ ಸ್ಪರ್ಧೆ ನಿರ್ಮಾಣವಾಗುವಂತೆ ಮಾಡುವುದು ಡೈರೆಕ್ಟರಿಯ ಪ್ರಕಟಣೆಯ ಉದ್ದೇಶ.

ನ್ಯಾಷನಲ್ ಡೈರೆಕ್ಟರಿಯ ಪ್ರಥಮ ಮುದ್ರಣವನ್ನು 1962-63ನೇ ವರ್ಷದ ಕೊನೆಯ ವರೆಗೆ ದೊರೆತ ನಿವರಗಳ ಆಧಾರದ ಮೇಲೆ ಸಿದ್ಧಪಡಿಸಲಾಗುವುದು.

ಕೇಂದ್ರ ಸಮುದಾಯ ಅಭಿವೃದ್ಧಿ, ಪಂಚಾಯತಿ ರಾಜ್ಯ ಮತ್ತು ಸಹಕಾರ ಮಂತ್ರಿ ಶಾಖೆಯು ರಾಜ್ಯ ಸರಕಾರಗಳಿಗೆ ಪರಿಪತ್ರವೊಂದನ್ನು ಕಳುಹಿಸಿ, ಡೈರೆಕ್ಟರಿಯಲ್ಲಿ ಪ್ರಕಟಿಸಲು ಸಹಕಾರಿಸಂಘಗಳನ್ನು ಆರಿಸುವಾಗ ಕ್ಷೇಮಮಟ್ಟವನ್ನೇ ಆಧಾರವಾಗಿಟ್ಟುಕೊಂಡು ಸರಿಗಣಿಸ ಬೇಕೆಂದು ಸೂಚಿಸಲಾಗಿದೆ.

ರಕ್ಷಣಾ ನಿಧಿಗೆ ಜೇತಂತಾನ್ ಪಂಚಾಯಿತ್ ಸಮಿತಿಯ ಕೊಡುಗೆ

ರಾಷ್ಟ್ರೀಯ ರಕ್ಷಣಾ ಕಾರ್ಯ ಚಟುವಟಿಕೆಗಳಿಗೆಂದು ಜೋಧಪುರ ಜಿಲ್ಲೆಯ ಜೇತರಾನ್ ಪಂಚಾಯಿತಿ ಸಮಿತಿಯವರು ನವೆಂಬರ್ 30ರಂದು ರಾಜಸ್ಥಾನದ ಗೃಹ ಮಂತ್ರಿಗಳಾದ ಶ್ರೀ ಮಥುರಾದಾಸ್ ಪೂಥೂರ್ ಅವರಿಗೆ 8,464 ಗ್ರಾಂಗಳಷ್ಟು ಚಿನ್ನವನ್ನು ಕೊಟ್ಟಿದ್ದಾರೆ. ನೀಮಜ್ ಗ್ರಾಮದ ಬೇಸಾಯಗಾರರೇ 200 ಗ್ರಾಂಗಳಷ್ಟು ಚಿನ್ನವನ್ನು ಕೊಟ್ಟಿರುವರು.

ಚಿತ್ತೂರು ಪಡ ಜಿಲ್ಲೆಯಲ್ಲಿ ರಾಜಸ್ಥಾನದ ಮುಖ್ಯ ಮಂತ್ರಿಗಳ ರಕ್ಷಣಾ ಸೇವಾಯೋಗ ಕ್ಷೇಮ ನಿಧಿಗಾಗಿ ಇಲ್ಲಿಯವರೆಗೆ 3ಲಕ್ಷ ರೂಗಳ ಹಣವನ್ನೂ 480 ಗ್ರಾಂಗಳಷ್ಟು ಚಿನ್ನವನ್ನೂ ಸಂಗ್ರಹಿಸಲಾಗಿದೆ.

ಝುಂಝುನು ಜಿಲ್ಲೆಯ ಬಗೋಲಿ ಎಂಬ ಗ್ರಾಮದ ಅಂಧನೊಬ್ಬನು ಚಿನ್ನದ ಮೊಹರೊಂದನ್ನು ಕೊಟ್ಟಿದ್ದಾನೆ.

ಗುಜರಾತ್ ರಾಜ್ಯದ ಅಹಮದಾಬಾದ್, ಮೆಹಸಾನ ಮತ್ತು ಬನಸ್ಕಾಂತ ಜಿಲ್ಲೆಗಳಲ್ಲಿನ ಗ್ರಾಮವಾಸಿಗಳು ರಕ್ಷಣಾ ನಿಧಿಗಾಗಿ 60,000 ರೂ.ಗಳನ್ನೂ ಕೆಲವು ಚಿನ್ನದ ಉಂಗುರಗಳನ್ನೂ ಸಂಗ್ರಹಿಸಿದ್ದಾರೆ.

ವಾಥ ಗ್ರಾಮದ ಬೇಸಾಯಗಾರರು ತಾವು ಬೆಳೆಯುವ ಪ್ರತಿಯೊಂದು ಮಣ ದಷ್ಟು ಆಹಾರ ಧಾನ್ಯಗಳ ಪೈಕಿ ಒಂದು ಸೇರಿನಂತೆ ಆಹಾರಧಾನ್ಯಗಳನ್ನು ಕೊಡುವುದಾಗಿ ಆಶ್ವಾಸನೆಯಿತ್ತಿದ್ದಾರೆ.

ಮೆಹಸಾನ ಜಿಲ್ಲೆಯಲ್ಲಿ ವೀಸ್ನಗರ್ ಗ್ರಾಮದ 80 ವರ್ಷಗಳ ವೃದ್ಧೆಯೋರ್ವಳು ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿಯ ಬಳಿ ಹೋಗಿ ತನ್ನ ಇಡೀ ಜೀವಮಾನದಲ್ಲಿ ಕೂಡಿಟ್ಟಿದ್ದ 501 ರೂಗಳನ್ನು ಆ ಅಧಿಕಾರಿಗೆ ಕೊಟ್ಟಳು.

ಕಾನಿ ಓರ್ವ ವಿಧವೆ. ಈಕೆಯು ರಾಜಸ್ಥಾನದ ಗಂಗಾನಗರ ಜಿಲ್ಲೆಯ ಶ್ರೀಕರಣಪುರ ಪಂಚಾಯಿತಿಗೆ ಸೇರಿದ ನುಗ್ಗಿ ಎಂಬ ಹಳ್ಳಿಯಲ್ಲಿದ್ದಾಳೆ ಈಕೆಯು ತನ್ನ ಇಡೀ ಜೀವಮಾನದಲ್ಲಿ ಕೂಡಿಟ್ಟ 500 ರೂಗಳನ್ನೂ ರಕ್ಷಣಾ ನಿಧಿಗೆ ಕೊಟ್ಟಿದ್ದಾಳೆ. ಈಚೆಗೆ ರಾಜಸ್ಥಾನದ ಹಣಕಾಸು ಶಾಖೆಯ ಉಪ ಮಂತ್ರಿ ಶ್ರೀ ಚಂದನ್ ಮಲ್ ಬೈದ್ ಅವರು ಆ ಹಳ್ಳಿಗೆ ಭೇಟಿಯಿತ್ತಾಗ ಈ ವಿಧವೆಯು ನಿಧಿಗಾಗಿ ಹಣವನ್ನರ್ಪಿಸಿದಳು.

ಉಪ ಮಂತ್ರಿಗಳು ಶ್ರೀಕರಣಪುರ ಪಂಚಾಯಿತಿ ಸಮಿತಿಗೆ ಸೇರಿದ ಗ್ರಾಮಗಳಲ್ಲಿ ಪ್ರವಾಸ ಕೈಗೊಂಡಾಗ ಸ್ಥಳದಲ್ಲಿ ಯೇ 1,000 ರೂಗಳಷ್ಟು ಹಣವನ್ನು ಸಂಗ್ರಹಿಸಲಾಯಿತು.

ಆಂಧ್ರದಲ್ಲಿ ನೈಜಾಮಾಬಾದ್ ಜಿಲ್ಲೆಯ ಆರ್ಮೂರ್ ತಾಲೂಕಿನ ಬ್ರಾಹ್ಮಣಪಲ್ಲಿ ಗ್ರಾಮದ ನಿವಾಸಿಗಳು ರಕ್ಷಣಾ ನಿಧಿಗೆ 1131 ರೂ.ಗಳಷ್ಟು ಹಣವನ್ನು ಕೊಟ್ಟಿದ್ದಾರೆ.

ಉತ್ತರ ಪ್ರದೇಶದ ವಿಜಾಪುರದ ಅಂತರ್ಜಿಲ್ಲಾ ಪರಿಷತ್ತು ಮೂರು ತಿಂಗಳೊಳಗಾಗಿ ರಕ್ಷಣಾ ನಿಧಿಗಾಗಿ ಮೂರು ಲಕ್ಷ ರೂ.ಗಳಷ್ಟು ಹಣವನ್ನು ಸಂಗ್ರಹಿಸುವ ನಿರ್ಧಾರ ಕೈಗೊಂಡಿದೆ.

ಈ ಪರಿಷತ್ತಿಗೆ ಸೇರಿದ ರಾಜಾ ಉದಾಧ್ಯಾಯರುಗಳೂ ಇತರ ಉದ್ಯೋಗವರ್ಗದವರೂ ಒಂದು ದಿನದ ವೇತನವನ್ನು ರಕ್ಷಣಾ ನಿಧಿಗೆ ಕೊಡುವರು. ಪರಿಷತ್ತಿನ ಅಧ್ಯಕ್ಷರು ತಮ್ಮ ತಿಂಗಳ ಭತ್ಯೆಯನ್ನು ನಿಧಿಗೆ ಕೊಡುವುದಾಗಿ ತಿಳಿಸಿದ್ದಾರೆ.

ಪರಿಷತ್ತು ಆಹಾರ ಧಾನ್ಯಗಳ ರೂಪದಲ್ಲಿಸಹ ವಂತಿಗೆಗಳನ್ನೂ ಸ್ವೀಕರಿಸುವುದು.

ಒಂದೇ ಕಲ್ಲಿನಿಂದ ಎರಡು ಹಣ್ಣುಗಳು!

ರಾಷ್ಟ್ರದ ರಕ್ಷಣೆಗೂ ಜೀವನದ ಭದ್ರತೆಗೂ ಉಳಿತಾಯವು ಅತ್ಯವಶ್ಯ.

ಉಳಿತಾಯ ಮಾಡಿರಿ!

ಒಂದು ಸೇವಿಂಗ್ಸ್ ಖಾತೆ ತೆರೆಯಿರಿ

ಕೊಪ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

— ಸೃಷ್ಟಿ ನಿಯಮ —

ತಾನದಿಂ ದೋಣಿ ಮುಂದಕೆ ಸಾಗಿತು.
ತೆರೆಯಡಗಿ ತೆರಿಬಂದು ಬೀಳ್ಕೊಟ್ಟಿತು.
ಹೂ ಬಟ್ಟು ಕಾಯಾಗಿ ಹಣ್ಣಾಯಿತು.
ಫಲಗಳುದುರುತ ತಿರುಗಿ ಮರಹುಟ್ಟಿತು.
ಕಡುಕರಿಂ ಕಡಿದು, ಹೆಮ್ಮರ ಕೆಡೆಯಿತು.
ಚಿಕ್ಕಗಿಡಗಳ ಬೆಳೆಗೆ ತೆರವಾಯಿತು.
ಅಡಗಿದ್ದ ಸೆಲೆ ಪುಟಿದು ನೀರಿದ್ದಿತು
ತೊರೆಯಾಗಿ ಹೊಳೆಯಾಗಿ ಕಡಲ್ಸೇರಿತು.
ಉಗಿಯಾಗಿ ಮೇಲೆರಿ ಮಳೆಗೆರೆಯಿತು.
ಮಳೆ ನೀರು ನೆಲಸೇರಿ ಸೆಲೆಯಾಯಿತು.
ರವಿರಶ್ಮಿ ಬಾಗುತಲೆ ದಿನವಳಿಯಿತು.
ಚಣವೊರ್ವಳಿದಂತೆ ಆಯುಸ್ಕಳೆಯಿತು.
ಹರೆಯದಿ ಹೊಂಬಣ್ಣಮಿಗೆ ಮಾಸಿತು.
ಹೊಸ ಕಾಯ ವರಸಿ ಆತ್ಮವು ಜಾರಿತು.
ದೆಸೆಯಳಿಯೆ ಧನಿಕನ ಹಣ ಕರಗಿತು.
ಶ್ರಮ ಫಲಿಸಿ ಬಡವನ ಕೈಸೇರಿತು.
ಕಾಡಿನಲಿ ಬೀಡಾಗಿ ನಾಡಾಯಿತು.
ಬರಗಾಲದಲಿ ಬೀಡು ಕಾಡಾಯಿತು.
ಹಿಂದಿನಿಂ ಸೃಷ್ಟಿಯೀತೆರ ನಡೆಯಿತು.

—ಸಿರಿಪತಿ

ಶಾಲೆಗಳಿಗೆ ಬೇಕಾಗುವ
ಯೂನಿಫ್ರಂ ಕಾನ್ವಾಸ್‌ಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

ಗೇಹ ರಾಜ್ಯದಲ್ಲಿ

ಕೆಂಪು ದೇಶದಲ್ಲಿ ಕ್ರಿಸ್‌ಮಸ್

"ಅಂತೂ ಬಂದಿರಲ್ಲಾ ಸದ್ಯ. ಎಲ್ಲಿಯೂದ್ರೂ ಹೊಂಟೆಬ್ಬು ಉದ್ದಕ್ಕೆ ಹೋಗಿಯೇ ಬಿಡ್ತೀರಾಂತ ತಿಳ್ಕೊಂಡಿದ್ದೆ"

"ಇದೇನೇ ನೀನು ಹೀಗೆಲ್ಲಾ ಆಡೋದು? ಅಲ್ಲಾ ನೀನೇ ಹೇಳು, ನಾನು ಹೋಗುವುದಾದ್ರೂ ಎಲ್ಲಿಗೇಂತ?"

"ಎಲ್ಲಿಯೋ ಕೆಸ್ ಮಿಸ್ ಮಿಸ್ ಕಿಸ್ ಅಂತ ಹೇಳ್ಕೊಂಡು ಹೋದಪ್ಪು ಇಷ್ಟು ಹೊತ್ತಾದ್ರೂ ಬಾರದಿರೋದನ್ನು ಕಂಡು ಮತ್ತೇನು ತಿಳ್ಕೊಬೇಕೂಂದ್ರೆ?'

"ಕ್ರಿಸ್ ಮಸ್ ಅಂತ ಸ್ನೇಹಿತನ ಮನೆಗೆ ಹೋಗಿದ್ದೆ. ಆ ಮಾತು ಈ ಮಾತು ಆಡುತ್ತ ಕೂತುಕೊಂಡದ್ರಿಂದ ಹೊತ್ತು ಹೋದದ್ದೇ ಗೊತ್ತಾಗಿಲ್ಲ."

"ಕ್ರಿಸ್‌ಮಸ್ ಅಂದ್ರೆ ಕ್ರಿಸ್ತ ಹುಟ್ಟಿದ ದಿನಾಂತ ಆಲ್ವೆ?"

"ಹ್ಞೂಂ. ಹೌದು. ಅದೇ. ಜಷ್ಟಾ ದ್ರೂ ತಿಳ್ಕೊಂಡಿಯಲ್ಲಾ ಮತ್ತೆ?"

"ನಮಗೆಲ್ಲಾ ಕೃಷ್ಣಜಯಂತಿ ಇದ್ದ ಹಾಗೇ ಕ್ರಿಸ್ತಾನರು ಆ ಜಯಂತಿಯನ್ನು ಆಚರಿಸ್ತಾರೆ ಅಲ್ವೆ? ಅಷ್ಟೂ ತಿಳಿದು ಕೊಳ್ಳದೆ ಇರೋದಕ್ಕೇನು ನಾನೂ ಸಾಲ್ಮು ಅಕ್ಷರ ಕಲೀಲಿಲ್ವೇ!"

"ಹೌದಪ್ಪ, ಸರಿ. ನೀನೂ ಕಲ್ತವಳು, ನಮ್ಮ ದೇವಸ್ತಾನದ ಕೊಡಿವಂತನು ಕಲ್ತದ್ದು."

"ಸಾಕು ಮಾಡೀಂದ್ರೆ ನಿಮ್ಮ ತವರೂ ಹೆ. ನಮ್ಮ ಹಿಂದಿನ ಮನೆ ನೇಲ ಶಾಂತಿ ಇದಲ್ಲಾ ಅವಳ ಮನೇಲಿ ಕಳ್ದ ವರ್ಷ ಆದನ್ನು ಆಚರ್ಸಿದ್ರು. ಅಲ್ಲಿಗೆ ನಾನೂ ಹೋಗಿದ್ನಲ್ಲಾ?"

"ಓಹೋ, ಆದುದರಿಂದಲೇ ಈ ಪರಿಯ ಜ್ಞಾನೋದಯ ಉಂಟಾಯಿತ್ತಲ್ಲ? ಅಂತೂ ಕಳ್ದ ವರ್ಷದಲ್ಲಿ ನೀನು ಕ್ರಿಸ್‌ಮಸ್‌ಗೆ ಸೇರ್ಕೊಂಡೆ; ಈ ವರ್ಷ ನಾನು...ಇನ್ನು ಮುಂದಿನ ವರ್ಷ...."

"ಸಾಕೂಂದ್ರೆ ನಿಮ್ದು....ನೋಡಿ, ಕಳ್ದ ವರ್ಷವಲ್ವೆ ಆ ವಾಟೇಸು ಸಿಗೋಕ್ಕಳ್ತ ನಮ್ಮೆಶಕ್ಕೆ ಸಿಕ್ಕಿದ್ದು ..."

"ಏನಂದೆ? ವಾಟೇಸು...?"

"ಆದೇ ಆದೇ ಏನೋ ಆ ನ್ತಾ ರಲ್ಲಾ ಮೊದ್ಲು ಬೇರೆ ಯವರದ್ದಾಗಿತ್ತು... .."

"ಓ ಗೋವೆ ಗೋವೆ....."

"ಹೌದೌದು, ಗೋವೇನೇ ಕಳ್ದ ವರ್ಷ ಅದು ನಂದೇಶದೊದನೆ ನೇರ್ಕೊಂಡಿತೂಂತ ಶಾಂತಿ ಮನೆಯಲ್ಲಿ ಕ್ರಿಸ್ಮಸ್ ಹಬ್ಬ ಸಂತೋಷದಿಂದ ಆಚರಿಸಿದ್ರು. ನಾನೂ ಹೋಗಿದ್ದೆ."

"ಹಾಂಗಾದ್ರೆ ಸರಿಯಾಯ್ತಾನ್ನ."

"ಎನ್ಸರಿಯಾಯ್ತಾಂತ?"

"ಹೋದ್ವರ್ಷ ಗೋವಾ ಸಿಕ್ತು; ಈ ವರ್ಷ ನೇಫಾ ಸಿಕ್ತು. ಬರೀ ವರ್ಷ..."

"ಏನಂದ್ರಿ? ನೇಫಾ ಸಿಕ್ಕಿ ಹೋಯ್ತೆ? ಸುಳ್ಳು ಸುಳ್ಳು ಶುದ್ಧ ಸುಳ್ಳು..."

"ಆಲ್ಲ ಕಣೋ ಲತ್ಯ, ನೂರಕ್ಕೆ ನೂರು ಪೈಸೆಯಷ್ಟು ಸತ್ಯ."

"ಗೊತ್ತಾಯ್ತು ಬಿಡಿ ಆ ಪೈಸೆ ಹಿಂಸಿನ ಕಾಲದ್ದಿರಬೇಕು. ಅದಕ್ಕೆ ಇಂದು ಎಂಟಾಣೆ ನಾಲ್ಕು ಕಾಸು ಬೆಲೇನೂ ಇಲ್ಲ."

"ಅಸ್ಟೇ ನೋಡು ನಿನ್ಗೆ ಬುದ್ಧಿ ಇಲ್ಲಾನ್ನೋದು?"

"ಏನು ನನ್ನ ಸೋಲಿಬ್ಬೇಕೂಂತ ತಾನೇ ನಿಮ್ಮ ಆಟ? ನೋಡಿ, ಹಾದೋ ಅಲ್ಲಾ ಅಂತ. ಕಂಮ್ತಿ ಅಂಗ್ಡಿಗೆ ನಿಮ್ಮ ನೂರು ಪಳ್ಳೆ ಪೈಸೆಯನ್ನು ಒಯ್ದು ಆವ ನೇನು ತೆಕ್ಕೊಳ್ತಾನೆಯೆ? ಪೊನ್ನೆ ಚಿಮಿಣಿ ಎಣ್ಣೆ ತರೋದಿದ್ನೇಂತ ಹೋದೆ. ಬಾಟ್ಲೀಂತ ಹೇಳಿ ೨೧ ಪೈಸೆ ಅಂದ. ನನ್ಹತ್ತ ಮೂವತ್ತಿತ್ತ. ಮತ್ತೆ ಒಂದ್ರ ಬಟ್ಲಿಗೆ ಎರಡು ಪಳ್ಳೆ ಪೈಸೆ ಕೊಡ್ತೀನಿ; ಹೊಸ್ತು ಇಲ್ಲಾಂದೆ. ಆವ ಹೇಳ್ದ, ಆದು ನಡಿಯೋಲ್ಲ, ಮತ್ತೆ ಹೊಸ್ತಲ್ಲೇ ತಂದ್ಕೊಡೀಂತ.'

"ಅಯ್ಯಯ್ಯೋ ಪೆದ್ದೆ? ನಿಜಾ ಹೇಳ್ಬೇನೆ ನಿನ್ಗೆ, ತಲೆಯಿದ್ರೂ ಬುದ್ಧಿಯಿಲ್ಲಾಂತ. ಹಳೆ ಪೈಸೆ ಮುಕ್ಕಾಲುಗಳನ್ನು ಕಂಮ್ತಿ ಅಂಗಡಿಗೆ ಕೊಡಬಾರ್ದು. ಆವನ್ನು ತೆಕ್ಕೊಳೋ ಜನರೇ ಬೇರೆ ಇದ್ದಾರೆ'

"ಯಾರು ಅವರೂಂತ?"

"ಆದೇ ನಮ್ಮ ಕಲಾಯಿ ಬಡಾನ್ ನಾಬಿ ಇಲ್ವಾ? ಆವನ ಮುಂದೆ ಅರುವತ್ನಾಲ್ಕೂ ಬಿದಿ ಮುಕ್ಕಾಲು. ಸುರಿದ್ರೆ ಒಂದೂವರೆ ರೂಪಾಯಿ ಕೊಡ್ತಾನೆ. ಹಾಗೇ ೨೦೦ ಹಳೆ ಪೈಸೆ ಸುರಿದ್ರೂನು."

"ಓ, ಹಾಗೆನ್ನಾಬಿಡಿ. ನಾನು ಚಿಕ್ಕವಳಿರೋವಾಗ ರಾಣಿರಾಜರ ರೂಪಾಯಿ ಅಲ್ಲೀಲಿ ಪಾವಲಿಗಳಿಗೂ ಅಕ್ಕಸಾಲಿಗರು ಹೀಗೆ; ಕೊಡ್ತಿದ್ರಂತೆ "

"ನೋಡು ನಿನ್ನ ಜ್ಞಾಪಕ ಶಕ್ತಿ ಅ ಸಾಕ್ಷ್ಯ ನೋಡು, ಇಂತ ಮುಂಡಿಗೆ ಹಳೆ ಪೈಸೆ ನಡಿಯೋದಿಲ್ಲಾಂತ ಹೇಳಿದ್ದು ನೂತ್ರ...."

"ಬಿಡೀಂದ್ರೆ, ನಾನೆಲ್ಲಿ ವ್ಯಾಪಾರಕ್ಕೆ ಹೋಗ್ತೀನೆ? ಪೊನ್ನೆ ಆರ್ಜಂಟಾಗಿ ಬೇಕಾಯ್ತು. ಹೊಂಟ್ಹೋದೆ. ಇಲ್ಲವಾದ್ರೆ ....."

"ಆಲ್ವೇ ಮತ್ತೆ? ಹೇಳಿದ್ನೆಲ್ಲಾ ಮಾಡಿಕೊಡೋ ಗಂಡನ್ನು ಮನೇ ಬಾಗ್ಲಿಲಿ ಬಿದ್ಕೊಂಡಿರೋವರೆಗೆ ಆ ಚಿಂತೆ ಯಾಕೇಂತ?"

"ಅದೆಲ್ಲಾ ಹೋಗ್ಲಿ ಬಿಡಿ. ಈಗ ನೀವ ನಿಕ್ಕು ಅಂದ್ರಲ್ಲಾದು ಖರೆಯೇನು?"

"ಮತ್ತೆ ನಾನು ಹೇಳೋ ಮಾತ್ನಲ್ಲಿ ನಿನ್ಗೆ ನಂಬಕೆಯಿಲ್ವೆ?"

"ಹಾಗೇನಲ್ಲ. ಅದ್ರೂ ಅದು ಹಾದೇಂತ'

"ಅಂದ್ರೆ ನಾನು ಸುಳ್ಳು ಹೇಳ್ತಿದೇನೆಂಕ ತಾನೇ ನೀನು ಹೇಳೋದು."

"ಹಾಗನ್ನೋ ನಾಲಿಗೆಗೆ ಹುಳ ಬೀಳಲಿ. ಅಂತೂ ನಮ್ಮ ನೆಲ ನಮ್ಗೀನೆ ಸಿಕ್ಕಿತಲ್ಲ." ಅದೇ ಕ್ರಿಸ್ತಸ್‌ನ ಶುಭಸಲ."

"ನಮ್ಗೇನೇ ಸಿಕ್ಕೂತೇನೂ ನಿಗದಿಯಿಲ್ಲ. ಅಂತೂ ನಮ್ಮ ಮೇಲೆ ದಯ ತೋರ್ಸಿಯೋ ಆಥವ ಬೆದರಿಯೋ ಕೆಂಪಿನವರು ನೇಫಾ ಖಾಲಿ ಮಾಡ್ತಾ ಇದ್ದಾರಂತೆ. ಅಲ್ಲಿ ನಮ್ಮವರು ಅಧಿಕಾರ ಜನೂಯೆಸ್ತಿದ್ದಾರೆ. ಇದು ಶುಭವೇ ಅಲ್ವೆ?"

"ಎಲ್ಲಾ ಅಧಿಕಾರಕ್ಕೆ ಬಂತೂಂತ ತೋರುತ್ತೆ."

ಹಾಗೇನೂ ಇಲ್ಲ. ಸದ್ಯ ಜೊಂಡಿಲಾ ಬಂದಿದೆ. ಖಾಲಾಂಗ್ ಬರ ಬುದರಲ್ಲಿದೆ ಹಾಗೆಯೇ ಎಲ್ಲಾ ಅಂತೂ ನೇಫಾ ಬಿಟ್ಟಕೊಟ್ಟು ಲತಖುನ್ನು ಬಿಗಿಯುನ ಅಂದಾಜಿನಲ್ಲಿರೋ ಹಾಗೆ ಕಾಣ್ತಿತ್ತೆ.''

"ಅದೇಕೆ ಹಾಗೆ?"

"ಆಲ್ಲಿ ಕಾಶ್ಮೀರವೂ ಇದೆ ತಾನ್ಗೆ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಕಿನ್ನಿಸಿ ತಾನು ಲಡಖ ನುಂಗುವ ಆಲೋಚನೆ ಇದ್ದರೂ ಇರಬಹುದೆನ್ನ."

"ಛೆ ಛೆ ಅದೆಲ್ಲಾ ಹೇಗಾಗುತ್ತೆ? ಹಾಗೆಲ್ಲಾ ಆಗುವಾಗ ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳಲು ಬಳೆ ತೊಟ್ಟವರೇ ನಾವು?"

"ಬಳೆಗಳೆ ತೊಟ್ಟಿಲ್ಲ. ಬದ್ಲು ಕಾಶೀದಾರವೋ ರಿಸ್ಟ್ ವಾಚೋ ಕಟ್ಟಿಕೊಂಡಿದ್ದೆವೆ. ಮುಟ್ಟಿದ್ರೆ ಕೆಟ್ಟುಹೋದೀತು."

"ಸಾಕು ಬಿಡೀಂದ್ರೆ. ನಿಮ್ದು ಯಾವಾಗ್ಲೂ ಹೀಗೆ ಅಪಥ್ಯೆರ್ಯ. ಕಾಶ್ಮೀರವು ಭಾರತದ ಲಿಂಗಾಂತ ನೀವೇ ಮೊನ್ನೆ ಹೇಳಿದ್ರಿ. ಈವತ್ತು ಹೀಗೆ ಹೇಳ್ತೀರಿ."

"ನೋಡು ಲೋಕವೆ ಹಾಗೆ ಇಂದಿನದು ನಾಳೆಗಿಲ್ಲ. ನಿನ್ನೆಯದು ಇಂದಿಗಿಲ್ಲ. ಹಾಗಿರೋವಾಗ ಪಾಕಿಸ್ತಾನ—ಚೀನಾದವರ ಮಂಗನಾಟದ ಪರಿಣಾಮ ಹೇಗಾದೀತೂಂತ ನಾನು ಯೋಚ್ನೆ ಮಾಡ್ತಾ ಇದ್ದೇನೆ.'

'ಪರ್ವ ಇಲ್ಲ ಬಿಡಿ. ನಮ್ಮ ನೆಹ್ರೂ ಇರೋವರೆಗೆ ಏನೂ ಅಮಂಗಲ ಆಗ್ಲಿಕ್ಕಿಲ್ಲ.'

"ಆ ಮೇಲೆ?"

"ಆ ಮೇಲೇನು, ಭಾರತ ಮತೆ ಹೆಣ್ಣಿಲ್ವೆ ಮಕ್ಕಳನ್ನು? ಯಾರಾದರೊಬ್ಬ ಮುಂದೆ ಬಾರ್ತಾನೆ; ದೇಶವನ್ನು ಉಳಿಸ್ತಾನೆ.'

"ನೆಬ್ಬೆದೆ. ಪೆಟ್ಟಿದೆ ಜೆನ್ನಿ ನಿನ್ನ ಸಾಹಸಕ್ಕೆ ಬೇಕಾದ ಸರವನ್ನು ಕೇಳು.'

'ವರವನ್ನು ಕೇಳದೇನೇ ತಂದು ಕೊಟ್ಟ ದ್ದಾರಲ್ಲ ಅಪ್ಪಂಮ್ಮಂದಿರು? ಇನ್ಯಾಕೆ?'

'ಓ ಮಬೆತೆ; ಬಟ್ಟೆ. ಇರಲಿ. ಮತ್ತೇನು ಬೇಕು; ಅವನ್ನಾದ್ರೂ ಕೊಡುವ ಪ್ರಬುತ್ತ ವಂತ್ರೆನೆ.'

"ಮತ್ತೆ ಒಂಸೇ ಬಾಯ್ಗೆ ಹೇಳಿದ್ರಲ್ಲಾ ಕೇಸು ಎಂದು ಮಾತಾಡೋವಾಗ ನಾಲಿಗೆಗೆ ಲಂಗು ಲಗಾಮು ಒಂದೂ ಇಲ್ಲಾಂತ...."

"ನೋಡು, ಲಂಗು ಲಗಾಮು ಇಲ್ಲಿದೇ ಇರೋದು ನಿನ್ಗೇ ಈಗ."

"ಏರಿಯಪ್ಪ. ನೀವು ಗಂಡ್ಸರು ಎಷ್ಟ ಮಾತಾಡಿದ್ರೂ ಕಡಿಮೆ ನಾವು..."

"ಇಲ್ಲಿ ಬಿಡು ಅದು. ಏನೋ ಬೇಕು ಅಂದೆಯಲ್ಲ? ಇಕೋ, ದೇವದತ್ತನ ಮನೇ ಕ್ರಿಸ್ಮಸ್ ಕೇಕು. ಹೇಗಿದೇಂತ ರುಚಿ ನೋಡಿ; ಕೇಕೇ ಹಾಕು. ಬೂರೂ ನಿನ್ನ ಸದ್ಯ ತಡೆಯೋಲ್ಲ ಆಯಿತಲ್ಲ?"

"ತಡೆಯೋಲ್ಲ ನಿಜ. ಆದ್ರೆ ಆ ಕೆಂಪಿನವರ ದೇಶದಲ್ಲಿ ಆದಕ್ಕೂ ಅಪ್ಪಣೆಯಿಲ್ವಂತಲ್ಲ?"

"ಸರಿಸರಿ, ಅವರು ಏರಿ ಬಂದವ್ರೇ ಬಂದ್ರಲ್ಲ ಎಲಿಸ್ಬೆತ ಇಂದಿರಾ ಗಾಂಧಿಯಾಗಲು ಹೊರಟರು...."

"ಸಾಕು ಬಿಡೀಂದ್ರೆ, ಎಲ್ಲಿದೆ ಕೇಕು, ಕೊಡಿ ಇಲ್ಲಿ...."

"ಇಕೋ. ಒಬ್ಬಳೇ ತಿಂದು ಗಟ್ಟಿಬಿಗಿ ಹೇಳು ಹೇಗಿದೇಂತ."

"ಹ್ಞೂಂ, ಹೇಳದೇ ಇರ್ತೀನೆಯೇ? ಮತ್ತೆ? ಇಲ್ಲಿ ಕೊಡಿ."

—ಗೋರಾ.

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦—೮—೦

ಯಕ್ಷಗಾನ ಪರಾವತಾರದ ಆಟದ ಕ್ರಮಬದ್ಧತೆಯನ್ನು ಕಾಪಾಡುವ ಜೊತೆಗೆ ಪಾಂಡವರ ಒಡ್ಡೋಲಗದ ವೈಭವವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿದೆ. ಸಂಪೂರ್ಣವಾಗಿ ಕೊನೆಗೊಳಿಸಿದೆ.

ಭಾರತದ ಗುರುಕುಲ ೦—೬—೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

ಲತ್ತಪಗಡೆ ೦—೬—೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಾದರವನ್ನು ಬಳಸಿ ವೈಶ್ಯರಿಗೂ ಆರ್ಯಸಮ್ಮತವಾದ ಕಿನಿರಾ ವಧೆಯೆಂಬ ವೈಶ್ಯವೃತ್ತಿ ಸೇರಿದೆ.

ಭರತೇಶ ದಿಗ್ವಿಜಯ ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವ ದೊಳಗಣ ದಿಗ್ವಿಜಯ ವಿಭಾಗವನ್ನು ಸೂತ್ರ ಕಥಾವಸ್ತುಗಳನ್ನೊಳಗೊಂಡಿದೆ. ಯಕ್ಷಗಾನ ಕಲಾವಿದರಿಗೆ ವಿಶೇಷವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦—೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಪ ನವೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೨೭-೧೨-೧೯೬೨	೧೬

ಪಡುವಣದ ನೆರವು

ಸರ್ವ ಸಾಮಾನ್ಯವಾಗಿ ಸಂಪ್ರದಾಯ ವೆಂಬಂತೆ ಅಮೆರಿಕೆಯ ಅಧ್ಯಕ್ಷ ಮತ್ತು ಬ್ರಿಟನ್ನಿನ ಪ್ರಧಾನಿಯವರು ಜಾಗತಿಕ ಸ್ಥಿತಿಗತಿಗಳ ಕುರಿತು ಬಹಾಮಾದ ಲಾ ಸೂವಿನಲ್ಲಿ ಒಂದುಗೂಡಿ ಚರ್ಚಿಸಿದರು. ಅವರು ನಡೆಸಿದ ಚರ್ಚೆ ಮತ್ತು ವ್ಯಕ್ತಪಡಿಸಿದ ಅಭಿಪ್ರಾಯಗಳು ಅವರಿತ್ತ ಹೇಳಿಕೆಯಿಂದ ಸಂಪೂರ್ಣ ವ್ಯಕ್ತವಾಗುವುದಿಲ್ಲ. ಮುಖ್ಯವಾಗಿ ಇಂದು ಜಗತ್ತಿನ ಆಪ್ತ ಪ್ರಧಾನ ವಿಷಯ ಪರಿಸ್ಥಿತಿಯೆಂದರೆ ಕೆಂಪು ಚೀನಾವು ಭಾರತದ ಮೇಲೆ ಮಾಡುತ್ತಿರುವ ದ್ರೋಹಕರ ಆಕ್ರಮಣ. ಈ ಸಂಗತಿಯು ಅವರ ಕಾರ್ಯಕ್ರಮದಲ್ಲಿ ಅಗ್ರಗಣ್ಯವಾಗಿತ್ತು ಮತ್ತು ವಿಶ್ವಕ್ಕೆ ವಿಶ್ವವೇ ಈದಿನೆಯ ಪ್ರಗತಿಯನ್ನು ಕಾತರ ದೃಷ್ಟಿಯಿಂದ ನೋಡುತ್ತಿತ್ತು. ಆದರೆ, ನಾಯಕ ದ್ವಯರ ಮಾತುಕತೆ ಕೊನೆಗೊಂಡ ಬಳಿಕ ಹೊರಟ ಪ್ರಕಟಣೆಯಲ್ಲಿ 'ಪರಿಸ್ಥಿತಿಯನ್ನು ವಿವರ್ತಿಸಲಾಯಿತು' ಪಾಕಿಸ್ತಾನ—ಭಾರತಗಳ ನಡುವಿರುವ ವಿವಾದಗಳು—ಮುಖ್ಯವಾಗಿ ಕಾಶ್ಮೀರ—ಸೌಹಾರ್ದದಿಂದ ಪರಿಹಾರಗೊಳ್ಳಲಿ ಎಂದು ಹಾರೈಸ್ಲಾಯಿತು, ಎಂದು ಒಗಟು ನುಡಿದಂತೆ ಉಲ್ಲೇಖಿಸಿರುವುದರಿಂದ ತುಸು ವಿವಂಚನಾ ಭಾವ ಹುಟ್ಟಿದ್ದರೂ ತಪ್ಪಲ್ಲ.

ಇಂದು ಭಾರತವನ್ನು ಎತ್ತಿ ಹಿಡಿಯಲು ಅದು ತನ್ನ ನೆಲವನ್ನು ಆಕ್ರಮಣ ಮುಕ್ತ ಮಾಡಲು ಪೇಲಿನ ಮಹಾ ರಾಷ್ಟ್ರಗಳಿರಡೂ ನೆರವಿತ್ತಿವೆ. ಇರ್ದೇಶಗಳ ತಜ್ಞ ಪ್ರತಿನಿಧಿಗಳು ಇಲ್ಲಿ ಬಂದು ಪರಿಸ್ಥಿತಿಯನ್ನು ಕೂಲಂಕಷವಾಗಿ ಅಭ್ಯಸಿಸಿದ ಬಳಿಕವೇ ಇಂತಹ ಸಹಾಯವು ವಿಪುಲವಾಗಿ ದೊರೆಯುವಂತಾಯಿತೆಂಬುದನ್ನೂ ಇದರಿಂದ ಕಮ್ಯುನಿಸ್ಟರನ್ನು ಎದುರಿಸುವುದು ಭಾರತಕ್ಕೆ ಸಾಧ್ಯವೆಂಬಂತಾಯಿತೆಂಬುದನ್ನೂ ಮರೆಯುವಂತಿಲ್ಲ. ಇದುವರೆಗೆ ನಮಗೆ ನೆರವೀಯುತ್ತಿರುವ ಈ ಎರಡೂ ರಾಷ್ಟ್ರಗಳಿಗೆ ನಾವು ಅದೆಷ್ಟು ಋಣಿಯಾಗಿದ್ದರೂ ಸಾಲದು. ಕೆಂಪು ಚೀನಾವು ಹಿಮಾಲಯದ ತುದಿ ಗೋಡನ್ನು ಹಾರಿ ಭಾರತದ ಭೂಮಿ-ನೇಪಾ ಮತ್ತು ಲಡಖಗಳನ್ನು ಧಾಳಿಯಿಟ್ಟು ಕೊಳ್ಳೆಹೊಡೆಯುವ ಹಗಲು ದರೋಡೆಯನ್ನು ನಡೆಸಿದ್ದು ಜಗಜ್ಜಾಹೀರ. ಇಂದು ಅದು ಎಕಪಕ್ಷೀಯವಾಗಿ ನೇಫಾದಲ್ಲಿ ಸಮರ ವಿರಾಮವನ್ನು ಘೋಷಿಸಿ ಹಿಂದೆ ಸರಿಯುತ್ತಿರುವಂತೆ ತೋರಿಸುತ್ತಿರುವುದಾದರೂ ಲಡಾಖದ ಬಳಿ ಬಾರೀ ಲಡಾಯಿಯ ಸರ್ವ ಸಿದ್ಧತೆ ಮಾಡುತ್ತಿದೆಯೆಂಬುದೂ ಅಷ್ಟೇ ಸತ್ಯ. ಹಾಗಿರುವಾಗ ಭಾರತವು ವಿರಾಮ ಶೈಪ್ತಿಯನ್ನು ಪಡೆಯುವಂತಿಲ್ಲ; ಅದು ತನ್ನ ಸೈನಿಕ ಬಲವನ್ನು ಮತ್ತೆಷ್ಟು ಹೆಚ್ಚಿಸ ಬೇಕು. ಇದಕ್ಕಾಗಿ ನಾವು ಬೇಡ ವೆಂದರೂ ಪಾಶ್ಚಾತ್ಯರ ಮುಖವನ್ನು ನೋಡ ಬೇಕಾಗಿಬಂದಿದೆ.

ಇಂದು ಚೀನಾದ ಆಕ್ರಮಣವು ಭಾರತಕ್ಕೆ ಮಾತ್ರ ಸೀಮಿತವಾಗಿರಬಹುದು. ಆದರೆ, ಸಾಮ್ರಾಜ್ಯವಾದಿ ಚೀನದ ಗೃಧ್ರ ದೃಷ್ಟಿ ಭಾರತದ ಮೇಲೆ ಮಾತ್ರ ಇರುವುದಲ್ಲ; ಭಾರತ ಉಪಖಂಡದ ಮೇಲೆಯೂ ಇದೆ; ಅಗ್ನೇಯ ಏಶ್ಯಾದ ಮೇಲಿದೆ ಭಾರತವೊಂದನ್ನು ನುಂಗಿಕೊಂಡರೆ, ಮತ್ತೆ ಪಾಕಿಸ್ತಾನವು ಬೆಣ್ಣೆಯು ಮುದ್ದೆ. ಇದನ್ನು ಮನಗಂಡ ಹ್ಯಾರಿಮೆನ್ ಮತ್ತು ಸ್ಯಾಂಡ್ಯೂಸರು ಒಂದೇ ಉಪಖಂಡದ ಈ ಎರಡು ದೇಶಗಳು ತಮ್ಮ ವಿವಾದಗಳನ್ನು ಪರಿಹರಿಸಿಕೊಂಡು ಸ್ನೇಹದಿಂದ ಬಾಳುವಂತಾದರೆ, ಇಬ್ಬರಿಗೂ ಶತ್ರುವಾದ ಚೀನಾವನ್ನು ಮುಟ್ಟುಗೋಲು ಹಾಕಿ ಹಿಡಿಸುವುದು ಸುಲಭವೆಂದು ಸಲಹೆ ನೀಡಿದರು. ಅಧ್ಯಕ್ಷ ಅಯೂಬರೂ ಪ್ರಧಾನಿ ನೆಹರುರವರೂ ವಿವಾದ ಪರಿಹಾರದ ಮಾತುಕತೆಯ ಬಾಗಿಲು ತೆರೆಯಲು ನಿರ್ಧರಿಸಿದರು. ಅಮೆರಿಕೆಯೂಗಲೀ ಬ್ರಿಟನ್ನಲೇ ಇರಲಿ, ಭಾರತ ಪಾಕಿಸ್ತಾನಗಳ ಸಂಬಂಧವು ಮಧುರಗೊಳ್ಳಲೆಂದು ಬಯಸುವುದು ನ್ಯಾಯೋಚಿತವಾದುದೇ; ಅದು ಅಪೇಕ್ಷಣೀಯವೂ ಹೌದು. ಆದರೆ ತಾವು ನೀಡುವ ನೆರವು ಇದನ್ನೇ ಹೊಂದಿಕೊಂಡಿದೆಯೆಂದು ಆಭಿಪ್ರಾಯಿಸಿದರೆ, ಅದು ಅಸಾಧುವೆನಿಸುವುದು. ಪಾಕ್—ಭಾರತಗಳೆರಡೂ ತಮ್ಮ ಜೀವನದ ಸರ್ವಸ್ವವೆಂದು ತಿಳಿದುಕೊಂಡಿರುವ ಕಾಶ್ಮೀರದ ಬಗ್ಗೆ ಒಂದು ಇತ್ಯರ್ಥಕ್ಕೆ ಬಾರದನರೆಗೆ ಅವುಗಳ ಸಂಬಂಧ ಮಧುರವಾಗುವುದಿಲ್ಲ; ಇದನ್ನು ಅಯೂಬಖಾನರೇ ಸಾರುತ್ತಾರೆಂದರೆ ಅವರಾದಂತೆ ಕಾಶ್ಮೀರದಪ್ಪುಲ್ಲೆಯನ್ನು ಪರಿಹರಿಸಿಕೊಳ್ಳುವುದೆಂದರೆ, ಇದು ವರೆಗೆ ಭಾರತವು ಉಳಿಸಿ ಕೊಂಡುಬಂದ ಕಾಶ್ಮೀರವನ್ನು ಪಾಕಿಸ್ತಾನಿಗಳಿಗೆ ಉಡುಗರೆಯಾಗಿ ನೀಡುವುದು! ಇದೆಂತಹ ಕುನೀತಿ ಕಮ್ಯುನಿಸ್ಟರನ್ನು ಮುಟ್ಟಿ ಬರದಂತೆ ನೋಡಿಕೊಳ್ಳಿ ಬೇಕಾದರೆ, ಪಾಕಿಸ್ತಾನಕ್ಕೆ ಕಾಶ್ಮೀರವನ್ನು ದಾನೆ ಮಾಡಿಯೆಂದು— ಯಾರಾದರೂ ಏಕಾಗಿ ಬಾರದು? —ಹೇಳುವುದಾದರೆ, ಅದು ಮೂರ್ಖತನದ ಪರಮಾವಧಿಯೂದೀತು, ಅಕ್ಷಮ್ಯವೆನಿಸೀತು.

ಪಾಕಿಸ್ತಾನದೊಡನೆ ಭಾರತವು ಜಗಳ ಕಾಯುವುದಿಲ್ಲ. ಈ ಗಾಗಲೇ ಇರುವ ವಿವಾದಗಳು ಚಿರವಾಗಿ ಉಳಿಯುವಂತಾಗ ಬೇಕೆಂದೂ ಬಯಸುವುದಿಲ್ಲ. ಪಾಕಿಸ್ತಾನದೊಡನೆ ಬಾರತವು ನ್ಯಾಯವಾದ ದಾರಿಯಲ್ಲೇ ನಡೆದುಕೊಂಡಿದೆ. ಆದರೆ, ಪಾಕ್ ನಾಯಕರ ವಕ್ರದಾರಿಯಿಂದಾಗಿ ಸಮಸ್ಯೆ ಇನ್ನೂ ಉಳಿದಿದೆ. ಇವು ತೀರ್ಮಾನ ಗೊಂಡರೆ ಕ್ಷೇಮ, ಮುಂದುವರಿದರೆ ಅಕ್ಷೇಮ, ಪಾಕಿಸ್ತಾನವು ಹೇಗಾದರೂ ಮಾಡಿ ಕಾಶ್ಮೀರವನ್ನು ಸಂಗ ಬೇಕೆಂದು ಹೊಂಚು ಹಾಕುತ್ತಿದೆ. ಈ ನಿಟ್ಟಿನಲ್ಲಿ ಅಮೆರಿಕಾ—ಬ್ರಿಟಿಷ್ ನಾಯಕರು ಪಾಕಿಸ್ತಾನದ ಬಾಲಹಿಡಿದು ನಡೆಯಲೂ ಬಹುದು. ಅಥವಾ ಭಾರತದ ನೀತಿಯನ್ನು ಒರೆಗೆ ಹಚ್ಚುವ ಸುಸಂದರ್ಭವೆಂದಿದನ್ನು ತಿಳಿಯಲೂ ಬಹುದು. ಆದರೆ, ಅವು ಒಂದು ಮಾತನ್ನು ಮರೆಯ ಬಾರದು. ಸಂ. ರಾ. ಸಂಘದ ಗೊತ್ತುವಳಿಯನ್ನು ವಿರೋಧಿಸಿದ ಪಾಕ್ ನ್ಯಾಯ ಪಕ್ಷಪಾತಿಯೇ ಎಂದು. ಇದನ್ನು ಅವು ವಿಮರ್ಶಿಸುವುದಾದರೆ ಕಮ್ಯುನಿಸ್ಟರ ವಿರುದ್ಧ ಯುದ್ಧ ಮಾಡಲು ಅವು ಭಾರತಕ್ಕೆ ನೆರವು ನೀಡುವುದರಲ್ಲಿ ಹಿಂದೆ ಮುಂದೆ ನೋಡಬಾರದು. ವಿಶ್ವದ ಅತಿದೊಡ್ಡ ಆದರೆ, ಅನಭ್ಯವೃದ್ಧ ಪ್ರಜಾಶಕ್ತಿಯು ನಾಶಹೊಂದ ಬಾರದೆಂದೂ ತಿಳಿದು ಅದರ ನೆರವಿಗೆ ಧಾವಿಸಿ ಬರಬೇಕು. ಯಾವ ಶರ್ತವೂ ಇಲ್ಲದೆ, ಮುಕ್ತ ಹಸ್ತದಿಂದ ಕೆಂಪು ಚೀನೀಯರನ್ನು ಹೊರ ದಬ್ಬಲು ಸಹಾಯನೀಡಬೇಕು. ಇದಕ್ಕೆ ಕಾಶ್ಮೀರವನ್ನು ಗಂಟು ಹಾಕುವುದು ಉಚಿತವಲ್ಲ. ಸಮಯಾವಕಾಶವೂ ಇಲ್ಲ. ಆದುದರಿಂದ ಭಾರತದ ಅನಿವಾರ್ಯತೆಯನ್ನು ಮನದಂದು ಆ ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಸಹಾಯದ ನೀತಿಯನ್ನು ಅಧಿಕ ಉದಾರಗೊಳಿಸುವರೆಂದು ಹಾರೈಸಿದರೆ ಅದು ಸುಳ್ಳಾಗದು, ಏಕೆಂದರೆ, ಇಬ್ಬರೂ ಪರಿಸ್ಥಿತಿಯನ್ನು ಪರಿಪೂರ್ಣವಾಗಿ ತಿಳಿದುಕೊಂಡವರು. ಹಾಗಾಗಲೆಂದೇ ಎಲ್ಲರ ಬಯಕೆ.

ಲಾಯರ ಲಾಯರತನ

ಏಕ ಪಕ್ಷೀಯ ಸಮರ ವಿರಾಮ ಘೋಷಿಸಿದ ಆಕ್ರಮಣಕಾರ ಚೀನವು ಆಕ್ರಮಣಕ್ಕೆ ಬಲಿಯಾದ ಭಾರತವನ್ನು ಮೂರು ಪ್ರಶ್ನೆಗಳನ್ನು ಕೇಳಿತ್ತು. ಸಮರ ವಿರಾಮಕ್ಕೆ ಭಾರತವು ಒಪ್ಪಿದೆಯೇ ಇಲ್ಲವೆ? ಎರಡೂ ದೇಶಗಳ ಸೈನ್ಯವನ್ನು ೧೯೫೯ ರ ನವಂಬರ ೭ರಂದು ಇದ್ದ ಪ್ರತ್ಯಕ್ಷ ನಿಯಂತ್ರಣ ರೇಖೆಯಿಂದ ೨೦ ಕಿಲೋಮೀಟರ್ ಹಿಂದೆ ಕರೆದು ಕೊಳ್ಳುವುದಕ್ಕೆ ಭಾರತವು ಒಪ್ಪುವುದೆ? ನಿಸ್ಸೈನ್ಯೀಕೃತ ವಲಯ ರಚಿಸುವುದಕ್ಕಾಗಿ, ಎರಡೂ ರಾಷ್ಟ್ರಗಳ ಅಧಿಕಾರಿಗಳು ಒಟ್ಟು ಸೇರಿ ಚರ್ಚಿಸಬೇಕೆಂಬುದಕ್ಕೆ ಭಾರತದ ಸಮ್ಮತಿ ಯಿದೆಯೇ ಎಂಬವೇ ಆ ಗೂಡಾರ್ಥಗೂಢ ಪ್ರಶ್ನೆಗಳು ಇವಕ್ಕೀಗ ಪ್ರಧಾನಮಂತ್ರಿ ನೆಹರು ಉತ್ತರವನ್ನು ಕಳುಹಿಸಿದ್ದಾರೆ. ಸಮರವಿರಾಮದ ಘೋಷಣೆಯು 'ಏಕ ಪಕ್ಷೀಯವಾಗಿದ್ದರೂ ಭಾರತವು ಅದಕ್ಕೆ ಪ್ರತಿಕ್ರೋಧವುಂಟು ಮಾಡಿಲ್ಲ. ಸಪ್ತಂಬರ ೮-೧೯೬೨ ರ ನಂತರ ಚೀನವು ಮಾಡಿದ ಆಕ್ರಮಣವನ್ನು ಹಿಂತೆಗೆಯ ಬೇಕೆಂಬ ತಳಹದಿಯ ಮೇಲೆಯೇ ಉಭಯ ಸೇನೆಗಳ ಹಿಂಜರಿಯುವಿಕೆಯು ನಡೆಯ ಬೇಕು ಮತ್ತು ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ದೊರೆಯುವಂತಾದರೆ, ಭಾರತವು ಮೂರನೆಯ ದಕ್ಕೂ ಒಪ್ಪುವುದು. ಚೀನೀ ಮತ್ತು ಭಾರತಗಳ ನಡುವೆ ಇಂದು ಉಳಿದಿರುವುದೆಂದರೆ, ೨೫೦೦ ಚದರ ಮೈಲು ಗುಡ್ಡ ಪ್ರದೇಶ. ಇದು ಆಕ್ರಮಣ ಮುಕ್ತವಾಗುವಂತೆ ೮—೯—೬೨ ರ ಗಡಿಯನ್ನು ಭಾರತ ಹಿಡಿದರೆ, ಇದನ್ನು ಕಬಳಿಸಲು ೬೦೧೫ ರ ರೇಖೆಯನ್ನು ಚೀನಾಕ್ಕೆ ಯುದ್ಧ ಬೇಡವೆಂದಾದರೆ ಭಾರತದ ಈ ಕನಿಷ್ಠ ಕೇಳಿಕೆಯನ್ನು ಮಾನ್ಯ ಮಾಡಬೇಕು; ಹಾಗೆಯೇ ಲಡಖವಲ್ಲ ತಾನು ಮಾಡಿದ ಆಕ್ರಮಣವನ್ನೂ ಹಿಂತೆಗೆದು ಕೊಳ್ಳಬೇಕು. ಸಮರವಿರಾಮ ಘೋಷಣೆಯ ಬಗ್ಗೆ ಭಾರತವು ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತ ಪಡಿಸದೆ ಇರುವುದಕ್ಕೆ ಇರುವ ಮುಖ್ಯ ಕಾರಣವಾದರೂ ಇದುವೇ ಆಗಿದೆ.

ವಾರ್ತಾವೇದಿಕೆ

ಪ್ರಧಾನಿ ಜವಾಹರಲಾಲ

ತನ್ನ ಶಕ್ತಿಯನ್ನೂ ಸ್ವೀತಿಕ ಬೇಕು ಎನ್ನುವ ಕೈಸ್ತನ ಉಪದೇಶವನ್ನು ಮಹಾತ್ಮಾಗಾಂಧಿಯವರು ಮರಳಿ ಉಚ್ಚರಿಸಿದರು. ಅವರ ರಾಜಕೀಯ ಶಿಷ್ಯರೆನಿಸಿದ ಜವಾಹರಲಾಲರು ಇದನ್ನು ಸಂಪೂರ್ಣ ಅಲ್ಲಗಳೆಯಲಿಲ್ಲ ಅವರ ಪಂಚ ಶೀಲ ತತ್ವದ ಬುನಾದಿಯಲ್ಲಿ ಇದೂ ಒಂದು ಕಲ್ಲು. ರಶ್ಯವು ಎತ್ತ ಮೊಲುತ್ತಿದೆಯೆಂಬುದನ್ನು ಯೂರಿಂದಲೂ ಸ್ಪಷ್ಟ ಹೇಳುವುದು ಸಾಧ್ಯವಿಲ್ಲವಾದರೂ ರಶ್ಯ—ಚೀನಾಗಳ ನಡುವೆ ಭಿನ್ನಾಭಿಪ್ರಾಯಗಳಿದ್ದುವು ಎಂದು ಎಲ್ಲರಿಗೂ ಗೊತ್ತು. ಇಂದು ಈ ಅಭಿಪ್ರಾಯ ಭೇದವು ಹೊಗೆ ಕಾರುತ್ತಿರುವಂತೆ ಭಾಸವಾಗುತ್ತಿದೆ. ರಶ್ಯವು ಚೀನಾಗಳ ಅಧಿಕೃತ ಪತ್ರಿಕೆಗಳು ಪರಸ್ಪರ ಟೀಕಿಸಿಕೊಳ್ಳಲು ತೊಡಗಿರುವುದೆಂದು ತಿಳಿದಾಗ, ಚೀನಾದ ಮೇಲೆ ರಶ್ಯವು ವತ್ರಾಯ ಹೇರುತ್ತಿರುವ ಲಕ್ಷಣಗಳು ತೋರುವಂತಿವೆ. ಕಮ್ಯುನಿಸ್ಟ್ ರಾಷ್ಟ್ರಗಳನ್ನೆನ್ನುವ ಪಂಪಾಟ ಉತ್ತಮವಲ್ಲವೆಂಬುದು ನಿಜ; ಆದರೂ ರಶ್ಯದ ಸಹಾನುಭೂತಿ ಪಡೆಯುವಲ್ಲಿ ನೆಹರು ಯಶಸ್ವಿಯಾಗುವುದು ಮಾತ್ರ ಅತ್ಯವಶ್ಯ

ಅರಸ ಮಹೇಂದ್ರ

ಅರಸ ಮಹೇಂದ್ರರು ಹಿಮಾಲಯದ ತಪ್ಪಲಿನ ಆಗಲ ಕಿರಿದಾದ ದೇಶ ನೇಪಾಳದ ಸಾರ್ವಭೌಮರು ಇತ್ತೀಚೆಗೆ ಅಲ್ಲಿನ ಆಂತರಿಕ ಪರಿಸ್ಥಿತಿಯು ತುಂಬಗೊಂದಲ ಮಯವಾಗಿರುವುದಾದರೆ. ಅದಕ್ಕೆ ಅರಸರೇ ಮೂಲ ಕಾರಣರೆಂದು ಹೇಳಬೇಕು. ಅಲ್ಲಿನ ಪ್ರಜಾಪ್ರಭುತ್ವ ಮಾದರಿಯ ಸಂವಿಧಾನವನ್ನು ರದ್ದುಪಡಿಸಿ ಅಧಿಕಾರವನ್ನು ತಮ್ಮ ಕೈಯಲ್ಲಿ ಭದ್ರವಾಗಿರಿಸಲು ಹವಣಿಸಿ ಆದರಲ್ಲಿ ಅಯಶಸ್ವಿಯಾಗುವುದನ್ನು ತೋರಗೊಡದೆ ಪಂಚಾಯತ ಮಾದರಿಯ ಹೊಸ ಸಂವಿಧಾನವನ್ನು ಘೋಷಿಸಿ ಜನತೆಯ ಕಣ್ಣಿಗೆ ಮಣ್ಣೆರಚುವ ಪ್ರಯತ್ನ ಅವರು ಮಾಡಿದ್ದಾರೆ. ಇದರಂತೆ ಅಪ್ರತ್ಯಕ್ಷ ಚುನಾವಣೆ ಮತ್ತು ನಾಮಕರಣದಿಂದ ಶಾಸನ ಸಭೆಯ ರಚನೆಯಾಗುವುದು ಮಂತ್ರಿಗಳನ್ನು ನೇಮಿಸುವ ಅಧಿಕಾರ ಅರಸರ ಕೈಯಲ್ಲೇ ಉಳಿಯುವುದು. ಹಣಕಾಸಿಗೆ ಸಂಬಂಧ ಪಟ್ಟ ವಿಧೇಯಕ ಮಂಡನೆಗೆ ಅರಸರ ಪೂರ್ವಾನುಮತಿ ಪಡೆಯ ಬೇಕು. ವ್ಯಕ್ತಿ ಸ್ವಾತಂತ್ರ್ಯವಿದೆಯೆಂದರೂ ರಾಜಕೀಯ ಪಕ್ಷ ರಚನೆಯ ಪ್ರಶ್ನೆಯಿಲ್ಲ. ಇಂತಹ ವಿಲಕ್ಷಣ ಸಂವಿಧಾನ ಪಾಕ್ ಸಂವಿಧಾನವ ಮರಿಯಂತೆ ತೋರುತ್ತದೆ.

ಚಂದಾಹಣ ಬಾಕಿ ಇರುವವರು ದಯಮಾಡಿ ಆದಷ್ಟು ಬೇಗನೆ ಕಳುಹಿಸಿಕೊಡುವಂತೆ ವಿನಂತಿಸುತ್ತೇವೆ.

ಅಲ್ಲಲ್ಲಿಯ ಸುದ್ದಿಸಾರ

ಪಾಂಗಾಳ ನಾಯಕ್ ಬೇಂಕಿನ ಕೂಡುಗೆ—ಉಡುಪಿ ಪಾಂಗಾಳ ನಾಯಕ್ ಬೇಂಕಿನವರು ರೂ. 2,555ನ್ನು ರಾ. ರಕ್ಷಣಾ ನಿಧಿಗೆ ದೇಣಿಗೆಯೊಗಿಸಿರುವರು. ಮಾತ್ರ ನಲ್ಲದೇ ರಾಷ್ಟ್ರೀಯ ರಕ್ಷಣಾ ಬೋಂಡುಗಳ ಲ್ಲಿ ರೂ. ಮೂರೆ ಲಕ್ಷವನ್ನು ವಿನಿಯೋಗಿಸುವ ವಾಗ್ದಾನ ಮಾಡಿ ಇಸ್ಟರಲ್ಲೇ ರೂ. 1½ ಲಕ್ಷವನ್ನು ವಿನಿಯೋಗಿಸಿರುವರು.

ಮುಂಬಯಿಯಲ್ಲಿ ಕನ್ನಡಿಗರ ಕಾಲೇಜು—ಇದೇ ತಾ 21ರಂದು ಮುಂಬಯಿಯ ದಹಿಸಾರ್ ಎಂಬಲ್ಲಿ. ಅದೂರು ಮುಶಿಕ್ಷಣ ಸಂಸ್ಥೆಯ ನೇತೃತ್ವದಲ್ಲಿ ಸ್ಥಾಪಿಸಲಗುವ ಪೂರ್ಣಪ್ರಜ್ಞ ಸಾಯನ್ಸ್ ಕಾಲೇಜು ಹಾಗೂ ಮುಂಬಯಿಯ ಲಯನ್ಸ್ ಕ್ಲಬ್ಬಿನ ನೇತೃತ್ವದಲ್ಲಿ ಕಟ್ಟಲ್ಪಡುವ ಲಯನ್ಸ್ ಆರ್ಟ್ಸ್ ಕಾಲೇಜುಗಳ ಶಂಕು ಸ್ಥಾಪನಾ ಸಮಾರಂಭವು ರಾಷ್ಟ್ರಪತಿ ಡಾ|ರಾಧಾಕೃಷ್ಣನ್‌ರವರಿಂದ ನೆರವೇರಿತು. ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ ಎಂ.ಎಸ್. ಕನ್ನಮ್ಮವಾರ್ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು.

ಪ್ರಾರಂಭದಲ್ಲಿ ಪೂರ್ಣಪ್ರಜ್ಞ ಶಿಕ್ಷಣ ಕೇಂದ್ರದ ಉಪಾಧ್ಯಕ್ಷ ಶ್ರೀ ರಮೊಭ್ಟಾ ಭಟ್ಟ ಯವರು ರಾಷ್ಟ್ರಪತಿಗಳನ್ನು ಸ್ವಾಗತಿಸಿದ ಬಳಿಕ, ಪೂರ್ಣಪ್ರಜ್ಞ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿದ್ದ, ಆದರೂರು ಮಠ ಶಿಕ್ಷಣ ಸಮಿತಿಯ ಅಧ್ಯಕ್ಷ ಶ್ರೀ ಅದವೂರು ಮರಿ ವಿಭುಭೇಶ ತೀರ್ಥ ಸ್ವಾಮಿಗಳು ಸಾಯನ್ಸ್ ಕಾಲೇಜನ್ನು ಸಾರ್ವಜನಿಕ ನಂತಿಗೆಯಿಂದ ಕಟ್ಟಲಾಗುವುದೆಂದೂ, ಆರ್ಟ್ಸ್ ಕಾಲೇಜು ಮುಂಬಯಿಯ ಲಯನ್ಸ್ ಕ್ಲಬ್ಬಿನಿಂದ ಕಟ್ಟಲ್ಪಡುವುದೆಂದೂ ಇಫ್ಟಿ ಗುರುಕುಲದ ಮೂದರಿಯೆ ಶಿಕ್ಷಣವನ್ನು ಕೊಡಲಾಗುವುದೆಂದೂ ತಿಳಿಸಿದರು.

ರಾಷ್ಟ್ರಪತಿಗಳು ತಮ್ಮ ಭಾಷಣದಲ್ಲಿ ಶಿಕ್ಷಣದ ಪ್ರಾಮುಖ್ಯತೆಯನ್ನು ವಿವರಿಸಿ, ಬಳಿಕ ಇಂದಿನ ರಾಷ್ಟ್ರೀಯ ವಿಷಮ ಸ್ಥಿತಿಯ ಕುರಿತು ಪ್ರಸ್ತಾಪಿಸಿದರು.

ಧನ್ಯವಾದ, ರಾಷ್ಟ್ರಗೀತೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಭಜನಾ ಸಪ್ತಾಹ— ಶ್ರೀ ವಿಷ್ಣು ಮೂರ್ತಿ ಭಜನಾ ಮಂಡಳಿ ನಿಟ್ಟೂರು ಕೊಡಂಕೂರು ಇದರ ವಾರ್ಷಿಕ ಭಜನಾ ಸಪ್ತಾಹವು ಇದೇ ತಾ. 12ರಿಂದ ತಾ. 18ರ ವರೆಗೆ ನಗರಭಜನೆ ನಡೆಯಿ ಕಡೆ ದಿನ ಮಂಗಲೋತ್ಸವವು ವಿಜೃಂಭಣೆಯಿಂದ ಜರಗಿತು. ಮಂಡಿನ ಶ್ರೀ ಶಿವರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಮಹಾಸಭೆ ಜರಗಿ ಮಂಡಳಿಯ ಲೆಕ್ಕಪತ್ರಗಳ ಪರಿಶೋಧನೆ, ಶ್ರೀಗಳಾದಿ ಪಿ. ನಾರಾಯಣ ಸೆಟ್ಟಿ, ಉಪಾಧ್ಯಕ್ಷ, ಕೆ. ವಾಮು ಸೆಟ್ಟಿ, ಉಪಾಧ್ಯಕ್ಷ, ಕೆ. ನಾರಾಯಣಸೆಟ್ಟಿ ಕೋಶಾಧಿಕಾರಿ, ಎನ್. ಸಂಜೀವ ಭಂಡಾರಿ ಕಾರ್ಯದರ್ಶಿ, ಪಿ. ಸುಂದರ ಸೆಟ್ಟಿ ಜೊತೆಕಾರ್ಯದರ್ಶಿ, ಕೆ ಜಗನ್ನಾಥ ಸೆಟ್ಟಿ, ಅಚ್ಚಣ್ಣ ಸೆಟ್ಟಿ, ರಾಮ ಭಂಡಾರಿ, ಬಿಲುವಯ್ಯ ಸೆಟ್ಟಿ, ಕೆ. ಹಿರಿಯಣ್ಣ ಸೆಟ್ಟಿ, ಸರ್ವೋತ್ತಮ ಭಂಡಾರಿ, ಎನ್. ಜಗನ್ನಾಥ ಸೆಟ್ಟಿ—ಕಾರ್ಯಕಾರಿ ಮಂಡಳಿಯ ಸದಸ್ಯರನ್ನಾಗಿಯೂ ಶ್ರೀ ಶಿವರಾಮ ಸೆಟ್ಟರನ್ನು ಗೌರವ ಲೆಕ್ಕ ಪರಿಶೋಧಕರನ್ನಾಗಿಯೂ ಆರಿಸಲಾಯಿತು. ಅಧ್ಯಕ್ಷರ ಭಾಷಣ ನಂತರ ಪಿ. ನಾರಾಯಣ ಸೆಟ್ಟಿಯಿಂದ ಧನ್ಯವಾದ ಸಮರ್ಪಣೆಯೊಯಿತು.

ಭಜನಾ ಕೂಟ—ಇದೇ ತಾ. 15ರಂದು ಅಲೆ ಗ್ರಾಮದ ಯೋಕ ಸೇವಾ ಕೇಂದ್ರದ ರಚನೆಯೊಗಲಿರುವ ಸ್ಥಳದಲ್ಲಿ ಕೇಂದ್ರದ ವತಿಯಿಂದ ಅನಸಾದದಲ್ಲಿ ನಿರ್ಣಯಿಸಿ ಒಂದು ಭಜನಾ ಕೂಟವನ್ನು ಏರ್ಪಡಿಸಲಾಯಿತು. ಕಾರ್ಯಕ್ರಮದ ಆಂಗವಾಗಿ ಭಗವಾನ್ ಶ್ರೀ ಸತ್ಯಸಾಯಿ ಪೂಜೆಯನ್ನು ಜರಗಿಸಿದ್ದಲ್ಲದೆ ಅನ್ನ ಸಂತರ್ಪಣೆಯೂ ನಡೆಯಿತು. ಮಹಾ ಪೂಜೆಯ ನಂತರ ನಡೆದ ಸಭೆಯಲ್ಲಿ ಅಧ್ಯಕ್ಷ ಶ್ರೀ ಎಮ್. ನಾರಾಯಣ ಭಟ್ಟರು ಭಗವಾನ್ ಶ್ರೀ ಸತ್ಯ ಸಾಯಿಬಾಬರ ಕುರಿತು ಮಾತನಾಡಿದರು.

ಕಟ್ಟಡ ಉದ್ಘಾಟನೆ—ಮಂಗಳೂರು ನಗರ ಸಭಾಪತಿ ಶ್ರೀ ಟಿ. ಪೀತಾಂಬರ ರಾಯರು, ಇದೇ ತಾ. 20ರಂದು ಶ್ರೀ ಕೆ. ಆರ್. ಆಚಾರ್ ಎಂ. ಎಲ್. ಸಿ ಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ವ್ಯಾಪಾರವರ್ತಕ ಸಂಘದ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು.

ಪ್ರಾರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಕೆ. ಶಾಮ್ ಭಟ್ಟರಿಂದ ಆದಿತ ವರದಿಯು ಓದಲ್ಪಟ್ಟತು. ಶ್ರೀ ಜಿ. ಸೋಮಪೀಠರವರು ಮೊತನಾಡುತ್ತಾ ಸಂಘಕ್ಕೆ ಉಜ್ವಲ ಭವಿಷ್ಯವನ್ನು ಕೋರಿದರು. ಬಳಿಕ ಶ್ರೀಗಳಾದ ಬಿ. ಇದಿನಬ್ಬ, ಕೆ. ಎನ್. ಕಾಮತ್, ಕೆ. ಸೂರ್ಯನಾರಾಯಣ ಆಡಿಗ ಮುಂತಾದವರು ಇಂತಹ ವ್ಯವಸಾಯ ಸಂಘಗಳ ಸೇವೆಯನ್ನು ಶ್ಲಾಘಿಸಿ ಶ್ರೀಧರ್ ಮೊತನಾಡಿದರು ಮುಕ್ತಾಯಲ್ಲಿ ಶ್ರೀ ರಾಮ್ ಭಟ್ಟರವರಿಂದ ವಂದನಾರ್ಪಣೆಯೊಯಿತು.

ಪ್ರಥಮ ಚಿಕಿತ್ಸಾ ತರಗತಿಗಳು—ಉಡುಪಿ ಸರಕಾರಿ ಆಸ್ಪತ್ರೆಯಲ್ಲಿ ನಡೆಸಲ್ಪಡುತಲಿರುವ ಪ್ರಥಮ ಚಿಕಿತ್ಸಾ ತರಗತಿಗಳಿಗೆ ಸೇರಿ ಲಿಚ್ಚಿಸುವವರು ತಮ್ಮ ಹೆಸರು ನಿಗದಿಸಗಳನ್ನು ಕೊಡುವ ತರೀಕೆನ್ನು ತಾ 1.1.1963ರ ತನಕ ಮುಂದುವರಿಸಲಾಗಿದೆಯೆಂದೂ ಕ್ಲಾಸುಗಳು ದಿನಂಪ್ರತಿ ಆದಿತ್ಯವಾರ ಬಿಟ್ಟು ಸಂಜೆ 6-15ರಿಂದ 7-15ರ ತನಕ ನಡೆಯುವವೆಂದೂ ಪ್ರತಿ ತಂಡಕ್ಕೆ ಉಪೆನ್ಸಾರಿಯು ಆಯೆಯು ಸರ್ಜನರಿಂದ ನಡೆಯಲ್ಪಟ್ಟು ಪ್ರತಿಯೆಟ್ಟ ಉಪೆನ್ಸಾರಿಗೂ ಕ್ಲಾಸಿಗೆ ಸೇರುವ ಕುರಿತು ಪ್ರತ್ಯೇಕ ತಿಳಿಸಲಾಗುವುದೆಂದೂ ಆರ್ಡಿ ದಾವಲಾತಿಯೊಂದಿಗೆ ಎರಡು ಸ್ವನಿಳಾಸದ ಕಾರ್ಡ್‌ಗಳನ್ನೂ ಸೈಂಟ್ ಜೋನ್ಸ್ ಎಂಬುರೆನ್ಸ್ ಎಸೋಸಿಯೇಶನ್(ಇಂಡಿಯಾ) ಇವರ ಹೆಸರಿಗೆ ಬರೆದ ರೂ. 4=00ಗಳ ಪೋಸ್ಟಲ್ ಆರ್ಡರನ್ನು ಕಳುಹಿಸಬೇಕೆಂದೂ ವಿಶೇಷ ಮಾಹಿತಿಗೇನಾದರೂ ಇದ್ದರೆ ಉಡುಪಿ ಸರಕಾರಿ ಆಸ್ಪತ್ರೆಯ ಸರ್ಜನರ ಆಫೀಸಿನಿಂದ ತಿಳಿಯಬೇಕೆಂದೂ ಸರ್ಜನರು ತಿಳಿಸಿತ್ತಾರೆ.

ಖಾಸಗಿ ವಿದ್ಯಾರ್ಥಿನಿಯ ಪ್ರಥಮ ತರಗತಿ ತೇರ್ಗಡೆ— ಹೈದರಾಬಾದಿನ ರಾಮ್ಸ್ ಟ್ಯೂಟೋರಿಯಲ್ ಕಾಲೇಜಿನ ಶ್ರೀಮತಿ ಸುಸಂವಾ ವೇಣುಗೋಪಾಲ್ ಎಂಬ ವಿದ್ಯಾರ್ಥಿನಿಯು ಇತ್ತೀಚೆಗೆ ನಡೆದ ಪಿ. ಯು. ಸಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಕೃತಕ್ರಮವಾಗಿ ತೇರ್ಗಡೆಯಾಗಿರುವಳು. ಈ ವಿದ್ಯಾರ್ಥಿನಿಯು ಯಾವುದೇ ಯು ನಿವರ್ಸಿಟಿಗೆ ಸೇರಿದ ಕಾಲೇಜಿಗೆ ಹೋಗಿರದೆ ಖಾಸಗಿ ಉಮೇದ್ವಾರಿಯಾಗಿ ಪರೀಕ್ಷೆಗೆ ಕುಳಿತವಳು ಎಂದು ಸ್ಪಿನ್ಸಿಪಾಲ್ ಶ್ರೀ ಬಿ ಎನ್. ರಾಯರು ತಿಳಿಸುತ್ತಾರೆ.

ಕೃಲಂಡೆರ್ ಸ್ವೀಕಾರ—ನ್ಯೂ ಕರ್ನಾಟಿಕ ಒಪ್ಟಿಕಲ್ ಕೊಫೋರ್ಟ್, ಬೊಂಬಾಯಿ ಮತ್ತು ಶ್ರೀಕೃಷ್ಣ ಜ್ಯುವೆಲ್ಲರಿ ಮಾರ್ಟ್ ತೆರೆಕೆ ಪೇಟೆ, ಉಡುಪಿ ಇವರ 1963ನೇ ಇಸವಿಯ ಸುಂದರ ಕೆಲಂಡೆರುಗಳನ್ನು ಆತ್ಮಾದರದಿಂದ ಸ್ವೀಕರಿಸಿದ್ದೇವೆ.

ಡಾ| ನಾಗಪ್ಪ ಆಳ್ವರ ಜಿಲ್ಲಾ ಸಂಚಾರದ ಕಾರ್ಯಕ್ರಮ—ರಾಜ್ಯದ ಆರೋಗ್ಯ ಮಂತ್ರಿ ಡಾ ಕೆ. ನಾಗಪ್ಪ ಆಳ್ವರು ಇದೇ 26ರಿಂದ ಜನವರಿ 1ರ ತನಕ ಜಿಲ್ಲಾ ಸಂಚಾರ ಕೈಗೊಂಡಿರುವರು. ಅವರು 26ರಂದು ಬೆಳಿಗ್ಗೆ ಮಂಗಳೂರಿನಿಂದ ಹೊರಟು ಸಂಜೆ ಪುತ್ತೂರುವಿಟ್ಟಿದ್ದಲ್ಲಿ ಕಾರ್ಯಕ್ರಮವನ್ನು ತೀರಿಸಿ ರಾತ್ರಿ ಮಂಗಳೂರಿಗೆ ಬಂದು ತಂಗುವರು. ತಾ. 27ನೇ ಬೆಳಿಗ್ಗೆ ಪುತ್ತೂರಿಗೆ ತೆರಳಿ ಆಲ್ಲಿ ಸರಕಾರಿ ಆಸ್ಪತ್ರೆಯ ಹೊಸ ವಾರ್ಡಿನ್ನು ತೆರೆಯುವರು. ಬಳಿಕ ಪಾಣೆ ಮಂಗಳೂರಿಗೆ ಬಂದು 3 ಗಂಟೆಗೆ ಮಂಗಳೂರು ನಗರಸಭೆ, ತಾಲೂಕುಬೋರ್ಡ್, ಪಂಚಾಯತ್ತು, ಸೇವಾ ಸಹಕಾರಿ ಸಂಘ ಮೊದಲಾದ ಸಂಸ್ಥೆಗಳ ಸದಸ್ಯರ ಬೀಬವಿಡಿ ಸಂಜೆ ಜಿಲ್ಲಾ ಕಾಂಗ್ರೆಸು ಆಫೀಸಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುವರು.

28ನೇ ಬೆಳಿಗ್ಗೆ ಮಂಗಳೂರಿನ ಲೇಡಿ ಗೋಷನ್ ಆಸ್ಪತ್ರೆಯ ಹೊರ ರೋಗಿಗಳ ಹೊಸ ಬ್ಲೋಕನ್ನು ಉದ್ಘಾಟಿಸಿ ಆಸ್ಪತ್ರೆಗಳನ್ನು ಸಂದರ್ಶಿಸುವರು. 11 ಗಂಟೆಗೆ ಕದ್ರಿ ಬಂಗಲೆಯಲ್ಲಿ ಸಂದರ್ಶನ, 5 ಗಂಟೆಗೆ ಪುತ್ತೂರು ಸೈಡ್ ಬ್ಯಾರಂಭೋತ್ಸವದಲ್ಲಿ ಭಾಗವಹಿಸುವರು. 29ನೇ ಬೆಳಿಗ್ಗೆ ಮೂಡುಬಿದ್ರೆ ಕ್ಷಯ ರೋಗಿ ಆಸ್ಪತ್ರೆಯನ್ನು ಸಂದರ್ಶಿಸಿ ಮೂಡುಬಿದ್ರೆಯಲ್ಲಿ ಪಂಚಾಯತು ಮೊದಲಾದ ಸಂಸ್ಥೆಗಳ ಸದಸ್ಯರ ಸಭೆಯಲ್ಲಿ ಭಾಗವಹಿಸಿ ಕಾರ್ಕಳಕ್ಕೆ ಆಗಮಿಸುವರು. ಅಲ್ಲಿ 3ಗಂಟೆಗೆ ತಾಲೂಕು ಬೋರ್ಡು ಮೊದಲಾದ ಸಂಸ್ಥೆಗಳ ಸದಸ್ಯರ ಸಭೆಯಲ್ಲಿ ಭಾಗವಹಿಸಿ ಆಸ್ಪತ್ರೆಯನ್ನು ಸಂದರ್ಶಿಸಿ ಆಡಳಿತಾರಿಗೆ ತೆರಳಿ ಅಲ್ಲಿಂದ ಕುಂದಾಪುರಕ್ಕೆ ಹೋಗಿ ಉಳಿಯುವರು. 30ರಂದು ಬೆಳಿಗ್ಗೆ ಆಸ್ಪತ್ರೆ ಸಂದರ್ಶಿಸಿ ತಾಲೂಕು ಬೋರ್ಡು ಮತ್ತಿತರ ಸಂಸ್ಥೆಗಳ ಪರಿಷತ್ತಿನಲ್ಲಿ ಭಾಗವಹಿಸುವರು 3 ಗಂಟೆಗೆ ಬ್ರಹ್ಮಾವರದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ ಉಡುಪಿಗೆ ಬಂದು ಸಂಜೆ 5 30ಕ್ಕೆ ಸಾರ್ವಜನಿಕ ಸಭೆಯಲ್ಲಿ ಭಾಷಣಗೈಯುವರು. ರಾತ್ರಿ ಪೆಂಟ್ಹೌಸ್ ಬಂಗ್ಲೆಗುಡ್ಡೆಯಲ್ಲಿ ತಂಗುವರು. 31ನೇ ಬೆಳಿಗ್ಗೆ ಆಸ್ಪತ್ರೆಯನ್ನು ಸಂದರ್ಶಿಸಿ 9½ ಗಂಟೆಗೆ ಉಡುಪಿ ನಗರ ಸಭೆ. ತಾಲೂಕು ಬೋರ್ಡು, ಗ್ರಾಮ ಪಂಚಾಯತು ಮಹಿಳಾ ಮಂಡಲ ಮೊದಲಾದ ಸಂಸ್ಥೆಗಳ ಸದಸ್ಯರ ಸಭೆಯಲ್ಲಿ ಭಾಗವಹಿಸಿ ಬಳಿಕ ಮಂಗಳೂರಿಗೆ ತೆರಳುವರು. ಜನವರಿ 1ರಂದು ಬಂಟ್ವಾಳ, ಧರ್ಮಸ್ಥಳ, ಬೆಳ್ತಂಗಡಿ, ಕಾರ್ಯಕ್ರಮಗಳಿಗೆ ತೀರಿಸಿ ಮಂಗಳೂರಲ್ಲಿ ತಂಗುವರು. ತಾ. 2ರಂದು ಕೊಕ್ಕಡದಲ್ಲಿಯೂ ಕೊಲದಲ್ಲಿಯೂ ರಿಸ್ಪೆನ್ಸರಿಗಳನ್ನು ಉದ್ಘಾಟಿಸುವರು. ಅನಂತರ ಉಪ್ಪಿನಂಗಡಿಗೆ ಬಂದು ಹಾಸನಕ್ಕೆ ತೆರಳಿ ಮರುದಿನ ಬೆಂಗಳೂರಿಗೆ ತಲಪಿಸುವರು.

ಆಯುರ್ವೇದ ಕಾಲೇಜು ವರ್ಧಂತಿ—ಉಡುಪಿ ಆಯುರ್ವೇದ ಕಾಲೇಜಿನ ವರ್ಧಂತಿ ಉತ್ಸವವು ನಗರ ಸಭಾಪತಿ ಶ್ರೀ ಪಿ ರಂಗನಾಥ ಶೆಣೈಯರ ಅಧ್ಯಕ್ಷತೆಯಲ್ಲಿ ಇದೇ ತಾ. 20ರಂದು ನೆರವೇರಿತು. ಪ್ರಿನ್ಸಿಪಾಲ್ ಜಿ ಬಿ ಸವಣೂರಿಂದ ಸ್ವಾಗತ, ಶ್ರೀ ಪಿ ಅನಂತ ನಾಯಕರಿಂದ ವರದಿ ವಾಚನ ಶ್ರೀ ಎಲ್. ಎನ್. ಜ್ಯೋತಿಷ್ಯ, ಶ್ರೀ ವಾಸುದೇವ ಕಾಮತ್, ಪಂಡಿತ್ ಟಿ. ಎನ್. ಶೇಷು ಸಂಬಿಯೂರ್ ಇವರಿಂದ ಭಾಷಣಗಳಾದ ಮೇಲೆ ಅಧ್ಯಕ್ಷರು ಆಯುರ್ವೇದಕ್ಕೆ ಸರಕಾರವೂ ಜನತೆಯೂ ಸಹಕಾರ, ಪ್ರೋತ್ಸಾಹ ನೀಡುವ ಅವಶ್ಯಕತೆಯನ್ನು ಕುರಿತು ಪ್ರತಿಪಾದಿಸಿದರು. ಸಮಾರಂಭದ ಆಂಗವಾಗಿ ಪಾರಿತೋಷಕ ವಿತರಣೆ ಮತ್ತು ನಾಟಕಾದಿ ವಿವಿಧ ಮನೋರಂಜನೆಗಳು ನಡೆದಿಂದ್ರ ಕಲಾಮಂದಿರದಲ್ಲಿ ರಾತ್ರಿ ಜರಗಿದವು.

ಡಾ| ರಾಧಾಕೃಷ್ಣ ಸೆಟ್ಟಿರಿಗೆ ಸತ್ಕಾರ

ಇದೇ ತಾ. 22ನೇ ಸಂಜೆ ಉಡುಪಿ ಯೆನ್. ಆರ್. ಎಸ್. ಹೋಟಿನಲ್ಲಿ ಶ್ರೀ ಬಿ. ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಉಡುಪಿ ಒ ಬಾಯ್ಸ್ ಬೆಲ್ ಫೇಂ ಎಸೋಸಿಯೇಶನ ವತಿಯಿಂದ, ಮುಂಬಯಿ ಯುನಿವರ್ಸಿಟಿಯಿಂದ ಎರಡು ಬಂಗಾರದ ಮೆಡಲುಗಳನ್ನೂ ಫೆಲೊಶಿಪ್ಪನ್ನೂ ಗಳಿಸಿದ ಡಾ. ರಾಧಾಕೃಷ್ಣ ಸೆಟ್ಟಿ ಎಂ. ಡಿ. (ದಿ ಕಾಮು ಮುದ್ದಣ್ಣ ಸೆಟ್ಟಿ ಪುತ್ರ)ರವರಿಗೆ ಸತ್ಕಾರ ಸಮಾರಂಭವೊಂದು ನೆರವೇರಿತು. ಡಾ। ಬಿ. ಬಿ. ಸೆಟ್ಟರು ಮತ್ತು ಅಧ್ಯಕ್ಷ ಶ್ರೀ ಹೆಗ್ಡೆಯವರು ಅತಿಥಿಗಳ ವ್ಯಸಂಗ ಜೀವನದ ಅನಿವಾರ್ಯತ ಶ್ರಮ, ಆತ್ಮಾಪೂರ್ವ ಕೀರ್ತಿ, ಮೊದಲಾದವನ್ನು ಕುರಿತು ಮಾತನಾಡಿದರು. ಆತಿಥಿ ಡಾ। ರಾಧಾಕೃಷ್ಣ ಸೆಟ್ಟರು ನನ್ನು ಕೆಲಸದಲ್ಲಿ ನಿಷ್ಠೆಯೂ, ಪರಿಶ್ರಮವೂ ಅತ್ಯಾವಶ್ಯಕವೆಂದೂ, ಸತತ ಪರಿಶ್ರಮದಿಂದಲೇ ಬದುಮೂನಗಳಿಸಲು ತನಗೆ ಸೌಧ್ಯವಾಯಿತೆಂದೂ ಹೇಳಿ ತನಗೆ ಕೊಟ್ಟ ಸತ್ಕಾರಕ್ಕಾಗಿ ವಂದನೆಗಳನ್ನರ್ಪಿಸಿದರು. ಡಾ। ಎಂ ಬಿ ಸೆಟ್ಟರ ಆಭಾರ ಮನ್ನಣೆಯೊಂದಿಗೆ ಸಭಾಂತ್ಯವಾಯಿತು.

ಮಣಿಪಾಲ ಹೈಸ್ಕೂಲಿನ ಪ್ರಮುಖ ಶಾಲಾ ಹಾಲಿನ ಉದ್ಘಾಟನೆ— ತಾ. 11ರಂದು ಡಾ। ಟಿ. ಎಂ. ಎ. ಪೈಗಳು ಶ್ರೀ ಟಿ ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಮಣಿಪಾಲ ಹೈಸ್ಕೂಲಿನ ಪ್ರಮುಖ ಶಾಲಾ ಹಾಲನ್ನು ಉದ್ಘಾಟಿಸಿದರು ಮುಖ್ಯೋಪಾಧ್ಯಾಯ ಶ್ರೀ ಬಿ. ರಘುನಾಥ ಹೆಗ್ಡೆಯವರು ಸ್ವಾಗತಿಸಿದರು. ಈ ಸಮಾರಂಭ ಕಾಲದಲ್ಲಿ ಶಾಲಾ ನಾಯಕ ಚಿ. ಶೀಕಾಂತ ಕೆದಿಲಾಯರು ರಾಷ್ಟ್ರೀಯ ರಕ್ಷಣಾ ನಿಧಿಗೆ ಶಾಲೆಯಿಂದ ನಿರ್ವಹಿಸಿ ಹಾಗೂ ಅಧ್ಯಾಪಕರಿಂದ ಸಂಗ್ರಹವಾದ ರೂ. 520/ನ್ನು ಅಧ್ಯಕ್ಷರಿಗೆ ಅರ್ಪಿಸಿದರು.

ಅಧ್ಯಕ್ಷರು ನೂತನವಾಗಿರುತ್ತಾ ನೆಯರೊರೆವರ ಶಾಂತಿಪ್ರಿಯತೆಯನ್ನೂ, ಚೀನಾಯರ ದುರಾಚಾರವನ್ನೂ ವಿವರಿಸಿದರು. ಮತ್ತು ಮುಂದುವರುತ್ತಾ ಅವರು, "ನಮ್ಮ ದೇಶ ಪಾಶ್ಚಿಮದೊಡನೆ ಬಾಧ್ಯವೂ ಬೆಳೆಯಬೇಕು. ಪ್ರತಿಯೊಬ್ಬ ಭಾರತೀಯನೂ ಇಂದು ಕುಂಬಾ ನಿದ್ರೆಯಿಂದ ತನ್ನ ಕೆಲಸ ನೂಡಬೇಕು. ವಿದ್ಯಾರ್ಥಿಗಳು ಬೇಗ ಬೇಗನೆ ಯಶಸ್ವಿಪದೆದು ರಾಷ್ಟ್ರ ಸೇವೆಗೆ ಸಿದ್ಧರಾಗಬೇಕು. ಎಸ್.ಸಿ., ಎನ್.ಸಿ.ಸಿ ಗಳಂತಹ ಖಾತೆಗರ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚು ಆಸಕ್ತಿ ತೋರಿಸಬೇಕು ರಾಷ್ಟ್ರಾಯಣದ ಅಳಿಲಸೇವೆ ನಮಗೆ ಆದರ್ಶವಾಗಿರಬೇಕು. ನಮ್ಮ ಕರ್ತವ್ಯವನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿ ಅದರ ಸ್ಪಕಾರ ನಡೆದ್ದೇಕೊಂಡರೆ ನಮ್ಮ ದೇಶವು ಬಲಿಷ್ಠವಾಗುವುದು" ಎಂದು ಹೇಳಿದರು.

ಡಾ। ಟಿ. ಎಂ. ಎ ಪೈಗಳು ತಮ್ಮ ಉಪನ್ಯಾಸ ಭಾಷಣದಲ್ಲಿ "ವಿದ್ಯಾರ್ಥಿಗಳು ಚಿನ್ನಾಗಿ ಕಲಿತು, ಈ ಸ್ಕಾಲರ್ಶಿಪ್ ಮಾನೋಪರವಾಗಿದೆ ಮಾತ್ರವಲ್ಲದೇ ಕೈಪ್ರೌಢಿಕರಾಗಿಯೂ ಆತ್ಮಸ್ಥೈರ್ಯವಾಗಿದೆ ಎಂದು ಜನರು ಹೇಳುವಂತೆ ನಡಬೇಕು. ಹುಡುಗರು ಬೇಗನೇ ಯಶಸ್ಸಿಯನ್ನು ಹೊಂದಿ ಗುರುಗಳಿಗೂ ಹೆತ್ತವರಿಗೂ ಕೀರ್ತಿಯನ್ನು ತರಬೇಕು" ಎಂದು ಹೇಳಿದರು.

Announcement

Twenty Sixth January is a great day for us, and more so, this year, in the context of the Chinese incursion into our sacred land across the formidable barriers of the Himalayas.

'NAVAYUGA' the popular Kannada weekly of our state has been all along advocating the cause of the common man in his struggle for independence prior to 1947, and even after independence. All these years, it has been a useful vehicle of modern political and cultural thought; it has been a very vociferous medium of advertising the accomplishments of our banking and industrial concerns, and the fare of the traders all over the state.

This year's REPUBLIC DAY SPECIAL is going to be a larger issue and can serve the above said purposes better. In short, it will fully promote your interests and cater to your literary and cultural tastes.

Shall we, hence, request you to join us in the celebrating the Republic Day, 1963 by advertising your fare in our columns and contributing to the success of the special on or before 10 -1—1963.

ADVT. MANAGER.
Navayuga. Udipi.

ರಷ್ಯ-ಚೀನಾಗಳ ಸಂಬಂಧ

(ಜನೇ ಪುಟದಿಂದ)

ಡಿಯೂವರು. ಚೀನಾ ತಾನೇನು ಮಾಡುತ್ತೇನೆ? ತಾನೆಲ್ಲಿದ್ದೇನೆ? ತನ್ನ ಸ್ಥಿತಿ ಏನೆಂಬುದನ್ನು ಮೊದಲು ತಿಳಿದುಕೊಳ್ಳಲಿ ಎಂದು ಮೊದಲು ಘೋಷಿಸಿದರು. ಭಾರತದ ಮೇಲೆ ಚೀನಾ ಆಕ್ರಮಣ ಮಾಡಿದುದನ್ನು ಅವರು ಬಹಿರಂಗವಾಗಿ ಆಲ್ಲದಿದ್ದರೂ ಗುಟ್ಟಿನಲ್ಲಿ—"ನಿನ್ನ್ಮ ಗೊಡವೆಗೆ ಈ ಪ್ರಸಂಗದಲ್ಲಿ ನಾವು ಬರಲಾರೆವು. ನಿಮ್ಮ ವಿಚಾರ ನೀವೇ ಮಾಡಿಕೊಳ್ಳಿರಿ. ನಮ್ಮಿಂದೇನೂ ಸಿಗಲಾರದು." ಎಂದು ಚೀನಾಕ್ಕೆ ನಿರ್ದಾರಾತ್ಮಕವಾಗಿ ಹೇಳಿಯೇಬಿಟ್ಟರು. ಆಗ ಚೀನಾಕ್ಕೂಸುಮ್ಮಗಿರಲಾಗದೆ ಅದ್ಯ ರಷ್ಯಾವನ್ನು ತನ್ನ ಪಾಲ್ಗಿಮೆಂಟರಿ ಪ್ರಕ್ರಟಣೆಯಲ್ಲಿ ಆದರ ಸ್ವೈರವೃತ್ತಿ ಮತ್ತು ಬಲಾತ್ಕಾರದ ಬಗ್ಗೆ ಟೀಕೆ ಮಾಡಿತು. ಈಗ ಚೌ ಮೂಯೋರವರ ರಕ್ತವೂ ಕುದಿಯಿತು. ಭಾರತದ ತಮ್ಮ ಆಕ್ರಮಣಕ್ಕೆ ಸಹಾಯ ಮಾಡದೆ ಕಮ್ಯುನಿಸ್ಟ್ ತತ್ವಕ್ಕೇ ದ್ರೋಹ ಮಾಡುತ್ತಿರೆಂದು ರಷ್ಯವೆ ಮೇಲೆ ಆರೋಪ ಮಾಡಿತು. ಮಾಪೊರವರ ತತ್ವವಾದ "ಶಾಮ್ರಾಜ್ಯಶಾಹಿಯಿಂದ ಕಾಗದ 'ಹುಲಿ' ಎಂದು ಕ್ರುಶ್ಚೇವರು ಟೀಕಿಸುತ್ತಾ "ಈ ಕಾಗದ ಹುಲಿಗೆ ಬೀಜಾಣುಗಳೆಂಬ ಹಲ್ಲುಗಳವೆ" ಎಂಬುದನ್ನು ಮರೆಯಬಾರದು ಎಂದು ಸಾರಿದರು ಕಳೆದ ವಾರದ ಚೀನಾದ ರಾಷ್ಟ್ರೀಯ ಕಮ್ಯುನಿಸ್ಟ್ ಸಭೆಯ ಅಧ್ಯಕ್ಷೆ ಸ್ಥಾನದಿಂದ ಮಾತನಾಡುತ್ತಾ ಶ್ರೀ ಹುಂವಾಂಗ್-ಚೆನ್ ಯವರು ರಷ್ಯವು ಬಂದು ನಿರ್ದಿಷ್ಟ. ನೀತಿ-ಘೋರಣೆಗಳಲ್ಲದ ಕಮ್ಯುನಿಸ್ಟ್ ತತ್ವ ವಿರೋಧಿ ದೇರವೆಂದು ಹೇಳಿ ಚೀನಾದ ಹೇಳಿಕೆಯನ್ನು ಬಲವಾಗಿ ಪ್ರಚಂಡ ಕರತಾಡನಗಳ ಮಧ್ಯೆ ಸನುಥಿಸಿದರು. ಹೀಗೆ ಪರಸ್ಪರ ಇಬ್ಬಣದವರೂ ಪ್ರತ್ಯಕ್ಷವಾಗಿ ಒರೆಯಿಂದ ಕತ್ತಿಯನ್ನೂ ಕಳಚಿ ಕಾದಾಡಲು ಹೊಂಚು ಹಾಕುತ್ತಿರುವಂತೆ ಕಾಣತ್ತದೆ.

ನಮಗನುಕೂಲವೇ ಸರಿ!

ರಷ್ಯವನ್ನು ನಮ್ಮ ಗಡಿ ವಿವಾದದಲ್ಲಿ ಕಟ್ಟಸ್ಥವಾಗಿ ಮಾಡಿದರೆ ಮುಂದೆ ಚೀನಾವನ್ನು ಬೆನ್ನಟ್ಟಲು ಹೆಚ್ಚು ಕಷ್ಟವಿಲ್ಲ ಎನ್ನುವುದು ನಿತ್ಯ ಸತ್ಯವಾದ ಸಂಗತಿ. ಹೀಗಿರುವಾಗ ಇಂದು ರಷ್ಯಾ-ಚೀನಾಗಳೊಳಗೆ ಈ ರೀತಿಯ ಬಲವಾದ ಘರ್ಷಣೆ ಉಂಟಾಗಿರುವುದು ನಿಜಕ್ಕೂ ನಮ್ಮ ಭಾಗ್ಯವೆಂದು ಹೇಳ ಬೇಕು. ಕ್ರುಶ್ಚೇವರು 'ಚೀನಾವು ಭಾರತದ ಮೇಲೆ ಆಕ್ರಮಣಮಾಡಿದೆಯೆಂದು ಸ್ಪಷ್ಟವಾಗಿ ಹಾಗೂ ಬಹಿರಂಗವಾಗಿ ಹೇಳಿದ್ದಾರೆಂದು ಜರ್ಮನಿ' ಪತ್ರಿಕೆಗಳು ಸವಿವರವಾಗಿ ಪ್ರಕಟಿಸಿವೆ ಇದರಿಂದ ಭಾರತದ ಕಟಿಸ್ಥ ಧೋರಣೆಗೆ ಎಷ್ಟೊಂದು ಮಹತ್ತರವಾದ ಜಯದೊರೆಯಿತೆಂಬುದು ವಿದಿತವಾಗುತ್ತದೆ ಇನ್ನು ರಷ್ಯಾ ಭಾರತಕ್ಕೆ ಕೊಡುವ ಯಾವುದೇ ಸಹಾಯದಲ್ಲಿ ಕಡಿತ ಮಾಡಲಾರದು ಆದರೆ ಅದು ಚೀನಾಕ್ಕೆ ಮಾಡುವ ಸಹಾಯದಲ್ಲಿ ಶೇಕಡಾ ೧೫ರಷ್ಟು ಕಡಿವೆ ಮಾಡಿದೆ. ಈ ವಿಚಾರವು ಜಗತ್ತಿನ ಎಲ್ಲಾ ರಾಷ್ಟ್ರಕೀಯ ತಜ್ಞರು ಕುತೂಹಲ ಕೆರಳಿಸಿ ರಷ್ಯದ ಈ ಭಾರತದ ಪರ ಸ್ನೇಹವನ್ನು ಭಾರತದ ಭಾಗ್ಯವೆಂದೇ ಸಂಭೋಧಿಸಿ ಶ್ಲಾಘಿಸಿವೆ ಇನ್ನು ಭಾರತಕ್ಕೆ ಚೈನಾವನ್ನು ಸದೆ ಬಡಿಯಲು ಹೆಚ್ಚು ಕಷ್ಟವಿಲ್ಲ. ಚೈನಾ ಈಗ ತನ್ನ ಸ್ಥಿತಿಯ ಬಗ್ಗೆ ಕಳವಳಪಡುವುದು ಸ್ವಾಭಾವಿಕವಾಗಿದೆ. ಆದರೆ "ಕೊಂದ ಪಾಪ ತಿಂದು ಪರಿಹಾರ" ಎಂಬಂತೆ ಅದು ಮಾಡಿದ ಅನ್ಯಾಯವನ್ನು ತಿಂದೇ ತೀರಬೇಕು. ರಷ್ಯಾಕ್ಕೆ ಚೀನಾದ ಸ್ವಾರ್ಥಪೂರ್ಣ ದುರಾಕಾಂಕ್ಷೆಗಳ ಅರಿವು ಮೊದಲೇ ಆಗಿದ್ದರೂ ಅದು ಈತನಕ ಬಾಯಿಬಿಟ್ಟು ಹೇಳಿಲ್ಲ. ಆದರೆ ಈಗ ಬಾಯಿಬಿಟ್ಟು ಹೇಳಿದೆ. ಮತ್ತು ಚೀನಾಕ್ಕೆ ಎಚ್ಚರಿಕೆಯಿತ್ತಿದೆ ಇನ್ನು ಜಗತ್ತಿನಲ್ಲಿ ಚೈನಾವನ್ನು ಯಾವ ದೇಶವೂ ಸವಿ.ರ್ಥಿಸಲಾರದು ಎಂದರೆ ಅತಿಶಯೋಕ್ತಿಯೂಗಲಾರದು. ರಷ್ಯಾ ಈಗಲಾದರೂ ಭಾರತದ ನ್ಯಾಯಪೂರ್ಣ ನೀತಿಯನ್ನು ತಿಳಿದು ಚೈನಾದ ಅಪುರಿ ಆಕ್ರಮಣವನ್ನು ಖಂಡಿಸಿದುದಕ್ಕೆ ಭಾರತ ನಿಜಕ್ಕೂ ಕೃತಜ್ಞವಾಗಿದೆ. ಆದರೆ ಈ ನ್ಯಾಯಪೂರ್ಣ ವರ್ತನೆಯನ್ನು ನಾವು ತುಂಬು ಹೃದಯದಿಂದ ಸ್ವಾಗತಿಸುತ್ತೇವೆ.

ಚೀನಾವನ್ನು ಬಹಿಷ್ಕರಿಸಬೇಕು!

ಮಿತ್ರ ದ್ರೋಹವೂಡಿದ ಚೀನಾವನ್ನು ಇಂದು ಜಗತ್ತಿನ ಎಲ್ಲಾ ರಾಷ್ಟ್ರಗಳು ಏಕ ಕಂಠದಿಂದ ನಿಂದಿಸಿ ಅದು ಜಾಗತಿಕ ಶಾಂತಿಗೆ ಗಂಡಾಂತರಕಾರಿ ಎಂದು ಸಾರಬೇಕು. ತನ್ನ ಅಧಃಪತನದತ್ತ ತಾನೇ ಸಾಗುತ್ತಿರುವ ಅದನ್ನು ಇಂದೂ ಯಾರೂ ಕಡೆಯುವ ಅಗತ್ಯವಿಲ್ಲ. "ಕಟ್ಟಿ ಮೇಲೆ ಬುದ್ಧಿ, ಕಟ್ಟ ಮೇಲೆ ಉರಿ" ಎಂಬ ನಾಣ್ನುಡಿಯಂತೆ ಅದಕ್ಕಾಗಬೇಕು. ಬಾಯಲ್ಲಿ ಶಾಂತಿ ಶಾಂತಿ ಎಂದು ಒನರಿ, ಕೈಯಲ್ಲಿ ಖಡ್ಗ ಹಿಡಿದು ಹಿಂಸೆ ಮಾಡುವ ಈ ಚೈನಾವನ್ನು ಜಗತ್ತೇ ಪ್ರತ್ಯೇಕಿಸಿಡಬೇಕು. ಹೀಗೆ ಮಾಡದಿದ್ದರೆ ಚೀನಾದ ಈ ಪಾಶವೀ ಕೃತ್ಯಕ್ಕೆ ಯಾವ ಒಂದು ತಡೆಯೂ ಇಲ್ಲದಂತಾಗುವುದು.

———

ಮನೋವೈಜ್ಞಾನಿಕ ಸತ್ಯ

ಪ್ರವೃತ್ತಿ ಮತ್ತು ಸೌಂದರ್ಯಾಸ್ವಾದನೆ

ಭಾರತದ ವಿತಿಹಾಸಿಕ ಮಹತ್ವವಿರುವ ಅಂಜಂತಾದ ಸಂಬಂಧದ ಲೇಖನವನ್ನು ನಾನು ಪ್ರಕಟಿಸಿದ ನಂತರ ಒಡಿಸ್ಸಾದಿಂದ ನನ್ನ ಮಿತ್ರರು ತಮ್ಮ ರಾಜ್ಯಕ್ಕೆ ನನ್ನನ್ನು ಆಮಂತ್ರಿಸಲು ಮುಂದೆ ಬಂದರು. ಅವರ ಕೇಳಿಕೆಯನ್ನು ನಾನು ಸಂತೋಷದಿಂದಲೇ ಸ್ವೀಕರಿಸಿದೆ. ನನ್ನನ್ನು ಸ್ವಾಗತಿಸಿದವರು ಒಡಿಸ್ಸಾದ ಒಬ್ಬ ಉತ್ತಮ ಯಾಗೂ ಸುಪ್ರಸಿದ್ಧ ಕವಿ; ಇವರು ತ್ರಿಕರಣಗಳಿಂದ ಯೋಗ್ಯರು ನುತ್ತು ಸುಂದರ ಸುಕುಮಾರರು. ಅವರ ಮೊದಲ ಭೇಟಿಯಲ್ಲೇ ನನ್ನ ಸ್ನೇಹವು ದೃಢವಾಯಿತು.

ಈ ಮಹಾನೀಯರು ಆಗ ಶಿಕ್ಷಣ ವಿಭಾಗದಲ್ಲಿ ಒಂದು ದೊಡ್ಡ ಹುದ್ದೆಯಲ್ಲಿದ್ದರು. ತಮ್ಮ ಯುವಾವಸ್ಥೆಯಲ್ಲಿ ಅವರು ಕೊನಾರ್ಕದ ಸೂರ್ಯ ದೇವಾಲಯದ ಬಳಿಯಲ್ಲೇ ಶಾಲೆಯೊಂದರಲ್ಲಿ ಅಧ್ಯಾಪಕರಾಗಿದ್ದರು. ಆ ಸಮಯದಲ್ಲಿ ಅವರಿಗೂ ಈ ದೇವಾಲಯಕ್ಕೂ ನಂಟುತನ ಬೆಳಿತ್ತು. ಅದು ಅಚಲವೂ ಆಗಿ ಪರಿಣಮಿಸಿತ್ತು ಅದೆಷ್ಟು ಬಾರಿ ಮಂದಿರ ನೋಡಲು ಹೋಗುತ್ತಿದ್ದರೋ, ಎಷ್ಟು ತಾಸುಗಳ ವರೆಗೆ ಅದರ ಸೌಂದರ್ಯವನ್ನು ಆಸ್ವಾದಿಸುತ್ತ ಇರುತಿದ್ದರೋ ಅವರೂ ಲೆಕ್ಕವಿಟ್ಟಿಲ್ಲ. ಇದರಿಂದಾಗಿಯೇ ಸೂರ್ಯದೇವಾಲಯವನ್ನು ಸ್ವಂತ ಸಂಪತ್ತು ಭೂಮಿಯಂತೆ ಅವರು ಕಾಣುತಿದ್ದರು. ನನಗಾದರೂ ತಮ್ಮ ಅಸ್ತಿಪಾಸ್ತಿಯನ್ನೇ ತೋರಿಸುತ್ತಿರುವೆನೆಂಬಷ್ಟು ಉತ್ಸಾಹ ಮತ್ತು ಅಭಿಮಾನಗಳಿಂದ ಅದನ್ನು ತೋರಿಸಿದರು.

ನೀವು ಕೊನಾರ್ಕ ದೇವಾಲಯವನ್ನು ನೋಡಿರಬಹುದು. ಇಲ್ಲವೇ ನೋಡದಿರಬಹುದು. ಆದರೂ ಪ್ರಪಂಚದ ಶ್ರೇಷ್ಠ ಕಲಾಕೃತಿಗಳಲ್ಲಿ ಅದೂ ಒಂದು ಎಂಬುದನ್ನು ಮಾತ್ರ ನೀವು ಅವಶ್ಯ ತಿಳಿದಿರಬೇಕು ಅತ್ಯಂತ ವಿಶಾಲವೂ ಸಾವಿರಾರು ಮೂರ್ತಿ ಸವೇತವೂ ಆಗಿ ಸುಶೋಭಿತವಾಗುತ್ತಿರುವ ಇದು ವಿಶ್ವದವೈಚಿತ್ರ್ಯಗಳಲ್ಲಿ ಒಂದು. ಈ ಮಂದಿರವನ್ನು ಕಂಡು ಒಬ್ಬ ಆಂಗ್ಲ ವಾಸ್ತು ಶಿಲ್ಪಿಯ ಮಾತುಗಳಲ್ಲಿ ಅದರ ಮಹಿಮೆಯನ್ನು ಕೇಳಿರಿ. ಅತನೆನ್ನುತ್ತಾನೆ: "ಆಗ್ರಾದ ತಾಜಮಹಾಲು ಜಗತ್ತಿನ ಜನರ ಕಣ್ಣಿಗೆ ಬೀಳುವುದಕ್ಕೆ ಮೊದಲೇ ಸೂರ್ಯ ದೇವಾಲಯವು ದೃಷ್ಟಿ ಗೋಚರವಾಗುತಿದ್ದಿರಬೇಕು. ತಾಜಮಹಾಲಿನ ಘನತೆಯು ಅಖಂಡಿತಕ್ಕೂ ಕುಂದುತಿತ್ತು". ಈ ಹೇಳಿಕೆಯೊಂದೇ ಕೊನಾರ್ಕದ ವಿತಿಶ್ಚತೆಗೆ ಸಾಕ್ಷಿ ಸಾಕು.

ಮಂದಿರವನ್ನು ತೋರಿಸುತ್ತ ನನ್ನ ಆತಿಥೇಯರು ನನ್ನತ್ತ ತಿರುಗಿ ಹೇಳಿದರು: "ಒಂದು ವಿಷಯ ನೀವು ನೋಡಿದಿರಾ? ಭಾರತದ ಆ ಕಾಲದ ಎಲ್ಲ ದೇವಾಲಯಗಳಲ್ಲೂ ಕಾಮುಕ ಮೂರ್ತಿಗಳು ಇವೆ. ಆದರೆ, ಇಲ್ಲಿ ಅವುಗಳು ನಾವೂಹ ಶೇಷವಾಗಿವೆ.'

ನಾನು ಒಂದೊಮ್ಮೆಯೇ ಸ್ತಬ್ಧನಾದೆ. ಕೆಲವು ಕ್ಷಣಗಳ ವರೆಗೆ ಏನನ್ನೂ ಹೇಳುವುದಾಗಲಿಲ್ಲ. ಆ ಬಳಿಕ ನನ್ನ ಕೈಯು ಒಂದು ಕಂಬದ ಕಡೆ ಎತ್ತಿತು. ಆದು ನನ್ನ ಎದುರಿಗೇ ನೇ ನಿಂತಿತ್ತು. ಅದರಲ್ಲಿ ಶಿಲ್ಪಿಯು ಎರಡು ಆಲಿಂಗನರತ ಪ್ರೇಮಿಗಳನ್ನು ಸಂಭೋಗ ಮುದ್ರೆಯಲ್ಲಿ ತೋರಿಸಿದ್ದನು. ಈ ಮೂರ್ತಿಗಳು ನಮಕಾಲೀನ ಶಿಲ್ಪಕಲೆಯಲ್ಲಿ ಅದ್ವಿತೀಯ ಸ್ಥಾನವನ್ನು ಪಡೆದಿದ್ದವೆನ್ನಬಹುದು. ಸುಂದರ ಕಲಾಕೃತಿಗಳು, ನರನಾರಿಯರ ಸಹಜ ದೈಹಿಕ ಆನಂದ ಮತ್ತು ಉಲ್ಲಾಸಗಳಿಂದ ಓತಪ್ರೋತವಾಗಿದ್ದುವು. ನಿಜವೆ. ಆದರೆ, ಕಾಮುಕತಾ ಪೂರ್ಣವಾಗಿದ್ದುವು. ನನ್ನ ಮಿತ್ರರನ್ನು ದೇಗುಲದ ಒಂದು ಸುತ್ತು ತಿರುಗಿಸಿದೆ. ಆತ್ಯದ್ಭುತ ಸೌಂದರ್ಯಯುಪೂರ್ಣವಾದ ಸುಮಾರು ಇಪ್ಪತ್ತು ಅಂತಹ ಉತ್ಕಟ ಕಾಮುಕ ಮುದ್ರೆಯ ಮೂರ್ತಿಗಳನ್ನು ತೋರಿಸಿದೆ.

ನನ್ನ ಕವಿ ಮಿತ್ರರು ಒಮ್ಮೆ ದಂಗುಬಡಿದಂತಾದರು. ಹತ್ತಿಪ್ಪತ್ತು ಬಾರಿ ಅವರು ಕೊನಾರ್ಕವನ್ನು ನೋಡಿದರು; ತಾ ಸುಗಟ್ಟಲೆ ಹೊತ್ತು ಅಲ್ಲಾಳಿದು ಪ್ರತೀಕ್ಷೆ ನಡೆಸಿದ್ದರು. ಆದರೆ, ಈ ಮೂರ್ತಿಗಳ ನಷ್ಟಿ ಅವರೀವರೆಗೆ ಕಂಡುದಿಲ್ಲ. ಅವರ ಮನದಲ್ಲಿ ಹುದುಗಿದ್ದ ನಿರ್ಮಲತೆ ಮತ್ತು ಕವಿದೃಷ್ಟಿಗಳಿಂದಾಗಿ ಅವರ ವೆದುಳಲ್ಲಿ ಈ ಮೂರ್ತಿಗಳ ಮುದ್ರೆಯೇ ಬಿದ್ದಿರಲಿಲ್ಲ. ಇವುಗಳ ಪಕ್ಕದಲ್ಲಿ ಸರಿಯುತ್ತಿರುವಾಗ ಅವರ ದೃಷ್ಟಿ ಶಕ್ತಿಯು ಸುಪ್ತ ಪ್ರಾಪ್ತಾವಸ್ಥೆಯನ್ನೈದುತಿತ್ತು ಎಂದು ಹೇಳಬಹುದು.

'ಸೌಂದರ್ಯವು ದೃಷ್ಟಾರನ ಕಣ್ಣುಗಳಲ್ಲಿ ನೆಲಸುತ್ತದೆ' ಎಂಬುದೊಂದು ಗಾದೆಯಿದೆ. ನಮ್ಮ ಸಂಸ್ಕಾರಗಳಿಂದ ನಿಯಂತ್ರಿತಗೊಂಡ ಮನಸ್ಸು ತನ್ನ ಅಭಿರುಚಿಗೆ ಹೊಂದುವ ವಸ್ತುಗಳನ್ನು ಮಾತ್ರಗ್ರಿಸುವ ಪ್ರವೃತ್ತಿಯೆ ಎಂಬುದಕ್ಕೆ ಇದೊಂದು ಜ್ವಲಂತ ನಿದರ್ಶನ.

ಈ ಪ್ರಶ್ನೆಯು ನನಗಾದುದು ಕೊನಾರ್ಕದಲ್ಲಿ. ಇದನ್ನು ನಾನೆಂದಿಗೂ ಮರೆಯುವುದಿಲ್ಲ. ಅಂದು ನನಗೂ ನನ್ನ ಆತಿಥೇಯರಿಗೂ ಏಕ ಕಾಲದಲ್ಲಿ ಜ್ಞಾನೋದಯವಾಯಿತು. ನೋಡಬಯಸುವುದನ್ನೇ ನಾವು ನೋಡುತ್ತೇವೆ ಎಂಬ ಮನೋವೈಜ್ಞಾನಿಕ ಸತ್ಯವು ನಮಗೆಂದು ಮನವರಿಕೆಯಾಯಿತು.

ಪರಮಾತ್ಮನ ಅನಂತ ಸೃಷ್ಟಿಯಲ್ಲಿ ಅನಂತ ಸೌಂದರ್ಯವಡಗಿದೆ. ಇದನ್ನು ಸೂರೆಗೊಂಡವನು ಇದು ವರೆಗೆ ಯಾರೂ ಇಲ್ಲ; ಮುಂದೆಯೂ ಬಾರಲಾರರು. ಅವರವರ ಮನೋವೃತ್ತಿಗೆ ಅನುಗುಣವಾದ ಸೌಂದರ್ಯವನ್ನು ಮಾತ್ರ ನೋಡುವಲ್ಲಿ ಅನುಭವಿಸುವಲ್ಲಿ ಅವರು ಸಶಕ್ತರಾಗುತ್ತಾರೆ. ಇದು ಪ್ರಕೃತಿಯ ನಿಯಮ ಮತ್ತು ಮನೋವೈಜ್ಞಾನಿಕ ಸತ್ಯ. ಇದನ್ನು ಮೀರಿ ನಡೆಯುವ ಶಕ್ತಿ ಮಾನವನಿಗೆ ಇಲ್ಲ. ಅದುದರಿಂದಲೇ ಒಂದು ಮೂಲನಸ್ತು ಎಲ್ಲರಲ್ಲೂ ಒಂದೇ ವಿಧವಾದ ಪ್ರತಿಕ್ರಿಯೆಯನ್ನು ಮೂಡಿಸಲಾರದು.

(ಡಾ। ಚಾರ್ಲ್ಸ್ ಫಾಬ್ರಿಯನರ ಲೇಖನದಿಂದ)

ಹೊಸ ಪುಸ್ತಕ—

ನಚಿಕೇತ'ರ,

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ವರ್ಗ—ಊಳಿಗ

ನೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು,

ಶಾಲಾ ರಿಜಿಸ್ಟ್ರಿಗಳು,

ಫಾರ್ಮುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

'ಇನ್‌ಫ್ಲೆನ್ಸ್'

'Influence ಅಂದರೆ ಇದನ್ನು ಕನ್ನಡದಲ್ಲಿ ಪ್ರಭಾವ ಎಂದು ಹೇಳಬಹುದು. ಆದರೆ ಈ ಕನ್ನಡ ಶಬ್ದ ಅಷ್ಟೊಂದು ವಿಶೇಷವಾಗಿ ಕಾಣುವುದಿಲ್ಲ. ಆದರೆ ಇದರ ಇಂಗ್ಲೀಷ್ ಪ್ರಯೋಗ ತುಂಬಾ ಪರಿಣಾಮಕಾರಿಯಾಗಿ ಸಮಾಜದಲ್ಲಿ ತನ್ನ ಆಟವನ್ನು ಆಡುತ್ತಿದೆ. ಇನ್‌ಫ್ಲೆನ್ಸ್ ಇಲ್ಲದ ವಿಷಯವೇ ಇಲ್ಲ. ಎಲ್ಲೆಲ್ಲೂ ಇನ್‌ಫ್ಲೆನ್ಸ್ ಹೋಟೇಲಿನಲ್ಲಿ ಕಾಫಿ ಊಟ ಸಮಯದಲ್ಲಿ ಸಿಕ್ಕ ಬೇಕಾದದ್ದೆ, ಬಸ್ಸಿನಲ್ಲಿ ಟಿಕೇಟ್ ಸಿಕ್ಕಬೇಕಾದರೆ, ಸಂಘ ಸಂಸ್ಥೆಗಳಲ್ಲಿ ಕೆಲಸ ಸಿಕ್ಕಬೇಕಾದರೆ, ವಿದ್ಯಾಲಯಗಳಲ್ಲಿ ಪ್ರವೇಶ ಸಿಕ್ಕ ಬೇಕಾದರೆ, ಅಲ್ಲಿ ಟೇಕು ಇನ್‌ಫ್ಲೆನ್ಸ್ ಈ 'ಪ್ರಭಾವ' ದಿನ ಜೀವನದಲ್ಲಿ ಇನ್‌ಫ್ಲುಯೆಂಜಾ (ಶೀತ ನೆಗಡಿ) ರೋಗವೇ ಆಗಿ ಹೋಗಿದೆ.

ನಮ್ಮ ರಾಜಕೀಯದಲ್ಲಿಯೇ ಇನ್‌ಫ್ಲೆನ್ಸ್ ಆಟ ಆಡಿಯೇ ಬಿಟ್ಟಿದೆ. ಚೀನೀಯು ಅನ್ಯಾಯ ಬದ್ಧ ಆಕ್ರಮಣಕ್ಕೆ ಸಹಕಾರವಾಗಿ ಮೆನನ್ನರ ಮತ್ತು ಭಾರತದ ಕಮ್ಯುನಿಷ್ಟರ ಇನ್‌ಫ್ಲೆನ್ಸ್ ಈ ಪರಿಸ್ಥಿತಿ ಇಡೀ ಭಾರತವನ್ನೇ ಬಿಕ್ಕಟ್ಟಿಗೆ ಗುರಿಪಡಿಸಿದೆ. ಏನಿದು ಫ್ಲೇಂಣೆ? ಕಮ್ಯುನಿಸಂ ಎಷ್ಟೆಷ್ಟೇ ಇದರ ತತ್ವಗಳು ಒಂದೇ ಆಗಿರಬಹುದು. ಕಾಗೆ ಎಷ್ಟೆಷ್ಟೇ ಕಾಗೆಯೇ ಆಗಿರಬಹುದು. ಆದರೆ ನಮ್ಮ ಕಮ್ಯುನಿಷ್ಟರಿಗೆ 'ತಾಯ್ನಾಡು' ಎಂಬುದರ ಗೊಡವೆಯೇ ಬೇಡವೇ? ಈ ಕಮ್ಯುನಿಸ್ಟ್ ಧುರೀಣರ ಮನೆಗೆ ಬಂದು ಇನ್ನೊಬ್ಬ ಕಮ್ಯುನಿಸ್ಟ್ ಧುರೀಣ ಯಜಮಾನಿಕೆ ನಡೆಸಿದರೆ ಸೊದಲನೆ ಯಜಮಾನನು ಸುಮ್ಮನಿರುವನೇ? ನಮ್ಮ ರಾಜಕೀಯ ಮಾ ಆರ್ಥಿಕ ಭಾವನೆ ಒಂದೇ ಇದೆ. ಆದುದರಿಂದ ನಮ್ಮ ನೀತಿಯ ಯಜಮಾನಿಕೆಯನ್ನು ಇನ್ನೊಬ್ಬನು ನೋಡಬಹುದು ಎಂದು ಯಾರಾದರೂ ಸುಮ್ಮನೆ ಇರಬಹುದೇ? ಏನಿದು ನಮ್ಮ ಕಮ್ಯುನಿಸ್ಟರ ಭಂಡಾರಾಲೋಚನೆ! ನಮ್ಮ ಜನತಂತ್ರ ಸರಕಾರದಲ್ಲಿ ತಪ್ಪುಗಳಿದ್ದರೆ ಅದನ್ನು ತಿದ್ದಿ ಸಮಾಜದಲ್ಲಿ ಜನತೆಯನ್ನು ಒಲಿಸಿಕೊಳ್ಳುವುದನ್ನು ಬಿಟ್ಟು ಪರದೇಶೀಯರಾದ ಚೀನೀಯರಿಗೆ ಕೆಂಪು ಪತಾಕೆಯನ್ನು ತೋರಿಸಿ ಭಾರತವನ್ನು ಬಲಿಕೊಡುವುದು ಭಾರತದ ಕಮ್ಯುನಿಸ್ಟರಿಗೆ ಹೆಮ್ಮೆಯ ವಿಷಯವೇ? ಇವರು ತಾವು ಏನಾಗಿದ್ದರೂ ಭಾರತೀಯರು ಎಂಬುದನ್ನು ಮರೆತ್ತಿದ್ದಾರೆಯೇ?

ರಾಜಕೀಯ ರಂಗದಲ್ಲಿ ಈ ರೀತಿ ಇನ್‌ಫ್ಲೆನ್ಸ್, ಅಂದರೆ ಚೀನೀ ಕಮ್ಯುನಿಸ್ಟರಿಗೆ ಭಾರತದ ಕಮ್ಯುನಿಸ್ಟರ ಇನ್‌ಫ್ಲೆನ್ಸ್-ಇನ್ನು ಈ ಇನ್‌ಫ್ಲೆನ್ಸ್ ಸಮಾಜದಲ್ಲಿ ಯಾವ ರೀತಿ ಕೆಲಸ ಮಾಡುತ್ತದೆ ಎಂದು ನೋಡುವ. ಈ ಇನ್‌ಫ್ಲೆನ್ಸ್ ಇರುವುದಾದರೂ ಯಾರ ಹತ್ತಿರ? ರಾಜಕೀಯ ಧುರೀಣರ ಹತ್ತಿರ ಶ್ರೀಮಂತರ ಹತ್ತಿರ ಸಂಘ ಸಂಸ್ಥೆಗಳ ಯಾ ಕಾರ್ಖಾನೆಗಳ ಮಾಲಿಕರ ಹತ್ತಿರ. ಕೆಲಸ ಕೇಳಲು ಹೋದರೆ, ಪ್ರವೇಶ ಕೇಳಲು ಹೋದರೆ ಅಲ್ಲಿ ಬೇಕು ಇನ್‌ಫ್ಲೆನ್ಸ್ ಪತ್ರ ಪಾಪ ಹಳ್ಳಿಯ ಬಡ ರೈತರು ಎಲ್ಲಿಂದ ತರಲಿ ಈ ಇನ್‌ಫ್ಲೆನ್ಸ್ ಪತ್ರಗಳನ್ನು? ಸರಕಾರವೇನೋ ಕಾನೂನು ಗಳನ್ನು ರಚಿಸುತ್ತಿದೆ. ಆರ್ಥಿಕ ಪರಿಸ್ಥಿತಿ, ಸಮಾಜದಲ್ಲಿ ಸ್ಥಾನ ಮತ್ತು ಯೋಗ್ಯತೆಯನ್ನು ನೋಡಿ ಜನರಿಗೆ ಉಪಕಾರಗಳನ್ನು ಕಲ್ಪಿಸಿಕೊಡಬೇಕು ಎಂದು. ಸರಕಾರ ಸಾರುತ್ತಿದೆ. ಇಂತಹ ನ್ಯಾಯ ಯಾರಿಗೆ ದೊರೆಯುತ್ತದೆ? ಹಿಂದಿನಿಂದಲೂ ನಡೆದುಬಂದ ವೃತ್ತಿಪರ ಜಾತೀಯತೆಯು ಇನ್ನೂ ಜೀವಿಯುತ್ತಿದೆ. ಏಷ್ಟಿದು ನ್ಯಾಯ! ರೈತನ ಸಗನು ರೈತನೇ ಆಗಬೇಕೇ? ಅಂದರೆ ಒಡತನ ಮಗನು ಬಡವನಾಗಿಯೇ ಉಳಿಯಬೇಕೇ? ಹಳ್ಳಿಗಳು ಹಳ್ಳಿಗ ಳಾಗಿಯೇ ಉಳಿಯಬೇಕೇ? ಮುಂದುಪರಿನ ಜನತಾಗ ಇಂತಹ ಅನ್ಯಾಯ ಲೋಪ ಪರೋಪಕಾರಗಳನ್ನು ಯಾಕೆ ತಿಳಿಯುವುದಿಲ್ಲ ಎಂಬುದು ತುಂಬಾ ಬೇಸರದ ಸಂಗತಿ.

ಕೆಲವು ಸಂಸ್ಥೆಗಳು, ಕಾರ್ಖಾನೆಗಳು, ಬ್ಯಾಂಕುಗಳು, ಅಂದರೆ ಹೆಚ್ಚಾಗಿ ಪ್ರೈವೇಟ್ ಸಂಸ್ಥೆಗಳು 'ಇನ್‌ಫ್ಲೆನ್ಸ್ ಸಂಸ್ಥೆಗಳು' ಎಂದೇ ಕರೆಯಲ್ಪಡುತ್ತಿವೆ. ನ್ಯಾಯ ಸ್ಥಾನಗಳಲ್ಲಿ ವಿದ್ಯೆ ಇಲ್ಲದೆಗಳಲ್ಲಿ ಕೂಡ ಇನ್‌ಫ್ಲೆನ್ಸ್ ನಡೆಯುತ್ತದಂತೆ. ಲಂಚಗುಳಿತನವು ಈ ಇನ್‌ಫ್ಲೆನ್ಸ್‌ಗೆ ಸಹಕರಿಸಿ ಅದರ ಜೊತೆಯಲ್ಲಿಗೆ ಸೇರಿಸಿ ಮೂಡುತ್ತಿದೆ. ಇದರಿಂದಾಗಿ ಸಾಮರ್ಥ್ಯ ಯೋಗ್ಯ ಬಡಜನರ ಜೀವನ ಮಣ್ಣುಪಾಲಾಗಿ ಹೋಗಿದೆ. ಎಷ್ಟೋ ಮಂದಿ ಪದವೀಧರರು ಇಂದು ಸಮಾಜದಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಅಂದರೆ ಅವರಲ್ಲಿ ಬುದ್ಧಿಯಂತಿಕೆ ಇದೆ, ಯೋಗ್ಯತೆ ಇದೆ, ಪ್ರಕಸ್ತಿ ಇದೆ. ಆದರೆ ಇನ್‌ಫ್ಲೆನ್ಸ್ ಇಲ್ಲ. ಶಿಫಾರಸು ಇಲ್ಲ. ದೊಡ್ಡ ದೊಡ್ಡ ಸರಕಾರಿ ಹುದ್ದೆಗಳು ಮಂತ್ರಿಗಳಿಗೆ, ಯಾ ವಕೀಲರ, ಯಾ ಡಾಕ್ಟರುಗಳ, ಯಾ ಮ್ಯಾಲಿಕರ ಪೀಳಿಗೆಗಳಗೇನೇ ಕಾಯಿಟ್ಟ ಹಾಗೆ ಕಾಣುತ್ತಿದೆ. ಸಮಾಜದಲ್ಲಿ ಈ ರೀತಿಯ ಅನ್ಯಾಯ ಬದ್ಧವಾದ ಲೋಪದೋಷಗಳು ಇರಲು ನಾನೇ ಅಂದರೆ ನಮ್ಮ ಜನತೆಯೇ ಕಾರಣವಲ್ಲವೆ? ಇಂದು 'ಕಮ್ಯುನಿಸಂ' ತಲೆ ಎತ್ತಲು ಅವಕಾಶವನ್ನು ನಾವೇ ಈ ರೀತಿಯಾಗಿ ಕಲ್ಪಿಸಿಕೊಟ್ಟಿದ್ದು ಎಂದರೆ ತಪ್ಪಾಗದೀತೆ?

ನಮ್ಮ ಮುಂದುವರಿದ ಜಲ್ಪ ಜನತಾಂಗವು ಇಂತಹ ಲೋಪದೋಷಗಳಿಗೆ ಸ್ಥಾನ ಕೊಡಬಾರದು. ಎಲ್ಲರಿಗೂ ಒಂದೇ ರೀತಿಯ ನ್ಯಾಯ ದೊರಕಿಸುವಂತೆ ಸಹಕಾರ ನೀಡಬೇಕು. ತಾನು ಯಾವ ಸ್ಥಾನದಲ್ಲಿದ್ದರೂ ತಾನು ಮನುಷ್ಯನೆಂಬುದನ್ನು ಮರೆಯಬಾರದು. ಕಷ್ಟ ಸುಖಗಳೆಂಬು ಎಲ್ಲರಿಗೂ ಒಂದೇ ಎಂಬುದನ್ನು ರುಜುವು ಬಾರದು. ಎಲ್ಲರಿಗೂ ಸದವಕಾಶಗಳನ್ನು ಒದಗಿಸಿಕೊಡಲು ನೆರವಾಗಬೇಕು. ಸಂಕುಚಿತ ಭಾವನೆಗಳನ್ನು ತೊಲಗಿಸಿ ನಾವೆಲ್ಲರೂ 'ಭಾರತೀಯರು' ಎಂಬ ವಿಶಾಲ ಭಾವನೆ ನಮ್ಮ ಜನರಲ್ಲಿ ಹುಟ್ಟಬೇಕು. ಮಹಾತ್ಮಾ ಗಾಂಧಿ ನೆಹರುಲಾದ ಮಹಾ ಪುರುಷರು ಹಾಕಿಕೊಟ್ಟ ಆದರ್ಶ ಮಾರ್ಗವನ್ನು ಅನುಕರಿಸಲು ಎಂದೂ ಮರೆಯಬಾರದು. ಆಗ ತಾನೇ ನಮ್ಮ ಜನತಂತ್ರ ಸರಕಾರದ ಸಫಲತೆ ಕಾಣಬಹುದು; ಬಡತನ, ಅವಿದ್ಯಾಜ್ಞಾನ ರೋಗಗಳ ಸಮಸ್ಯೆಗಳು ದೂರವಾಗಬಹುದು. ದೇಶದಲ್ಲಿ ಶಾಂತಿ ನೆಲೆಸಬಹುದು.

— ಕೆ. ಆರ್. ಜೋಂಟ್ರ, ಬಿ. ಎ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲೀಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ವಿನಯವಂತ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ರವಾನೆಯಾಗುವುದು

ನವಭಾರತ ಪುಸ್ತಕ ಭಂಡಾರ, ಮಂಡ್ಯ.

ಪ್ರತಿಗಳು— ಮಂಗಳೂರಿನ ಶ್ರೀನಿವಾಸ್ ಬ್ರದರ್ಸ್, ಸ್ಟಾರ್ ಬುಕ್ ಕೊ., ಕೆನರಾ ಕೊಆಪ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜೆನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಷ್ಮಲಾ ನ್ಯೂಸ್ ಏಜೆನ್ಸಿಯಲ್ಲಿಯೂ ದೊರೆಯುತ್ತವೆ.

ಗುಲಾಮನ ನಾಯಿ

ಇದು ಬಹಳ ಹಿಂದಿನ ಕಾಲದ ಕತೆ. ರೋಮ್ ದೇಶದಲ್ಲಿ ಒಬ್ಬ ರಾಜನಿದ್ದ. ಆತನ ಸೈನ್ಯ ಬಹಳ ದೊಡ್ಡದಾಗಿತ್ತು. ಒಂದು ಭಾರಿ ದೇಶದಲ್ಲಿ ಅಂತಃಕಲಹ ಉಂಟಾಯಿತು. ಆಗ ಎರಡು ಪಕ್ಷ ಇತ್ತು. ಒಂದು ರಾಜನ ಪಕ್ಷ. ಇನ್ನೊಂದು ಜನತಾ ಪಕ್ಷ. ರಾಜನ ಪಕ್ಷದ ಸೈನಿಕರಲ್ಲಿ ಒಬ್ಬನ ಬಳಿ ಒಬ್ಬ ಗುಲಾಮನಿದ್ದ. ಆ ಗುಲಾಮ ಒಂದು ನಾಯಿಮರಿಯನ್ನು ಸಾಕಿದ್ದ. ಅದನ್ನು ಕಂಡರೆ ಅವನಿಗೆ ಬಹಳ ಪ್ರೀತಿ. ನಾಯಿಗೂ ಅಷ್ಟೇ. ಒಂದು ದಿನ ಸೈನಿಕ ಗುಲಾಮನನ್ನು ಕರೆದು 'ನಿನ್ನ ನಾಯಿ ನನಗೆ ಕೊಟ್ಟುಬಿಡು' ಎಂದ. ಗುಲಾಮ 'ಪ್ರಾಣ ಬೇಕಾದ್ರೂ ಕೊಟ್ಟೇನು. ನಾಯಿ ಕೊಡಲಾರೆ' ಎಂದ. ಯುದ್ಧ ನಡೆವಾಗ ಯಜಮಾನನ ಜತೆಯಲ್ಲೇ ಗುಲಾಮನೂ ಹೋದ. ಗುಲಾಮನ ಹಿಂದೆ ಅವನ ನಾಯಿ ಹೋಯಿತು. ಅಲ್ಲೊಂದು ಕಾಡು. ಅಲ್ಲಿ ಸೈನಿಕ ಗುಲಾಮನನ್ನು ಕೊಂದು ಹಾಕಿದೆ. ನಂತರ ಕಾಡುರಿ ಹತ್ತಿ ವೇಗವಾಗಿ ಹೊರಟು ಹೋದ. ನಾಯಿಗೆ ಬಹಳ ವ್ಯಸನವಾಯಿತು. ಮೂರು ದಿನ ಅನ್ನನೀರು ಇಲ್ಲದೇ ಗುಲಾಮನ ಶವವನ್ನು ಕಾಯ್ತು. ಆತ್ತ ಇತ್ತ, ನಾಲ್ಕನೇ ದಿನ ರಾಜ ಸೈನಿಕರೊಡನೆ ಅತ್ತಕಡೆ ಬಂದ. ನಾಯಿಯನ್ನು ನೋಡಿ ಸೈನಿಕರು ನಾಯಿತು. ಸೈನಿಕರಿಗೆ ಹೇಳಿ ಗುಲಾಮನ ಶವವನ್ನು ಹೊಳಿಸಿ, ನಾಯಿಯನ್ನು ಅರಮನೆಗೆ ಕರೆದುಕೊಂಡು ಹೋದ. ಅನ. ರಾಜನ ಜೊತೆಯಲ್ಲಿಯೇ ಇರುತ್ತಿತ್ತು.

ಒಂದು ದಿನ ರಾಜ ತನ್ನ ಸೈನಿಕರನ್ನೆಲ್ಲಾ ಒಟ್ಟುಗೂಡಿಸಿದ. ನಾಯಿ ರಾಜನ ಪಕ್ಕದಲ್ಲೇ ಇತ್ತು. ಒಬ್ಬ ಸೈನಿಕ ರಾಜನ ಬಳಿ ಬಂದ. ನಾಯಿ ಬೊಗಳಿ ಅವನ ಮೇಲೆ ಹಾರಿತು. ಸೈನಿಕ ಹೆಚ್ಚಿದ. ರಾಜನಿಗೆ ಆಶ್ಚರ್ಯವಾಯಿತು. ನಾಯಿ ಬೊಗಳಿ ಸೈನಿಕನ ಬಟ್ಟೆ ಹರಿಯಿತು. ಅವನನ್ನು ಜೆನ್ನಾಗಿ ಪರಚಿತು. ರಾಜ ಸೈನಿಕನನ್ನು "ಏನು ವಿಚಾರ?" ಎಂದು ಕೇಳಿದ.

ಸೈನಿಕ, "ಅಲ್ಪಳು ಈ ನಾಯಿಯು ಯಜಮಾನ ಗುಲಾಮನನ್ನು ನಾನೇ ಕೊಂದೆ. ಇದಕ್ಕೇ ಹೀಗೆ ಬೊಗಳಿ ಪರಚುತ್ತೆ" ಎಂದ. "ಇವನನ್ನು ಗಲ್ಲಿಗೇರಿಸಿ" ಎಂದು ರಾಜ ಆಜ್ಞೆ ಮಾಡಿದ.

—ಗಾಯತ್ರೀ ಅನುಜ',
ಬೆಳಿನಿನ ಕೊಡಿಗೆ.

ಸ್ವಾತಂತ್ರ್ಯ ರಕ್ಷಣಾಕಾರ್ಯದಲ್ಲಿ

ಜನ ಜನವೂ ವೀರ ಯೋಧರು

ಶ್ರೀ ಅಶೋಕ ಮೆಹತಾ

ನಮ್ಮ ಸುಂದರ ನಾಡು ಅನೇಕ ಶತಮಾನಗಳಿಂದಲೂ ಶಾಂತಿಯ ಹಾದಿಯಲ್ಲೇ ನಡೆಯುತ್ತಾ ಬಂದಿದೆ. ಯುದ್ಧದ ಮಾರ್ಗಗಳು ಅದರ ದೃಷ್ಟಿಗೆ ಗೋಚರವಾಗುವುದೇ ಕಷ್ಟ. ಇದು ಅದರ ದೌರ್ಬಲ್ಯವೂ ಹೌದು, ಕೀರ್ತಿವಿಶೇಷವೂ ಹೌದು. ನಮ್ಮ ಪವಿತ್ರ ಭೂಮಿಯ ಮೇಲೆ ಅನೇಕ ಆಕ್ರಮಣಗಳು ನಡೆದಿವೆ ಈ ಆಕ್ರಮಣಗಳ ಫಲವಾಗಿ ಇತಿಹಾಸಗತಿ ಎಷ್ಟೋ ಬೇಳೆ ಕುಂಠಿತವಾಗಿದೆ. ಆಕ್ರಮಣಗಾರರ ತಂಡಗಳು ಅನೇಕ ಬಾರಿ ಭಾರತದ ಮೇಲೆ ದಂಡೆತ್ತಿ ಬಂದವು, ತಮ್ಮ ಕೈಗೆ ಸಿಕ್ಕಿದಷ್ಟು ಭೂಮಿಯನ್ನು ಆಕ್ರಮಿಸಿಕೊಂಡು ನಿಂತುವು. ಭಾರತದ ಇನ್ನುಳಿದ ಭಾಗದ ಜನರು ಮೂಕರಾಗಿ ಇದನ್ನು ನೋಡುತ್ತಾ ಕುಳಿತರೇ ಹೊರತು ರತ್ನವನ್ನು ಎದುರಿಸುವ ಯೋಜನೆ ಮಾಡಲಿಲ್ಲ. ಇದರ ಪರಿಣಾಮವಾಗಿ ಆ ಭಾಗಗಳೂ ಕ್ರಮೇಣ ಶತ್ರುಸೇನೆಗಳ ಆಕ್ರಮಣಕ್ಕೆ ಬಲಿಯಾದುವು. ಇದು ಗತ ಕಾಲದ ಕಥೆಯಾಯಿತು.

ಇಂದಿನ ಪರಿಸ್ಥಿತಿ ಬೇರೆಯಾಗಿದೆ. ನಮ್ಮ ಆಶಾವಾದಕ್ಕೆ ಇದೇ ದೊಡ್ಡ ಆಧಾರ. ಗತಕಾಲದ ಆ ಹಳೆಯ ಸ್ಥಿತಿ ಇಂದು ಸಂಪೂರ್ಣ ಪೂರ್ವಾಟು ಹೊಂದಿದೆ. ಇಂದು ಹಿಮಾಲಯದ ಅಂಚಿನಲ್ಲಿ ನಡೆದಿರುವ ಚೀನೀ ಆಕ್ರಮಣ ಅದನ್ನು ಸ್ಪಷ್ಟವಾಗಿ ತೋರಿಸಿದೆ. ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯ ವರೆಗೆ ಜನ ಇಂದು ಒಂದಾಗಿ ನಿಂತಿದ್ದಾರೆ. ಒಂದು ದೃಢ ಸಂಕಲ್ಪ ಅವರಲ್ಲಿ, ಇತಿಹಾಸದಲ್ಲಿ ಹಿಂದೆಂದೂ ಕಾಣದಿದ್ದ, ಒಗ್ಗಟ್ಟಿನ ಭಾವನೆಯನ್ನು ಉಂಟುಮಾಡಿದೆ. ಇದು ನಮ್ಮ ರಾಷ್ಟ್ರದ ಪುನರುಜ್ಜೀವನದ ಫಲವಾಗಿ ಕಂಡುಬಂದಿರುವ ಒಂದು ದೊಡ್ಡ ಪವಾಡ. ಇದು ನಮ್ಮ ಅಜೇಯ ಸ್ಥಿತಿಯ ಕುರುಹು. ಇಂದು ನನ್ನ ಬಲ ಆದಮ್ಯ

ನಮ್ಮ ಗಡಿಗಳು ಎಷ್ಟು ಸುಭದ್ರವೋ ನಾಡಿನ ಸ್ವಾತಂತ್ರ್ಯವೂ ಅಷ್ಟೇ ಸುಭದ್ರ. ಗಡಿಗಳು ಸುಭದ್ರವಾಗಿರಬೇಕಾದರೆ, ರಾಜಕೀಯ ಪ್ರಜ್ಞೆ ಬೇಕು, ಆರ್ಥಿಕ ಬಲ ಬೇಕು.

ಖೈಬರ್ ಕಣಿವೆ ಮಾರ್ಗವೊಂದರ ಬಗ್ಗೆ ತಾಳಿದ ಅಸಡ್ಡೆಯ ಫಲವಾಗಿ ಪಾಣಿಪತ ಯುದ್ಧವೇ ನಡೆಯಬೇಕಾಗಿ ಬಂತು. ಅಷ್ಟೇ ಅಲ್ಲ, ಮುಂದೆ ಇದರಿಂದಾಗಿಯೇ ಎಷ್ಟೋ ಸಾಮ್ರಾಜ್ಯಗಳು ಉದಯಿಸಿದುವು ಮತ್ತು ಉರುಳಿದುವು. ದೆಹಲಿ ನಗರದಲ್ಲಿ ಲೂಟಿ ಮತ್ತು ಕಂಬಾರ ಕಾರ್ಯ ಅವ್ಯಾಹತವಾಗಿ ನಡೆಯಿತು.

ಇತಿಹಾಸದ ಈ ಪಾಠ ನಮ್ಮ ಜನರ ಚಿತ್ತ ಭಿತ್ತಿಯ ಮೇಲೆ ಅಚ್ಚಳಿಯದೆ ಉಳಿದಿರುವುದರಿಂದಲೇ ನಾವಿಂದು ಎಚ್ಚರದಿಂದಿದ್ದೇವೆ. ಪರ್ವತ ಶ್ರೇಣಿಗಳ ಮೇಲ್ಭಾಗ ಇರುವ ಕಣಿವೆ ಮಾರ್ಗಗಳು ನಮ್ಮ ದೇಶದ ಬಟ್ಟೆಗಳಂತೆ ನಮ್ಮ ನಾಡಿನ ಹೊರ ದ್ವಾರಗಳಾಗಿವೆ. ಇವು ನಮ್ಮ ಭವಿಷ್ಯದ ಬಾಗಿಲುಗಳು ಎಂದರೂ ತಪ್ಪಾಗದು. ನಮ್ಮ ಸ್ವಾತಂತ್ರ್ಯ ರಕ್ಷಣೆಗಾಗಿ ಈ ದ್ವಾರಗಳ ಕೀಲಿಗಳು ನಮ್ಮ ಕೈಯಲ್ಲೇ ಯಾವತ್ತೂ ಸುರಕ್ಷಿತವಾಗಿರಬೇಕು.

ಘೋರ ಆಕ್ರಮಣದ ಮೂಲಕ ಚೀನೀಯರು ಹಿಮಾಲಯದ ಕೆಲವು ಮುಖ್ಯ ಕಣಿವೆ ಮಾರ್ಗಗಳನ್ನು ತಮ್ಮ ಕೈವಶಪಡಿಸಿಕೊಂಡಿದ್ದಾರೆ. ಈ ಮಾರ್ಗಗಳನ್ನು ಮತ್ತೆ ನಮ್ಮ ವಶಕ್ಕೆ ತೆಗೆದುಕೊಳ್ಳುವುದರ ಮೂಲಕ ನಮ್ಮ ಸ್ವಾತಂತ್ರ್ಯವನ್ನು ಮತ್ತೆ ನಾವುಪಡೆಯಬಹುದಾಗಿದೆ. ಈ ಕಣಿವೆ ಮಾರ್ಗಗಳಲ್ಲಿನ ಹತೋಟಿಯನ್ನು ನಾವಿಂದು ಎಂತಹತ್ಯಾಗ ಮಾಡಿಯಾದರೂ ಮತ್ತೆ ಪಡೆಯಬೇಕು; ಅದಕ್ಕಾಗಿ ಎಷ್ಟು ರಕ್ತ ಚೆಲ್ಲಿದರೂ, ನಮ್ಮ ಸಂಪತ್ತು ಎಷ್ಟು ವ್ಯಯವಾದರೂ ಕಡಿಮೆಯೇ!

ಇದಕ್ಕಾಗಿ ರಾಷ್ಟ್ರವನ್ನು ಯುದ್ಧಕ್ಕಾಗಿ ಸಿದ್ಧಗೊಳಿಸಬೇಕಾಗಿದೆ. ನಮ್ಮ ಗಡಿಗಳಿಗೆ ಬಂಧೊದಗಿರುವ ಅಪಾಯವನ್ನು ಯಶಸ್ವಿಯಾಗಿ ಎದುರಿಸಲು ಸಾಧ್ಯವಾಗುವಷ್ಟು ಹೋರಾಟ ಶಕ್ತಿಯನ್ನು ನಾವು ಮೈಗೂಡಿಸಿಕೊಳ್ಳಬೇಕಾದರೆ, ನಮ್ಮ ಆಡಳಿತ ವ್ಯವಸ್ಥೆಯಲ್ಲಿರುವ ಎಲ್ಲಾ ಲೋಪದೋಷಗಳನ್ನು ತೊಡೆದುಹಾಕಬೇಕು; ದುಂದುವೆಚ್ಚ ಸ್ವಲ್ಪವೂ ಆಗದಂತೆ ನೋಡಿಕೊಳ್ಳಬೇಕು.

ಚೀನೀಯರು ನಮ್ಮ ಮೇಲೆ ಆಕ್ರಮಣ ನಡೆಸಿದಾಗ ನಮ್ಮ ಕಡೆಯ ಕೊರತೆ ಸ್ಪಷ್ಟವಾಯಿತು. ಸೈನಿಕರ ಸಂಖ್ಯಾ ಬಲವಾಗಲಿ, ಶಸ್ತ್ರಾಸ್ತ್ರಗಳ ಅವಶ್ಯಕತೆಯಾಗಲಿ ಅವರ ಕಡೆ ಕೊರತೆ ಬೀಳುವ ಸಂಭವವೇ ಇರಲಿಲ್ಲ; ಅವರನ್ನು ಎದುರಿಸಬೇಕಾಗಿದ್ದ ನಮ್ಮ ಸೈನಿಕರ ಸಂಖ್ಯೆಯೂ ಕಡಿಮೆ, ಶಸ್ತ್ರಾಸ್ತ್ರಗಳ ಸಾಲ ಭ್ಯವೂ ಕಡಿಮೆ. ಎರಡೂ ವಿಷಯಗಳಲ್ಲಿ ನಮ್ಮ ಕೈಕೆಳಗಾಗುವ ಶೋಚನೀಯ ಪರಿಸ್ಥಿತಿಯೇ ಇತ್ತು. ಆವರ ಸೇನಾಬಲಕ್ಕೆ ಸರಿತೂಗುವಂತಹ ಶಕ್ತಿ ನಮ್ಮಕಡೆಯೂ ಇಂಚೀಕಾವಲಿಗೆ ನಮ್ಮ ಸೈನಿಕರ ಸಂಖ್ಯೆಯು ಹೆಚ್ಚಬೇಕು, ಶಸ್ತ್ರಾಸ್ತ್ರಗಳ ಕೊರತೆಯೂ ಇರಬಾರದು; ಅಷ್ಟೆ ಅಲ್ಲ; ಎಷ್ಟೋ ಉತ್ತಮ ದರ್ಜೆಯ ಶಸ್ತ್ರಾಸ್ತ್ರಗಳೂ ಬೇಕು

ಇದಕ್ಕಾಗಿ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಅನಿವಾರ್ಯ. ಮಿಲಿಟರಿ ಬಲ ಮತ್ತು ಆರ್ಥಿಕ ಬಲ, ಇವೆರಡನ್ನೂ ಸಮತೂಕವಾಗಿ ಹಾಗೂ ಪರಸ್ಪರ ಪೋಷಕವಾಗಿ ಹೊಂದಿಸಿಕೊಳ್ಳಬೇಕು ಆರ್ಥಿಕ ಬಲ ಕುಗ್ಗದ ರೀತಿಯಲ್ಲಿ ನಮ್ಮ ಮಿಲಿಟರಿ ಶಕ್ತಿಯನ್ನು ನಾವು ಬೆಳೆಸಿಕೊಳ್ಳಬೇಕು ಆರ್ಥಿಕ ಬಲ ಉಪೇಕ್ಷೆ ಮಹಾಪರಾಧವೇ ಆಗುತ್ತದೆ. ಆದು ಶತ್ರುವಿನ ಬಯಕೆಯನ್ನು ಪೂರೈಸಿ ದಂತಾಗುತ್ತದೆ. ಮಿಲಿಟರಿ ಬಲ ಹೆಚ್ಚಿಸುವುದರ ಕಡೆಗೆ ಗಮನ ಕೊಟ್ಟು ಆರ್ಥಿಕ ಅಭಿವೃದ್ಧಿಯನ್ನು ಭಾರತ ಕೈಬಿಡುತ್ತದೆಯೆಂಬ ನಿರೀಕ್ಷೆಯನ್ನೇ ಚೀನಾ ಇಟ್ಟುಕೊಂಡಿದೆ ಎಂಬುದನ್ನು ನಾವು ಗಮನಿಸಬೇಕು; ನಾವು ಆದರ ಬಲೆಗೆ ಬೀಳಬಾರದು; ಆದರ ನಿರೀಕ್ಷೆಯನ್ನು ಸುಳ್ಳು ಮಾಡಬೇಕು.

ಬಂದೂಕನ್ನು ಹೆಗಲಿಗೇರಿಸಿ ನಮ್ಮಲ್ಲಿ ಪ್ರತಿಯೊಬ್ಬರೂ ಯುದ್ಧರಂಗಕ್ಕೆ ಹೋಗುವುದು ಸಾಧ್ಯವಲ್ಲದ ಮಾತು. ಆದರೆ ನಾವು ಪ್ರತಿಯೊಬ್ಬರೂ ನಮ್ಮ ಕೆಲಸದಲ್ಲಿ ಶಿಸ್ತು ಹಾಗೂ ಶ್ರದ್ಧೆಯನ್ನು ಪಂಡಿತ ಬೆಳೆಸಿಕೊಳ್ಳಬಹುದು. ಶಿಸ್ತು ಮತ್ತು ಶ್ರದ್ಧೆ ಇವೆರಡೂ ಧೀರ ಯೋಧರು ಮೈಗೂಡಿಸಿಕೊಂಡಿರುವ ಸದ್ಗುಣಗಳೇ ಆಗಿವೆ. ಆವರು ಸೈನಿಕರು, ನಾವು ಸೈನಿಕರಲ್ಲ ಎಂಬ ಭೇಧಭಾವ ಬೆಳೆಸಿಕೊಂಡೇ ನಮ್ಮ ಸ್ವಾತಂತ್ರ್ಯ ಕಳೆದುಕೊಂಡಿರುವ ದಾಖಲೆ ನಮ್ಮ ಇತಿಹಾಸದಲ್ಲಿದೆ. ಸುಧೈವಕುಟುಂಬಂ ಅಂದು ನಾವು ಮಾಡಿದ ಆ ತಪ್ಪನ್ನೇ ಇಂದೂ ನಾವು ಮಾಡುತ್ತಿಲ್ಲಿ. ನಾವೆಲ್ಲರೂ ಹೋರಾಟಕ್ಕೆ ಸಿದ್ಧರಾಗಿ ನಿಂತಿರುವ ಯೋಧರೇ ಆಗಿದ್ದೇವೆ ಎಂಬ ಒಂದು ಭಾವನೆ ನಮ್ಮಲ್ಲಿಂದು ಬೆಳೆದಿದೆ. ನಮ್ಮ ಕಾರ್ಯಕ್ಷೇತ್ರ ಬೇರೆ, ನಾವು ನಿರ್ವಹಿಸಬೇಕಾಗಿರುವ ಪಾತ್ರ ಬೇರೆ. ಯುದ್ಧರಂಗದ ಯೋಧರಿಗೂ ನಮಗೂ ಇರುವ ಭೇದ ಅಷ್ಟೇ ಆಗಿದೆ.

ನಾಡಿನ ಒಗ್ಗಟ್ಟು ಯಾವತ್ತೂ ನಮ್ಮ ವಿಚಾರ ಭಾವನೆಗಳಲ್ಲಿ ಮೊದಲು ಮೂಡುತ್ತದೆ. ಆ ಒಂದು ರಾಷ್ಟ್ರೀಯ ಸಂಕಲ್ಪದ ಸಿದ್ಧಿಯನ್ನು ನಾವು ಈಗಾಗಲೇ ಕಂಡಿದ್ದೇವೆ.

ರಾಷ್ಟ್ರದ ಈ ಒಗ್ಗಟ್ಟು ಈಗ ಏನಿದ್ದರೂ ಕಾರ್ಯರೂಪದಲ್ಲಿ ಪ್ರಕಟವಾಗಬೇಕು. ನದಿಗೆ ಆಣೆಕಟ್ಟು ಕಟ್ಟಿದ್ದಾಗಿದೆ. ಸಂಪತ್ಸಾಧನ ಸಿದ್ಧವಾಗಿದೆ. ವಿದ್ಯುತ್ತಯಾರಿಕೆ ಮತ್ತು ವಿದ್ಯುತ್ ಪ್ರವಾಹಕ್ಕೆ ಯೋಗ್ಯ ವ್ಯವಸ್ಥೆ ಕೈಗೂಡಿದರೆ ಮಾತ್ರ ಅದರ ಪ್ರಯೋಜನ ವ್ಯಾಪಕವಾಗಿ ದೊರೆತೀತು; ಗದ್ದೆಗೆ ನೀರು ಹರಿಯಬೇಕು ಮತ್ತು ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿ ಒದಗಬೇಕು, ಫಲಸ್ವರೂಪವಾದ ಈ ಕಾರ್ಯವನ್ನೀಗ ಕಾಣುವಂತಾಗಬೇಕು. ಭಾನೈಕ್ಯ ನಾಧನೆಯು ಅದ್ಭುತ ಶಕ್ತಿ ಪ್ರಕಟವಾಗಲು ಇದೀಗ ಭವ್ಯ ಅವಕಾಶವೇ ದೊರೆತಿದೆ.

ಪ್ರಜಾಸ್ವಭುತ್ವವಾಗಿರುವ ರಾಷ್ಟ್ರದ ಸಂಕಲ್ಪ ಫಲವು ಕೊಂಡಿಗಳನ್ನು ಆಶ್ರಯಿಸಿ ನಿಂತಿದೆ. ಆದುದರಿಂದ ಪ್ರತಿಯೊಂದು ಕೊಂಡಿಯೂ ಸಂಕಲ್ಪದ ದೃಢತೆಯನ್ನು ನಿರ್ಧರಿಸುತ್ತದೆ. ನಮ್ಮ ಸೀಮಿತ ಕ್ಷೇತ್ರದಲ್ಲಿಯೇ ನಾವು ನಮ್ಮ ಪಾಲಿನ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸುವುದರ ಮೂಲಕ ಶಿಸ್ತು ಹಾಗೂ ಶ್ರದ್ಧೆಗಳ ಒಂದು ಬಲವಾದ ಕೊಂಡಿಯನ್ನು ರಾಷ್ಟ್ರ ಸಂಕಲ್ಪಕ್ಕೆ ಒದಗಿಸಬಹುದು.

ಯುದ್ಧ ನಡೆಯುತ್ತಿರುವ ಸಮಯದಲ್ಲಿ ಸುಳ್ಳು ವದಂತಿಗಳನ್ನು ಹಬ್ಬಿಸುವುದು ತುಂಬಾ ಅಪಾಯಕಾರಿ ಎಂಬುದು ನಿಜ. ಆದರೆ ನಮ್ಮ ದೌರ್ಬಲ್ಯವನ್ನು ಉಪೇಕ್ಷಿಸಿ ಇತರರ ಮಟ್ಟಿಗೆ ಪರಿಪೂರ್ಣತೆಯನ್ನು ನಿರೀಕ್ಷಿಸುವುದು ಅದಕ್ಕಿಂತ ಕಡಿಮೆ ಅಪಾಯಕಾರಿಯೇನೂ ಅಲ್ಲ ನಮ್ಮ ರಾಷ್ಟ್ರದ ನಪೋದಯದ ಘೋಷಣೆಯನ್ನು ಹಾಕುವಾಗ ನಾವು ತುಂಬಾ ಹೆಮ್ಮೆ ಪಡುತ್ತೇನೆ, ನಿಜ ಆದರೆ ನಮ್ಮಲ್ಲಿ ಪ್ರತಿಯೊಬ್ಬರೂ ಒಂದು ಹೊಸ ಜೀವನದ ಪರಿಕಲ್ಪನೆಯಾದರೂ ಮಾತ್ರ ಆ ನಮ್ಮ ನಾಡ ಹೆಮ್ಮೆಗೊಂದು ಸ್ಥಿರರೂಪ ಸಕ್ತು ಬದುಕುವುದು, ನಮ್ಮ ಭವಿಷ್ಯದ ರೂಪ ನಿರ್ಧರಿಸುವವರು ನಾವೇ ಆಗುವುದು ರಾಷ್ಟ್ರ ಮೂರ್ತಿಯ ಅದಮ್ಯ ಶಕ್ತಿಯ ಸಂಕೇತ ರಾಷ್ಟ್ರ ಗೌರವದ ಪುನರುಜ್ಜೀವನ.

(—ಆಕಾಶವಾಣಿ ಕಾರ್ಯಕ್ರಮದಿಂದ)

1963ನೇ ಜನವರಿಯಿಂದ

ನಗುವ-ನಂದ

31ನೇ ಸಂಪುಟಾರಂಭ

ಆಕರ್ಷಣೀಯ ಮುಖಪುಟ, ಹಾಸ್ಯ ಲೇಖನಗಳು, ಕತೆಗಳು, ಅಣಕವಾಡುಗಳು, ಚುಟುಕಗಳು, ವ್ಯಂಗ್ಯ ಚಿತ್ರಗಳೊಂದೊಡಗೂಡಿ ಪ್ರತಿ ತಿಂಗಳೂ ಪ್ರಕಟವಾಗುವುದು.

ಜನವರಿ ಸಂಚಿಕೆಯಿಂದ ಶ್ರೀ 'ಅಷ್ಟಾವಕ್ರ'ರವರ ಹಾಸ್ಯಕಥಾವಳಿ 'ವಿನೋದದಲ್ಲಿ ವಿದ್ಯಾರ್ಥಿ' ಪ್ರಕಟವಾಗುವುದು.

ಬಿಡಿ ಸಂಚಿಕೆಯ ಬೆಲೆಯಾಗಲಿ, ವಾರ್ಷಿಕ ಚಂದಾ ದರವಾಗಲಿ ಜಾಸ್ತಿಯಾಗಿಲ್ಲ.

ಬಿಡಿ ಸಂಚಿಕೆ: ಕೇವಲ 16 ನ. ಪೈ.

ವಾರ್ಷಿಕ ಚಂದಾ: ದೀಪಾವಳಿ ಸಂಚಿಕೆಯೂ ಸೇರಿ ರೂ. 2-50 ಮಾತ್ರ.

(ಅಂಚೆ ಹಾಸಲು ಉಚಿತ) ಎಲ್ಲಾ ಕಡೆಗಳಲ್ಲೂ ದೊರೆಯುತ್ತೆ. ಮೈಸೂರು ಪ್ರಾಂತ್ಯದ ಪಿಣ್ಯಾ ಸಂಸ್ಥೆಗಳಿಗೂ ಸುಂಜೂರಾಗಿದೆ. ಯಾವ ತಿಂಗಳಿಂದ ಬೇಕಾದರೂ ಚಂದಾದಾರರಾಗಬಹುದು.

T.B.C. 336/32-33 dated 15th June 1933.

ವಿವರಗಳಿಗೆ: **ನಗುವ-ನಂದ : : ಬೆಂಗಳೂರು-೧೧.**

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

O. S. 480/62

ಎಚ್ಚಮ್ಮ ಸೆಟ್ತಿ ... ವಾದಿಯ

ಮತ್ತು

ಮಂಜಮ್ಮ ಸೆಟ್ತಿ ಕೊಡಾ ... ಪ್ರತಿವಾದಿಯ

ಇವರೊಳಗೆ

ಉಡುಪಿ ತಾಲ್ಲೂಕು ಹೇರೂರು ಗ್ರಾಮದ ಗೋಡ್ಡೆಟ್ಟು ಎಂಬಲ್ಲಿರುವ ನಿರಿಯಂಮ ಸೆಟ್ತಿ ಮಗಳು ಶಿನೆ ಪ್ರತಿವಾದಿಯ ಶೇಖಿ ಸೆಟ್ತಿ, ಕಾವೇರಿ ಸೆಟ್ತಿ ಮಗಳು ೨ನೆ ಪ್ರತಿವಾದಿಯ ದಾರರಿಯ ಸೆಟ್ತಿ; ಕೂಡಾ ಇವರಿಗೆ ಈ ಮೂಲಕ ತಿಳಿಸುವುದು—

ವಾದಿಯು ನಮ್ಮ ಮೇಲೆ ಗೇಣಿ ಬಾಕಿಗೆ ಮೊಡ್ಡಿದ ದಾವೆಯು ತಾ. 8-1-63ಕ್ಕೆ ಇಟ್ಟಿದೆ. ನಿಮ್ಮ ಅಕ್ಕೇಶಯದ್ದೆ ಆ ದಿವ್ಸ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟು ಮುಂದೆ ಹಾಜ್ರಾಗಿ ಮನವಿ ಮಾಡಿಕೊಳ್ಳತಕ್ಕದ್ದು. ಇಲ್ಲವಾದ್ರೆ ಏಕಪಕ್ಷವಾಗಿ ತೀರ್ಮಾನಿಸಲಾ ದೀತು.

P. Padmanabha Rao,
Vakil for Plaintiff.

Udipi, 18—12—62.

ಕವಲು ದಾರಿ—ಕೆಂಪು ದೀಪ

ಎಚ್ಚತ್ತ ಕನ್ನಡಿಗ

— ಸುದಾಸ

ವೆಂಕಟರಾಜ ಪಾನಸೆಯವರು ಇತ್ತೀಚೆಗೆ ಒಂದು ಪುಸ್ತಕ ಬರೆದಿದ್ದಾರೆ ನವ ಕರ್ನಾಟಕ ಪ್ರಕಾಶನ ಸಂಸ್ಥೆಯವರು ಅದನ್ನು ಪ್ರಕಟಿಸಿದ್ದಾರೆ ಹೆಸರು, ಬೆಳಗಾಂವಿನ ಕನ್ನಡಿಗರ ಸತ್ವ ಪರೀಕ್ಷೆ.

ಸತ್ವ ಪರೀಕ್ಷೆ?

ಕನ್ನಡಿಗರ ಸತ್ವ ಪರೀಕ್ಷೆ?!

ಬೆಳಗಾಂವಿನ ಕನ್ನಡಿಗರ ಸತ್ವ ಪರೀಕ್ಷೆ?!!

ಕನ್ನಡದ ಕಾರ್ಯರಗೋಡು ಕನ್ನಡ ನಾಡಿಗೆ ಸೇರಲಿ, ಎಂಬ ಕೂಗನ್ನು ನಾವು ಕೇಳಿದ್ದೇವೆ ಕೊಡಗನ್ನು ಕರ್ನಾಟಕದಿಂದ ಬೇರ್ಪಡಿಸಿರಿ ಎಂಬ ಕೂಗನ್ನೂ ನಾವು ಕೇಳಿದ್ದೇವೆ.

ಆದರೆ— ಈ ಕೂಗನ್ನು ನಾವು ಕೇಳಿಲ್ಲ! ಕೇಳಿ ಸಹಿಸಿಕೊಳ್ಳುವಂತಿಲ್ಲ. ಬೆಳಗಾಂವಿ, ಕಾರವಾರಗಳನ್ನು ಮಹಾರಾಷ್ಟ್ರಕ್ಕೆ ಏಲೀನಗೊಳಿಸುವ ಸುಸಂದಿ ಇದೀಗ ಬಂದಿದೆಯಂತೆ!

ಕಾಶ್ಮೀರದ ಪ್ರಶ್ನೆ ಇತ್ಯರ್ಥಗೊಳಿಸಲು ಇದೀಗ ಸುಸಮಯ, ಎಂದಿರುವ ಪಾಕಿಸ್ತಾನದ ಅಲಾಪನೆಯನ್ನೂ ವಿರಿಸುವ ಗುರುತರ ಹೊಣೆಯನ್ನು ಮಂತ್ರಿಗಳು ಹೊತ್ತಿದ್ದಾರೆ, ಎಂಬ ಸತ್ಯಾಂಶದ ನಾಡಿಮಿಡಿತ್ತು, ಅವರ ನಾಯಕ ಮಣಿಗಳ ಕಂಠದಿಂದ ಹೊರ ಬರುತ್ತಿದೆಯಲ್ಲ, ಎಂಬುದು ರುಚಿಸುವ ಪ್ರಿಯ ಸತ್ಯ ನಮಗೆ! ಭಾರತದ ಹಿತಚಿಂತನೆಯನ್ನು ಮಾಡಲೇ ಬೇಕಾಗಿರುವ ಈ ಸುವರ್ಣ ಸಂಧಿಯು ಹೊತ್ತಿನಲ್ಲಿ ಮಹಾರಾಷ್ಟ್ರೀಯರ ಈ ಅರಚಾಟ ನಮಗೆ ಸಹ್ಯ!

ರಾಜ ಪಾನಸೆಯವರ ಬೆಳಗಾಂವಿನ ಕನ್ನಡಿಗರ ಸತ್ವ ಪರೀಕ್ಷೆ ಕಾದಂಬರಿಯಂತೂ ಅಲ್ಲ (ಅದರ ಗೊಡವೆಗೇಕೆ ಅವರಿನ್ನೂ ಹೋಗಿಲ್ಲ!) ಕತೆಯೇ ಹಾಗಿದ್ದರೆ? ಸ್ವಲ್ಪ ಮಟ್ಟಿಗೆ ನಿಜ ಒಬ್ಬ ವ್ಯಕ್ತಿಯ ಇಲ್ಲವೆ ಒಂದು ಕುಟುಂಬದ ಜೀವನದ ಒಂದಂಗವನ್ನು ರೂಪಿಸುವ ಕತೆಯಲ್ಲ ಇದು. ಸಮಸ್ತ ಕನ್ನಡಿಗರ ಕರ್ಮಕಥೆಯತ್ತ ಕ್ಷಕಿರಣ ಬೀರಿ, ಕಾಹಿಲೆಯನ್ನು ಹುಡುಕಿ ತೆಗೆಯಲೆತ್ನಿಸಿದ ಸಾಧಾರ ಪೂರ್ವಕ ಸ್ವತ್ಯಯತ್ನ, ಪಾನಸೆಯವರದ್ದು.

ಪುಸ್ತಕ ಚೆನ್ನಾಗಿದೆ. (ಏನೇನೂ ಚೆನ್ನಾಗಿಲ್ಲ.) ಒಮ್ಮೆ ಓದಲು ಯೋಗ್ಯವಾಗಿದೆ. (ಲೇಖಕರು ಈ ಶ್ರಮವನ್ನು ಏಕೆ ಕೈಕೊಂಡರೊ?) ಶ್ರೀಯುತರ ಶೈಲಿಯಲ್ಲಿ ರಸಭಾವ ತುಂಬಿದೆ. (ರಸಾ ಭಾವನಿನೆ) ಓದುಗರ ಮನಸ್ಸು ಓದುತ್ತ ಓದುತ್ತ ಕಾದಂಬರಿಯ ಪಾತ್ರಗಳೊಡನೆ ಬೆರೆತು ಹೋಗುತ್ತದೆ. (ಓದುತ್ತಿರುವಂತೆ ಬೇಜಾರಾಗುತ್ತಿದೆ ತಲೆ ಸಿಡಿತ ಆರಂಭವಾಗುತ್ತಿದೆ!) ಕತೆಯಲ್ಲಿ ತಾಂತ್ರಿಕತೆಯಿದೆ ಕತೆ ಹೆಣೆಯುವ ಜಾನ್ಮೆಲೇಖಕರಿಗೆ ಕರಗತವಾಗಿದೆ (ಕತೆಯಲ್ಲಿ ನವೀನತೆಯೂಗಲೀ, ತಾಂತ್ರಿಕತೆಯೂಗಲೀ ಒಂದಿಷ್ಟೂ ಇಲ್ಲ. ಇಂತಹ ಪುಸ್ತಕಗಳನ್ನು ಬರೆದು ಪ್ರಕಟಿಸುವ ಶ್ರಮ ವಹಿಸಬೇಕೆತ್ತೆ(?)

ಒಂದು ಕಾದಂಬರಿ, ಇಲ್ಲವೆ ಕಥಾನಕ ಕಲನದ ಕುರಿತಾಗಿ, ವಿಮರ್ಶಕ, ಈ ನಾಲ್ಕಾರು ಮಾತುಗಳನ್ನು ಬರೆಯಬಲ್ಲ ಕೆಲವೊಮ್ಮೆ ಕೃತಿಕಾರನ ವಿಮರ್ಶಯನ್ನೇ ಓದುಗರಿಗೆ ಉಣಬಡಿಸಬಲ್ಲ ವ್ಯಕ್ತಿ, ನನ್ನ ವಿಮರ್ಶಕ.

ಪಾನಸೆಯವರು ಈ ಕೃತಿಯನ್ನು ಬೆಳಗಾಂವಿನ ಕನ್ನಡಿಗರಿಗೆಂದೆ ಬರೆದುದಲ್ಲ. ಎರಡೂವರೆ ಕೋಟಿ ಕನ್ನಡಿಗರ ಸತ್ವಪರೀಕ್ಷೆಯ ಕಾರಿತ, ಅವರು ಎಚ್ಚರಿಕೆಯಿತ್ತಿದ್ದಾರೆ ವರ್ತಮಾನರು ತವ್ಮದೆಂದು ಹೇಳಿಕೊಳ್ಳುವ ಒಂದೊಂದು ಇಂಚು ನೆಲವೂ ಕನ್ನಡಿಗರದ್ದು ಎಂಬುದನ್ನು ಆಧಾರ ಸತ್ವಾಗಿ ಆಳೆದು ನವ್ಮ ಮುಂದಿರಿಸಿದ್ದಾರೆ

ಹಾಗಿದ್ದರೆ—

—ಎರಡೂವರೆ ಕೋಟಿ ಕನ್ನಡಿಗರು ಓದಲೇಬೇಕಾಗಿರುವ ಈ ಕೃತಿಯ ಎಷ್ಟು ಪ್ರತಿಗಳು ಮುದ್ರಿಸಲ್ಪಟ್ಟಿವೆ? ಒಂದು ಲಕ್ಷವೇ ಐನತ್ತು ಸಾವಿರ

ನಗುತ್ತೀರೇನೋ ಚಿಂತೆಯಿಲ್ಲ; ನಕ್ಕುನಲಿಯುವ ಸ್ವರ್ಗ ನಿಮ್ಮದೇ ನಿಮ್ಮ ನಗೆಯಲ್ಲಿ ಸಿರಿಗನ್ನಡದ ಸತ್ಯತೆಯಂತೂ ಇದ್ದಿರಲೆ ಬೇಕಲ್ಲವೆ?

ನಿಮಗೆಲ್ಲ ಪ್ರಿಯವಾಗಿರುವ ಒಂದು ಮಾತನ್ನ ಹೇಳಲಿ ಗೆಳೆಯ?

ಬೆಳಗಾಂವಿನ ಕನ್ನಡಿಗರ ಸತ್ವಪರೀಕ್ಷೆಯ ಪ್ರತಿಗಳೆಷ್ಟೇ ಮುದ್ರಿಸಲ್ಪಟ್ಟಿರಲಿ. ಒಂದೆರಡು ಸಹಸ್ರ ಪ್ರತಿಗಳಷ್ಟೆ ವಿಕ್ರಯಿಸಲ್ಪಟ್ಟಿದ್ದರೂ ಇರಲಿ. ನೀವತ್ತೆ ಓದದೆ ಇದ್ದರೆ (ಇನ್ನೂ ಎರೆಗೆ!)ಒಂದು ಬಾರಿ ಓದಿ. ಓದಿದ ಬಳಿಕ ಜೋಪಾನವಾಗಿ ಇರಿಸಿಕೊಳ್ಳಿ. (ಯಾಕೆಂದರೆ ಆಧಾರಿತ ಘಟನಾವಳಿಗಳಿಂದೊಡಗೂಡಿರುವ ಕನ್ನಡಿಗರ ಸುಣ್ಣ ಚರಿತ್ರೆ ಇದು) ಕನ್ನಡಮ್ಮನ ಸೇವೆಯೇ ನಮ್ಮ ಗುರಿ ಎಂದು ಹೃತ್ಪೂರ್ವಕ ಬಯಸಿದ್ದರೆ—

—ನಿಮ್ಮ ಹೆಜ್ಜೆಗಳು ಬೆಳಗಾಂವ್, ಕಾರವಾರ, ಸೊಲ್ಲಾಪುರಗಳತ್ತ ಸಾಗಲಿ ಅಲ್ಲಿಯ ನಮ್ಮ ಸೋದರರಿಗೆ ಕನ್ನಡದ ಆರವನ್ನು ಇನ್ನೂ ಇನ್ನೂ ಮೂಡಿಕೊಡಬೇಕಾಗಿರುವ ಕೆಲಸ ಬೆಟ್ಟದಷ್ಟು ಉಳಿದಿದೆ. ವೈಕೂರಿನ ಮೂದಲಿಗಾಗಿ ಎಂದೇ ಇರುವ ನವ್ಮ ರಾಜಕಾರಣಿಗಳು ಈ ಕಾರ್ಯದಲ್ಲಿ ಅಸಮರ್ಥರೇ. ಅವರ ಮಾತುಗಳು ಹೃದಯ ತಳದಿಂದ ಇನ್ನೂ ಹೊರ ಬಂದಿಲ್ಲ ಅವರ ವಾತುಗಳಲ್ಲಿ ಕನ್ನಡದ ಅಭಿನೂನ, ಕನ್ನಡದ ಕೆಚ್ಚು, ಕಾಣಿಸಿ ಇಲ್ಲ—

—ಅದಕ್ಕೆಂಪೇ—

—ಬೆಳಗಾಂವಿನ ಕನ್ನಡಿಗರ ಸತ್ವ ಪರೀಕ್ಷೆಯ ಕರೆಯೋಲೆಯನ್ನು ನಿಮಗೆ ಕಳಿಸಲಾಗಿದೆ

ಸ್ವೀಕಾರ ತಾನೆ?

ಆಳ್ವಾಕ್ಷ ಕನ್ನಡಿಯವರು ವಿಖ್ಯಾತ ಕವಿ ರೋಬರ್ಟ್ ಫ್ರೋಸ್ಟರ ಜನ್ಮದಿನದಂದು ಅವರನ್ನು ಕಂಡು ಆನಂದೊಡನೆ ನಕ್ಕು ನಲಿದಾಡಿದರು

ಹೋದ ಹಾದಿ ಹಿಡಿದು....

(೨ನೇ ಪುಟದಿಂದ)

ದಿಗೆ ಇರಲಿ ಜೊರಡತ್ತೇನೆ ಈ ಬೆಂಕಿಯಿಂದ ತಪ್ಪಿಸಿಕೊಂಡೇ ಹೋಗುತ್ತೇನೆ" ಎಂದು ಕೆಮರನ್ನೆ ಕಿರಚಿ ಹೊರಹೋದಾಗ,

"ಎಲ್ಲಿಗೆ ಹೊರಟೆ ನೀಲಾ ಎಂದ ರಮೇಶ

ನನ್ನ ಮನೇನಾ ದೆವ್ವ ಸುಟ್ಟಿತು. ರಮೇಶನನ್ನು ಹೊಸ ಮನೆಗೆ, ಹೊಸ ಬಾಳಿಗೆ ಸುಮನೇ ಯಜಮಾನಿ"

"ಡೆನ್ಸ್ದದ ಮನೆ ಅನೇ ಜಮೀನುದಾರರ ಮನೆ"

"ಮಾತಾಡು ನೀಲಾ ಎಲ್ಲಿಗೆ ಹೊರಟೆ ಎಂದ ರಮೇಶ.

"ನನ್ನ ಈ ಮನೆ ಸುಟ್ಟವೇಲೆ, ನನ್ನ ಮುದ್ದು ದಿನೇಶ ದೊಡ್ಡವನಾಗಿ, ಕಟ್ಟಿದ ಮನೆಯಲ್ಲಿರಲಿ— ಯಜಮಾನಿಯಾಗುವುದು ನಾನೇ ನೀಲಂ"

"ನೀಲಾ, ನೀಲಾ, ನೀಲಾ, ನಾನು ರಮೇಶ"

"ಜಮೀನುದಾರರ ಹೆಸರು ಇನ್ನು ಇಲ್ಲ ಮನೆಗೆ ದೆವ್ವ ಬೆಂಕಿ ಜಾಕೆತು. ದೆವ್ವದ ಮಗಳೊಂದಿಗೆ ಮಮುವೆಯೂಗಿ ಊರ ಜಮೀನುದಾರರ. ಹೊಸ ಮನೆಗೆ ಹೋದರು, ರಮೇಶ್ ಕಾಮ ಅಲ್ಲ. ನಾನು ಮೂತ, ರತಿ" ಎಂದು ಕಿರುಚುತ್ತಾ ಹೊರ ಹೋದಳು.

ರಮೇಶನ ವಾಮದಲ್ಲಿ ಬೆವರಾರಿತು. ಅವಳು ಹೊರ ಹೋಗುವುದನ್ನು ತಡೆಯಲು ಮಾಡಿದ ಪ್ರಯತ್ನ ವಿಫಲವಾಯಿತು ದೂರ ತುಂಬಿ ಬಂತು ದಿಕ್ಕುಗಾಣದಾಗಿ ದೇಹದಲ್ಲಿ ಶಕ್ತಿ ಶೂನ್ಯವಾಯಿತು.

"ನೀಲಾ ಸುಂದರಿಯಲ್ಲವೆ?"

ಈ ಮನೆಯ ಯಜಮಾನಿ, ನಾನಲ್ಲ. ಹೊಸ ಮನೆ ಹುಟ್ಟಿದೆ ಇಷ್ಟ. ದಿನೇಶ ಬಾರೋ ನಾವು ಹೊರಡೋಣ ಎಂಬ ಮಾತು ಕೇಳದ ರಮೇಶ ಹೆಚ್ಚನಂತೆ ಅಡಿತ. ನೀಲಾನ ಮುಖ ಎಡೆಬಿಡದೆ ನೋಡಿದ ಕಣ್ಣಿಲ್ಲಿ ಹನಿಗಳು ಉದುರಿದವು ಕೈಯಿಂದ ಕಣ್ಣುಜ್ಜಿಕೊಂಡು ದಿಕ್ಕು ತಡೆಯಲಾರದೆ ಗಟ್ಟಿಯಾಗಿ ಅತ್ತ.

ಸನ್ನಿವೇಶದ ಚಿತ್ರಣವನ್ನು ಬರಿದಾಗಿತ್ತು. ರಮೇಶನ ಮನದಲ್ಲಿ, ಚೆನ್ನಿ ನೀಲಾ ಬಳಿ ಹೇಳಿದ್ದು ನೆನಪಿಗೆ ಬಂತು. "ನೀಲಾ ಸ್ಥಿತಿಗೆ ತಾನೇ ಕಾರಣ, ಎನು ಕಂಡ ಮನ ಮಿಡುಕಿತ, ರಮೇಶ ಭಾರ ಮನದಿಂದ ನೀಲಾನ ಹುಡುಕಲು ಹೊರ ಹೋದ.

PHONE 203 ESTD 1926

FOUNDATION STONE

Engraved MARBLE TABLETS

(GOLD FILLED & LEAD FILLED)

Crown RUBBER STAMP CO.

BALMATTA ROAD, MANGALORE

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ದೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ದೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದಲಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ — ವಿಜಯ ಬೇಂಕ್ ಬಿಲ್ಡಿಂಗ್,

ಲೈಟ್ ಹೌಸ್ ಹಿಲ್ ರೋಡ್,

Estd 1931. Phone No. 240. — ಮಂಗಳೂರು—3

NAVAYUGA 27—12 - 1962

REGD. No. B. G. 176
LICENCE No. 31
Licensed to Post without Prepayment

ಮನೆಯೊಳಗಡೆಯಲ್ಲಿ

ದೇಶ ಸಂರಕ್ಷಣೆಯ ಆಡಿಗಲ್ಲು

ಒಂದು ತಿಂಗಳಿಗೆ ಮೊದಲು ಮಿರಜಿನ ಮೆಡಿಕಲ್ ಕಾಲೇಜನ್ನು ರಾಷ್ಟ್ರಪತಿ ಡಾ। ರಾಧಾಕೃಷ್ಣನ್ ಉದ್ಘಾಟಿಸಲು ಬಂದಿದ್ದರು. ಉದ್ಘಾಟನಾ ಸ್ಥಾನವನ್ನು ವಿದ್ಯುದ್ದೀಪ ಮಾಲೆಗಳಿಂದ ಜಗಮಗಿಸುವಂತೆ ಅಲಂಕರಿಸಿದ್ದರು. ಇದನ್ನು ಕಂಡ ರಾಷ್ಟ್ರಪತಿಯವರು ಈ ಅತ್ಯಧಿಕ ಬೆಳಕೆಲ್ಲಾ ಏತಕ್ಕಾಗಿ? ಎಂದು ಸವೂರಂಭದ ಆಯೋಜಕರನ್ನು ಪ್ರಶ್ನಿಸಿದರು. 'ಉದ್ಘಾಟನಾ ಸವೂರಂಭದ ಸಲುವಾಗಿ' ಎಂಬ ಉತ್ತರ ಅವರಿಂದ ಬಂತು. ಇದರಿಂದ ಕುಪಿತರಾದ ರಾಷ್ಟ್ರಪತಿಯವರು ಗಂಭೀರವಾಗಿ ನುಡಿದರು: "ದೇಶವು ಯುದ್ಧ ಸಂಕಟವನ್ನು ಎದುರಿಸುತ್ತಿರುವಾಗ, ಈ ರೀತಿ ಶಕ್ತಿ ಮತ್ತು ಧನವನ್ನು ಅಪವ್ಯಯ ಮಾಡುವುದು ಉಚಿತವೆ?"

ಇದೇ ಮೊದರಿಯ ಒಂದು ಘಟನೆ ಹಿಂದೊಂದು ನಡೆದಿತ್ತು. ಒಂದು ದಿನ ಒಬ್ಬಾಕೆ ಭಾರತೀಯ ಲೇಪಿಕೆಯ ಮನೆಗೆ ಅಮೆರಿಕನ್ನಳು ಅತಿಥಿಯಾಗಿ ಸಮಾಗಮಿಸಿದಳು. ಲೇಪಿಕೆಯು ಆಕೆಗಾಗಿ ಚಹಾತಯಾರಿಸಿ ಆದಕ್ಕೆ ಹಾಲಿಕ್ಕಲು ಸಿದ್ಧಳಾದಾಗ, ಆಕೆ, 'ನಾನು ಹಾಲು ಹಾಕಿದ ಚಹ ಕುಡಿಯುವುದಿಲ್ಲ. ಬರೀ ಕಷಾಯು ಮಾತ್ರ ಕೊಡಿ' ಎಂದಳು. ಲೇಪಿಕೆಯು ಬಹಳ ಆಶ್ಚರ್ಯದಿಂದ 'ಏನಮ್ಮಾ ನಿಮ್ಮ ದೇಶದಲ್ಲಿ ಚಹಕ್ಕೆ ಹಾಲು ಸೇರಿಸುವುದಿಲ್ಲವೆ?' ಎಂದು ಪ್ರಶ್ನಿಸಲು ಆಕೆ ನಗುನಗುತ್ತ ಉತ್ತರವಿತ್ತಳು: ಹಾಗೇನೂ ಇಲ್ಲ. ಈಗ ನಮ್ಮ ದೇಶದಲ್ಲಿ ಹಾಲಿನ ಅಭಾವ ತುಂಬ ಇದೆ. ಹಾಲಿಲ್ಲದೆ ಚಹವನ್ನು ಕುಡಿಯ ಬಹುದು; ಆದರೆ, ಮಕ್ಕಳಿಗೆ ಹಾಲಿಲ್ಲದೆ ಬದುಕಲು ಸಾಧ್ಯವಿಲ್ಲ; ಅವು ದಷ್ಟುಷ್ಟವಾಗುವಂತಿಲ್ಲ. ಆದುದರಿಂದ ನಾವೀಗ ಹಾಲಿಲ್ಲದೇ ಚಹಾ ಸೇವಿಸಿ, ಮಿಗುವ ಹಾಲು ಮಕ್ಕಳಿಗೆ ದೊರೆಯುವಂತೆ ಮಾಡುತ್ತೇವೆ."

ಅತಿಥಿಯಾಗಿ ಬಂದ ಅಮೆರಿಕನ್ ಮಹಿಳೆಯ ಈ ವಿಧದ ತ್ಯಾಗ ಮತ್ತು ವಿವೇಕವು ಆ ಭಾರತೀಯ ಲೇಖಿಕೆಯ ನೇಲೆ ಅತ್ಯಧಿಕ ಪ್ರಭಾವ ಬೀರಿದುವು. ಆದರೆ ತನ್ನ ಅತಿಥಿ ಹಾಲಿಲ್ಲದ ಕಷ್ಟು ಚಹ ಸೇವಿಸಿ ತನ್ನ ಮನೆಯಿಂದ ಹೊರಡುವುದೆಂದರೇನು? ಆದುದರಿಂದಲೇ, 'ಇಂದು ತಾವು ಭಾರತದಲ್ಲಿದ್ದೀರಿ; ನಮ್ಮ ದೇಶದಲ್ಲಿ ಹಾಲಿನ ನದಿಗಳೇ ಹರಿಯುತ್ತವೆ" ಎಂದಳು. ಇದನ್ನು ಕೇಳಿದ ಆಕೆ ಸ್ವಸ್ಥ ಸ್ವರದಿಂದ ಪ್ರಶ್ನಿಸಿದಳು: 'ತಾವು ವಿದೇಶದಲ್ಲಿದ್ದ ಮಾತ್ರಕ್ಕೆ ತನ್ನ ಮಾತೃಭೂಮಿಯನ್ನು ಮರೆತುಬಿಡುತ್ತೀರಾ? ನಾನು ನಿಮ್ಮ ಮತ್ತಾಯಕ್ಕೆ ಸಿಕ್ಕಿಬಿದ್ದು ಹಾಲು ಸೇರಿಸಿದ ಚಹ ಕುಡಿದೆನೆಂದರೂ ನನ್ನ ವಿವೇಕ ಬುದ್ಧಿಯು ಅದನ್ನು ಒಪ್ಪುವುದಿಲ್ಲ. ನಾನು ಚಹ ಕುಡಿಯುವಾಗ, ಒಂದು ಮಗುವಿನ ಆಹಾರವನ್ನು ಅಪಹರಿಸುತಿದ್ದೇನೆ ಎಂಬ ಭಾವನೆ ನೂಡುವುದು. ಹಾಗಿರುವಾಗ ಅತ್ಯಕ್ಕೆ ದುಃಖವನ್ನಿಸುವ ಕೆಲಸವನ್ನು ಮಾಡಬೇಕು ಅನ್ನುತ್ತೀರಾ ತಾವು?"

ಇದು ಕಲ್ಯಾಣಕಾರಕವಾದ ದೃಷ್ಟಿಕೋಣ ಒಂದು ದೇಶದ ನಾಗರಿಕರೆಲ್ಲರಲ್ಲಿ ಇಂತಹ ಸುಂದರ ವಿಚಾರವಿರುವುದೆಂದಾದರೆ, ಆ ದೇಶಗ ಸ್ವಾತಂತ್ರ್ಯವನ್ನು ಕಬಳಿಸಲು ಸ್ವಯಂ ಭಗವಂತನಿಂದಲೂ ಸಾಧ್ಯವಿಲ್ಲ.

ಇಂದು ನಮ್ಮ ದೇಶದಲ್ಲೂ ಈ ಬಗೆಯ ಉಜ್ವಲ ಭಾವನೆಯಿರಬೇಡವೆ? ಇಂದಿನ ಸಂಕಟ ಕಾಲದ ಪರಿಸ್ಥಿತಿಯಲ್ಲಿ ಪ್ರತ್ಯೇಕ ನಾಗರಿಕನು ತನ್ನ ದೈನಂದಿನ ಜೀವನದಲ್ಲಿ ಸ್ವಂತ ಮಹತ್ವವನ್ನು ಮರೆತು ಬಿಟ್ಟು ರಾಷ್ಟ್ರಹಿತದ ಬಗ್ಗೆ ವಿಚಾರಮಾಡುವುದನ್ನು ತನ್ನ ಕರ್ತವ್ಯವೆಂದು ತಿಳಿಯಬೇಕು. ದೇಶದ ಪ್ರತಿ ಮಹಿಳೆಯೂ ಮನೆವಾಳ್ತೆಯಲ್ಲಿಯೇ ತನ್ನ ದೃಷ್ಟಿಯನ್ನು ಕೇಂದ್ರೀಕೃತಗೊಳಿಸದೆ ಆದನ್ನು ಅಧಿಕ ವ್ಯಾಪಕಗೊಳಿಸಬೇಕು; ಉದಾರಗೊಳಿಸಬೇಕು. ಮನೆಯು ಗೋಡೆಗಳ ನಡುವೆಯೂ ಅಖಂಡ ದೇಶದ ಮೇಲೆ ಪರಿಣಾಮ ಬೀರುವಂತಹ ಪರಿಣಾಮಗಳು ನೆಡೆಯುವುದು ಅಸಂಭವವಲ್ಲ.

ಉಳಿದಿರುವ ಅತ್ಯಲ್ಪ ಪ್ರಮಾಣದ ಅನ್ನ, ತರಕಾರಿ ಮೊದಲಾದುವನ್ನು ಕಸದ ಡಬ್ಬಿಗೆಸೆಯುವ ಮಹಿಳೆಯರು ಕೆಲವರಿದ್ದಾರೆ. ಸಾಮಾನ್ಯ ಪರಿಸ್ಥಿತಿಯಲ್ಲಾದರೂ ಈ ಬಗೆಯಲ್ಲಿ ಆಹಾರವಸ್ತುಗಳನ್ನು ತಿಪ್ಪೆಗೆಸೆಯುವುದು ಅಪರಾಧ. ಹಾಗಿರುವಾಗ, ಇಂದಿನ ಸಂಕಟಮಯ ಸ್ಥಿತಿಯಲ್ಲಿ ಹಾಗೆ ಮಾಡುವುದು ದೇಶ ದ್ರೋಹದ ಆಕ್ಷನ್ಯ ಅಪರಾಧವೆಂದರೆ ಅತಿಶಯೋಕ್ತಿಯಾಗದು. ಒಬ್ಬಾಕೆ ಮಹಿಳೆಗೆ ಚಿಂತೆ ಮಾಡುತ್ತಿರುವುದರೊಡನೆ ದಿನ ನಿತ್ಯ ತರಕಾರಿ, ಅಕ್ಕಿ ಮೊದಲಾದುವನ್ನು ಎಸೆಯುವುದರಿಂದ ತಿಲಾಂಶದಷ್ಟೂ ಸಂಕೋಚನ ನಿಸುತ್ತಿಲ್ಲವೆಂದರೆ, ಇದಕ್ಕೇನೆನ್ನಿ ಬೇಕು? ಆದೇ ಮಹಿಳೆಯು ಸಂಜೆ ನಾಲ್ಕು ತಾಸಿಗೆ ದೀಪ ಹಚ್ಚಿಟ್ಟು ತಿರುಗಾಡಲು ಹೋಗುತ್ತಾಳೆ. ರಾತ್ರೆ ಒಂಬತ್ತು — ಹತ್ತುಗಂಟೆಯ ಹೊತ್ತಿಗೆ ಮನೆಗೆ ಬರುತ್ತಾಳೆ. ರೇಡಿಯೋ ಜಾಲ ಮೂಡಿ ಇಲ್ಲವೇ ಫೋನಿಗೆ ಸ್ವಿಚ್ಚು ಹಾಕಿಬಿಟ್ಟು ತಾನು ನೆರೆ ಮನೆಯಲ್ಲಿ ತಾಸು ಗಟ್ಟಲೆ ಹರಟೆ ಕೊಚ್ಚುತ್ತಿರುತ್ತಾಳೆ. ಇದೇ ನಾರಿಯು ರಾಷ್ಟ್ರೀಯ ಸಂರಕ್ಷಣಾ ನಿಧಿಗೆ ಧನ ಯಾಚಿಸಲು ಬಂದವರನ್ನು ಹುಬ್ಬೇರಿಸಿ ನೋಡುತ್ತಾಳೆ. 'ನಾವು ನೌಕರಿ ಮಾಡಿ ಹೊಟ್ಟೆ ಹೊರೆಯುವವರು. ನಮ್ಮೊಡನೆ ಏನಿದೆ? ತಿಜೋರಿಯಲ್ಲಿ ಹಣ ಕೂಡಿಟ್ಟಿಕು ಬೇರೆಯನ್ನು ಕೇಳಿ' ಎಂದು ಗದರಿಸುತ್ತಾಳೆ!

ದೇಶ ರಕ್ಷಣೆಗೆ ಸಹಾಯು ನೀಡಲು ಹಣವಿಲ್ಲ ಎಂದವರೊಡನೆ ವ್ಯರ್ಥ ನಷ್ಟ ಮಾಡಲು ಎಲ್ಲಿಂದ ರೂಪಾಯಿ ಬರುತ್ತದೆ? ಯಾರು ಹಣ ಕೊಡಬೇಕಾಗಿಲ್ಲ. ಯಾವುದರಿಂದ ದೇಶ ಹಿತಕ್ಕಾಗಿ ಉಪಯೋಗ ಬಾಗುತ್ತದೆಯೋ ಅದನ್ನು ಅಪವ್ಯಯು ಮಾಡುವ ಅಧಿಕಾರಯಾಗಿದೆ?

ಮಿತವ್ಯಯು ಮತ್ತು ಉಳಿತಾಯ ಯೋಜನೆಗಳನ್ನು ಎಲ್ಲರೂ ಅನುಷ್ಠಾನಕ್ಕೆ ತರುವುದು ಅಗತ್ಯ. ಶಾಂತಿಕಾಲದಲ್ಲಿ ಕುಟುಂಬದ ಉಪಯೋಗಕ್ಕೆ ಅದು ಅನುಕೂಲವೆನಿಸಿದರೆ, ಯುದ್ಧಕಾಲದಲ್ಲಿ ಅದು ದೇಶರಕ್ಷಣೆಗೆ ಸಹಾಯಕವೆನಿಸುತ್ತದೆ. ಪ್ರತ್ಯೇಕ ಬಳೆಯರುನ ಪ್ರತಿಯೊಂದು ವಸ್ತುವಿನ ಕಣ ಮಾತ್ರವಾದರೂ ವ್ಯರ್ಥವಾಗದಂತೆ ಪ್ರತಿಯೊಬ್ಬರೂ ಎಚ್ಚರಿಕೆ ವಹಿಸ ಬೇಕು. ನಮ್ಮ ಪರಂಪರದ ಆವಶ್ಯಕತೆಯನ್ನು ಪೂರಯಿಸಿಕೊಂಡ ನಂತರ ಏನಾದರೂ ಉಳಿದರೆ, ಅದು ರಣಕ್ಷೇತ್ರದಲ್ಲಿ ವೀರಾವೃಯ ಭೂಮಿಯ ರಕ್ಷಣೆಗೆಂದು ಹೋರಾಡುತ್ತಿರುವ ಜವಾನರಿಗೂ ಸಂರಕ್ಷಣಾ ಕಾರ್ಯದಲ್ಲಿ ವೀರಾವೇಶದಿಂದ ಕಾದಾಡಿ ತಮ್ಮ ಪ್ರಾಣತೆತ್ತ ವೀರ ಯೋಧರ ಕುಟುಂಬದವರಿಗೂ ಅವಶ್ಯ ನೆರವಾಗುತ್ತದೆ. ಆವಶ್ಯಕತೆ ಬಂದೊದಗಿದರೆ, ನಮ್ಮ ಬಾಯಿಯ ಆಹಾರವನ್ನಾದರೂ ಮಾತೃ ಭೂ ನಿ ರಕ್ಷಣೆಗಾಗಿ ದಾನ ನೀಡಲು ಮುಂದಾಗಬೇಕು.

ನಾವೆಂದು ರಣಕ್ಷೇತ್ರದ ಸೈನಿಕರಿಗೆಂದು ಉಣ್ಣೆ ಬಟ್ಟೆ ನೇಯುತಿದ್ದೇವೆ; ದೇಶ ಭಕ್ತಿ ದ್ಯೋತಕವಾದ ಚಿಕ್ಕ ದೊಡ್ಡ ಕಾರ್ಯಗಳನ್ನು ಮಾಡುತ್ತಿದ್ದೇವೆ. ಈ ಸಮಯದಲ್ಲಿ ನಮ್ಮ ಗೃಹ ಕ್ಷೇತ್ರದಲ್ಲಿಯೇ ರಾಷ್ಟ್ರ ಹಿತದ ಕಾರ್ಯಗಳು ಕಾರ್ಯ ರೂಪಕ್ಕೆ ಬರಲು ಬಾಕಿಯುಳಿದಿವೆಯೆಂಬುದನ್ನು ಜ್ಞಾಪಿಸಿಕೊಳ್ಳ ಬೇಕು. ಮನೆಯಲ್ಲಿಯೇ ದೇಶ ಹಿತಕ್ಕಾಗಿ ಈ ಕಾರ್ಯ ಕ್ರಮಗಳನ್ನು ಅನುಷ್ಠಾನಗೊಳಿಸಬಹುದು:

೧. ಆಹಾರ ವಸ್ತುಗಳನ್ನು ಹಾಳು ಮಾಡದಿರುವುದು.

೨. ವಿದ್ಯುತ್ತು ನಳ್ಳಿನೀರು ಮೊದಲಾದುವುಗಳನ್ನು ಅವಶ್ಯವಿದ್ದಷ್ಟು ಮಾತ್ರ ಉಪಯೋಗಿಸುವುದು.

೩. ಸೈನಿಕರಿಗೆ ಅಗತ್ಯವಿರುವ ವಸ್ತುಗಳನ್ನು ಸ್ವಲ್ಪ ಕಷ್ಟದಿಂದಾದರೂ ನಮ್ಮ ಉಪಯೋಗಕ್ಕೆ ತಂದುಕೊಳ್ಳದಿರುವುದು.

೪. ಸುಖ ಸಾಧನಗಳನ್ನು ದೂರಮಾಡುವುದು; ಅವುಗಳಿಗಾಗಿ ವ್ಯಯವಾಗುವ ಧನವನ್ನು ನಿಧಿಗೆ ಒಪ್ಪಿಸುವುದು. ಇಂತಹ ಚಿಕ್ಕ ಪುಟ್ಟ ಕ್ರಮಗಳನ್ನು ದೇಶದ ಪ್ರತಿ ನಾಗರಿಕನೂ ತನ್ನ ಜೀವನದಲ್ಲಿ ಅಳವಡಿಸಿಕೊಂಡನೆಂದರೆ, ಅದರಿಂದ ದೇಶ ಕಲ್ಯಾಣವಾಗುವುದು.

ಈ ಕಾರ್ಯದಲ್ಲಿ ಪುರುಷರಿಗಿಂತಲೂ ಮಹಿಳೆಯರು ಸಹಸಬಹುದಾದ ಪಾತ್ರ ಯೆಚ್ಚಿನದು ಏಕೆಂದರೆ, ಮನೆಯ ಅಚ್ಚುಕಟ್ಟುತನವನ್ನು ಉಳಿಸಿಕೊಂಡು ಮುನ್ನಡೆಸುವ ಕರ್ತವ್ಯ ಸರ್ವಸಾಮಾನ್ಯವಾಗಿ ಅವರ ಪಾಲಿಗೆ ಸೇರಿದೆ. ತೊಟ್ಟಿಲು ತೂಗುವ ಕೈಯೇ ಸಾಮ್ರಾಜ್ಯವನ್ನು ಉಳಿಸಬಲ್ಲುದು; ಬೆಳಬಲ್ಲುದು; ಹಾಗೆಯೇ ಅದನ್ನು ಅಳಿಸಿ ಸರರ ಕೈಗಳಿಗೆ ಒಪ್ಪಿಸಲೂ ಬಲ್ಲುದು.

ದೇಶಕ್ಕಾಗಿ ಉಳಿಸುವ, ದೇಶಕ್ಕಾಗಿ ಬಾಳುವ ಮತ್ತು ದೇಶಕ್ಕಾಗಿ ಹೋರಾಡಿಯಾದರೂ ಗಳಿಸುವ ದೃಢ ಪ್ರತಿಜ್ಞೆಯನ್ನು ಇಂದು ಎಲ್ಲರೂ ಮಾಡಬೇಕು; ಭಾರತೀಯರು ಈ ಕಾರ್ಯದಲ್ಲಿ ಕದಾಪಿ ಹಿಂದುಳಿಯಬಾರದು; ಹಿಂದುಳಿದೂ ಇಲ್ಲವೆಂಬುದನ್ನು ಜಗತ್ತಿಗೆ ತೋರಿಸಿಕೊಡಬೇಕು.